ಪ್ರಜಾವಾಣಿ
ಅತ್ಯಂತ ವಿಶ್ವಾಸಾರ್ಹ ಕನ್ನಡ ದಿನಪತ್ರಿಕೆ

DH ಎಡ್ಯುವರ್ಸ್ ಪ್ರಿಮಿಯರ್ ಎಜುಕೇಶನ್ ಎಕ್ಸ್‌ಪೋ ಪ್ರಜಾವಾಣಿ
ಸಿಇಟಿ ಮತ್ತು ನೀಟ್ ಮಾದರಿ ಪರೀಕ್ಷೆಗಳಿಗೆ ಈಗಲೇ ನೋಂದಣಿ ಮಾಡಿಕೊಳ್ಳಿ ಮತ್ತು ಟಾಪರ್‌ಗಳು ಬಹುಮಾನ ಗೆಲ್ಲಿರಿ!
ಕೋಡ್ ಸ್ಕ್ಯಾನ್ ಮಾಡಿ
ಬೆಂಗಳೂರು: 06-07 ಏಪ್ರಿಲ್, 2024 | ತ್ರಿಪುರವಾಸಿನಿ, ಅರಮನೆ ಮೈದಾನ

ಆಳ-ಅಗಲ: 'ಉದ್ಯೋಗ ಸೃಷ್ಟಿಯಲ್ಲಿ ಕುಂಟುತ್ತಿದೆ ಭಾರತ'
ಯಡಿಯೂರಪ್ಪ ವಿರುದ್ಧ ಪೋಕ್ಸೊ: ತನಿಖೆ ಚುರುಕು 5
'ಗೃಹ ಜ್ಯೋತಿ' ಯೋಜನೆಗೆ ಬೇಸಿಗೆ ತಾಪ 6

ಸೆನ್ಸೆಕ್ಸ್	ನಿಫ್ಟಿ	ಚಿನ್ನ (Std. 10g)	ಶುದ್ಧ ಬೆಳ್ಳಿ (kg)	₹/$
72,996 ▲	22,123 ▲	₹68,620 (ಬೆಂಗಳೂರು) ▲	₹75,900 (ಬೆಂಗಳೂರು) ▼	83.33 ▼

ಸಚಿವ ಮುನಿಯಪ್ಪ ವಿರುದ್ಧ ಸಿಡಿದ ಸಚಿವ– ಶಾಸಕರ ಬಣ • 'ಕೈ' ಹೈಕಮಾಂಡ್‌ಗೆ ಬಿಸಿತುಪ್ಪ

ಕಾಂಗ್ರೆಸ್‌ಗೆ ಕೋಲಾರದ ಕಿಚ್ಚು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಕೋಲಾರ ಲೋಕಸಭಾ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಆಯ್ಕೆ ವಿಷಯದಲ್ಲಿ ಭಿನ್ನಮತ ಸ್ಫೋಟಗೊಂಡಿದ್ದು, ಬಣಗಳ ನಡುವಿನ ಕಿತ್ತಾಟ ವಿಧಾನಸೌಧದಲ್ಲಿ ಬುಧವಾರ ದೊಡ್ಡಮಟ್ಟದ ರಾಜಕೀಯ ಪ್ರಹಸನಕ್ಕೆ ಕಾರಣವಾಯಿತು.

ಆಹಾರ ಸಚಿವ ಕೆ.ಎಚ್. ಮುನಿಯಪ್ಪ ವಿರುದ್ಧ ಸಿಡಿದೆದ್ದ ಸಚಿವರು, ಕಾಂಗ್ರೆಸ್ ಶಾಸಕರು ರಾಜೀನಾಮೆ ಕೊಡುವ ಬೆದರಿಕೆಯೊಡ್ಡಿ, ಪಕ್ಷದೊಳಗಿನ ಭಿನ್ನಮತವನ್ನು ಬೀದಿಗೆ ತಂದು ನಿಲ್ಲಿಸಿದರು. ಪರಿಷತ್ ಸದಸ್ಯರು ರಾಜೀನಾಮೆ ಪತ್ರ ಹಿಡಿದು ಸಭಾಪತಿ ಬಸವರಾಜ ಹೊರಟ್ಟಿ ಕಚೇರಿಗೆ ಬಂದು, ಕಾಂಗ್ರೆಸ್‌ನ ಒಳಜಗಳವನ್ನು ಬಹಿರಂಗಗೊಳಿಸಿದರು. ಉನ್ನತ ಶಿಕ್ಷಣ ಸಚಿವ ಡಾ.ಎಂ.ಸಿ. ಸುಧಾಕರ್ ಸೇರಿದಂತೆ ಮೂವರು ಶಾಸಕರು ರಾಜೀನಾಮೆ ಕೊಡುವ ಸಲುವಾಗಿ, ಸಭಾಧ್ಯಕ್ಷ ಯು.ಟಿ. ಖಾದರ್ ಭೇಟಿಗೆ ಮಂಗಳೂರಿಗೆ ತೆರಳಲು ವಿಮಾನದ ಟಿಕೆಟ್ ಕಾಯ್ದಿರಿಸಿದ್ದರು.

ಕಾಂಗ್ರೆಸ್‌ನ ಬಣ ಜಗಳ ಬೀದಿರಂಪವಾಗುತ್ತಿದ್ದಂತೆ ಎಚ್ಚೆತ್ತ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಹಾಗೂ ಕಾಂಗ್ರೆಸ್‌ನ ರಾಜ್ಯ ಉಸ್ತುವಾರಿ ರಣದೀಪ್ ಸಿಂಗ್ ಸುರ್ಜೇವಾಲಾ ಅವರು, ತಮ್ಮ ಆಪ್ತರಿಗೆ ಕರೆ ಮಾಡಿ 'ಪ್ರಹಸನ' ನಿಲ್ಲಿಸಲು ಮುಂದಾಗಿ ಎಂದು ಸೂಚಿಸಿದರು. ವರಿಷ್ಠರ ಸೂಚನೆಯನ್ವಯ ತಕ್ಷಣವೇ, ಕಾರ್ಯಪ್ರವೃತ್ತರಾದ ಕೋಲಾರ ಜಿಲ್ಲೆ ಉಸ್ತುವಾರಿ ಸಚಿವ ಬೈರತಿ ಸುರೇಶ್, ಸಭಾಪತಿ ಹೊರಟ್ಟಿಯವರ ಕಚೇರಿಗೆ ದೌಡಾಯಿಸಿ, ಪ್ರಹಸನಕ್ಕೆ ತೆರೆ ಎಳೆದರು.

ನಡೆದಿದ್ದೇನು?: ಕ್ಷೇತ್ರದಲ್ಲಿ ಸಚಿವ ಮುನಿಯಪ್ಪ ಅವರ ಅಳಿಯ ಚಿಕ್ಕಪೆದ್ದಣ್ಣ ಅವರಿಗೆ ಟಿಕೆಟ್ ಪಕ್ಕಾ ಆಗಿದೆ ಎಂಬ ಮಾಹಿತಿ ಹೊರಬೀಳುತ್ತಿದ್ದಂತೆ ಆಕ್ರೋಶ ತೀವ್ರಗೊಂಡಿತು.

6ನೇ ಪುಟ ನೋಡಿ

ಹೀಗಿತ್ತು ರಾಜಕೀಯ ಪ್ರಹಸನ...

- ಮುನಿಯಪ್ಪ ಅಳಿಯ ಚಿಕ್ಕಪೆದ್ದಣ್ಣಗೆ ಟಿಕೆಟ್ ಖಚಿತ ಮಾಹಿತಿ
- ಮಾಜಿ ಸಚಿವ ಕೆ.ಆರ್. ರಮೇಶ್‌ಕುಮಾರ್ ಮನೆಯಲ್ಲಿ ಮುನಿಯಪ್ಪ ವಿರೋಧಿ ಗುಂಪಿನ ಸಭೆ
- ದಿಢೀರ್ ರಾಜೀನಾಮೆಗೆ ಮುಂದಾದ ಸಚಿವ ಡಾ. ಎಂ.ಸಿ. ಸುಧಾಕರ್, ಶಾಸಕರಾದ ಕೊತ್ತೂರು ಮಂಜುನಾಥ್, ಕೆ.ವೈ. ನಂಜೇಗೌಡ, ಪರಿಷತ್ ಸದಸ್ಯರಾದ ನಸೀರ್ ಅಹ್ಮದ್, ಅನಿಲ್ ಕುಮಾರ್
- ಬಲಗೈ ಸಮುದಾಯಕ್ಕೆ ಟಿಕೆಟ್ ಕೊಡದಿದ್ದರೆ, ತಮ್ಮ ನಿರ್ಧಾರ ಪ್ರಕಟಿಸ ಬೇಕಾಗುತ್ತದೆ ಎಂದು ಬಂಗಾರಪೇಟೆಯಲ್ಲಿ ಎಚ್ಚರಿಕೆ ನೀಡಿದ ಶಾಸಕ ಎಸ್.ಎನ್. ನಾರಾಯಣಸ್ವಾಮಿ,
- ವಿಧಾನಸೌಧಕ್ಕೆ ಸಚಿವರು, ಶಾಸಕರ ದೌಡು
- ಸಭಾಪತಿ ಬಸವರಾಜ ಹೊರಟ್ಟಿ ಕಚೇರಿಗೆ ಸದಸ್ಯರ ಭೇಟಿ
- ಕೈಯಲ್ಲಿ ಬರೆದುಕೊಂಡು ಬಂದಿದ್ದ ರಾಜೀನಾಮೆ ಪತ್ರ ಪ್ರದರ್ಶನ
- ಲೆಟರ್‌ಹೆಡ್‌ನಲ್ಲಿ ರಾಜೀನಾಮೆ ಪತ್ರ ಬರೆಯಲು ಸೂಚಿಸಿದ ಹೊರಟ್ಟಿ
- ವರಿಷ್ಠರ ಸಂದೇಶ ಹೊತ್ತು ಹೊರಟ್ಟಿ ಕಚೇರಿಗೆ ದೌಡಾಯಿಸಿದ ಸಚಿವ ಬೈರತಿ ಸುರೇಶ್. ಪ್ರಹಸನಕ್ಕೆ ತಾತ್ಕಾಲಿಕ ಅಂತ್ಯ

ಮುನಿಯಪ್ಪ ನನ್ನನ್ನು ಎರಡು ಬಾರಿ ಸೋಲಿಸಿದರು. ಆಮೇಲೆ ನಾನು ಪಕ್ಷದಿಂದ ಟಿಕೆಟ್ ಸಿಗದೆ ಪಕ್ಷೇತರನಾಗಿ ಸ್ಪರ್ಧೆ ಮಾಡುವಂತೆ ಮಾಡಿದರು. ಆ ನೋವು ಇದೆ. ಅವರ ಕುಟುಂಬಕ್ಕೆ ಟಿಕೆಟ್ ಕೊಡಬಾರದು
ಡಾ. ಎಂ.ಸಿ. ಸುಧಾಕರ್, ಸಚಿವ, ಚಿಂತಾಮಣಿ ಶಾಸಕ

ದಲಿತ ಬಲಗೈ ಸಮುದಾಯದಲ್ಲಿ ಯಾರಿಗೇ ಟಿಕೆಟ್ ಕೊಟ್ಟರೂ ನಮ್ಮ ಅಭ್ಯಂತರ ಇಲ್ಲ. ಮುನಿಯಪ್ಪ ಅವರು ವಿಧಾನಸಭೆ ಚುನಾವಣೆಯಲ್ಲಿ ನಮ್ಮೆಲ್ಲರನ್ನು ಸೋಲಿಸುವುದಕ್ಕೆ ಪ್ರಯತ್ನ ಪಟ್ಟಿದ್ದರು. ಈಗ ಅವರ ಪರ ಅಭ್ಯರ್ಥಿಗೆ ಟಿಕೆಟ್ ಕೊಡಬಾರದು. ಕೋಲಾರದಲ್ಲಿ ಪಕ್ಷ ಕಟ್ಟುವುದಕ್ಕೆ ತುಂಬಾ ಕಷ್ಟಪಟ್ಟಿದ್ದೇವೆ
ಕೆ.ವೈ. ನಂಜೇಗೌಡ, ಮಾಲೂರು ಶಾಸಕ

ಜೋಶಿಗೆ ಟಿಕೆಟ್ ಬೇಡ: ಮಠಾಧೀಶರ ಒತ್ತಾಯ

ದಿಂಗಾಲೇಶ್ವರ ಸ್ವಾಮೀಜಿ


ಪ್ರಲ್ಹಾದ ಜೋಶಿ

ಹುಬ್ಬಳ್ಳಿ: 'ಬಹುಸಂಖ್ಯಾತ ಲಿಂಗಾಯತ ಮತ್ತು ಇತರ ಸಮಾಜದ ನಾಯಕರನ್ನು ತುಳಿದು, ಅವಮಾನಿಸಿದ ಕೇಂದ್ರ ಸಚಿವ ಪ್ರಲ್ಹಾದ ಜೋಶಿ ಅವರ ಬದಲು ಬೇರೊಬ್ಬರನ್ನು ಧಾರವಾಡ ಲೋಕಸಭಾ ಕ್ಷೇತ್ರದಿಂದ ಬಿಜೆಪಿ ಕಣಕ್ಕೆ ಇಳಿಸಬೇಕು' ಎಂದು ಶಿರಹಟ್ಟಿ ಫಕೀರ ದಿಂಗಾಲೇಶ್ವರ ಸ್ವಾಮೀಜಿ ಆಗ್ರಹಿಸಿದರು.

ಇಲ್ಲಿನ ಮೂರು ಸಾವಿರ ಮಠದಲ್ಲಿ ಬುಧವಾರ ವಿವಿಧ ಮಠಾಧೀಶರ ಚಿಂತನ–ಮಂಥನ ಸಭೆ ಬಳಿಕ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, 'ಬಿಜೆಪಿ ವರಿಷ್ಠರು ಮಾರ್ಚ್ 31ರೊಳಗೆ ಅಭ್ಯರ್ಥಿಯನ್ನು ಬದಲಿಸಬೇಕು. ಇಲ್ಲದಿದ್ದರೆ, ಏಪ್ರಿಲ್ 2ರಂದು ಮತ್ತೆ ಮಠಾಧೀಶರ ಸಭೆ ನಡೆಸಿ, ಮುಂದಿನ ಕ್ರಮದ ಬಗ್ಗೆ ನಿರ್ಧರಿಸಲಾಗುವುದು' ಎಂದು ಎಚ್ಚರಿಕೆ ನೀಡಿದರು.

'ಜೋಶಿ ಅವರ ನಡೆಯಿಂದ ವೀರಶೈವ ಲಿಂಗಾಯತರು, ದಲಿತರು, ಕುರುಬರು ಸೇರಿ ಎಲ್ಲ ಸಮಾಜದವರು ನೊಂದಿದ್ದಾರೆ. ಪ್ರಜಾಸತ್ತಾತ್ಮಕ ವ್ಯವಸ್ಥೆಯಲ್ಲಿ ರಾಜಸತ್ತೆಯನ್ನು ತಂದ ಅವರನ್ನು ಬದಲಿಸಬೇಕು. ನಾವು ವ್ಯಕ್ತಿಯ ವ್ಯಕ್ತಿತ್ವ ವಿರೋಧಿಸುತ್ತೇವೆಯೇ ಹೊರತು ಬ್ರಾಹ್ಮಣರು ಸೇರಿ ಯಾವುದೇ ಸಮಾಜದ ವಿರೋಧಿಗಳಲ್ಲ' ಎಂದು ಹೇಳಿದರು.

6ನೇ ಪುಟ ನೋಡಿ

₹36 ಕೋಟಿ ಅಕ್ರಮ ಆಸ್ತಿ ಪತ್ತೆ

ಪ್ರಜಾವಾಣಿ ವಾರ್ತೆ

ಮಾಗಡಿ ನಗರ ಯೋಜನಾ ಪ್ರಾಧಿಕಾರದ ಸಹಾಯಕ ನಿರ್ದೇಶಕ ನಾಗರಾಜಪ್ಪ ಅವರ ಮನೆಯಲ್ಲಿ ಪತ್ತೆಯಾಗಿರುವ ಚಿನ್ನ, ಬೆಳ್ಳಿಯ ಆಭರಣಗಳು ಮತ್ತು ನಗದು

ಬೆಂಗಳೂರು: ಘೋಷಿತ ಆದಾಯಕ್ಕಿಂತ ಹೆಚ್ಚು ಆಸ್ತಿ ಹೊಂದಿದ ಆರೋಪದಡಿ ರಾಜ್ಯ ಸರ್ಕಾರದ ವಿವಿಧ ಇಲಾಖೆಗಳ 13 ಅಧಿಕಾರಿಗಳ ಮೇಲೆ ಬುಧವಾರ ದಾಳಿ ನಡೆಸಿರುವ ಲೋಕಾಯುಕ್ತ ಪೊಲೀಸರು, ₹ 35.83 ಕೋಟಿ ಮೌಲ್ಯದ ಅಕ್ರಮ ಆಸ್ತಿಗಳನ್ನು ಪತ್ತೆ ಮಾಡಿದ್ದಾರೆ.

ರಾಜ್ಯದ ಹಲವು ಜಿಲ್ಲೆಗಳ 62 ಸ್ಥಳಗಳಲ್ಲಿ ಏಕಕಾಲಕ್ಕೆ ಶೋಧ ಕಾರ್ಯಾಚರಣೆ ನಡೆಸಲಾಗಿದೆ. ಈವರೆಗೆ ₹35.77 ಕೋಟಿ ಮೌಲ್ಯದ ಸ್ಥಿರಾಸ್ತಿಗಳಿಗೆ ಸಂಬಂಧಿಸಿದ ದಾಖಲೆಗಳು, ₹44.39 ಲಕ್ಷ ನಗದು, ₹2.61 ಕೋಟಿ ಮೌಲ್ಯದ ಚಿನ್ನಾಭರಣ, ₹ 2.56 ಕೋಟಿ ಮೌಲ್ಯದ ವಾಹನಗಳು, ₹ 3.82 ಕೋಟಿ ಮೌಲ್ಯದ ಇತರ ಸ್ವತ್ತುಗಳನ್ನು ತನಿಖಾ ತಂಡಗಳು ಪತ್ತೆ ಮಾಡಿವೆ ಎಂದು ಲೋಕಾಯುಕ್ತ ಪೊಲೀಸರು ತಿಳಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಒಟ್ಟು ₹41.76 ಕೋಟಿ ಮೌಲ್ಯದ ಸ್ಥಿರ ಮತ್ತು ಚರ ಆಸ್ತಿಗಳನ್ನು ಪತ್ತೆ ಮಾಡಲಾಗಿದೆ. 13 ಆರೋಪಿಗಳ ಘೋಷಿತ ಆದಾಯಕ್ಕೆ ಹೋಲಿಸಿದರೆ ₹35.83 ಕೋಟಿ ಮೌಲ್ಯದ ಅಕ್ರಮ ಆಸ್ತಿಗಳಿವೆ ಎಂದು ತನಿಖಾ ಸಂಸ್ಥೆಯ ಪ್ರಕಟಣೆಯಲ್ಲಿ ವಿವರ ನೀಡಲಾಗಿದೆ.

ಮಾಗಡಿ ನಗರ ಯೋಜನಾ ಪ್ರಾಧಿಕಾರದ ಸಹಾಯಕ ನಿರ್ದೇಶಕ ನಾಗರಾಜಪ್ಪ ಬಳಿ ಬರೋಬ್ಬರಿ ₹ 11.13 ಕೋಟಿ ಮೌಲ್ಯದ ಆಸ್ತಿ ಪತ್ತೆಯಾಗಿದೆ. ಮನೆಯಲ್ಲಿ ₹ 11.50 ಲಕ್ಷ ನಗದು ಸಿಕ್ಕಿದೆ. ಬೆಂಗಳೂರಿನ ಬಿಟಿಎಂ ಬಡಾವಣೆಯಲ್ಲಿ 50 ಕೊಠಡಿಗಳುಳ್ಳ ಪೇಯಿಂಗ್ ಗೆಸ್ಟ್ ಕಟ್ಟಡವೂ ಸೇರಿದಂತೆ ಐದು ಮನೆಗಳಿವೆ. ಮಾಲೂರು ತಾಲ್ಲೂಕಿನ ಯೆಟ್ಟಕೋಡಿ ಗ್ರಾಮದಲ್ಲೂ ಒಂದು ಮನೆ ಇದೆ. ತನ್ನ ಹಾಗೂ ಪತ್ನಿಯ ಹೆಸರಿನಲ್ಲಿ, ತಂಗಿ ಮತ್ತು ಅತ್ತೆಯ ಹೆಸರಿನಲ್ಲೂ ಕೃಷಿ ಜಮೀನು ಖರೀದಿಸಿರುವ ದಾಖಲೆಗಳನ್ನು ತನಿಖಾ ತಂಡ ವಶಕ್ಕೆ ಪಡೆದಿದೆ.

5ನೇ ಪುಟ ನೋಡಿ

ಮಧ್ಯ ಪ್ರವೇಶಕ್ಕೆ ಕೋರ್ಟ್ ನಕಾರ

ಕೇಜ್ರಿವಾಲ್ ಬಂಧನ

ನವದೆಹಲಿ(ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಜಾರಿ ನಿರ್ದೇಶನಾಲಯವು (ಇ.ಡಿ) ಬಂಧಿಸಿರುವ ವಿಷಯದಲ್ಲಿ ಮಧ್ಯಪ್ರವೇಶಿಸಲು ದೆಹಲಿ ಹೈಕೋರ್ಟ್ ಬುಧವಾರ ನಿರಾಕರಿಸಿದೆ.

ಬಂಧನವನ್ನು ಪ್ರಶ್ನಿಸಿ, ಇ.ಡಿ ವಶದಿಂದ ಬಿಡುಗಡೆಗೆ ಆದೇಶಿಸುವ ಮೂಲಕ ತಮಗೆ ಮಧ್ಯಂತರ ರಕ್ಷಣೆ ನೀಡುವಂತೆ ಕೋರಿ ಕೇಜ್ರಿವಾಲ್ ಸಲ್ಲಿಸಿರುವ ಅರ್ಜಿಯ ವಿಚಾರಣೆಯನ್ನು ನ್ಯಾಯಮೂರ್ತಿ ಸ್ವರ್ಣಕಾಂತಾ ಶರ್ಮಾ ನಡೆಸಿದರು.

7ನೇ ಪುಟ ನೋಡಿ

ನನ್ನನ್ನು ಬಂಧಿಸಿರುವ ಉದ್ದೇಶ, ನನ್ನ ವಿರುದ್ಧದ ಆರೋಪಕ್ಕೆ ಸಂಬಂಧಿಸಿ ದಾಖಲೆ/ಸಾಕ್ಷ್ಯಗಳನ್ನು ಪತ್ತೆ ಮಾಡುವುದು ಆಗಿಲ್ಲ, ಬದಲಾಗಿ ನನ್ನನ್ನು ಹಾಗೂ ನನ್ನ ಪಕ್ಷವನ್ನು ದುರ್ಬಲಗೊಳಿಸುವುದಾಗಿದೆ
ವಕೀಲರ ಮೂಲಕ ಕೋರ್ಟ್‌ಗೆ ಅರವಿಂದ ಕೇಜ್ರಿವಾಲ್ ಸಲ್ಲಿಸಿದ ಹೇಳಿಕೆ

ಇಂದು ಕೋರ್ಟ್‌ಗೆ ಹಾಜರು?

ಕೇಜ್ರಿವಾಲ್ ಅವರನ್ನು ಜಾರಿ ನಿರ್ದೇಶನಾಲಯವು (ಇ.ಡಿ) ದೆಹಲಿಯ ನ್ಯಾಯಾಲಯದ ಮುಂದೆ ಗುರುವಾರ ಹಾಜರುಪಡಿಸುವ ಸಾಧ್ಯತೆ ಇದೆ.

ಕೇಜ್ರಿವಾಲ್ ಅವರನ್ನು ಮಾರ್ಚ್ 28ರಂದು ಮಧ್ಯಾಹ್ನ 2 ಗಂಟೆ ಒಳಗಾಗಿ ತನ್ನ ಮುಂದೆ ಹಾಜರುಪಡಿಸುವಂತೆ ನ್ಯಾಯಾಲಯ ನಿರ್ದೇಶನ ನೀಡಿತ್ತು.

'ಮಹತ್ವದ ವಿಷಯ ಬಹಿರಂಗ'

'ದೆಹಲಿ ಅಬಕಾರಿ ನೀತಿ ಹಗರಣದಲ್ಲಿನ ಆರೋಪಕ್ಕೆ ಸಂಬಂಧಿಸಿದಂತೆ ನನ್ನ ಪತಿ ಮಾರ್ಚ್ 28ರಂದು ನ್ಯಾಯಾಲಯದಲ್ಲಿ ಮಹತ್ವದ ವಿಷಯಗಳನ್ನು ಬಹಿರಂಗಪಡಿಸಲಿದ್ದಾರೆ' ಎಂದು ಕೇಜ್ರಿವಾಲ್ ಪತ್ನಿ ಸುನೀತಾ ಹೇಳಿದ್ದಾರೆ.

ಎನ್‌ಐಎ ಶೋಧ

ಬೆಂಗಳೂರು/ತೀರ್ಥಹಳ್ಳಿ: ದಿ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟದ ತನಿಖೆ ನಡೆಸುತ್ತಿರುವ ಎನ್‌ಐಎ ಅಧಿಕಾರಿಗಳು, ಬೆಂಗಳೂರು ಹಾಗೂ ತೀರ್ಥಹಳ್ಳಿಯ ಹಲವೆಡೆ ಬುಧವಾರ ದಾಳಿ ಮಾಡಿ ಶೋಧ ನಡೆಸಿದರು. 6

ಸಾಹಿತಿ ಗುರುಲಿಂಗ ಕಾಪಸೆ ನಿಧನ

ಧಾರವಾಡ: ಸಾಹಿತಿ ಗುರುಲಿಂಗ ಕಾಪಸೆ (96) ಮಂಗಳವಾರ ರಾತ್ರಿ ನಿಧನರಾದರು. ಅವರಿಗೆ ಪುತ್ರರಾದ ಚಂದ್ರಶೇಖರ್, ರವಿ, ಪುತ್ರಿಯರಾದ ಶಶಿಕಲಾ, ಉಷಾ ಇದ್ದಾರೆ. 6

14 ಕ್ಷೇತ್ರ: ಇಂದಿನಿಂದ ನಾಮಪತ್ರ

ಕರ್ನಾಟಕದಲ್ಲಿ ಮೊದಲ ಹಂತದಲ್ಲಿ ನಡೆಯಲಿರುವ 14 ಲೋಕಸಭಾ ಕ್ಷೇತ್ರಗಳ ಚುನಾವಣೆಯ ನಾಮಪತ್ರ ಸಲ್ಲಿಕೆ ಇಂದಿನಿಂದ (ಮಾರ್ಚ್ 28) ಆರಂಭವಾಗುತ್ತಿದೆ.

ಮಾರ್ಚ್ 28	ನಾಮಪತ್ರ ಸಲ್ಲಿಕೆ ಆರಂಭ
ಏಪ್ರಿಲ್ 4	ನಾಮಪತ್ರ ಸಲ್ಲಿಕೆಗೆ ಕೊನೆ ದಿನ
ಏಪ್ರಿಲ್ 5	ನಾಮಪತ್ರಗಳ ಪರಿಶೀಲನೆ
ಏಪ್ರಿಲ್ 8	ನಾಮಪತ್ರ ವಾಪಸ್‌ಗೆ ಕೊನೆಯ ದಿನ
ಏಪ್ರಿಲ್ 26	ಮತದಾನ

ಮೊದಲ ಹಂತದ ಕ್ಷೇತ್ರಗಳು	ಅಭ್ಯರ್ಥಿಗಳು ಬಿಜೆಪಿ/ಜೆಡಿಎಸ್	ಕಾಂಗ್ರೆಸ್
1. ಉಡುಪಿ–ಚಿಕ್ಕಮಗಳೂರು	ಕೋಟ ಶ್ರೀನಿವಾಸ ಪೂಜಾರಿ	ಕೆ.ಜಯಪ್ರಕಾಶ್ ಹೆಗ್ಡೆ
2. ಹಾಸನ	ಪ್ರಜ್ವಲ್ ರೇವಣ್ಣ	ಶ್ರೇಯಸ್ ಪಟೇಲ್
3. ದಕ್ಷಿಣ ಕನ್ನಡ	ಬ್ರಿಜೇಶ್ ಚೌಟ	ಆರ್.ಪದ್ಮರಾಜ್
4. ಚಿತ್ರದುರ್ಗ	ಗೋವಿಂದ ಕಾರಜೋಳ	ಬಿ.ಎನ್.ಚಂದ್ರಪ್ಪ
5. ತುಮಕೂರು	ವಿ. ಸೋಮಣ್ಣ	ಎಸ್.ಪಿ. ಮುದ್ದಹನುಮೇಗೌಡ
6. ಮಂಡ್ಯ	ಎಚ್.ಡಿ. ಕುಮಾರಸ್ವಾಮಿ	ವೆಂಕಟರಮಣೇಗೌಡ
7. ಮೈಸೂರು–ಕೊಡಗು	ಯದುವೀರ ಒಡೆಯರ್	ಎಂ.ಲಕ್ಷ್ಮಣ್
8. ಚಾಮರಾಜನಗರ	ಎಸ್. ಬಾಲರಾಜು	ಸುನೀಲ್ ಬೋಸ್
9. ಬೆಂಗಳೂರು ಗ್ರಾಮಾಂತರ	ಡಾ.ಸಿ.ಎನ್. ಮಂಜುನಾಥ್	ಡಿ.ಕೆ. ಸುರೇಶ್
10. ಬೆಂಗಳೂರು ಉತ್ತರ	ಶೋಭಾ ಕರಂದ್ಲಾಜೆ	ಎಂ.ವಿ.ರಾಜೀವ್ ಗೌಡ
11. ಬೆಂಗಳೂರು ಕೇಂದ್ರ	ಪಿ.ಸಿ. ಮೋಹನ್	ಮನ್ಸೂರ್ ಅಲಿಖಾನ್
12. ಬೆಂಗಳೂರು ದಕ್ಷಿಣ	ತೇಜಸ್ವಿ ಸೂರ್ಯ	ಸೌಮ್ಯಾ ರೆಡ್ಡಿ
13. ಚಿಕ್ಕಬಳ್ಳಾಪುರ	ಡಾ.ಕೆ. ಸುಧಾಕರ್	ಘೋಷಣೆ ಆಗಿಲ್ಲ
14. ಕೋಲಾರ		ಘೋಷಣೆ ಆಗಿಲ್ಲ

ಜೂನ್ 4: ಮತ ಎಣಿಕೆ

ಪುರುಷರು	1.42 ಕೋಟಿ
ಮಹಿಳೆಯರು	1.42 ಕೋಟಿ
ಲಿಂಗತ್ವ ಅಲ್ಪಸಂಖ್ಯಾತರು	3,028

2.85 ಕೋಟಿ 14 ಕ್ಷೇತ್ರಗಳ ಒಟ್ಟು ಮತದಾರರು



ಚಿತ್ರದುರ್ಗ: ಕಾರಜೋಳ ಬಿಜೆಪಿ ಅಭ್ಯರ್ಥಿ

ನವದೆಹಲಿ: ಚಿತ್ರದುರ್ಗ (ಮೀಸಲು) ಲೋಕಸಭಾ ಕ್ಷೇತ್ರದಲ್ಲಿ ಮಾಜಿ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ಅವರನ್ನು ಬಿಜೆಪಿ ಕಣಕ್ಕಿಳಿಸಿದೆ. ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ಅವರಿಗೆ ಟಿಕೆಟ್ ಕೈ ತಪ್ಪಿದೆ. 6

ಮಲ್ಲೇಶ್ವರಂ ಸುದರ್ಶನ್ ಜುವೆಲ್ಲರ್ಸ್ sj
916 BIS ಹಾಲ್ಮಾರ್ಕ್ ಜುವೆಲ್ಲರಿ
ಅತ್ಯಂತ ಕಡಿಮೆ
ಚಿನ್ನದ ದರ: ₹6035/gm
ಬೆಳ್ಳಿ ದರ: ₹76/gm
ವೆಸ್ಟೇಜ್ 3% ರಿಂದ ಪ್ರಾರಂಭ
ಬೆಳ್ಳಿ ಸಾಮಗ್ರಿಗಳ ಮೇಲೆ ಮೇಕಿಂಗ್ ಚಾರ್ಜಸ್ ಇಲ್ಲ
ನಿಯಮಗಳು ಮತ್ತು ಷರತ್ತುಗಳು ಅನ್ವಯ
Ph- 080-29909733/ 9513394070

UNIVERSAL COACHING CENTRE
VIJAYANAGAR, BENGALURU
KAS PRELIMS
ONLINE BATCH @ Rs 5999/-
OFFLINE BATCH STARTS FROM 1ST APRIL
CONTACT NOW
9845512052 / 9686664983

ಚಿನಕುರಳಿ
ಪ್ರಕಾಶ್ ಶೆಟ್ಟಿ



ಸದಾನಂದ ದಾತೆ ಎನ್‌ಐಎ ಮುಖ್ಯಸ್ಥ

ನವದೆಹಲಿ(ಪಿಟಿಐ): ಮಹಾರಾಷ್ಟ್ರ ಭಯೋತ್ಪಾದನಾ ನಿಗ್ರಹ ದಳದ (ಎಟಿಎಸ್) ಮುಖ್ಯಸ್ಥ ಸದಾನಂದ ವಸಂತ್ ದಾತೆ ಅವರನ್ನು ರಾಷ್ಟ್ರೀಯ ತನಿಖಾ ಸಂಸ್ಥೆಯ (ಎನ್‌ಐಎ) ಮಹಾ ನಿರ್ದೇಶಕರನ್ನಾಗಿ ನೇಮಿಸಲಾಗಿದೆ.

ನೈಋತ್ಯ ರೈಲ್ವೆ

ಟೆಂಡರ್ ಸೂಚನೆ ಸಂ. CAO/CN/BNC/113/2024
ದಿನಾಂಕ: 19.03.2024

ಈ ಕೆಳ ಸಹಿದಾರರು, ಭಾರತದ ರಾಷ್ಟ್ರಪತಿಗಳ ಪರವಾಗಿ ಕೆಳಗಡೆ ನೀಡಿರುವ ಕಾಮಗಾರಿಗಳಿಗೆ ಇ-ಟೆಂಡರ್‌ಗಳನ್ನು ಆಹ್ವಾನಿಸಿದ್ದಾರೆ:

ಕಾಮಗಾರಿಯ ವಿವರಣೆ	ಅಂದಾಜು ಮೌಲ್ಯ
ಈ ಮುಂದಿನ ಕಾಮಗಾರಿಗಳಿಗೆ ಯೋಜನಾ ನಿರ್ವಹಣೆ ಸೇವೆಗಳನ್ನು ಒದಗಿಸುವುದು 1) ತುಮಕೂರು-ಚಿತ್ರದುರ್ಗ-ದಾವಣಗೆರೆ ಹೊಸ ಮಾರ್ಗ ಯೋಜನೆ-ತೋಳಹುಣಸೆ (ಹೊರತುಪಡಿಸಿ) ಮತ್ತು ಭರಮಸಾಗರ (ಹೊರತುಪಡಿಸಿ) ನಿಲ್ದಾಣಗಳ ನಡುವೆ ವಿದ್ಯುತ್ ಮತ್ತು ದೂರಸಂಪರ್ಕ ಕಾರ್ಯಗಳು ಸೇರಿದಂತೆ ಎಂಜಿನಿಯರಿಂಗ್ ಸಂಗ್ರಹಣೆ ಮತ್ತು ನಿರ್ಮಾಣ (ಇಪಿಸಿ) ಮೋಡ್‌ನಲ್ಲಿ ಚೈನೇಜ್ 19200 ಮತ್ತು ಚೈನೇಜ್ 171640 ನಡುವೆ ಹೊಸ ಬಿಜಿ ಲೈನ್ ನಿರ್ಮಾಣ 2) ತುಮಕೂರು-ಚಿತ್ರದುರ್ಗ-ದಾವಣಗೆರೆ ಹೊಸ ಮಾರ್ಗ ಯೋಜನೆಯಲ್ಲಿ ಭರಮಸಾಗರ (ಸೇರಿದಂತೆ) ಮತ್ತು ಚಿತ್ರದುರ್ಗ (ಹೊರತುಪಡಿಸಿ) ನಿಲ್ದಾಣಗಳ ನಡುವೆ ಎಲೆಕ್ಟ್ರಿಕಲ್, ಸಿಗ್ನಲ್ ಮತ್ತು ಟೆಲಿಕಮ್ಯುನಿಕೇಶನ್, ಕೆಲಸಗಳು ಸೇರಿದಂತೆ ಚೈನೇಜ್ 171.640 ಮತ್ತು ಚೈನೇಜ್ 142.920 (28.72 ಕಿಮೀ) ನಡುವೆ ಹೊಸ ರೈಲು ಮಾರ್ಗದ ನಿರ್ಮಾಣ. (ಟೆಂಡರ್ ಉಲ್ಲೇಖ ಸಂ.: W.496/ PMS-TK-DVG-R-2)	ರೂ. 2,15,93,044

ಬಿಡ್‌ಗಳನ್ನು ಸಲ್ಲಿಸಲು ಕೊನೆಯ ದಿನಾಂಕ: 19-04-2024, 15:00 ಗಂಟೆಯವರೆಗೆ

ಹೆಚ್ಚಿನ ಮಾಹಿತಿಗಾಗಿ www.ireps.gov.in ಗೆ ಲಾಗ್ ಆನ್ ಆಗಿ

ಉಪ ಮುಖ್ಯ ಎಂಜಿನಿಯರ್ / ನಿರ್ಮಾಣ ಕಾಮಗಾರಿಗಳು / ಬೆಂಗಳೂರು ಕಂಟೋನ್ಮೆಂಟ್

PUB/777/AAV/PRB/SWR/2023-24

South Western Railway-SWR | SWRRLY | SWRRLY

ಕರ್ನಾಟಕ ರಿಪಬ್ಲಿಕನ್ ಸಂಘಟನೆ ಉದ್ಘಾಟಿಸಿದ ಸುಭಾಷ್ ಭರಣಿ

‘ದೇವರು, ಕುಡಿತದಿಂದ ದೂರವಿರಿ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ದಲಿತ ಸಮುದಾಯವು ದೇವರು ಮತ್ತು ಕುಡಿತದಿಂದ ದೂರ ಇರದೇ ಹೋದರೆ ಉದ್ದಾರವಾಗಲ್ಲ’ ಎಂದು ನಿವೃತ್ತ ಹೆಚ್ಚುವರಿ ಪೊಲೀಸ್ ಮಹಾನಿರ್ದೇಶಕ ಸುಭಾಷ್ ಭರಣಿ ತಿಳಿಸಿದರು.

ಬುಧವಾರ ನಗರದಲ್ಲಿ ಕರ್ನಾಟಕ ರಿಪಬ್ಲಿಕನ್ ಸಂಘಟನೆಯನ್ನು (ಕೆಆರ್‌ಎಸ್) ಉದ್ಘಾಟಿಸಿ ಅವರು ಮಾತನಾಡಿದರು.

‘ದೇವರು ಎಂಬುದು ಮನುಷ್ಯರ ಸೃಷ್ಟಿ. ಅದುವೇ ವೈದಿಕರ ಬಂಡವಾಳ. ದಲಿತರು ವಿದ್ಯೆ ಪಡೆದು ನೌಕರಿ ಹಿಡಿದಾಗ ನವ ವೈದಿಕರಾಗುತ್ತಿರುವುದು ನೋವಿನ ಸಂಗತಿ. ಕೆಲವು ದಶಕಗಳ ಹಿಂದಿನವರೆಗೆ ಮಗುವಿಗೆ ಜಾತಕ ಬರೆಸುವ ಪದ್ಧತಿ ನಮ್ಮಲ್ಲಿ ಇರಲಿಲ್ಲ. ಮದುವೆಗೆ ಜಾತಕ ನೋಡುವುದೂ ಇರಲಿಲ್ಲ. ಹುಡುಗ, ಹುಡುಗಿಯ ಮನೆಯಲ್ಲಿ ಒಪ್ಪಿಗೆಯಾದರೆ ಸಾಕಿತ್ತು. ಈಗ ಹುಟ್ಟಿನಿಂದ ಸಾವಿನ ತನಕ ಎಲ್ಲದಕ್ಕೂ ಜ್ಯೋತಿಷ ಅವಲಂಬಿಸುವ ಸ್ಥಿತಿಗೆ ಬಂದಿರುವುದು ದುರಂತ’ ಎಂದರು.

ತಿರುಪತಿ, ಧರ್ಮಸ್ಥಳ, ತಮಿಳು ನಾಡಿನ ಓಂ ಶಕ್ತಿಗೆಲ್ಲ ಹೋಗುವುದು ಜಾಸ್ತಿಯಾಗಿದೆ. ಇತ್ತೀಚಿನವರೆಗೆ ದೇವಸ್ಥಾನಗಳ ಪಕ್ಕಕ್ಕೂ ನಮ್ಮನ್ನು ಬಿಡುತ್ತಿರಲಿಲ್ಲ ಎಂಬುದು ಮರೆತು ಹೋಗಿದೆ. ನಮಗೆ ಸಹಾಯ ಮಾಡುವವರು ಇನ್ನೊಬ್ಬ ಮನುಷ್ಯನೇ ಹೊರತು ದೇವರಲ್ಲ ಎಂಬ ಸತ್ಯ ತಿಳಿದಿರಬೇಕು. ಅನ್ನ ನೀಡುವವರು, ಚಪ್ಪಲಿ ಕೊಡುವವರು, ಔಷಧ ಕೊಡುವವರು, ಉಡಲು ಬಟ್ಟೆ ನೀಡುವವರು ಎಲ್ಲರೂ ಮನುಷ್ಯರೇ ಆಗಿದ್ದಾರೆ.

ನಗರದಲ್ಲಿ ಬುಧವಾರ ಕರ್ನಾಟಕ ರಿಪಬ್ಲಿಕನ್ ಸಂಘಟನೆಯ ಉದ್ಘಾಟನೆ ಸಮಾರಂಭದಲ್ಲಿ ಕೆಜೆಎಸ್ ಅಧ್ಯಕ್ಷ ಮರಿಯಪ್ಪ, ಪಿವಿಸಿ ಅಧ್ಯಕ್ಷ ಮುನಿಆಂಜನಪ್ಪ, ಸಂಘಟನೆಯ ರಾಜ್ಯ ಘಟಕದ ಅಧ್ಯಕ್ಷ ಬೆಳತೂರು ವೆಂಕಟೇಶ್, ಮುನಿಯಪ್ಪ ಮತ್ತು ಡಿ.ಎಸ್.ಎಸ್. ಭೀಮಶಕ್ತಿ ರಾಜ್ಯ ಘಟಕದ ಅಧ್ಯಕ್ಷ ಹೆಬ್ಬಾಳ ವೆಂಕಟೇಶ್, ನಿವೃತ್ತ ಪೊಲೀಸ್ ಮಹಾನಿರ್ದೇಶಕ ಸುಭಾಷ್ ಭರಣಿ, ನಟ ಚೇತನ್ ಕುಮಾರ್ ಬುದ್ಧ, ಬಸವ ಮತ್ತು ಅಂಬೇಡ್ಕರ್ ಭಾವಚಿತ್ರಕ್ಕೆ ಪುಷ್ಪ ನಮನ ಸಲ್ಲಿಸಿದರು —ಪ್ರಜಾವಾಣಿ ಚಿತ್ರ

ಎಲ್ಲದಕ್ಕೂ ಬೇಕಿರುವುದು ಮನುಷ್ಯರೇ ಹೊರತು ದೇವರಲ್ಲ. ಯಾರಿಗೋ ಮದುವೆಯಾಗದೇ ಇದ್ದರೆ ದೇವರ ಶಾಪ, ಅಪಘಾತವಾದರೆ ದೇವರು ಕಾರಣ ಎನ್ನುವುದನ್ನು ಬಿಟ್ಟುಬಿಡಬೇಕು. ದೇವರ ಭಕ್ತಿಗೆ ಇಂಥ ಭಯವೂ ಕಾರಣ. ಭಯದಿಂದ ಹೊರಬರಬೇಕು. ಮಾಟ, ಮಂತ್ರ, ಅದೃಷ್ಟಗಳನ್ನು ನಂಬಬಾರದು’ ಎಂದರು.

‘ನಮ್ಮ ಸಮುದಾಯವನ್ನು ಕಾಡುವ ಎರಡನೇ ಸಮಸ್ಯೆ ಕುಡಿತ. ರಾಜ್ಯ ಸರ್ಕಾರ ಈ ಬಾರಿ ಅಬಕಾರಿ ಇಲಾಖೆಗೆ ₹40,000 ಕೋಟಿ ಸಂಗ್ರಹ ಗುರಿ ನೀಡಿದೆ. ಇದರಲ್ಲಿ ₹15,000 ಕೋಟಿಯಷ್ಟು ದಲಿತರೇ ಸುರಿಯುತ್ತಾರೆ. ಈ ದೌರ್ಬಲ್ಯದಿಂದ ಹೊರಗೆ ಬರಬೇಕು’ ಎಂದು ಸಲಹೆ ನೀಡಿದರು.

ಗಾಂಧಿವಾದವೇ ಬ್ರಾಹ್ಮಣವಾದ: ಚೇತನ್

‘ಗಾಂಧಿವಾದವೇ ಬ್ರಾಹ್ಮಣವಾದವಾಗಿದ್ದು, ಗಾಂಧಿವಾದವನ್ನು ಅಳವಡಿಸಿಕೊಂಡಿರುವ ಪಕ್ಷವೂ ಬ್ರಾಹ್ಮಣವಾದಿ ಪಕ್ಷವೇ ಆಗಿದೆ’ ಎಂದು ನಟ ಚೇತನ್ ಕುಮಾರ್ (ಅಹಿಂಸಾ) ಹೇಳಿದರು.

‘ಅಸಮಾನತೆ, ಕೋಮುವಾದ, ಜಾತಿವಾದ ನಮ್ಮ ಶತ್ರುಗಳು ಎಂಬುದನ್ನು ಬುದ್ಧಿಜೀವಿ ವಲಯ ಒಪ್ಪುತ್ತದೆ. ಆದರೆ, ಕೇಂದ್ರದ ಕಡೆಗೆ ಕೈ ತೋರಿಸುತ್ತದೆ. ರಾಜ್ಯದಲ್ಲಿ ಆಡಳಿತ ನಡೆಸುತ್ತಿರುವ ಪಕ್ಷವೂ ಅದೇ ಆಗಿದೆ ಎಂಬುದನ್ನು ಬುದ್ಧಿಜೀವಿಗಳು ತಿಳಿಸುತ್ತಿಲ್ಲ’ ಎಂದರು. ರಾಮರಾಜ್ಯ ಅಂದರೆ ಅಸಮಾನತೆಯ ರಾಜ್ಯ. ಸೀತೆಯನ್ನು ಬೆಂಕಿಗೆ ಹಾಕಿದ, ಶಂಬೂಕನನ್ನು ಕೊಂದ ರಾಜ್ಯ. ಹಾಗಾಗಿ ರಾಮರಾಜ್ಯ ತರುತ್ತೇವೆ ಎನ್ನುವವರ ಬಗ್ಗೆ ಎಚ್ಚರಿಕೆ ಇರಬೇಕು. ನಮಗೆ ಬುದ್ಧ, ಬಸವ, ಅಂಬೇಡ್ಕರ್, ಪುಲೆ, ಪೆರಿಯಾರ್. ಕುವೆಂಪು ಅವರ ಚಿಂತನೆಯ ಸಮಸಮಾಜ ಬೇಕು. ಬೆಂಗಳೂರಲ್ಲಿ ನೀರಿನ ಸಮಸ್ಯೆ ಇದೆ. ಅದರ ಪರಿಹಾರಕ್ಕೆ ಅಂತರ್ಜಲ ಹೆಚ್ಚಿಸುವ ಬಗ್ಗೆ ಸರ್ಕಾರ ಯೋಚಿಸಬೇಕಿತ್ತು. ಆದರೆ ಮುಖ್ಯಮಂತ್ರಿಯೇ ಮಲೆ ಮಹದೇಶ್ವರನಲ್ಲಿ ಮಳೆಗಾಗಿ ಪ್ರಾರ್ಥನೆ ಮಾಡುತ್ತಿರುವುದು ಅಪಾಯಕಾರಿ ಎಂದರು.

ಸುದ್ದಿ 2 ನಿಮಿಷ

ಶಾಸಕ ಯತ್ನಾಳ್ ಅರ್ಜಿ ತಿರಸ್ಕೃತ

ಬೆಂಗಳೂರು: ‘ಮಾನನಷ್ಟ ಮೊಕದ್ದಮೆಗೆ ಸಂಬಂಧಿಸಿದಂತೆ ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್ ಅವರು ನನ್ನ ವಿರುದ್ಧ ಕನಕಪುರ ನ್ಯಾಯಾಲಯದಲ್ಲಿ ಹೂಡಿರುವ ದಾವೆಯನ್ನು ಬೆಂಗಳೂರು ನ್ಯಾಯಾಲಯಕ್ಕೆ ವರ್ಗಾಯಿಸಬೇಕು’ ಎಂಬ ಬಿಜೆಪಿ ಶಾಸಕ ಬಸನಗೌಡ ಪಾಟೀಲ್ ಯತ್ನಾಳ್ ಕೋರಿಕೆಯನ್ನು ಹೈಕೋರ್ಟ್ ತಿರಸ್ಕರಿಸಿದೆ.

ಈ ಸಂಬಂಧ ಯತ್ನಾಳ್ ಸಲ್ಲಿಸಿದ್ದ ಸಿವಿಲ್ ದಾವೆ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ಸುನಿಲ್ ದತ್ ಯಾದವ್ ಅವರಿದ್ದ ಏಕಸದಸ್ಯ ನ್ಯಾಯಪೀಠ, ‘ಯತ್ನಾಳ್ ಅವರು ಕನಕಪುರದ ನ್ಯಾಯಾಲಯಕ್ಕೆ ಹೋದಾಗ ಸೂಕ್ತ ಭದ್ರತೆ ಒದಗಿಸಬೇಕು’ ಎಂದು ಪೊಲೀಸ್ ಇಲಾಖೆಗೆ ನಿರ್ದೇಶಿಸಿ ಅರ್ಜಿ ವಿಲೇವಾರಿ ಮಾಡಿದೆ.

ಅಗ್ನಿ ದುರಂತ: ಮುನ್ನೆಚ್ಚರಿಕೆಗೆ ಸೂಚನೆ

ಬೆಂಗಳೂರು: ಬೇಸಿಗೆ ಅವಧಿಯಲ್ಲಿ ಅತಿಯಾದ ತಾಪಮಾನದಿಂದ ಆರೋಗ್ಯ ಸಂಸ್ಥೆಗಳಲ್ಲಿ ಅಗ್ನಿ ಅನಾಹುತಗಳು ಸಂಭವಿಸುವ ಸಾಧ್ಯತೆಗಳಿವೆ. ಆದ್ದರಿಂದ ಮುನ್ನೆಚ್ಚರಿಗೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಆರೋಗ್ಯ ಇಲಾಖೆ ಸೂಚಿಸಿದೆ.

ಈ ಬಗ್ಗೆ ಇಲಾಖೆ ಆಯುಕ್ತ ಡಿ. ರಂದೀಪ್ ಸುತ್ತೋಲೆ ಹೊರಡಿಸಿದ್ದಾರೆ. ಪ್ರಾಥಮಿಕ ಆರೋಗ್ಯ ಕೇಂದ್ರಗಳು ಸೇರಿ ಎಲ್ಲ ಹಂತದ ಸರ್ಕಾರಿ ಆರೋಗ್ಯ ಸಂಸ್ಥೆಗಳಲ್ಲಿ, ವೈದ್ಯಕೀಯ ಕಾಲೇಜುಗಳಲ್ಲಿ ಹಾಗೂ ಮಾನ್ಯತೆ ಪಡೆದ ಎಲ್ಲ ಆಸ್ಪತ್ರೆಗಳಲ್ಲಿ ಬೆಂಕಿ ನಂದಿಸುವ ಉಪಕರಣಗಳ ಲಭ್ಯತೆ, ಕಾರ್ಯಶೀಲತೆಯನ್ನು ಪರಿಶೀಲಿಸಬೇಕು. ಮುಂಜಾಗ್ರತಾ ಕ್ರಮಗಳ ಪಾಲನೆಯನ್ನೂ ಖಚಿತಪಡಿಸಿಕೊಳ್ಳಬೇಕು. ಸಾರ್ವಜನಿಕರ ಆರೋಗ್ಯದ ದೃಷ್ಟಿಯಿಂದ ಅಗತ್ಯ ಕ್ರಮಗಳನ್ನು ಕೈಗೊಂಡು, ಅಗ್ನಿ ಅವಘಡಗಳನ್ನು ತಡೆಗಟ್ಟಬೇಕು. ಈ ಬಗ್ಗೆ ಅನುಪಾಲನಾ ವರದಿಯನ್ನು ಸಲ್ಲಿಸಬೇಕು ಎಂದು ಜಿಲ್ಲಾ ಆರೋಗ್ಯಾಧಿಕಾರಿಗಳಿಗೆ ತಿಳಿಸಲಾಗಿದೆ.

ಆಸ್ಪತ್ರೆಗಳ ಎಲ್ಲ ಪ್ರದೇಶಗಳಲ್ಲಿ ಹೊಗೆ ಪತ್ತೆ ಸಾಧನ (ಸ್ಮೋಕ್ ಡಿಟೆಕ್ಟರ್) ಹಾಗೂ ‘ಫೈರ್ ಅಲಾರಾಮ್’ ಅಳವಡಿಸಬೇಕು. ವೈದ್ಯಕೀಯ ಆಮ್ಲಜನಕ ಘಟಕಗಳನ್ನೂ ಪರಿಶೀಲಿಸಿ, ಸುರಕ್ಷತೆಗೆ ಆದ್ಯತೆ ನೀಡಬೇಕು. ಸಿಬ್ಬಂದಿಗೂ ತುರ್ತ ಸಂದರ್ಭದಲ್ಲಿ ಪರಿಸ್ಥಿತಿ ಎದುರಿಸುವ ಬಗ್ಗೆ ತರಬೇತಿ ನೀಡಬೇಕು ಎಂದು ಹೇಳಲಾಗಿದೆ.

CONNECT ಕ್ಲಾಸಿಫೈಡ್ಸ್

₹7,500 ಕನಿಷ್ಠ ಪಿಂಚಣಿಗೆ ಆಗ್ರಹ

ಭವಿಷ್ಯನಿಧಿ ಆಯುಕ್ತರ ಕಚೇರಿ ಮುಂದೆ ಪ್ರತಿಭಟನೆ

ಬೆಂಗಳೂರು: ಕನಿಷ್ಠ ₹7,500 ಪಿಂಚಣಿ ಹಾಗೂ ಭತ್ಯೆ, ವೈದ್ಯಕೀಯ ಸೌಲಭ್ಯ ನೀಡುವುದು ಸೇರಿದಂತೆ ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಇಪಿಎಸ್-95 ಬಿಎಂಟಿಸಿ, ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘಟನೆಯ ಸದಸ್ಯರು ಭವಿಷ್ಯ ನಿಧಿ ಪ್ರಾದೇಶಿಕ ಆಯುಕ್ತರ ಕಚೇರಿ ಎದುರು ಬುಧವಾರ ಪ್ರತಿಭಟನೆ ನಡೆಸಿದರು.

‘ಕೇಂದ್ರ ಸರ್ಕಾರ ನಿವೃತ್ತ ನೌಕರರ ಕನಿಷ್ಠ ಬೇಡಿಕೆಗಳನ್ನು ಈಡೇರಿಸುತ್ತಿಲ್ಲ. ಸುಪ್ರೀಂ ಕೋರ್ಟ್ 17 ತಿಂಗಳ ಹಿಂದೆ ಸುನೀಲ್ ಕುಮಾರ್ ಪ್ರಕರಣದಲ್ಲಿ ನೀಡಿದ್ದ ತೀರ್ಪನ್ನು ಕೇಂದ್ರೀಯ ಇಪಿಎಫ್‌ಒ ಅಧಿಕಾರಿಗಳು ಅನುಷ್ಠಾನಗೊಳಿಸುತ್ತಿಲ್ಲ. ಇದರಿಂದ, ನಿವೃತ್ತರ ಸಮಸ್ಯೆಗಳು ದಿನದಿಂದ ದಿನಕ್ಕೆ ಹೆಚ್ಚಾಗುತ್ತಿವೆ. ನಿವೃತ್ತರಿಂದ ಸಂಗ್ರಹಿಸುವ ದೇಣಿಗೆ ಮತ್ತು ನೀಡುವ ಪಿಂಚಣಿ ನಡುವೆ ಅಜಗಜಾಂತರವಿದ್ದು, ಇಲ್ಲಿಯೂ ವಂಚನೆ ಮಾಡಲಾಗುತ್ತಿದೆ’ ಎಂದು ಪ್ರತಿಭಟನಾಕಾರರು ದೂರಿದರು.

‘ನಿವೃತ್ತ ನೌಕರರಲ್ಲಿ ಹೆಚ್ಚಿನವರು ಅನಾರೋಗ್ಯದಿಂದ ಬಳಲುತ್ತಿದ್ದಾರೆ. ಅವರಿಗೆ ಈಗ ನೀಡುತ್ತಿರುವ ಪಿಂಚಣಿಯಿಂದ ಜೀವನ ನಿರ್ವಹಣೆ ಕಷ್ಟವಾಗಿದೆ. ಪಿಂಚಣಿ ಹೆಚ್ಚಿಸಿ ಜೊತೆಗೆ ವೈದ್ಯಕೀಯ ಸೌಲಭ್ಯ ಸೇರಿ ಇತರೆ ಸವಲತ್ತುಗಳನ್ನು ನೀಡಬೇಕು’ ಎಂದು ಒತ್ತಾಯಿಸಿದರು.

ಸ್ಥಳಕ್ಕೆ ಬಂದ ಪ್ರಾದೇಶಿಕ ಭವಿಷ್ಯ ನಿಧಿ ಅಧಿಕಾರಿಗಳು ಪ್ರತಿಭಟನಾಕಾರರಿಂದ ಮನವಿ ಸ್ವೀಕರಿಸಿದರು. ’ತಮ್ಮ ಮನವಿಯನ್ನು ಸಚಿವರ ಕಾರ್ಯಾಲಯಕ್ಕೆ ಮುಂದಿನ ಕ್ರಮಕ್ಕಾಗಿ ಕಳುಹಿಸಿ ಕೊಡಲಾಗುವುದು‘ ಎಂದು ಹೇಳಿದರು.

ಸಂಘದ ಅಧ್ಯಕ್ಷ ಶಂಕರ್ ಕುಮಾರ್, ಕಾರ್ಯಾಧ್ಯಕ್ಷ ನಂಜುಂಡೇಗೌಡ, ಪ್ರಧಾನ ಕಾರ್ಯದರ್ಶಿ ಡೋಲಪ್ಪ ಸೇರಿದಂತೆ ನೂರಾರು ಪ್ರತಿಭಟನಾಕಾರರು ಭಾಗವಹಿಸಿದ್ದರು.

ವಿವಿಧ ಬೇಡಿಕೆಗಳ ಈಡೇರಿಕೆಗೆ ಆಗ್ರಹಿಸಿ ಇಪಿಎಸ್–95 ಬಿಎಂಟಿಸಿ, ಕೆಎಸ್‌ಆರ್‌ಟಿಸಿ ನಿವೃತ್ತ ನೌಕರರ ಸಂಘಟನೆಯ ಸದಸ್ಯರು ಭವಿಷ್ಯ ನಿಧಿ ಪ್ರಾದೇಶಿಕ ಆಯುಕ್ತರ ಕಚೇರಿ ಎದುರು ಬುಧವಾರ ಪ್ರತಿಭಟನೆ ನಡೆಸಿದರು —ಪ್ರಜಾವಾಣಿ ಚಿತ್ರ

ನಿಮ್ಹಾನ್ಸ್: ಇಸಿಟಿ ಬಗ್ಗೆ ಜಾಗೃತಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಮಾನಸಿಕ ಅಸ್ವಸ್ಥರಿಗೆ ನೀಡುವ ಎಲೆಕ್ಟ್ರೋ ಕನ್ವಲ್ಸಿವ್ ಥೆರಪಿ (ಇಸಿಟಿ) ಅಥವಾ ‘ಶಾಕ್ ಟ್ರೀಟ್‌ಮೆಂಟ್’ ಬಗ್ಗೆ ರಾಷ್ಟ್ರೀಯ ಮಾನಸಿಕ ಆರೋಗ್ಯ ಹಾಗೂ ನರವಿಜ್ಞಾನ ಸಂಸ್ಥೆಯು (ನಿಮ್ಹಾನ್ಸ್) ಜಾಗೃತಿ ಮೂಡಿಸುತ್ತಿದ್ದು, ಸಂಸ್ಥೆಯ ‘ಹೆರಿಟೇಜ್ ಮ್ಯೂಸಿಯಂ’ನಲ್ಲಿ ಈ ಚಿಕಿತ್ಸೆಗೆ ಸಂಬಂಧಿಸಿದಂತೆ ಪ್ರದರ್ಶನ ಪ್ರಾರಂಭಿಸಲಾಗಿದೆ.

ಮುಂದಿನ ಒಂದು ತಿಂಗಳು ಈ ಪ್ರದರ್ಶನ ನಡೆಯಲಿದೆ. ರಜಾ ದಿನಗಳನ್ನು ಹೊರತುಪಡಿಸಿ ಉಳಿದ ದಿನಗಳು ಬೆಳಿಗ್ಗೆ 9ರಿಂದ ಸಂಜೆ 4.30ರವರೆಗೆ ಪ್ರದರ್ಶನ ಇರಲಿದೆ. 2023ರಲ್ಲಿ ನಿಮ್ಹಾನ್ಸ್‌ನಲ್ಲಿ ಮಾನಸಿಕ ಅಸ್ವಸ್ಥತೆಗೆ ಏಳು ಸಾವಿರಕ್ಕೂ ಅಧಿಕ ಮಂದಿ ಇಸಿಟಿ ಪಡೆದಿದ್ದಾರೆ. ಈ ಚಿಕಿತ್ಸೆ ಬಗ್ಗೆ ಇರುವ ಕಳಂಕವನ್ನು ಹೋಗಲಾಡಿಸಲು ನಿಮ್ಹಾನ್ಸ್ ಮುಂದಾಗಿದೆ.

‘ಸಂಸ್ಥೆಯಲ್ಲಿ 75 ವರ್ಷಗಳಿಂದ ಈ ಚಿಕಿತ್ಸೆಯನ್ನು ನೀಡಲಾಗುತ್ತಿದೆ. ಈ ಚಿಕಿತ್ಸೆಯ ಬಗ್ಗೆ ಇರುವ ಅಪವಾದ ಮತ್ತು ಕಳಂಕವನ್ನು ಹೋಗಲಾಡಿಸಬೇಕಿದೆ. ಆದ್ದರಿಂದ ಮನೋವೈದ್ಯ ವಿಜ್ಞಾನ ವಿಭಾಗದ ನೆರವಿನಿಂದ ಪ್ರದರ್ಶನ ಹಮ್ಮಿಕೊಳ್ಳಲಾಗಿದೆ. ಈ ಪ್ರದರ್ಶನದಲ್ಲಿ ಇಸಿಟಿ ಇತಿಹಾಸವನ್ನೂ ತಿಳಿಸಿಕೊಡಲಾಗುತ್ತದೆ. ಇಸಿಟಿ ಪಡೆದವರ ಅನುಭವ ತಿಳಿಯಲು ಹಾಗೂ ಚಿಕಿತ್ಸೆಯ ಬಗ್ಗೆ ಅರ್ಥ ಮಾಡಿಕೊಳ್ಳಲು ಸಹಕಾರಿಯಾಗಲಿದೆ’ ಎಂದು ಸಂಸ್ಥೆ ತಿಳಿಸಿದೆ.

ರೈಲು ತಾತ್ಕಾಲಿಕ ನಿಲುಗಡೆ ಮುಂದುವರಿಕೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬೀರೂರು ಮತ್ತು ರಾಮಗಿರಿ ನಿಲ್ದಾಣಗಳಲ್ಲಿ ಇರುವ ರೈಲುಗಳ ತಾತ್ಕಾಲಿಕ ನಿಲುಗಡೆಯನ್ನು ಮುಂದುವರಿಸಲು ನೈರುತ್ಯ ರೈಲ್ವೆ ನಿರ್ಧರಿಸಿದೆ.

ಯಶವಂತಪುರ-ಬಿಕಾನೇರ್ ನಿಲ್ದಾಣಗಳ ನಡುವೆ ವಾರಕ್ಕೆರಡು ಸಲ ಸಂಚರಿಸುವ ಯಶವಂತಪುರ-ಬಿಕಾನೇರ್-ಯಶವಂತಪುರ ಎಕ್ಸ್‌ಪ್ರೆಸ್ ರೈಲು ಬೀರೂರು ನಿಲ್ದಾಣದಲ್ಲಿ ಒಂದು ನಿಮಿಷದ ತಾತ್ಕಾಲಿಕ ನಿಲುಗಡೆಯನ್ನು ಮಾರ್ಚ್ 31ರವರೆಗೆ ಹೊಂದಿತ್ತು. ಇದೀಗ ಜೂನ್ 30ರವರೆಗೆ ಮೂರು ತಿಂಗಳ ಕಾಲ ಮುಂದುವರಿಯಲಿದೆ.

ಬೆಳಗಾವಿ-ಮೈಸೂರು ನಿಲ್ದಾಣಗಳ ನಡುವೆ ನಿತ್ಯ ಸಂಚರಿಸುವ ವಿಶ್ವಮಾನವ ಎಕ್ಸ್‌ಪ್ರೆಸ್, ಬೆಂಗಳೂರು ಕ್ರಾಂತಿವೀರ ಸಂಗೊಳ್ಳಿ ರಾಯಣ್ಣ ನಿಲ್ದಾಣ-ಹುಬ್ಬಳ್ಳಿ ಸಿದ್ಧಾರೂಢ ಸ್ವಾಮೀಜಿ ನಿಲ್ದಾಣಗಳ ನಡುವೆ ಪ್ರತಿದಿನ ಸಂಚರಿಸುವ ಎಕ್ಸ್‌ಪ್ರೆಸ್ ರೈಲುಗಳನ್ನು ರಾಮಗಿರಿ ನಿಲ್ದಾಣದಲ್ಲಿ ಒಂದು ನಿಮಿಷ ತಾತ್ಕಾಲಿಕ ನಿಲುಗಡೆಗೊಳಿಸಲು ಮಾರ್ಚ್ 31ರ ವರೆಗೆ ಹಿಂದೆ ಅವಕಾಶ ನೀಡಲಾಗಿತ್ತು. ಇದೀಗ ಸೆ.30ರವರೆಗೆ 6 ತಿಂಗಳ ಕಾಲ ನಿಲುಗಡೆಯನ್ನು ವಿಸ್ತರಣೆ ಮಾಡಲಾಗಿದೆ.

ಸಂಚಾರ ಮುಂದುವರಿಕೆ: ಬೇಸಿಗೆ ಸಂದರ್ಭದಲ್ಲಿ ಪ್ರಯಾಣಿಕರ ಹೆಚ್ಚುವರಿ ದಟ್ಟಣೆಯನ್ನು ಕಡಿಮೆಗೊಳಿಸಲು ನರಸಾಪುರ-ಸರ್ ಎಂ.ವಿಶ್ವೇಶ್ವರಯ್ಯ ಟರ್ಮಿನಲ್ (ಎಸ್‌ಎಂವಿಟಿ) ಬೆಂಗಳೂರು-ನರಸಾಪುರ ವಿಶೇಷ ಎಕ್ಸ್‌ಪ್ರೆಸ್ ರೈಲುಗಳ ಸಂಚಾರವನ್ನು ಏ.6ರವರೆಗೆ ವಿಸ್ತರಿಸಲು ರೈಲ್ವೆ ಮಂಡಳಿ ಮುಂದುವರಿಸಲು ದಕ್ಷಿಣ ಮಧ್ಯ ರೈಲ್ವೆ ನಿರ್ಧರಿಸಿದೆ.

ನಗರದ ಮಾಗಡಿ ರಸ್ತೆಯ ಕೊಡಿಗೆಹಳ್ಳಿಯಲ್ಲಿ ‘ವಿಹಂಗಮ ಯೋಗ ಆಶ್ರಮ’ವನ್ನು ಬುಧವಾರ ರಾಂಚಿ ವಿಹಂಗಮ ಯೋಗ ಸಂಸ್ಥಾನದ ಸ್ವತಂತ್ರದೇವೋಜಿ ಮಹಾರಾಜ್ ಉದ್ಘಾಟಿಸಿ, ಚರ್ಚೆ ನಡೆಸಿದರು. ಶಿವಪ್ರಕಾಶ್ ಉಪಸ್ಥಿತರಿದ್ದರು — ಪ್ರಜಾವಾಣಿ ಚಿತ್ರ

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ

email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

PUBLIC NOTICE

PUBLIC NOTICE

This is to inform the public that our client intends to purchase the immovable property residential flat bearing No. 6078, Tower 6, 7th floor, Prestige Tranquility, Off Old Madras Road, Budigere Cross, Bommenahalli, Bangalore 560049. Its owner is Mr. Tosif Khan.

Any person having any right, title or interest in the said property, are called upon to contact the undersigned with supporting documents within 7 days of the publication of this notice, failing which it shall be presumed that there is no claim on the same from any person.

Sd/- Geeta Menon
Pramila Associates
844-A, 2nd floor,
100 feet Road, Indiranagar,
Bangalore-560038.
Date: 28.3.2024

BUSINESS

Business Offers

General

DRYFRUITS, FLAVOURED Cashews, Gift Boxes. Free Home Delivery Throughout Bengaluru. Irresistible Prices Impeccable Quality and Immaculate Taste Contact 'Farms India' 8095059460/ 6360940295

PERSONAL

Change of Name

CHANGE OF NAME

I, SRIVENKATA CHAITRA SHROFF Residing at No. 1, Ratanamma Nilaya, 9th Main, 6th Cross, Aditya Nagar, Near Narayana PU College, Vidyaranyapura Post, Bengaluru-560097, have changed my name to VENKATA CHAITRA SHROFF vide affidavit dated 27.3.2024 before notary H. Sridhar Rao, Bengaluru. Henceforth I shall be called VENKATA CHAITRA SHROFF only

I, BASAWARAJ S/o.Sidramappa R/a#15 Bhuvaneshwari Nagar, Nagadevanahalli Kengeri Hobli, Bengaluru South, Bengaluru Viswavidyalaya Bengaluru- 560056 have changed my Name to BASAWARAJ PATIL vide`affidavit dated:26.3.2024 before Notary G.Dayananda Bangalore

EDUCATION

To Place your Classified Ads Contact: 9845114560

CAUTION NOTICE

Readers are advised to make appropriate thorough enquiries before acting upon any advertisement. This newspaper does not vouch or subscribe to the claims and representations made by advertisers.

Advertisement Manager
The Printers (Mysore) Pvt. Ltd. Bengaluru

· 10 am to 8 pm · Open All Days · Master / Visa Card Accepted

INNERWEAR · LEISUREWEAR · ACTIVEWEAR · KIDSWEAR · SOCKS

Venues In Bangalore

Infantry Road:	Safina Plaza, No.84/85 - 560001
Kundalahalli Gate:	S K R Convention hall, Thubarahalli, Varthur Main Road, - 66 (This venue is close today & restarts from 29.03.24 - Friday)
Jayanagar:	Prem Chandra Kalyan Mahal, T.Mariappa Road, 2nd block, (Near Ashoka Pillar), – 11.
Banashankari 2nd Stage:	Banashankari Mahila Samaja, No.45, 30th Main Road, - 70.
Banshankari:	Sri Hari Kalyana Mantap, 30th Main, B.S.K. 3rd Stage, Near K.I.M.S. Hospital, - 560085 (This venue is close today & restarts from 29.03.24 - Friday)
J .P. Nagar 3rd Phase:	Shilpa KalaMantapa, No.12, 9th Cross, Bannerghatta Road, -76 (This venue is close today 28.03.24 & tomorrow 29.03.24 & restarts from 30.03.24 -Saturday)
Bannerghatta Road:	Billava Bhavana, No. 63, Opp. Meenakshi Temple - 560076
Rajarajeswari Nagar:	Vasavi Mahal Kalyana Mantapa, Next To Reliance Digital, Ideal Homes I Phase - 98
Vijay Nagar:	Five O Gallery, 17th Cross, M.C. Road, Near Vijay Nagar Bus Stop - 40
Mahalaxmipuram:	Sri Vidyaranya Prarthana Mandira, (Sri Avani Sringeri Shankar Mutt), West Of Chord Road, Next to Anupama English School, - 86
Malleswaram:	The Canara Union, No. 42, 8th Main, Canara Union Road - 03
Koramangala:	Apoorva International, #35A, Raheja Arcade, Opp Star Box - 95
Basavanagudi:	Amolak Apparels, #104, Bull Temple Road, Near Ramakrishna Ashram - 19

Org. by: Surya Agency Pvt. Ltd.

ಹೆಬ್ಬಾಳ ಜಂಕ್ಷನ್: ದಟ್ಟಣೆ ಸಾಧ್ಯತೆ

ಬೆಂಗಳೂರು: ಹೆಬ್ಬಾಳ ಮೇಲ್ಸೇತುವೆಗೆ ಎರಡು ಹೊಸ ಟ್ರ್ಯಾಕ್‌ಗಳನ್ನು ಅಳವಡಿಸುವ ಕಾಮಗಾರಿಯನ್ನು ಬಿಡಿಎ ಕೈಗೆತ್ತಿಕೊಂಡಿದ್ದು, ಈ ಭಾಗದಲ್ಲಿ ನಾಲ್ಕು ತಿಂಗಳು ಸಂಚಾರ ದಟ್ಟಣೆ ಉಂಟಾಗುವ ಸಾಧ್ಯತೆಯಿದೆ.

ದಟ್ಟಣೆ ತಪ್ಪಿಸಲು ಸಂಚಾರ ಪೊಲೀಸರು ಪರ್ಯಾಯ ಮಾರ್ಗದ ವ್ಯವಸ್ಥೆ ಕಲ್ಪಿಸಿದ್ದಾರೆ. ಅದೇ ಮಾರ್ಗ ಬಳಸುವಂತೆ ಮನವಿ ಮಾಡಿದ್ದಾರೆ.

ಕೆ.ಆರ್.ಪುರಂ ಲೂಪ್ ಮುಖ್ಯ ಟ್ರ್ಯಾಕ್ ಬಳಿ ಸೇರುವ 2 ಸ್ಪ್ಯಾನ್‌ಗಳನ್ನು ಕಿತ್ತು ಹಾಕಲಾಗಿದೆ. ಇದರಿಂದ ಕೆ.ಆರ್. ಪುರಂ ಲೂಪ್‌ನಲ್ಲಿ ಮುಂದಿನ ನಾಲ್ಕು ತಿಂಗಳವರೆಗೆ ನಗರದ ಕಡೆಗೆ ಸಂಚಾರ ನಿಧಾನವಾಗಿರಲಿದೆ. ಕೆ.ಆರ್. ಪುರಂ ಕಡೆಯಿಂದ ನಗರದ ಕಡೆಗೆ ಬರುವ ಪ್ರಯಾಣಿಕರು ಪರ್ಯಾಯ ಮಾರ್ಗಗಳಾದ ಐಒಸಿ- ಮುಕುಂದ ಥಿಯೇಟರ್ ರಸ್ತೆ, ಲಿಂಗರಾಜಪುರಂ ಮೇಲ್ಸೇತುವೆ ಮಾರ್ಗ, ನಾಗವಾರ–ಟ್ಯಾನರಿ ರಸ್ತೆ ಮಾರ್ಗವಾಗಿ ನಗರ ಪ್ರವೇಶಿಸಬಹುದು. ಹೆಗಡೆನಗರ ಥಣಿಸಂದ್ರ ಕಡೆಯಿಂದ ಬರುವ ಜನರು ಜಿಕೆವಿಕೆ ಜಕ್ಕೂರು ರಸ್ತೆಯ ಮೂಲಕ ನಗರ ಪ್ರವೇಶಿಸಬಹುದಾಗಿದೆ ಎಂದು ಸಂಚಾರ ಪೊಲೀಸರು ತಿಳಿಸಿದ್ದಾರೆ.

ವಿಮಾನ ನಿಲ್ದಾಣ ಕಡೆಯಿಂದ ಬರುವ ವಾಹನ ದಟ್ಟಣೆ ತಪ್ಪಿಸಲು ಹಾಗೂ ಹೆಬ್ಬಾಳ ಜಂಕ್ಷನ್‌ನಲ್ಲಿ ವಾಹನಗಳ ದಟ್ಟಣೆ ನಿಯಂತ್ರಿಸಲು 2 ಹೊಸ ಟ್ರ್ಯಾಕ್‌ಗಳನ್ನು ಅಳವಡಿಸಲು ಬಿಡಿಎ ಪ್ರಸ್ತಾಪಿಸಿತ್ತು. ಬಳಿಕ ಮೇಲ್ಸೇತುವೆ ವಿಸ್ತರಣೆ ಯೋಜನೆ ರೂಪಿಸಲಾಗಿತ್ತು. ಆ ಕಾಮಗಾರಿಯನ್ನು ಈಗ ಕೈಗೆತ್ತಿಕೊಳ್ಳಲಾಗಿದೆ.

ನಗರದಲ್ಲಿ ಇಂದು

ಅಂತರರಾಷ್ಟ್ರೀಯ ಮಹಿಳಾ ದಿನಾಚರಣೆ, ವಿಶ್ವರಂಗಭೂಮಿ ದಿನಾಚರಣೆ: ಅತಿಥಿಗಳು: ಸಿ.ಕೆ. ಗುಂಡಣ್ಣ, ಬೇಲೂರು ರಘುನಂದನ್, ರಂಗಗೌರವ: ಶ್ವೇತಾ ಶ್ರೀನಿವಾಸ್, ಉಪಸ್ಥಿತಿ: ಟಿ.ಆರ್. ಲೋಕೇಶ್, ಆಯೋಜನೆ: ಸೃಷ್ಟಿ ಸಂಗಮ, ಸ್ಥಳ: ಸೃಷಿ ಕಲಾ ಮಂದಿರ, ಜೆ.ಪಿ. ನಗರ, 2ನೇ ಹಂತ, ಸಂಜೆ 4

ಅಭಿನಂದನಾ ಸಮಾರಂಭ: ಉಪಸ್ಥಿತಿ: ಬರಗೂರು ರಾಮಚಂದ್ರಪ್ಪ, ಬೇಲೂರು ರಾಮಮೂರ್ತಿ, ಆರ್. ಅಂಬುಜಾಕ್ಷಿ, ಅತಿಥಿ: ಎಂ.ಸಿ. ನರೇಂದ್ರ, ಅಧ್ಯಕ್ಷತೆ: ಜಗದೀಶ ರೆಡ್ಡಿ, ಆಯೋಜನೆ ಮತ್ತು ಸ್ಥಳ: ಕನ್ನಡ ಯುವಜನ ಸಂಘದ ಸಭಾಂಗಣ, ಹೊಂಬೇಗೌಡನಗರ, ಸಂಜೆ 6.30

ಧಾರ್ಮಿಕ ಪ್ರವಚನ: ‘ತತ್ವರುಷ್ವ ಮದದರ್ಪಣಂ’ ಕುರಿತು:ವ್ಯಾಸನಕೆರೆ ಪ್ರಭಂಜಾನಾಚಾರ್ಯ, ಆಯೋಜನೆ ಮತ್ತು ಸ್ಥಳ: ಕಲ್ಪವೃಕ್ಷ ಕ್ಷೇತ್ರ ರಾಘವೇಂದ್ರ ಸ್ವಾಮಿ ಮಠ, ಪೂರ್ಣಪ್ರಜ್ಞ ಬಡಾವಣೆ, ಸಂಜೆ 6.30

ಹರಿದಾಸ ಮಂಜರಿ: ಗಾಯನ: ರಾಮ್ ರಕ್ಷಿತ್, ಪಿಟೀಲು: ಗಿರೀಶ್ ಕೋಳಾಲ, ತಬಲಾ: ಶರಣು ಗೋಗಿ, ತಾಳ: ಕೀರ್ತನ್, ಆಯೋಜನೆ ಮತ್ತು ಸ್ಥಳ: ನಂಜನಗೂಡು ರಾಘವೇಂದ್ರ ಸ್ವಾಮಿ ಮಠ, ಜಯನಗರ, ಸಂಜೆ 7.30

4 ಗಿಳಿಗಳಿಗೆ ₹ 444 ಪ್ರಯಾಣ ದರ!

ಪ್ರಜಾವಾಣಿ ವಾರ್ತೆ

ಮೈಸೂರು: ಕೆಎಸ್‌ಆರ್‌ಟಿಸಿ ಬಸ್‌ನಲ್ಲಿ ಪ್ರಯಾಣಿಸಿದ ಅಜ್ಜಿ–ಮೊಮ್ಮಗಳಿಗೆ ‘ಶಕ್ತಿ’ ಯೋಜನೆಯಲ್ಲಿ ಉಚಿತ ಟಿಕೆಟ್ ನೀಡಿದ ನಿರ್ವಾಹಕ, ಅವರು ತಂದಿದ್ದ 2 ಜೊತೆ ಗಿಳಿಗಳಿಗೆ (ಲವ್ ಬರ್ಡ್ಸ್) ₹ 444 ಪ್ರಯಾಣ ದರ ಪಡೆದಿದ್ದಾರೆ.

ಅವರು ನೀಡಿದ ಹಾಗೂ ಅಜ್ಜಿ–ಮೊಮ್ಮಗಳು ಗಿಳಿಗಳೊಂದಿಗೆ ಸಂಚರಿಸಿದ ಚಿತ್ರಗಳು ಸಾಮಾಜಿಕ ಜಾಲತಾಣದಲ್ಲಿ ಬುಧವಾರ ಹರದಾಡುತ್ತಿವೆ. ಅವರು ಬೆಂಗಳೂರಿನಿಂದ ಮೈಸೂರಿಗೆ ಪ್ರಯಾಣಿಸಿದ್ದಾರೆ.

ಗಿಳಿಗಳಿಗೆ ಮಕ್ಕಳಿಗೆ ಪಡೆಯುವಷ್ಟು ಪ್ರಯಾಣ ದರವನ್ನು (ಅಂದರೆ ತಲಾ ₹111) ನಿರ್ವಾಹಕ ಪಡೆದಿದ್ದಾರೆ. ಇದು ಚರ್ಚೆಗೆ ಗ್ರಾಸವಾಗಿದೆ.

‘ಗಿಳಿಗಳನ್ನು ಪಂಜರದಲ್ಲಿಟ್ಟು ಒಂದೇ ಸೀಟಿನಲ್ಲಿ ಕುಳಿತಿದ್ದೆವು. ಆದಾರೂ ಪ್ರಯಾಣದರ ಪಡೆಯಬೇಕೆಂದಿದ್ದರೆ ಒಂದು ಸೀಟಿನದ್ದು ತೆಗೆದುಕೊಳ್ಳಬೇಕಿತ್ತು. ಅದರ ಬದಲಿಗೆ ನಾಲ್ಕೂ ಗಿಳಿಗಳನ್ನು ಪ್ರತ್ಯೇಕವಾಗಿ ಪರಿಗಣಿಸಿದರು. ಇದು ಸರಿಯೇ?’ ಎಂದು ಮಹಿಳೆ ಪ್ರಶ್ನಿಸಿದರು ಎಂದು ತಿಳಿದುಬಂದಿದೆ. ‘ಹಕ್ಕಿಗಳನ್ನು ಮಕ್ಕಳೆಂದು ಪರಿಗಣಿಸಿ ಟಿಕೆಟ್ ಕೊಟ್ಟಿದ್ದಕ್ಕೆ ಸಹ ಪ್ರಯಾಣಿಕರು ಕೂಡ ಅಸಮಾಧಾನ ವ್ಯಕ್ತಪಡಿಸಿದರು’ ಎಂದು ಗೊತ್ತಾಗಿದೆ. ಅದಕ್ಕೆ ಪ್ರತಿಕ್ರಿಯಿಸಿದ ನಿರ್ವಾಹಕರು, ‘ನಿಯಮದಂತೆಯೇ ಪ್ರಯಾಣದರ ತೆಗೆದುಕೊಂಡಿರುವುದಾಗಿ ವಾದಿಸಿದರು’ ಎಂದು ತಿಳಿದುಬಂದಿದೆ.

ಪ್ರಯಾಣಿಸಿದವರ ವಿವರ ಗೊತ್ತಾಗಿಲ್ಲ. ಪ್ರತಿಕ್ರಿಯೆಗೆ ವಿಭಾಗೀಯ ನಿಯಂತ್ರಣಾಧಿಕಾರಿ ಲಭ್ಯವಾಗಲಿಲ್ಲ.

ಬೆಂಗಳೂರು–ಮೈಸೂರು ಹೆದ್ದಾರಿ ಶುಲ್ಕ ವರ್ಷದೊಳಗೆ ಎರಡು ಬಾರಿ ಏರಿಕೆ

ಹೆದ್ದಾರಿ ಟೋಲ್ ಏ.1ರಿಂದ ಹೆಚ್ಚಳ

• ಓದೇಶ ಸಕಲೇಶಪುರ

ರಾಮನಗರ ತಾಲ್ಲೂಕಿನ ಶೇಷಗಿರಿಹಳ್ಳಿಯ ಬೆಂಗಳೂರು–ಮೈಸೂರು ಹೆದ್ದಾರಿ ಟೋಲ್ ಪ್ಲಾಜಾ

ರಾಮನಗರ: ಬೆಂಗಳೂರು-ಮೈಸೂರು ಹೆದ್ದಾರಿಯ ಟೋಲ್ ಏಪ್ರಿಲ್ 1ರಿಂದ ಹೆಚ್ಚಳವಾಗಲಿದೆ.

ರಾಷ್ಟ್ರೀಯ ಹೆದ್ದಾರಿ ಅಭಿವೃದ್ಧಿ ಪ್ರಾಧಿಕಾರವು ನಿಡಘಟ್ಟ, ಕಣಮಿಣಿಕೆ ಹಾಗೂ ಶೇಷಗಿರಿಹಳ್ಳಿ ಟೋಲ್ ಪ್ಲಾಜಾವರೆಗಿನ 56 ಕಿ.ಮೀ. ಉದ್ದದ ಹೆದ್ದಾರಿಗೆ ಈ ಪರಿಷ್ಕೃತ ದರ ಅನ್ವಯವಾಗಲಿದೆ. ಇದರೊಂದಿಗೆ ಒಂದು ವರ್ಷದ ಅವಧಿಯಲ್ಲಿ ಹೆದ್ದಾರಿ ಟೋಲ್ ಎರಡು ಸಲ ಪರಿಷ್ಕರಣೆಯಾಗಿದೆ.

ಕಳೆದ ಏಪ್ರಿಲ್‌ನಲ್ಲಿ ಪ್ರಾಧಿಕಾರ ಟೋಲ್ ಹೆಚ್ಚಳ ಮಾಡಿತ್ತು. ಇದಕ್ಕೆ ಸಾರ್ವಜನಿಕರಿಂದ ವ್ಯಾಪಕ ಆಕ್ರೋಶ ವ್ಯಕ್ತವಾದ ಬೆನ್ನಲ್ಲೇ ನಿರ್ಧಾರ ಕೈ ಬಿಟ್ಟಿತ್ತು. ಎರಡು ತಿಂಗಳ ಬಳಿಕ ಜೂನ್‌ನಲ್ಲಿ ಏಕಾಏಕಿ ಶೇ 22ರಷ್ಟು ಹೆಚ್ಚಳವಾಗಿತ್ತು. ಅದಾದ 9 ತಿಂಗಳ ಬಳಿಕ ಮತ್ತೆ ಟೋಲ್ ಏರಿಕೆಯಾಗಿದೆ.

ನಿಯಮ ಪ್ರಕಾರ ಪರಿಶೀಲನೆ: 'ರಾಷ್ಟ್ರೀಯ ಹೆದ್ದಾರಿ ಶುಲ್ಕ ನಿಯಮ–2008ರ ಪ್ರಕಾರವೇ ಟೋಲ್ ಪರಿಷ್ಕರಿಸಲಾಗಿದೆ. ಟೋಲ್ ಪ್ಲಾಜಾದ 20 ಕಿ.ಮೀ. ವ್ಯಾಪ್ತಿಯಲ್ಲಿ ವಾಸಿಸುವ ವಾಹನಗಳ ಸವಾರರಿಗೆ ಮಾಸಿಕ ಪಾಸ್ ಶುಲ್ಕವನ್ನು ₹340 ನಿಗದಿಪಡಿಸಲಾಗಿದೆ' ಎಂದು ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರದ ಬೆಂಗಳೂರು–ಮೈಸೂರು ಹೆದ್ದಾರಿ ವಿಭಾಗದ ಯೋಜನಾ ನಿರ್ದೇಶಕ ರಾಹುಲ್ ಗುಪ್ತಾ 'ಪ್ರಜಾವಾಣಿ'ಗೆ ತಿಳಿಸಿದರು.

'ಎಲ್ಲಾ ಬಗೆಯ ವಾಹನಗಳು 24 ತಾಸಿನೊಳಗೆ ಹಿಂದಿರುಗಿ ಬಂದಲ್ಲಿ ಪಾವತಿಸಬೇಕಾದ ಟೋಲ್‌ನಲ್ಲಿ ಶೇ 25ರಷ್ಟು ರಿಯಾಯಿತಿ ಸಿಗಲಿದೆ. ಅದೇ ರೀತಿ, ಎಲ್ಲಾ ವಾಹನಗಳು ಟೋಲ್ ಪಾವತಿ ದಿನದಿಂದ ಒಂದು ತಿಂಗಳೊಳಗೆ 50 ಸಲ ಪ್ರಯಾಣಿಸಿದ್ದಲ್ಲಿ ಶೇ 35ರಷ್ಟು ರಿಯಾಯಿತಿ ಸೌಲಭ್ಯಕ್ಕೆ ಅರ್ಹರಾಗಿದ್ದಾರೆ. ಯಾವುದೇ ವಾಹನ ಅನುಮತಿ ಪಡೆದಿದ್ದಕ್ಕಿಂತ ಹೆಚ್ಚು ಭಾರ ಹೊಂದಿದ್ದರೆ ನಿಗದಿತ ಶುಲ್ಕದ ಹತ್ತು ಪಟ್ಟು ಶುಲ್ಕ ಪಾವತಿಸಿಕೊಂಡು ಭಾರ ಖಾಲಿ ಮಾಡಲಾಗುತ್ತದೆ' ಎಂದು ಹೇಳಿದರು.

ಪ್ರತಿ ವರ್ಷ ಎಲ್ಲಾ ರಾಷ್ಟ್ರೀಯ ಹೆದ್ದಾರಿಗಳಲ್ಲಿ ಟೋಲ್ ಶುಲ್ಕ ಪರಿಷ್ಕರಿಸಲಾಗುತ್ತದೆ. ಅದೇ ರೀತಿ, ಬೆಂಗಳೂರು–ಮೈಸೂರು ಹೆದ್ದಾರಿಯಲ್ಲೂ ಪರಿಷ್ಕರಿಸಲಾಗಿದೆ

ರಾಹುಲ್ ಗುಪ್ತಾ, ಯೋಜನಾ ನಿರ್ದೇಶಕ, ರಾಷ್ಟ್ರೀಯ ಹೆದ್ದಾರಿ ಪ್ರಾಧಿಕಾರ

ಬೆಂಗಳೂರು ನಗರ ಜಿಲ್ಲೆಯ ಕಣಮಿಣಕಿ ಹಾಗೂ ರಾಮನಗರ ಜಿಲ್ಲೆಯ ಶೇಷಗಿರಿಹಳ್ಳಿ ಬಳಿ ಹೆದ್ದಾರಿ ಪ್ರಾಧಿಕಾರ ಎರಡು ಟೋಲ್ ಪ್ಲಾಜಾ ನಿರ್ಮಿಸಿದೆ. ಬೆಂಗಳೂರಿನಿಂದ ಮೈಸೂರಿಗೆ ಹೋಗುವವರು ಕಣಮಿಣಕಿ ಬಳಿ ಹಾಗೂ ಮೈಸೂರು–ರಾಮನಗರ ಕಡೆಯಿಂದ ಬೆಂಗಳೂರು ಪ್ರವೇಶಿಸುವವರು ಶೇಷಗಿರಿಹಳ್ಳಿ ಬಳಿ ಟೋಲ್ ಕಟ್ಟಬೇಕಿದೆ.

ಯಾವ ವಾಹನಕ್ಕೆ ಎಷ್ಟು ಶುಲ್ಕ (₹ಗಳಲ್ಲಿ)

ವಾಹನ ಮಾದರಿ	ಏಕಮುಖ ಸಂಚಾರ	ರಿಟರ್ನ್ ಜರ್ನಿ	30ಗಳ 50 ಏಕಮುಖ ಸಂಚಾರ ಪಾಸ್
ಕಾರು, ಜೀಪು, ವ್ಯಾನ್	170	255	5,715
ಲಘು ವಾಹನ, ಮಿನಿ ಬಸ್	275	415	9,230
2 ಆಕ್ಸಲ್ ಟ್ರಕ್/ಬಸ್	580	570	19,345
3 ಆಕ್ಸಲ್ ವಾಣಿಜ್ಯ ವಾಹನ	635	950	21,100
ಭಾರಿ ವಾಹನ (4–6 ಆಕ್ಸೆಲ್)	910	1,365	30,335
ದೊಡ್ಡ ವಾಹನ (7ಕ್ಕಿಂತ ಹೆಚ್ಚು ಆಕ್ಸೆಲ್)	1,110	1,660	36,930

ವರ್ಷದಲ್ಲಾದ ಟೋಲ್ ಹೆಚ್ಚಳ (ಏಕಮುಖ ಸಂಚಾರ) (₹ಗಳಲ್ಲಿ)

ವಾಹನ	ಹಳೆ ದರ	ಹೊಸ ದರ	ಹೆಚ್ಚಳ
ಕಾರು, ಜೀಪು, ವ್ಯಾನ್	135	170	35
ಲಘು ವಾಹನ, ಮಿನಿ ಬಸ್	220	275	55
2 ಆಕ್ಸಲ್ ಟ್ರಕ್/ಬಸ್	460	580	120
3 ಆಕ್ಸಲ್ ವಾಣಿಜ್ಯ ವಾಹನ	500	635	135
ಭಾರಿ ವಾಹನ (4–6 ಆಕ್ಸೆಲ್)	720	910	190
ದೊಡ್ಡ ವಾಹನ (7ಕ್ಕಿಂತ ಹೆಚ್ಚು ಆಕ್ಸೆಲ್)	880	1,110	880

'ನೀರಿನ ಕೊರತೆ ನೀಗಿಸಲು ಕ್ರಮ'

ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಸೂಚನೆ

ಪ್ರಜಾವಾಣಿ ವಾರ್ತೆ

ತುಷಾರ್ ಗಿರಿನಾಥ್

ಬೆಂಗಳೂರು: ಮಹದೇವಪುರ ವಲಯ ವ್ಯಾಪ್ತಿಯಲ್ಲಿ ಕುಡಿಯುವ ನೀರಿನ ಅಭಾವ ಎದುರಾಗದಂತೆ ಕ್ರಮಗಳನ್ನು ಕೈಗೊಳ್ಳಬೇಕು ಎಂದು ಬಿಬಿಎಂಪಿ ಮುಖ್ಯ ಆಯುಕ್ತ ತುಷಾರ್ ಗಿರಿನಾಥ್ ಅವರು ಅಧಿಕಾರಿಗಳಿಗೆ ಸೂಚಿಸಿದರು.

ಮಹಾದೇವಪುರ ವಲಯದ ಕುಡಿಯುವ ನೀರಿಗೆ ಸಂಬಂಧಿಸಿದಂತೆ ಕಚೇರಿಯಲ್ಲಿ ಅಧಿಕಾರಿಗಳ ಸಭೆ ನಡೆಸಿದ ಅವರು, ಮಹದೇವಪುರ ವ್ಯಾಪ್ತಿಯಲ್ಲಿ 31, ಕೆ.ಆರ್. ಪುರದಲ್ಲಿ 11 ಸೇರಿ ಒಟ್ಟು 42 ಹಳ್ಳಿಗಳಿವೆ. ವಲಯ ವ್ಯಾಪ್ತಿಯಲ್ಲಿ ನೀರಿನ ಸಮಸ್ಯೆ ಹೆಚ್ಚಿರುವ ಪ್ರದೇಶಗಳಲ್ಲಿ ಸಿಂಟೆಕ್ಸ್ ಟ್ಯಾಂಕ್‌ಗಳನ್ನು ಅಳವಡಿಸಿ ಜಲಮಂಡಳಿಯಿಂದ ನೀರಿನ ಪೂರೈಕೆ ಮಾಡಬೇಕು' ಎಂದು ಅಧಿಕಾರಿಗಳಿಗೆ ತಿಳಿಸಿದರು.

ವಲಯ ವ್ಯಾಪ್ತಿಯಲ್ಲಿ 46 ಶುದ್ಧ ಕುಡಿಯುವ ನೀರಿನ ಘಟಕಗಳು ಬರಲಿದ್ದು, 42 ಘಟಕಗಳು ಕಾರ್ಯ ನಿರ್ವಹಿಸುತ್ತಿವೆ. 4 ಘಟಕಗಳು ಸ್ಥಗಿತಗೊಂಡಿದ್ದು, ಆಘಟಕಗಳಿಗೆ ಕೂಡಲೇ ತಾತ್ಕಾಲಿಕ ವ್ಯವಸ್ಥೆ ಮಾಡಿಕೊಂಡು ನೀರು ಪೂರೈಸಬೇಕು ಎಂದು ಸಲಹೆ ನೀಡಿದರು.

ಜಲಮಂಡಳಿಯ ಜಲ ಸಂಗ್ರಹಾಗಾರಗಳಲ್ಲಿ ಏಕ ಕಾಲದಲ್ಲಿ ಮೂರು–ನಾಲ್ಕು ಟ್ಯಾಂಕರ್‌ಗಳಿಗೆ ನೀರು ಪೂರೈಕೆ ಮಾಡಲು ಸುಲಭವಾಗುವಂತೆ ಪೈಪ್ ಅಳವಡಿಸಿಕೊಳ್ಳಬೇಕು. ಎಷ್ಟು ಕೊಳವೆ ಬಾವಿಗಳು ಕಾರ್ಯನಿರ್ವಹಿಸುತ್ತಿವೆ? ಎಷ್ಟು ಬತ್ತಿ ಹೋಗಿವೆ? ಎಷ್ಟು ಕೊಳವೆ ಬಾವಿಗಳಿಗೆ ವಿದ್ಯುತ್ ಸಮಸ್ಯೆಯಿದೆ? ಎಷ್ಟು ಯಂತ್ರಗಳು ಹಾಳಾಗಿವೆ? ಎಲ್ಲೆಲ್ಲಿ ಹೊಸ ಕೊಳವೆ ಬಾವಿಗಳನ್ನು ಕೊರೆಯಬೇಕಿದೆ ಎಂಬುದನ್ನು ಸರಿಯಾಗಿ ಪರಿಶೀಲಿಸಿ ಅಗತ್ಯ ಕ್ರಮಗಳನ್ನು ಕೈಗೊಳ್ಳಬೇಕು ಎಂದು ನಿರ್ದೇಶನ ನೀಡಿದರು.

ಪಾಲಿಕೆ ವ್ಯಾಪ್ತಿಯಲ್ಲಿ ಈಗಾಗಲೇ ಸ್ವಯಂ ನೋಂದಣಿಯಾಗಿರುವ ಟ್ಯಾಂಕರ್‌ಗಳನ್ನು ವಲಯವಾರು ನಿಯೋಜಿಸಲಾಗಿದೆ. ನೋಂದಣಿಯಾಗಿರುವ ಟ್ಯಾಂಕರ್‌ಗಳಿಗೆ ಕಡ್ಡಾಯವಾಗಿ ಸ್ಟಿಕರ್‌ಗಳನ್ನು ಅಂಟಿಸಬೇಕು. ಟ್ಯಾಂಕರ್ ಮಾಲೀಕರ ವಿವರ, ನೋಂದಣಿ ಪ್ರಮಾಣಪತ್ರ ಸಹಿತ ವಿವರ ನೀಡಬೇಕು ಎಂದು ತಿಳಿಸಿದರು.

ವಲಯ ಆಯುಕ್ತ ರಮೇಶ್, ವಿಪತ್ತು ನಿರ್ವಹಣೆಯ ನೋಡಲ್ ಅಧಿಕಾರಿ ಸುರೋಳ್ಕರ್ ವಿಕಾಸ್ ಕಿಶೋರ್, ಜಂಟಿ ಆಯುಕ್ತೆ ದಾಕ್ಷಾಯಿಣಿ, ಮುಖ್ಯ ಎಂಜಿನಿಯರ್ ಲೋಕೇಶ್, ಕಾರ್ಯಪಾಲಕ ಎಂಜಿನಿಯರ್, ಜಲಮಂಡಳಿ ಅಧಿಕಾರಿಗಳು ಉಪಸ್ಥಿತರಿದ್ದರು.

ಪ್ರತಿಭಟನೆ

ನಗರದ ಮೈಸೂರು ಬ್ಯಾಂಕ್ ವೃತ್ತದಲ್ಲಿ ಬುಧವಾರ ಕನ್ನಡ ಚಳವಳಿ ಪಕ್ಷದ ವಾಟಾಳ್ ನಾಗರಾಜ್ ನೇತೃತ್ವದಲ್ಲಿ ಕುಡಿಯುವ ನೀರಿಗಾಗಿ ಖಾಲಿ ಕೊಡಗಳನ್ನೂ ಹಿಡಿದು ಪ್ರತಿಭಟನೆ ನಡೆಸಲಾಯಿತು
–ಪ್ರಜಾವಾಣಿ ಚಿತ್ರ

'ಕಲಾವಿದರಿಗೆ ನೆರವು ಅಗತ್ಯ'

ವಿಶ್ವ ರಂಗಭೂಮಿ ದಿನಾಚರಣೆ; ಪೋಷಕ ನಟರ ಅಭಿಮತ

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ರಂಗಭೂಮಿ, ಕಿರುತೆರೆ ಹಾಗೂ ಸಿನಿಮಾದಲ್ಲಿ ಅಭಿನಯಿಸುತ್ತಿರುವ ಕಲಾವಿದರಲ್ಲಿ ಕೆಲವರು ಆರ್ಥಿಕ ಸಂಕಷ್ಟ ಎದುರಿಸುತ್ತಿದ್ದಾರೆ. ಅಂಥ ಕಲಾವಿದರಿಗೆ ಸರ್ಕಾರಿ ಸೌಲಭ್ಯಗಳು, ಆರ್ಥಿಕ ನೆರವು ಸಿಗುವಂತಾಗಬೇಕು' ಎಂದು ಚಲನಚಿತ್ರ ಪೋಷಕ ಕಲಾವಿದರು ಅಭಿಮತ ವ್ಯಕ್ತಪಡಿಸಿದರು.

ಕರ್ನಾಟಕ ಚಲನಚಿತ್ರ ಪೋಷಕ ಕಲಾವಿದರ ಸಂಘ ನಗರದಲ್ಲಿ ಬುಧವಾರ ಹಮ್ಮಿಕೊಂಡ ವಿಶ್ವ ರಂಗಭೂಮಿ ದಿನಾಚರಣೆ ಕಾರ್ಯಕ್ರಮದಲ್ಲಿ ಪೋಷಕ ಕಲಾವಿದರು ರಂಗ ನೆನಪುಗಳನ್ನು ಮೆಲುಕು ಹಾಕಿದರು. ಸಂಘದ ಅಧ್ಯಕ್ಷೆ ಪದ್ಮಿನಿ ನಂದ, 'ಕೆಲ ಕಲಾವಿದರು ಕಷ್ಟದಲ್ಲಿ ಇದ್ದಾರೆ. ಅವರಿಗೆ ಅಗತ್ಯ ನೆರವು ಒದಗಿಸಬೇಕಿದೆ' ಎಂದರು.

ಸಂಗೀತ ನಿರ್ದೇಶಕ ಹಂಸಲೇಖ, 'ಪೋಷಕ ಕಲಾವಿದರು ಸಂಘಟಿತರಾಗಬೇಕು. ಕಲಾವಿದರಿಗೆ ಸದಾ ಬೆಂಬಲ ಇರುತ್ತದೆ' ಎಂದು ತಿಳಿಸಿ, ಸಂಘಕ್ಕೆ ₹ 50 ಸಾವಿರ ದೇಣಿಗೆ ನೀಡಿದರು.

ಕಾರ್ಯಕ್ರಮದಲ್ಲಿ ರಂಗಕರ್ಮಿ ಶ್ರೀನಿವಾಸ ಜಿ. ಕಪ್ಪಣ್ಣ ಮತ್ತು ಪೋಷಕ ಕಲಾವಿದೆ ಎಂ.ಎನ್. ಲಕ್ಷ್ಮೀದೇವಿ ಅವರನ್ನು ಸನ್ಮಾನಿಸಲಾಯಿತು. (ಎಡದಿಂದ) ಪದ್ಮಿನಿ ನಂದ, ಸುಂದರ್‌ರಾಜ್, ಸಂಗಮೇಶ್ ಉಪಾಸೆ, ಹಂಸಲೇಖ, ಉಮೇಶ್, ಮಾಲತಿಶ್ರೀ ಮೈಸೂರು, ದೊಡ್ಡಣ್ಣ, ರಮೇಶ್ ಭಟ್, ಸಂಘದ ಕಾರ್ಯದರ್ಶಿ ಎಂ.ಎನ್. ಸುರೇಶ ಪಾಲ್ಗೊಂಡಿದ್ದರು –ಪ್ರಜಾವಾಣಿ ಚಿತ್ರ

ಕಾರ್ಯನಿರ್ವಹಿಸದ ಲಿಫ್ಟ್

ಕನ್ನಡ ಭವದಲ್ಲಿನ ಎರಡೂ ಲಿಫ್ಟ್‌ಗಳೂ ಕೆಟ್ಟು ಹೋಗಿದ್ದವು. ಕನ್ನಡ ಭವನದ ಎರಡನೇ ಮಹಡಿಯಲ್ಲಿರುವ ವರ್ಣ ಆರ್ಟ್ ಗ್ಯಾಲರಿಯಲ್ಲಿ ವಿಶ್ವ ರಂಗಭೂಮಿ ದಿನಾಚರಣೆ ಕಾರ್ಯಕ್ರಮ ಹಮ್ಮಿಕೊಂಡಿದ್ದರಿಂದ ಪೋಷಕ ಕಲಾವಿದರು ಪರದಾಟ ನಡೆಸಿದರು. ಎಂ.ಎನ್. ಲಕ್ಷ್ಮೀದೇವಿ ಮೊದಲಾದವರು ಏದುಸಿರು ಬಿಡುತ್ತಾ ಎರಡು ಮಹಡಿಗಳನ್ನು ಹತ್ತಿದರು.

ಕೇಂದ್ರಕ್ಕೆ ಆರೋಗ್ಯ ಸಚಿವರ ಪತ್ರ

'ಟಿಬಿ ಔಷಧ ತುರ್ತು ಪೂರೈಸಿ'

ಪ್ರಜಾವಾಣಿ ವಾರ್ತೆ

ಬೆಂಗಳೂರು: 'ಕರ್ನಾಟಕಕ್ಕೆ ತುರ್ತಾಗಿ ಕ್ಷಯ ಔಷಧ (ಟಿಬಿ) ಅಗತ್ಯವಿದ್ದು, ಅದರ ಸರಬರಾಜಿಗೆ ಕ್ರಮವಹಿಸಬೇಕು' ಎಂದು ಆರೋಗ್ಯ ಸಚಿವ ದಿನೇಶ್ ಗುಂಡೂರಾವ್, ಕೇಂದ್ರ ಆರೋಗ್ಯ ಸಚಿವ ಮನ್‌ಸುಖ್ ಮಾಂಡವಿಯ ಅವರಿಗೆ ಮನವಿ ಮಾಡಿದ್ದಾರೆ.

ಈ ಬಗ್ಗೆ ಅವರು ಪತ್ರ ಬರೆದಿದ್ದಾರೆ. 'ಲೋಕಸಭಾ ಚುನಾವಣೆ ನೀತಿ ಸಂಹಿತೆ ಜಾರಿಯಾದ ನಂತರ ಕೇಂದ್ರವು ಮುಂದಿನ ಮೂರು ತಿಂಗಳಿಗೆ ಅಗತ್ಯವಾದ ಔಷಧಗಳನ್ನು ಸ್ಥಳೀಯವಾಗಿ ಖರೀದಿಸುವಂತೆ ಸೂಚಿಸಿದೆ. ಆದರೆ, ಸದ್ಯ ಅಗತ್ಯ ಪ್ರಮಾಣದಲ್ಲಿ ಔಷಧಗಳನ್ನು ಖರೀದಿಸಲು ರಾಜ್ಯಕ್ಕೆ ಕಷ್ಟಕರವಾಗಿದೆ' ಎಂದು ತಿಳಿಸಿದ್ದಾರೆ.

'2021ರಿಂದಲೂ ಕರ್ನಾಟಕಕ್ಕೆ ಟಿಬಿ ಔಷಧಗಳ ಪೂರೈಕೆಯಲ್ಲಿ ಆಗಾಗ ಸಮಸ್ಯೆ ಆಗುತ್ತಲೇ ಇದೆ. ಇದು ಸಾವಿರಾರು ಕ್ಷಯ ರೋಗಿಗಳ ಮೇಲೆ ಪರಿಣಾಮ ಬೀರುತ್ತಿದೆ. ಅಲ್ಲದೆ, ಇತ್ತೀಚೆಗೆ ಮುಂದಿನ ಮೂರು ತಿಂಗಳಿಗೆ ಔಷಧಗಳನ್ನು ಸ್ಥಳೀಯವಾಗಿ ಖರೀದಿಸುವಂತೆ ರಾಜ್ಯಕ್ಕೆ ಎರಡು ಬಾರಿ ಕೇಂದ್ರ ಸರ್ಕಾರ ಸೂಚನೆ ನೀಡಿದೆ. ನೀತಿ ಸಂಹಿತೆ ಜಾರಿಗೆ ಬಂದ ನಂತರ ಎರಡನೇ ಬಾರಿ ಈ ರೀತಿ ಸೂಚಿಸಲಾಗಿದೆ' ಎಂದು ಪತ್ರದಲ್ಲಿ ವಿವರಿಸಿದ್ದಾರೆ.

'ಕರ್ನಾಟಕವು ತಿಂಗಳಿಗೆ 6,800 ರೋಗಿಗಳಂತೆ ವಾರ್ಷಿಕ 80 ಸಾವಿರಕ್ಕೂ ಹೆಚ್ಚು ರೋಗಿಗಳಿಗೆ ನಿರಂತರ ಚಿಕಿತ್ಸೆ ನೀಡಬೇಕಾಗಿದೆ. ಹಾಗಾಗಿ, ರಾಜ್ಯ ಮತ್ತು ಜಿಲ್ಲಾ ಮಟ್ಟದಲ್ಲಿ ಟಿಬಿ ಔಷಧಗಳನ್ನು ಖರೀದಿಸಲು ರಾಜ್ಯ ಸರ್ಕಾರವು ತನ್ನ ಪ್ರಯತ್ನಗಳನ್ನು ತೀವ್ರಗೊಳಿಸಿದೆ. ಆರೋಗ್ಯ ಇಲಾಖೆಯು ರಾಜ್ಯ ಸರ್ಕಾರಕ್ಕೆ ಕೋರಿಕೆ ಸಲ್ಲಿಸಿದ್ದು, ಔಷಧಗಳ ಖರೀದಿಗೆ ಹಣಕಾಸು ಇಲಾಖೆ ಹೆಚ್ಚುವರಿ ಹಣ ನೀಡಲಿದೆ' ಎಂದು ತಿಳಿಸಿದ್ದಾರೆ.

'ಈ ಔಷಧಗಳು ರಾಜ್ಯಕ್ಕೆ ಅಗತ್ಯವಿರುವ ಪ್ರಮಾಣದಲ್ಲಿ ಲಭ್ಯವಿಲ್ಲ. ಅದರ ಉತ್ಪಾದನಾ ಪ್ರಕ್ರಿಯೆಯಲ್ಲಿನ ಸಮಸ್ಯೆಯಿಂದ ಖರೀದಿ ಪ್ರಕ್ರಿಯೆಯನ್ನು ತ್ವರಿತಗೊಳಿಸಲಾಗುವುದಿಲ್ಲ. ಹಾಗಾಗಿ, ಕೇಂದ್ರ ಸರ್ಕಾರವು ತಕ್ಷಣವೇ ಪ್ರತಿಕ್ರಿಯಿಸಬೇಕು. ಟಿಬಿ ರೋಗಿಗಳಿಗೆ ಅಗತ್ಯವಿರುವ ಔಷಧಗಳನ್ನು ಪೂರೈಸುವಂತೆ ಸಂಬಂಧಪಟ್ಟ ಅಧಿಕಾರಿಗಳಿಗೆ ಸೂಚನೆ ನೀಡಬೇಕು' ಎಂದು ಪತ್ರದಲ್ಲಿ ಹೇಳಿದ್ದಾರೆ.

ಐಟಿ ಸಂಸ್ಥೆಗಳಿಗೆ ಕೇರಳ ಗಾಳ

ಪ್ರಜಾವಾಣಿ ವಾರ್ತೆ

ತಿರುವನಂತಪುರ: ಬೆಂಗಳೂರಿನಲ್ಲಿ ನೀರಿನ ಕೊರತೆ ತೀವ್ರವಾಗಿರುವ ಕಾರಣ ಇಲ್ಲಿನ ಐಟಿ ಸಂಸ್ಥೆಗಳನ್ನು ಓಲೈಸಿ, ತನ್ನ ರಾಜ್ಯಕ್ಕೆ ಕರೆದೊಯ್ಯುವ ಯತ್ನದಲ್ಲಿ ಕೇರಳ ತೊಡಗಿದೆ. ಈ ಮೂಲಕ ಅದು ಹೆಚ್ಚಿನ ಐಟಿ ಸಂಸ್ಥೆಗಳನ್ನು ಆಕರ್ಷಿಸುವ ಕಾರ್ಯವನ್ನು ವಿಸ್ತರಿಸಲು ಯೋಜಿಸಿದೆ.

ಕಾರ್ಯಾಚರಣೆಯನ್ನು ವಿಸ್ತರಿಸಲು ಮುಂದಾಗಿರುವ ಬೆಂಗಳೂರಿನ ಐಟಿ ಕಂಪನಿಗಳ ಜತೆ ಚರ್ಚಿಸಲು ರಾಜ್ಯದ ಅಧಿಕಾರಿಗಳ ತಂಡವನ್ನು ನಿಯೋಜಿಸಲಾಗುವುದು ಎಂದು ಕೇರಳ ಕೈಗಾರಿಕಾ ಸಚಿವ ಪಿ. ರಾಜೀವ್ ಹೇಳಿದ್ದಾರೆ.

29, 31ರಂದು ಬೆಸ್ಕಾಂ ನಗದು ಪಾವತಿ ಕೇಂದ್ರದ ಸೇವೆ ಲಭ್ಯ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯುತ್ ಬಿಲ್ ಪಾವತಿಸಲು ಗ್ರಾಹಕರಿಗೆ ಅನುಕೂಲ ಕಲ್ಪಿಸುವ ಸಲುವಾಗಿ ಬೆಸ್ಕಾಂ ವ್ಯಾಪ್ತಿಯ ಎಲ್ಲ ಉಪ ವಿಭಾಗಗಳ ನಗದು ಪಾವತಿ ಕೇಂದ್ರಗಳನ್ನು ರಜೆ ದಿನಗಳಾದ ಮಾರ್ಚ್ 29 (ಗುಡ್ ಫ್ರೈಡೆ) ಹಾಗೂ ಮಾರ್ಚ್ 31 (ಭಾನುವಾರ) ದಂದು ತೆರೆಯಲಾಗುತ್ತಿದೆ.

ಇಂಧನ ಇಲಾಖೆಯ ಮಾಹಿತಿ ತಂತ್ರಜ್ಞಾನ ವ್ಯವಸ್ಥೆಯನ್ನು ಉನ್ನತೀಕರಿಸುವ ಸಂಬಂಧ ಮಾರ್ಚ್ 10ರಿಂದ 19ರವರೆಗೆ ಆನ್‌ಲೈನ್ ವಿದ್ಯುತ್ ಸೇವೆಗಳು ಸ್ಥಗಿತಗೊಂಡಿದ್ದವು. ಈ ಅವಧಿಯಲ್ಲಿ ಗ್ರಾಹಕರಿಗೆ ವಿದ್ಯುತ್ ಬಿಲ್ ಪಾವತಿಸಲು ಸಾಧ್ಯವಾಗಿರಲಿಲ್ಲ. ತಂತ್ರಾಂಶ ಕಾರ್ಯಾರಂಭಗೊಂಡ ನಂತರವೂ ಸರ್ವರ್ ಓವರ್‌ಲೋಡ್ ಆಗಿ ಆನ್‌ಲೈನ್ ಸೇವೆಗಳಲ್ಲಿ ವ್ಯತ್ಯಯವಾಗಿತ್ತು. ಹೀಗಾಗಿ, ಎರಡು ರಜಾ ದಿನಗಳಲ್ಲೂ ಬೆಸ್ಕಾಂನ ಎಲ್ಲಾ ಉಪ ವಿಭಾಗಗಳ ನಗದು ಪಾವತಿ ಕೇಂದ್ರಗಳು ಕಾರ್ಯನಿರ್ವಹಿಸಲಿವೆ ಎಂದು ಬೆಸ್ಕಾಂ ಪ್ರಕಟಣೆ ತಿಳಿಸಿದೆ.



ನೈಜ ಅಥವಾ ನಕಲಿ? ವ್ಯತ್ಯಾಸವನ್ನು ಗುರುತಿಸಿ

ತಪ್ಪು ಮಾಹಿತಿಯನ್ನು ನಿಲ್ಲಿಸಲು WhatsApp ನ ಟೂಲ್‌ಗಳೊಂದಿಗೆ

ತಪ್ಪುಮಾಹಿತಿ ವಿರುದ್ಧ ಹೋರಾಡಲು WhatsApp ನ ನಿರ್ಬಂಧಿಸಿ ಮತ್ತು ವರದಿ ಮಾಡಿ ಎಂಬ ವಿಶ್ವಾಸಾರ್ಹ ಟೂಲ್‌ಗಳನ್ನು ಹಾಗೂ ಫಾರ್ವರ್ಡ್ ಮಾಡುವ ಮಿತಿಗಳನ್ನು ಪರಿಗಣಿಸಿ. ಸಂದೇಶಗಳನ್ನು ಪರಿಶೀಲಿಸಲು ನೀವು ನಮ್ಮ 10 ಸ್ಥಳೀಯ ಫ್ಯಾಕ್ಟ್-ಚೆಕಿಂಗ್ ಪಾಲುದಾರರೊಂದಿಗೆ ಸಹ ಸಂಪರ್ಕ ಸಾಧಿಸಬಹುದು.

WhatsApp.com/INfactcheck ನಲ್ಲಿ ಇನ್ನಷ್ಟು ತಿಳಿಯಿರಿ

EXAM DH ಪ್ರಜಾವಾಣಿ MASTERMIND™

ವಾರ್ಷಿಕ ಚಂದಾದಾರಿಕೆ ಈಗ ಕೇವಲ ₹399ಕ್ಕೆ ಮಾತ್ರ

ಯುಪಿಎಸ್‌ಸಿ, ಕೆಪಿಎಸ್‌ಸಿ, ಪಿಎಸ್‌ಐ, ಎಫ್‌ಡಿಎ, ಬ್ಯಾಂಕಿಂಗ್ ಪಿ.ಒ... ಸ್ಪರ್ಧಾತ್ಮಕ ಪರೀಕ್ಷೆಗಳಿಗಾಗಿ ಇ-ಮಿತ್ರ

ಈಗಲೇ ಚಂದಾದಾರರಾಗಲು QR ಕೋಡ್ ಸ್ಕ್ಯಾನ್ ಮಾಡಿ ಅಥವಾ

www.exammastermind.comಗೆ ಭೇಟಿ ಕೊಡಿ

ವಾಯುಮಂಡಲದೊಳಗೂ ನದಿ!

ಯು.ಟಿ. ಆಯಿಶಾ ಫರ್ಝಾನ

ವಾಯುಮಂಡಲದೊಳಗೆ ಹರಿಯುವ ನದಿಯೊಂದು ಅಮೆರಿಕದ ಕ್ಯಾಲಿಫೋರ್ನಿಯಾ ಉದ್ದಕ್ಕೂ ಭಾರೀ ಮಳೆ ಮತ್ತು ಹಿಮವನ್ನು ಸುರಿಸಿ, ವ್ಯಾಪಕ ವಿದ್ಯುತ್ ವೈಫಲ್ಯ, ಭೂಕುಸಿತ ಮತ್ತು ಮಾರಣಾಂತಿಕ ಪ್ರವಾಹಗಳನ್ನು ಉಂಟುಮಾಡಿತು. ಈ ಹಿನ್ನೆಲೆಯಲ್ಲಿ ಈ ನದಿಯ ಕುರಿತ ಮಾಹಿತಿ ಇಲ್ಲಿದೆ

ವಾಯುಮಂಡಲದ ನದಿಗಳು (Atmospheric rivers-ARs) ಎಂದರೆ, ವಾತಾವರಣದಲ್ಲಿ ವಿಶೇಷವಾಗಿ ಉಷ್ಣವಲಯದ ಭಾಗಗಳ ಎತ್ತರದ ಪ್ರದೇಶಗಳಲ್ಲಿ, ಭಾರೀ ಪ್ರಮಾಣದಲ್ಲಿ ಸಾಂದ್ರೀಕೃತಗೊಂಡ ತೇವಾಂಶಗಳನ್ನು ಹೊಂದಿರುವ (ನೀರನ್ನು ಕೊಂಡೊಯ್ಯುವ) ಉದ್ದವಾದ, ಆದರೆ ಬಹಳ ಅಗಲವಿಲ್ಲದ ನೀರಾವಿಯಿಂದ ತುಂಬಿದ ಪಟ್ಟಿಗಳು ಎನ್ನಬಹುದು.

ಜಾಗತಿಕ ಜಲ ಆವರ್ತನೆ (water cycle)ಯಲ್ಲಿ ಬಹುಮುಖ್ಯ ಪಾತ್ರ ವಹಿಸುವ ಇವು, ಹಾದು ಹೋಗುವ ಪ್ರದೇಶದಲ್ಲಿ ಹವಾಮಾನ, ಮಳೆ, ಹಿಮ ಸುರಿಯುವಿಕೆ, ತೇವಾಂಶ ಸೇರಿ ಇಡೀ ಜಲಮಂಡಲದ ಮೇಲೆ ಗಮನಾರ್ಹ ಪರಿಣಾಮ ಬೀರಬಲ್ಲವು.

ಗುಣಲಕ್ಷಣಗಳು: ವಾಯುಮಂಡಲದ ನದಿಗಳು ರಿಬ್ಬನ್ ಮಾದರಿಯ ಸಂರಚನೆಯಾಗಿವೆ. ಇವು ಸಾವಿರಾರು ಕಿ.ಮೀ. ಉದ್ದವಿದ್ದರೂ, ಅಗಲ ಮಾತ್ರ ಕೆಲವು ನೂರು ಕಿ.ಮೀ. ಗಳಿರುತ್ತವೆ. ಇವು ಭಾರೀ ಪ್ರಮಾಣದಲ್ಲಿ ನೀರಾವಿಯನ್ನು ಹೊಂದಿದ್ದು, ಅದರ ಉದ್ದಕ್ಕೂ ಬಲವಾದ ಗಾಳಿ ಬೀಸುತ್ತಿರುತ್ತದೆ.

ರೂಪುಗೊಳ್ಳುವಿಕೆ: ವಾಯುಮಂಡಲದ ನದಿಗಳು- ಉಷ್ಣವಲಯ ಅಥವಾ ಸಮಶೀತೋಷ್ಣ ವಲಯಗಳಲ್ಲಿ ಹುಟ್ಟಿಕೊಳ್ಳುತ್ತವೆ. ಬಿಸಿಯಾದ ಸಾಗರದ ನೀರು ಆವಿಯಾಗಿ ವಾತಾವರಣವು ದಟ್ಟವಾದ ತೇವಾಂಶದಿಂದ ತುಂಬಿಕೊಳ್ಳುತ್ತದೆ. ಈ ಸಾಂದ್ರವಾದ ಆವಿಯ ಪಟ್ಟಿಗಳು ಆಗ ಬೃಹತ್ ಪ್ರಮಾಣದ ವಾತಾವರಣ ವ್ಯವಸ್ಥೆಗಳಲ್ಲಿ ಉಂಟಾಗುವ ಮಾರುತಗಳ ಮೂಲಕ ಉತ್ತರ ಅಥವಾ ದಕ್ಷಿಣ ಧ್ರುವಗಳು ಅಥವಾ ನಡುಭಾಗದ ಅಕ್ಷಾಂಶಗಳಲ್ಲಿ ಇರುವ ತಂಪಾದ ಎತ್ತರ ಪ್ರದೇಶಗಳತ್ತ ಚಲಿಸುತ್ತವೆ.

ಪರಿಣಾಮ: ಈ ವಾಯುಮಂಡಲದ ನದಿಗಳು ನೀರಿನಿಂದ ಭಾರವಾಗಿ ನೆಲದ ಸಂಪರ್ಕಕ್ಕೆ ಬರುವಾಗ ಆ ಪ್ರದೇಶದ ಉಷ್ಣತೆಗೆ ಅನುಗುಣವಾಗಿ ಭಾರೀ ಪ್ರಮಾಣದಲ್ಲಿ ಮಳೆ ಅಥವಾ ಹಿಮ ಸುರಿಸುತ್ತವೆ. ಇದು ಪ್ರವಾಹ, ಹಿಮಪಾತ ಮತ್ತು ಭೂಕುಸಿತಗಳಂಥ ತೀವ್ರತರದ ಹವಾಮಾನ ವೈಪರೀತ್ಯಗಳಿಗೆ ಕಾರಣವಾಗಬಹುದು.

ಋತುಮಾನ: ವಾಯುಮಂಡಲದ ನದಿಗಳು ಇಡೀ ವರ್ಷ ಉಂಟಾಗಬಹುದು. ಆದರೆ, ಬಿಸಿಯಾದ ಸಾಗರ ಮತ್ತು ತಂಪಾದ ಭೂಭಾಗಗಳ ನಡುವಿನ ಉಷ್ಣತೆಗಳ ವ್ಯತ್ಯಾಸವು ಅತ್ಯಂತ ಹೆಚ್ಚಿರುವ ಚಳಿಗಾಲದಲ್ಲಿ ಹೆಚ್ಚಾಗಿ ಉಂಟಾಗುತ್ತವೆ. ಈ ಋತುಮಾನವು- ಮುಖ್ಯವಾಗಿ ಶುದ್ಧ ನೀರಿಗಾಗಿ ಚಳಿಗಾಲದ ಮಂಜು ಮತ್ತು ಹಿಮವನ್ನು ಅವಲಂಬಿಸಿರುವ ಪ್ರದೇಶಗಳಲ್ಲಿ ಜಲಸಂಪನ್ಮೂಲಗಳನ್ನು ಮರಳಿ ತುಂಬಿಸುವುದರಲ್ಲಿ (ಮರುಪೂರಣ) ಮಹತ್ವದ ಪಾತ್ರ ವಹಿಸುತ್ತವೆ.

ಏರಿಳಿತ: ಈ ನದಿಗಳ ತೀವ್ರತೆ ಒಂದೇ ರೀತಿಯಾಗಿ ಇರುವುದಿಲ್ಲ. ಸಾಗರದ ಮೇಲ್ಮೈಯ ಉಷ್ಣತೆ, ಭೂಮೇಲ್ಮೈಯ ಉಷ್ಣತೆ, ಮಳೆ ಸುರಿಸುವ ಭೌಗೋಳಿಕ ಅಡೆತಡೆಗಳು (ಪರ್ವತ, ದಟ್ಟಾರಣ್ಯಗಳು ಇತ್ಯಾದಿ).

ಮಹತ್ವ

ನೀರು ಪೂರೈಕೆ: ಹಲವಾರು ಪ್ರದೇಶಗಳಿಗೆ ವಾಯುಮಂಡಲದ ನದಿಗಳೇ ನೀರಿನ ಬಹುಮುಖ್ಯ ಮೂಲಗಳಾಗಿದ್ದು, ಬರ ನಿವಾರಣೆ ಮತ್ತು ಶುದ್ಧ ನೀರಿನ ಸಂಗ್ರಹ, ಮರುಪೂರಣ ಮತ್ತು ನಿರ್ವಹಣೆಗೆ ಸಹಕರಿಸುತ್ತವೆ. ಅವು ಸುರಿಸುವ ಮಳೆಯು ನದಿ, ಜಲಾಶಯಗಳನ್ನು ತುಂಬಿಸಿ ಅಂತರ್ಜಲವನ್ನು ಹೆಚ್ಚಿಸುವುದೇ ಅಲ್ಲದೇ ಪರ್ವತ ಶಿಖರಗಳಲ್ಲಿ ಹಿಮದ ಕವಚವನ್ನು ಎತ್ತರಿಸುತ್ತದೆ. ಬೇಸಿಗೆಯಲ್ಲಿ ಈ ಹಿಮವು ಕರಗಿ ಕೆಳಭಾಗದ ಜಲಮೂಲಗಳಿಗೆ ನೀರನ್ನು ಪೂರೈಸುತ್ತದೆ. ಇದು ಕುಡಿಯುವ ನೀರು ಪೂರೈಕೆ, ಕೃಷಿ, ಜಲವಿದ್ಯುತ್ ಉತ್ಪಾದನೆ ಮತ್ತು ಪ್ರಕೃತಿಯನ್ನು ಸುಸ್ಥಿತಿಯಲ್ಲಿ ಇಡುವುದಕ್ಕೆ ಬಹಳ ಅಗತ್ಯ.

ಹವಾಮಾನ ವೈಪರೀತ್ಯಗಳು: ನೀರಿನಮೂಲಗಳಾಗಿದ್ದರೂ ವಾಯುಮಂಡಲದ ನದಿಗಳು ಪ್ರವಾಹ, ಭೂಕುಸಿತ, ಹಿಮಪಾತ ಮತ್ತು ಬಿರುಗಾಳಿಯಂತಹ ತೀವ್ರ ಹವಾಮಾನ ವೈಪರೀತ್ಯಗಳನ್ನೂ ಉಂಟುಮಾಡಬಹುದು. ಇವು ಸಾರಿಗೆಗೆ ಅಡಚಣೆ, ಮೂಲಸೌಕರ್ಯಗಳಿಗೆ ಹಾನಿ, ಜೀವ ಮತ್ತು ಆಸ್ತಿಪಾಸ್ತಿಗಳಿಗೆ ಹಾನಿ ಮಾಡುವುದರ ಮೂಲಕ ಸಾಮಾಜಿಕ-ಆರ್ಥಿಕ ದುಷ್ಪರಿಣಾಮಗಳನ್ನೂ ಬೀರಬಲ್ಲವು.

ಹವಾಮಾನ ಬದಲಾವಣೆ: ಬಿಸಿಯೇರುವ ಸಾಗರಗಳಿಂದಾಗಿ ವಾಯುಮಂಡಲದ ನದಿಗಳು ಇನ್ನಷ್ಟು ತೀವ್ರವಾಗಬಹುದು ಎಂದು ಕೆಲವು ಅಧ್ಯಯನಗಳು ಹೇಳುತ್ತವೆ. ಅವುಗಳ ಹಂಚಿಕೆ ಮತ್ತು ಪುನರಾವರ್ತನೆಯಲ್ಲಿ ಏರುಪೇರುಗಳಾಗುವ ಸಾಧ್ಯತೆಯಿದ್ದು, ಪ್ರಾದೇಶಿಕ ಹವಾಮಾನಗಳಲ್ಲಿ ತೀವ್ರ , ಅತಿರೇಕದ ಬದಲಾವಣೆಗಳು (ಅಂದರೆ, ಉದಾಹರಣೆಗೆ ಅತಿಯಾದ ಮಳೆ ಅಥವಾ ಮಳೆಯೇ ಇಲ್ಲದಿರುವಿಕೆ) ಆಗ ಬಹುದು ಎಂದು ಇನ್ನು ಕೆಲವು ಅಧ್ಯಯನಗಳು ಹೇಳುತ್ತವೆ.

ಮುನ್ಸೂಚನೆ ಮತ್ತು ಸಿದ್ಧತೆ: ವಾಯುಮಂಡಲದ ನದಿಗಳ ಬಗ್ಗೆ ಹೆಚ್ಚಿನ ತಿಳಿವಳಿಕೆ ಮತ್ತು ಪೂರ್ವಸೂಚನೆಗಳು ಮುನ್ನೆಚ್ಚರಿಕೆ ನೀಡುವುದಕ್ಕೆ ಮತ್ತು ದುರಂತ ನಿರ್ವಹಣೆಗೆ ಸಿದ್ಧವಾಗಿರುವುದಕ್ಕೆ ತುಂಬಾ ಅಗತ್ಯ.

ಅಂತರರಾಷ್ಟ್ರೀಯ ಸಹಯೋಗ: ವಾಯುಮಂಡಲದ ನದಿಗಳು ಎಲ್ಲಾ ರೀತಿಯ ಗಡಿಗಳನ್ನು ಮೀರಿರುವುದರಿಂದ ಮತ್ತು ಅವು ಹಲವಾರು ದೇಶಗಳಲ್ಲಿ ಏಕಕಾಲಕ್ಕೆ ಪರಿಣಾಮ ಬೀರಬಹುದಾದುದರಿಂದ ಅವುಗಳ ಮೇಲೆ ನಿಗಾ ಇಡುವುದಕ್ಕೆ, ಸಂಶೋಧನೆ ನಡೆಸುವುದಕ್ಕೆ ಮತ್ತು ದುರಂತ ನಿರ್ವಹಣೆಯ ಕಾರ್ಯತಂತ್ರಗಳನ್ನು ರೂಪಿಸುವುದಕ್ಕೆ ಅಂತರರಾಷ್ಟ್ರೀಯ ಸಹಕಾರ ಬಹುಮುಖ್ಯ. ವಿಶ್ವ ಹವಾಮಾನ ಸಂಸ್ಥೆ ಭಾರೀ ಪರಿಣಾಮದ ಹವಾಮಾನ (High Imapct Weather-HIW) ಯೋಜನೆಯು ವಾಯುಮಂಡಲದ ನದಿಗಳ ಕುರಿತು ಎಲ್ಲಾ ದೇಶಗಳ ನಡುವೆ ಸಹಯೋಗ ಮತ್ತು ಮಾಹಿತಿ ಹಂಚಿಕೆಯನ್ನು ಪ್ರೋತ್ಸಾಹಿಸುವ ಗುರಿಯನ್ನು ಹೊಂದಿದೆ. ❖

ವಾಯುಮಂಡಲದ ನದಿಗಳು ...

ಪೈನಾಪಲ್ ಎಕ್ಸ್‌ಪ್ರೆಸ್: ಇದು ಶಾಂತಸಾಗರದಲ್ಲಿ (ಪೆಸಿಫಿಕ್) ಇರುವ ಹವಾಯಿ ದ್ವೀಪ ಸಮುದಾಯಗಳಲ್ಲಿ ಹುಟ್ಟಿ ದಟ್ಟವಾದ ನೀರು ಮತ್ತು ಗಾಳಿಯನ್ನು ಈಶಾನ್ಯ ದಿಕ್ಕಿನಲ್ಲಿ ಸಾಗಿಸುವ ಒಂದು ಪ್ರಮುಖವಾದ ವಾಯುಮಂಡಲದ ನದಿ. ಇದು ಆ ದಿಕ್ಕಿನಲ್ಲಿ ಇರುವ ಯುಎಸ್‌ಎಯ ವಾಯುವ್ಯ ಪೆಸಿಫಿಕ್ ಕರಾವಳಿ ಮತ್ತು ಕೆನಡಾದ ಪಶ್ಚಿಮ ಕರಾವಳಿಗೆ ಸಾಗುತ್ತದೆ.

ಅಟಕಾಮ ಮರುಭೂಮಿಯ ವಾಯುಮಂಡಲದ ನದಿಗಳು: ದಕ್ಷಿಣ ಅಮೆರಿಕದಲ್ಲಿ ವಾಯುಮಂಡಲದ ನದಿಗಳನ್ನು 'ರಿಯೋಸ್ ವಲಡೋರ್ಸ್' ಎಂದು ಕರೆಯಲಾಗುತ್ತದೆ. ಈ ಸ್ಪಾನಿಷ್ ಪದಗಳ ಅರ್ಥ 'ಹಾರುವ ನದಿಗಳು' ಎಂದು. ಇವು ಅಮೆಜಾನ್ ಮಳೆ ಕಾಡುಗಳಿಂದ ಭಾರೀ ಪ್ರಮಾಣದ ತೇವಾಂಶವನ್ನು ಆಂಡೀಸ್ ಪರ್ವತ ಶ್ರೇಣಿ ಮತ್ತು ಚಿಲಿಯಲ್ಲಿರುವ ಅಟಕಾಮ ಮರುಭೂಮಿಗೆ ಒಯ್ದು, ಮೂಲತಃ ಒಣಭೂಮಿಯಾದ ಈ ಪ್ರದೇಶದಲ್ಲಿ ಮಳೆ ಸುರಿಸುತ್ತವೆ ಮತ್ತು ಆಂಡೀಸ್ ಪರ್ವತಗಳಲ್ಲಿ ಹಿಮ ಶೇಖರಿಸುತ್ತವೆ.

ಐರೋಪ್ಯ ವಾಯುಮಂಡಲದ ನದಿಗಳು: ಯುರೋಪ್ ಕೂಡಾ ಅಟ್ಲಾಂಟಿಕ್ ಸಾಗರದಲ್ಲಿ ಹುಟ್ಟಿ ಪಶ್ಚಿಮ ಮತ್ತು ಉತ್ತರ ಯುರೋಪಿಗೆ ಭಾರೀ ಪ್ರಮಾಣದಲ್ಲಿ ನೀರು ಸಾಗಿಸುವ ವಾಯುಮಂಡಲದ ನದಿಗಳನ್ನು ಹೊಂದಿದೆ. ಇವು ಅಲ್ಲಿನ ಹವಾಮಾನ ವಿನ್ಯಾಸಗಳ ಮೇಲೆ ಪ್ರಭಾವ ಬೀರಿ, ಯುಕೆ, ಐರ್ಲೆಂಡ್, ಸ್ಕ್ಯಾಂಡಿನೇವಿಯನ್ ದೇಶಗಳಲ್ಲಿ ಮಳೆ ಮತ್ತು ಹಿಮವನ್ನು ಸುರಿಸುತ್ತವೆ.

ದಕ್ಷಿಣಾರ್ಧ ಗೋಲದ ವಾಯುಮಂಡಲದ ನದಿಗಳು: ದಕ್ಷಿಣಾರ್ಧ ಗೋಲದ ವಾಯುಮಂಡಲದ ನದಿಗಳು ಆಫ್ರಿಕಾ, ಆಸ್ಟ್ರೇಲಿಯಾ ಮತ್ತು ದಕ್ಷಿಣ ಅಮೇರಿಕಾದ ಹಲವಾರು ದೇಶಗಳ ಹವಾಮಾನದ ಮೇಲೆ ಪರಿಣಾಮ ಬೀರಿ, ಅಲ್ಲಿ ಮಳೆ ಸುರಿಸುತ್ತವೆ. ಅಲ್ಲಿನ ಹವಾಮಾನ ಮತ್ತು ಮಳೆಯ ಏರುಪೇರುಗಳಲ್ಲಿ ಗಮನಾರ್ಹ ಪಾತ್ರ ವಹಿಸುತ್ತವೆ.

ನಮ್ಮ ಸುತ್ತಲಿನ ಜೀವಗಳ ಸುತ್ತ...

ಗುರುಶಂಕರ್ ಕೆ.ಪಿ.

ಕುಮ್ಕಿ ಆನೆಗಳು

- ಒಡಿಶಾದಲ್ಲಿ ಮಾನವ ಮತ್ತು ಆನೆಗಳ ನಡುವಿನ ಸಂಘರ್ಷಣೆಯ ಪ್ರಕರಣಗಳು ನಿರಂತರವಾಗಿ ಹೆಚ್ಚಳಗೊಂಡಿರುವ ಕಾರಣದಿಂದ ಒಡಿಶಾ ಸರ್ಕಾರ ತಮಿಳುನಾಡು ಸರ್ಕಾರಕ್ಕೆ ಕುಮ್ಕಿ ಆನೆಗಳನ್ನು ಕಳುಹಿಸುವಂತೆ ಮನವಿ ಸಲ್ಲಿಸಿದೆ.
- ಕಾಡಾನೆಗಳನ್ನು ಹಿಡಿಯುವ ವಿಚಾರದಲ್ಲಿ ಕುಮ್ಕಿ ಆನೆಗಳು ತರಬೇತಿಯನ್ನು ಪಡೆದಿದ್ದು, ಇವುಗಳ ನಿಯೋಜನೆಯಿಂದ ಸಂಘರ್ಷಣೆಯ ಪ್ರಕರಣಗಳ ಪ್ರಮಾಣವನ್ನು ತಡೆಯಲು, ಬೆಳೆ ಮತ್ತು ಜನವಸತಿಗಳ ಮೇಲೆ ಉಂಟಾಗುತ್ತಿರುವ ಹಾನಿಯನ್ನು ತಗ್ಗಿಸಲು ಒಡಿಶಾ ಸರ್ಕಾರ ಕೈಗೊಂಡ ಕ್ರಮವಾಗಿದೆ.
- ಅರಣ್ಯಗಳಲ್ಲಿ ಗಸ್ತು ತಿರುಗಲು ಮತ್ತು ಕಾಡಾನೆಗಳನ್ನು ಹಿಡಿಯಲು ತಮಿಳುನಾಡಿನಲ್ಲಿ ಕುಮ್ಕಿ ಆನೆಗಳನ್ನು ಯಶಸ್ವಿಯಾಗಿ ಬಳಸಲಾಗಿದೆ.

ರಣಹದ್ದುಗಳ ರೆಸ್ಟೋರೆಂಟ್

- ಅಳಿವಿನ ಅಂಚಿನಲ್ಲಿರುವ ರಣಹದ್ದು ತಳಿಗಳನ್ನು ಸಂರಕ್ಷಿಸುವ ಉದ್ದೇಶದಿಂದ ಜಾರ್ಖಂಡ್ ಸರ್ಕಾರ ರಣಹದ್ದುಗಳ ರೆಸ್ಟೋರೆಂಟ್ ಪ್ರಾರಂಭಿಸಿದೆ.
- ರಣಹದ್ದುಗಳು ಸತ್ತ ಪ್ರಾಣಿಗಳನ್ನು ತಿಂದು ಪರಿಸರವನ್ನು ಸಂರಕ್ಷಿಸುವ ಕಾರ್ಯವನ್ನು ನಿರ್ವಹಿಸುತ್ತವೆ. ಇತ್ತೀಚಿನ ವರ್ಷಗಳಲ್ಲಿ ಜಾನುವಾರಿಗಾಗಿ ಬಳಸುವ ಔಷಧಗಳಲ್ಲಿ 'ಡೈಕ್ಲೊಫೆನಾಕ್' ಎಂಬ ಅಂಶ ಹೆಚ್ಚಿರುವುದು ಪತ್ತೆಯಾಗಿದ್ದು, ಜಾನುವಾರು ಮರಣ ಹೊಂದಿದ ನಂತರವೂ ಡೈಕ್ಲೊಫೆನಾಕ್ ಅಂಶ ಉಳಿದುಕೊಳ್ಳುತ್ತದೆ. ಈ ಸತ್ತ ಜಾನುವಾರುಗಳನ್ನು ತಿನ್ನುವ ರಣಹದ್ದುಗಳ ಮೇಲೆ ವ್ಯತಿರಿಕ್ತ ಪರಿಣಾಮ ಬೀರುತ್ತದೆ. ಈ ಕಾರಣದಿಂದ ಜಾರ್ಖಂಡ್ ಸರ್ಕಾರ, ಕೊಡೆರ್ಮ ಜಿಲ್ಲೆಯಲ್ಲಿ 'ರಣಹದ್ದುಗಳ ರೆಸ್ಟೋರೆಂಟ್' ನಿರ್ಮಿಸಿದೆ.
- ಈ ರೆಸ್ಟೋರೆಂಟ್‌ನಲ್ಲಿ ವಿಷರಹಿತ ಆಹಾರ ನೀಡುವ ಮೂಲಕ ರಣಹದ್ದುಗಳನ್ನು ರಕ್ಷಿಸಲಾಗುತ್ತಿದೆ.
- ಇದೇ ಸ್ವರೂಪದ ರೆಸ್ಟೋರೆಂಟ್‌ಗಳನ್ನು ಮಹಾರಾಷ್ಟ್ರದ ರಾಯ್‌ಗಡ್, ಗದ್ ಚಿರೋಲಿ ಮತ್ತು ನಾಸಿಕ್ ಜಿಲ್ಲೆಗಳಲ್ಲಿಯೂ ಸ್ಥಾಪಿಸಲಾಗಿದೆ. ಹಿಮಾಚಲ ಪ್ರದೇಶದ ಕಾಂಗ್ರ ಜಿಲ್ಲೆಯಲ್ಲಿಯೂ ಇಂಥದ್ದೆ ರೆಸ್ಟೋರೆಂಟ್ ಇದೆ.

ಭಾರತದಲ್ಲಿ ಕಂಡುಬರುವ 9 ರಣಹದ್ದು ತಳಿಗಳ ಮಾಹಿತಿ (ಅವುಗಳಲ್ಲಿ ಮೂರು ವಲಸಿಗ ತಳಿಗಳು)

- ವೈಟ್ ರಂಪಡ್ ರಣಹದ್ದು
- ಸ್ಲೆಂಡರ್ ಬಿಲ್ಡ್ ರಣಹದ್ದು
- ಭಾರತೀಯ ರಣಹದ್ದು
- ಕೆಂಪು ತಲೆಯ ರಣಹದ್ದು
- ದಾಡಿ ಹೊಂದಿರುವ ರಣಹದ್ದು
- ಈಜಿಪ್ಟ್‌ನ ರಣಹದ್ದು
- ಸೀನಿರಿಯಸ್ ರಣಹದ್ದು
- ಗ್ರಿಫಾನ್ ರಣಹದ್ದು
- ಹಿಮಾಲಯದ ಗ್ರಿಫಾನ್ ರಣಹದ್ದು

ವಿಶೇಷ ಸೂಚನೆ - ಪಟ್ಟಿಯಲ್ಲಿರುವ ರಣಹದ್ದುಗಳಲ್ಲಿ ಕೊನೆಯ ಮೂರು ಪ್ರಭೇದಗಳು ವಲಸಿಗ ಪ್ರಭೇದಗಳಾಗಿವೆ.

- ರಣಹದ್ದುಗಳು ತ್ಯಾಜ್ಯ ನಾಶಕಗಳಾಗಿಯೂ ಕಾರ್ಯನಿರ್ವಹಿಸುತ್ತವೆ. ಇದರಿಂದ ವನ್ಯಜೀವಿಗಳಿಗೆ ರೋಗ ರುಜಿನಗಳು ಹರಡದಂತೆ ನೋಡಿಕೊಳ್ಳುತ್ತವೆ.

ಸರ್ಕಾರದ ಕ್ರಮಗಳು

- 2006ರಲ್ಲಿ ಡೈಕ್ಲೋಫೈನಾಕ್ ಬಳಕೆಯನ್ನು ಸರ್ಕಾರ ನಿಷೇಧಿಸಿದ್ದು, 2023ರಲ್ಲಿ ಕಿಟೋ ಪ್ರೋಫೆನ್ ಮತ್ತು ಆಸಿಕ್ಲೇನೋ ಫೆನಾಕ್ ಬಳಕೆಯನ್ನು ನಿಷೇಧಿಸಿದೆ.
- ಹರಿಯಾಣದ, ಪಿಂಜೋರ್‌ನಲ್ಲಿ ರಣಹದ್ದು ಸಂರಕ್ಷಣಾ ತಳಿ ಅಭಿವೃದ್ಧಿ ಕೇಂದ್ರದ ಸ್ಥಾಪನೆ ಮಾಡಲಾಗಿದೆ.

ವಿಶೇಷ ಸೂಚನೆ: ವನ್ಯಜೀವಿ ಸಂರಕ್ಷಣಾ ಕಾಯ್ದೆ-1972ರ ಅನ್ವಯ ಒಂದನೇ ಅನುಸೂಚಿಯಲ್ಲಿ ರಣಹದ್ದುಗಳಿಗೆ ಸ್ಥಾನವನ್ನು ಕಲ್ಪಿಸಲಾಗಿದೆ.

ಯುರೇಷ್ಯಾದ ನೀರು ನಾಯಿ

- ಕೇರಳದ ಚಿನ್ನಾರ್ ವನ್ಯಜೀವಿಧಾಮದಲ್ಲಿ ಯುರೇಷ್ಯಾದ ನೀರು ನಾಯಿ ಪತ್ತೆಯಾಗಿದೆ.
- ಈ ನೀರು ನಾಯಿಗಳು ನಾಚಿಕೆಯ ಸ್ವಭಾವವನ್ನು ಹೊಂದಿದ್ದು, ನಿಶಾಚರಿಯಾಗಿದೆ. ಮೀನುಗಳೇ ಇವುಗಳ ಪ್ರಮುಖ ಆಹಾರವಾಗಿದೆ.
- ಈ ನೀರು ನಾಯಿಗಳು ಕಡಲ ತೀರಗಳಲ್ಲಿ ಮತ್ತು ತೇವಾಂಶ ಪ್ರದೇಶಗಳಲ್ಲಿ ವಾಸಿಸುತ್ತವೆ.

ಹಂಚಿಕೆ: ಜಾಗತಿಕ ಮಟ್ಟದಲ್ಲಿ ಹೆಚ್ಚಾಗಿ ಯುರೋಪ್, ಏಷ್ಯಾ ಮತ್ತು ಆಫ್ರಿಕಾದಲ್ಲಿ ಕಂಡುಬರುತ್ತದೆ. ಭಾರತದಲ್ಲಿ ಉತ್ತರ ಭಾಗ, ಈಶಾನ್ಯ ಪ್ರದೇಶಗಳು ಮತ್ತು ದಕ್ಷಿಣ ಭಾರತದಲ್ಲಿ ಹೆಚ್ಚಾಗಿ ಕಂಡುಬರುತ್ತದೆ. ❖

ಎಸ್ಸೆಸ್ಸೆಲ್ಸಿ- ಪಿಯುಸಿ ಪರೀಕ್ಷೆ ದಿಕ್ಸೂಚಿ

ವಿಜ್ಞಾನ

ಪುನರಾವರ್ತನೆ ಮತ್ತು ಮಾದರಿ ಪ್ರಶ್ನೋತ್ತರ

74) (ಎ) ಬಿಳಿಯ ಬೆಳಕಿನಲ್ಲಿ ಏಳು ಬಣ್ಣಗಳಿವೆ ಎಂಬುದನ್ನು ನಿರ್ಧರಿಸಲು ನ್ಯೂಟನ್ ಮಾಡಿದ ಪ್ರಯೋಗವನ್ನು ವಿವರಿಸಿ.

(2019ರ ವಾರ್ಷಿಕ ಪರೀಕ್ಷೆ)

ಉತ್ತರ:– ಐಸಾಕ್ ನ್ಯೂಟನ್‌ರವರು ಸೂರ್ಯನ ಬೆಳಕಿನ ರೋಹಿತವನ್ನು ಪಡೆಯಲು ಪಟ್ಟಕವನ್ನು ಬಳಸಿದ ಮೊದಲಿಗರು ಅವರು ಸಮರೂಪಿ ಪಟ್ಟಕವನ್ನು ಬಳಸಿ ರೋಹಿತದ ಬಣ್ಣಗಳನ್ನು ಪ್ರತ್ಯೇಕಿಸಲು ಪ್ರಯತ್ನಿಸಿದರು ಆದರೆ ಹೆಚ್ಚಿನ ಬಣ್ಣ ದೊರೆಯಲಿಲ್ಲ. ಆದರೆ ಅವರು ಸಮರೂಪಿಯಾದ ಪಟ್ಟಕವನ್ನು ಮೊದಲಿನ ಪಟ್ಟಕದ ವಿರುದ್ಧ ದಿಕ್ಕಿನಲ್ಲಿ ತಲೆಕೆಳಗಾಗಿ ಇರಿಸಿದರು ಇದು ರೋಹಿತದ ಎಲ್ಲಾ ಬಣ್ಣಗಳು ತಲೆ ಕೆಳಗಾದ ಪಟ್ಟಕದ ಮೂಲಕ ಹಾದು ಹೋಗಲು ಅವಕಾಶ ಕಲ್ಪಿಸಿತು.

ಎರಡನೇ ಪಟ್ಟಕದ ಮತ್ತೊಂದು ಕಡೆಯಿಂದ ನಿರ್ಗಮಿಸುವ ಬೆಳಕು ಬಿಳಿ ಬಣ್ಣದ್ದಾಗಿತ್ತು, ಈ ವೀಕ್ಷಣೆಯು ಸೂರ್ಯನ ಬೆಳಕು ಏಳು ಬಣ್ಣದ್ದಾಗಿದೆ ಎಂಬ ತೀರ್ಮಾನ ತೆಗೆದುಕೊಳ್ಳಲು ನ್ಯೂಟನ್ನರಿಗೆ ಸುಳಿವು ನೀಡಿತ್ತು

(ಬಿ) ಸೂರ್ಯೋದಯದ ಕಾಲದಲ್ಲಿ ಸೂರ್ಯನು ಕೆಂಪಾಗಿ ಆದರೆ ಮಧ್ಯಾಹ್ನದಲ್ಲಿ ಬೆಳ್ಳಗೆ ಕಾಣಲು ಕಾರಣಗಳನ್ನು ತಿಳಿಸಿ.

ಉತ್ತರ:– ಸೂರ್ಯನ ಬೆಳಕು ನಮ್ಮ ಕಣ್ಣನ್ನು ತಲುಪುವ ಮೊದಲು ದಿಗಂತದ ಸಮತಲದಲ್ಲಿ ಸಮೀಪದಲ್ಲಿನ ಗಾಳಿಯ ದಪ್ಪ ಪದರದಲ್ಲಿ ಹಾಗೂ ಹೆಚ್ಚು ದೂರ ವಾಯುಮಂಡಲದಲ್ಲಿ ಹಾದು ಹೋಗುತ್ತದೆ

ದಿಗಂತದ ಬಳಿ ಕಣಗಳಿಂದ ಹೆಚ್ಚಿನ ನೀಲಿ ಬೆಳಕು ಮತ್ತು ಕಡಿಮೆ ತರಂಗ ದೂರದ ಬೆಳಕು ಚದುರಿ ಹೋಗುತ್ತದೆ. ಇದರಿಂದಾಗಿ ನಮ್ಮ ಕಣ್ಣನ್ನು ತಲುಪುವ ಬೆಳಕು ಹೆಚ್ಚು ತರಂಗದೂರವುಳ್ಳದ್ದಾಗಿದೆ ಇದರಿಂದ ಸೂರ್ಯ ಕೆಂಪು ಬಣ್ಣದಿಂದ ಕಾಣ ಸಿಗುತ್ತದೆ.

ಮಧ್ಯಾಹ್ನದಲ್ಲಿ ನೆತ್ತಿಯ ಮೇಲಿನ ಸೂರ್ಯನ ಬೆಳಕು ನಮ್ಮ ಕಣ್ಣನ್ನು ತಲುಪಲು ಕಡಿಮೆ ದೂರವನ್ನು ಪ್ರಯಾಣಿಸುತ್ತದೆ, ಮಧ್ಯಾಹ್ನದ ಸಮಯ ಸೂರ್ಯನು ಬೆಳ್ಳಗೆ ಕಾಣುತ್ತಾನೆ ಏಕೆಂದರೆ ಸ್ವಲ್ಪವೇ ನೀಲಿ ಮತ್ತು ನೇರಳೆ ಬಣ್ಣಗಳು ಚದುರುತ್ತದೆ.

75) ನಿಮ್ನ ದರ್ಪಣದ ಉಪಯೋಗಗಳು ಯಾವುವು?

ಉತ್ತರ:– ನಿಮ್ನ ದರ್ಪಣಗಳನ್ನು ಸಾಮಾನ್ಯವಾಗಿ ಟಾರ್ಚ್‌ಗಳಲ್ಲಿ, ತಪಾಸಣಾ ದೀಪ(search light) ಮತ್ತು ವಾಹನಗಳ ಮುಂಭಾಗದ ದೀಪಗಳಲ್ಲಿ (head lights) ಬೆಳಕಿನ ಶಕ್ತಿಶಾಲಿ ಸಮಾಂತರ ಕಿರಣ ಪುಂಜವನ್ನು ಪಡೆಯಲು ಬಳಸಲಾಗುತ್ತದೆ. ಮುಖದ ದೊಡ್ಡ ಪ್ರತಿಬಿಂಬ ಪಡೆಯಲು ಕ್ಷೌರ ದರ್ಪಣ(shaving mirror)ಗಳಲ್ಲಿ ಸಾಮಾನ್ಯವಾಗಿ ಬಳಸುತ್ತಾರೆ. ದಂತವೈದ್ಯರು ರೋಗಿಗಳ ಹಲ್ಲುಗಳ ದೊಡ್ಡ ಪ್ರತಿಬಿಂಬಗಳನ್ನು ಪಡೆಯಲು ಬಳಸುವರು. ಸೌರ ಕುಲುಮೆಗಳಲ್ಲಿ ಸೂರ್ಯನ ಕಿರಣಗಳನ್ನು ಕೇಂದ್ರೀಕರಿಸಲು ದೊಡ್ಡ ನಿಮ್ನ ದರ್ಪಣಗಳನ್ನು ಬಳಸುವರು

76) ಲೋಹಗಳ ರಾಸಾಯನಿಕ ಗುಣಗಳನ್ನು ಬರೆಯಿರಿ

ಉತ್ತರ:– (1) ಬಹುತೇಕ ಎಲ್ಲಾ ಲೋಹಗಳು ಆಕ್ಸಿಜನ್‌ನ ಜೊತೆ ಸಂಯೋಗ ಹೊಂದಿದಾಗ ಆಯಾ ಲೋಹಗಳ ಆಕ್ಸೈಡ್‌ಗಳಾಗುತ್ತವೆ. ಉದಾಹರಣೆಗೆ ತಾಮ್ರವನ್ನು ಗಾಳಿಯಲ್ಲಿ ಕಾಸಿದಾಗ ಆಕ್ಸಿಜನ್ ಜೊತೆ ಸೇರಿ ತಾಮ್ರದ ಆಕ್ಸೈಡ್ ಆಗುತ್ತದೆ

(2) ಎಲ್ಲಾ ಲೋಹಗಳು ಒಂದೇ ರೀತಿಯಾಗಿ ಆಕ್ಸಿಜನ್‌ನ ಜೊತೆ ವರ್ತಿಸುವುದಿಲ್ಲ

3) ಲೋಹಗಳು ನೀರಿನ ಜೊತೆ ಪ್ರತಿವರ್ತಿಸಿದಾಗ ಲೋಹದ ಆಕ್ಸೈಡ್ ಮತ್ತು ಹೈಡ್ರೋಜನ್ ಅನಿಲವನ್ನು ಬಿಡುಗಡೆ ಮಾಡುತ್ತವೆ. ಲೋಹದ ಆಕ್ಸೈಡ್‌ಗಳು ಪುನಃ ನೀರಿನಲ್ಲಿ ಕರಗಿ ಲೋಹದ ಹೈಡ್ರಾಕ್ಸೈಡ್‌ಗಳಾಗುತ್ತವೆ. ಆದರೆ ಎಲ್ಲಾ ಲೋಹಗಳು ನೀರಿನ ಜೊತೆ ಪ್ರತಿವರ್ತಿಸುವುದಿಲ್ಲ.

4) ಪೊಟ್ಯಾಸಿಯಂ ಮತ್ತು ಸೋಡಿಯಂನಂಥ ಲೋಹಗಳು ಅತ್ಯಂತ ರಭಸವಾಗಿ ತಣ್ಣೀರಿನ ಜೊತೆ ಪ್ರತಿವರ್ತಿಸುತ್ತವೆ. ಸೋಡಿಯಂ ಮತ್ತು ಪೊಟ್ಯಾಸಿಯಂಗಳ ಪ್ರಕರಣದಲ್ಲಿ ಪ್ರತಿವರ್ತನೆಯು ಎಷ್ಟೊಂದು ತೀವ್ರ ಮತ್ತು ಬಹಿರುಷ್ಣಕವಾಗಿರುತ್ತದೆಂದರೆ ಬಿಡುಗಡೆಯಾದ ಹೈಡ್ರೋಜನ್ ಅನಿಲವು ತಕ್ಷಣವೇ ಹೊತ್ತಿಕೊಂಡು ಉರಿಯುತ್ತವೆ.

5) ನೀರಿನೊಂದಿಗೆ ಕ್ಯಾಲ್ಸಿಯಂನ ಪ್ರತಿವರ್ತನೆಯ ತೀವ್ರತೆ ಕಡಿಮೆ. ಬಿಡುಗಡೆಯಾಗುವ ಉಷ್ಣವು ಹೈಡ್ರೋಜನ್ ಹೊತ್ತಿಕೊಳ್ಳಲು ಸಾಕಾಗುವುದಿಲ್ಲ.

6) ತಣ್ಣೀರಿನೊಂದಿಗೆ ಮೆಗ್ನೀಸಿಯಂ ಪ್ರತಿವರ್ತಿಸುವುದಿಲ್ಲ. ಬಿಸಿ ನೀರಿನೊಂದಿಗೆ ಪ್ರತಿವರ್ತಿಸಿ ಮೆಗ್ನೀಸಿಯಂ ಹೈಡ್ರಾಕ್ಸೈಡ್ ಮತ್ತು ಹೈಡ್ರೋಜನ್ ಬಿಡುಗಡೆ ಮಾಡುತ್ತದೆ. ಹೈಡ್ರೋಜನ್ ಅನಿಲದ ಗುಳ್ಳೆಗಳು ಲೋಹದ ಮೇಲ್ಮೈಗೆ ಅಂಟಿಕೊಳ್ಳುವ ಕಾರಣ ಇದೂ ಕೂಡ ನೀರಿನ ಮೇಲೆ ತೇಲಲು ಪ್ರಾರಂಭಿಸುತ್ತದೆ.

ಅಲ್ಯುಮಿನಿಯಂ, ಕಬ್ಬಿಣ, ಮತ್ತು ಸತುವಿನಂಥ ಲೋಹಗಳು ತಣ್ಣನೆಯ ಅಥವಾ ಬಿಸಿ ನೀರಿನ ಜೊತೆ ಪ್ರತಿವರ್ತಿಸುವುದಿಲ್ಲ ಆದರೆ ಹಬೆಯ ಜೊತೆ ಪ್ರತಿವರ್ತಿಸಿ ಲೋಹದ ಆಕ್ಸೈಡ್ ಮತ್ತು ಹೈಡ್ರೋಜನ್‌ಗಳನ್ನು ಉಂಟುಮಾಡುತ್ತವೆ.

7) ಲೋಹಗಳು ಆಮ್ಲಗಳ ಜೊತೆ ಪ್ರತಿವರ್ತಿಸಿ ಲವಣ ಮತ್ತು ಹೈಡ್ರೋಜನ್ ಅನಿಲ ಉಂಟುಮಾಡುತ್ತವೆ

8) ರಾಸಾಯನಿಕವಾಗಿ ಕ್ರಿಯಾಪಟುತ್ವ ಹೊಂದಿದ ಧಾತುಗಳು ತಮಗಿಂತ ಕಡಿಮೆ ಕ್ರಿಯಾಪಟುತ್ವ ಹೊಂದಿದ ಧಾತುಗಳನ್ನು ಅವುಗಳ ದ್ರಾವಣ ಅಥವಾ ದ್ರವಿಸಿದ ಸಂಯುಕ್ತದಿಂದ ಸ್ಥಳಾಂತರಿಸುತ್ತವೆ.

77) ಇವುಗಳಿಗೆ ಕಾರಣ ಕೊಡಿ (ಜೂನ್–2020)

1) ಆಹಾರ ಸರಪಣಿಯಗಳು ಸಾಮಾನ್ಯವಾಗಿ ಮೂರು ಅಥವಾ ನಾಲ್ಕು ಹಂತಗಳನ್ನು ಮಾತ್ರ ಒಳಗೊಂಡಿರುತ್ತದೆ.

2) ಪರಿಸರ ವ್ಯವಸ್ಥೆಯಲ್ಲಿ ವಿಘಟಕಗಳ ಪಾತ್ರ ಪ್ರಮುಖವಾಗಿದೆ.

ಉತ್ತರ:– (1) ಪ್ರತಿ ಹಂತದಲ್ಲೂ ವ್ಯಯವಾಗುವ ಶಕ್ತಿಯು ಅತ್ಯಧಿಕವಾಗಿರುವುದರಿಂದ ನಾಲ್ಕು ಪೋಷಣಾಸ್ತರಗಳ ನಂತರ ಕನಿಷ್ಠ ಪ್ರಮಾಣದ ಶಕ್ತಿಯ ಬಳಕೆಗೆ ಉಳಿಯುತ್ತದೆ.

2) ವಿಘಟಕಗಳು ಸತ್ತ ಜೀವಿಯ ಅವಶೇಷಗಳು ಮತ್ತು ತ್ಯಾಜ್ಯಗಳನ್ನು ವಿಘಟಿಸುತ್ತದೆ. ಸಂಕೀರ್ಣ ಸಾವಯವ ಪದಾರ್ಥಗಳನ್ನು ಸರಳ ನಿರವಯವ ಪದಾರ್ಥಗಳನ್ನಾಗಿ ವಿಘಟಿಸಿ ಮಣ್ಣಿಗೆ ಸೇರಿಸುತ್ತವೆ.

78) ಅಮೀಬಾದ ಕೋಶವಿಭಜನೆಯ ಚಿತ್ರ ಬರೆಯಿರಿ

ಉತ್ತರ:–



ಎಸ್ಸೆಸ್ಸೆಲ್ಸಿ ವಿಜ್ಞಾನ ವಿಷಯದ ಇಂಗ್ಲಿಷ್ ಮಾಧ್ಯಮದ ಪ್ರಶ್ನೋತ್ತರಕ್ಕಾಗಿ ಕ್ಯೂಆರ್ ಕೋಡ್ ಸ್ಕ್ಯಾನ್ ಮಾಡಿ

ಮಾಹಿತಿ: ಜ್ಞಾನಭಾರತಿ ಸ್ಪರ್ಧಾತ್ಮಕ ಪರೀಕ್ಷಾ ತರಬೇತಿ ಕೇಂದ್ರ

II PUC CET PHYSICS

27) The number of electrons in one coulomb of charge is

a) 6.25×10^{18} b) 6.25×10^{16}
c) 6.25×10^{10} d) 6.25×10^{12}

Ans: (a) 6.25×10^{18}

Expln:-

$Q = ne$

$$\therefore n = \frac{Q}{e} = \frac{1C}{1.602 \times 10^{-19}} = 6.25 \times 10^{18} \text{ electrons.}$$

28) In a permanent magnet at room temperature

a) Domains are all perfectly aligned.
b) Magnetic moment of each molecule is zero.
c) The individual molecules have non-zero magnetic moment which are all perfectly aligned.
d) Domains are partially aligned.

Ans: a

Expln:- Due to thermal agitation, with increase in temperature randomness of the molecules increases and magnetic field moments get partially aligned. Hence the domains are partially aligned.

29) A particle A has charge +q and particle B has charge +4q, each of then having the same mass m. when allowed to fall from rest through the same electrical potential difference, the ratio of their speeds will become

a) 2:1 b) 1:2
c) 1:4 d) 4:1

Ans: (c) 1:4

Expln:-

F = ma...........(1); F = qE............(2)

Equating both, ma = qE; a α q

$$\therefore \frac{a_1}{a_2} = \frac{q_1}{q_2} = \frac{1}{4};\ a_1 : a_2 = 1 : 4.$$

30) In a CE amplifier, the input ac signal to be amplified is applied across

a) Forward biased emitter base junction
b) Reverse biased collector base junction
c) Reverse biased emitter-base junction
d) Forwared biased collector base junction

Ans:- a

Expln:- Emitter Basejunction should be forward bisased. But Collector-Base junction should be reverse biased

31) A stone weighs 100 N on the surface of the earth. The ratio of its weight at a height of half the radius of the earth to a depth of half the radius of the earth will be approximately

a) 3.6 b) 2.2
c) 1.8 d) 0.9

Ans: (d) 0.9

Expln:-

Acceleration due to gravity at $h = \frac{R}{2}$:

$$g_h = g\left(\frac{R}{R+h}\right)^2 = g\left(\frac{R}{R+\frac{R}{2}}\right)^2 = g\left(\frac{R}{\frac{3R}{2}}\right)^2 = \frac{4g}{9}.$$

Acceleration due to gravity at $d = \frac{R}{2}$:

$$g_d = g\left(1-\frac{d}{R}\right) = g\left(1-\frac{R/2}{R}\right) = \frac{g}{2}$$

Ratio of weight:

$$\frac{W_h}{W_d} = \frac{m\,g_h}{m\,g_d} = \frac{g_h}{g_d} = \frac{\frac{4g}{9}}{\frac{g}{2}} = \frac{8}{9} = 0.9$$

32) The gravitational field strength at the surface of a certain planet is g. which of the following is the gravitational field strength at the surface of a planet with twice the radius and twice the mass?

(a) g/2 (b) g
(c) 2g (d) 4g

Ans: (a) g/2

On planet 1, $E_1 = \frac{GM}{R^2} = g$ ...(1)

On another planet $E_2 = \frac{G \times 2M}{4R^2} = \frac{GM}{2R^2}$ ...(2)

Using equations (1) and (2)

$E_2 = \frac{g}{2}.$

33) Vector A has a magnitude of 10 units and makes an angle of 30^0 with the positive x-axis. Vector B has a magnitude of 20 units and makes an angle of 30^0 with the negative x-axis. What is the magnitude of the resultant between these two vectors?

(a) $20\sqrt{3}$ (b) 35
(c) $15\sqrt{3}$ (d) $10\sqrt{3}$

Ans : (d) $10\sqrt{3}$

Expln



$\theta = 120^0;\ \vec{A} = 10;\ \vec{B} = 20$

$R = \sqrt{A^2 + B^2 + 2AB\cos\theta}$

$R = \sqrt{100 + 400 - 2 \times 10 \times 20 \times 1/2}$

$R = \sqrt{300} = \sqrt{3} \times 10.$

ಅಪಾರ್ಟ್‌ಮೆಂಟ್‌ಗಳಲ್ಲೂ ಪ್ರಚಾರ • ಮತದಾರರ ಮನವೊಲಿಸಲು ಕಸರತ್ತು

ಉದ್ಯಾನದಲ್ಲೂ ಮತಬೇಟೆ

ಪ್ರಜಾವಾಣಿ ವಾರ್ತೆ

ಪ್ರಜಾ ಮತ ಜನತಂತ್ರದ ಹಬ್ಬ

ಲೋಕಸಭಾ ಚುನಾವಣೆ - 2024

ಬೆಂಗಳೂರು: ಬೆಂಗಳೂರು ಉತ್ತರ, ದಕ್ಷಿಣ ಹಾಗೂ ಕೇಂದ್ರ ಲೋಕಸಭಾ ಕ್ಷೇತ್ರಗಳಲ್ಲಿ ಚುನಾವಣೆ ಪ್ರಚಾರ ಕಾವೇರುತ್ತಿದ್ದು, ನಾಮಪತ್ರ ಸಲ್ಲಿಕೆಗೂ ಮೊದಲೇ ಕಾಂಗ್ರೆಸ್ ಹಾಗೂ ಬಿಜೆಪಿ ಅಭ್ಯರ್ಥಿಗಳು ಮತಬೇಟೆ ಆರಂಭಿಸಿದ್ದಾರೆ.

ತಮ್ಮ ಕ್ಷೇತ್ರ ವ್ಯಾಪ್ತಿಯ ಉದ್ಯಾನ-ಗಳಲ್ಲಿ ಬೆಳಿಗ್ಗೆಯೇ ಭೇಟಿ ನೀಡುತ್ತಿರುವ ಅಭ್ಯರ್ಥಿಗಳು ಮತದಾರರ ಮನವೊಲಿಸುವ ಕಸರತ್ತು ನಡೆಸು-ತ್ತಿದ್ದಾರೆ. ಮತದಾರರ ಜೊತೆಗೆ ಹೆಜ್ಜೆ ಹಾಕಿ, ತಮ್ಮ ಅವಧಿಯಲ್ಲಿ ಮಾಡಿದ ಕೆಲಸಗಳ ಬಗ್ಗೆ ಮಾಹಿತಿ ನೀಡುತ್ತಿದ್ದಾರೆ. ಅಪಾರ್ಟ್‌ಮೆಂಟ್ ನಿವಾಸಿಗಳನ್ನೂ ಸಂಜೆ ವೇಳೆಯಲ್ಲಿ ಭೇಟಿ ಮಾಡುತ್ತಿರುವ ಅಭ್ಯರ್ಥಿಗಳು, ಚುನಾವಣೆಯಲ್ಲಿ ತಮ್ಮನ್ನು ಬೆಂಬಲಿಸುವಂತೆ ಮನವಿ ಮಾಡುತ್ತಿದ್ದಾರೆ.

ದಕ್ಷಿಣ ಲೋಕಸಭೆ ಕ್ಷೇತ್ರದ ಬಿಜೆಪಿ ಅಭ್ಯರ್ಥಿ ತೇಜಸ್ವಿ ಸೂರ್ಯ ಅವರು, ಬುಧವಾರ ಬೆಳಿಗ್ಗೆ ಬಸವನಗುಡಿಯ ಎಂ.ಎನ್. ಕೃಷ್ಣರಾವ್ ಉದ್ಯಾನದಲ್ಲಿ ವಾಯುವಿಹಾರಿಗಳ ಜೊತೆಗೆ ಚರ್ಚೆ ನಡೆಸಿದರು.

‘ಕಳೆದ 10 ವರ್ಷಗಳಲ್ಲಿ ಪ್ರಧಾನಿ ಮೋದಿ ಅವರ ಆಡಳಿತಾವಧಿಯಲ್ಲಿ ಆಗಿರುವ ಪರಿವರ್ತನಾತ್ಮಕ ಸಾಧನೆಗಳ ಬಗ್ಗೆ ನಿವಾಸಿಗಳ ಜೊತೆಗೆ ಚರ್ಚಿಸಿದ್ದೇನೆ’ ಎಂದು ತೇಜಸ್ವಿ ಸೂರ್ಯ ತಿಳಿಸಿದ್ದಾರೆ.

ಉತ್ತರ ಕ್ಷೇತ್ರದ ಅಭ್ಯರ್ಥಿ ಶೋಭಾ ಕರಂದ್ಲಾಜೆ ಅವರು ಕ್ಷೇತ್ರದಾದ್ಯಂತ ಸಂಚರಿಸುತ್ತಾ ಬಿರುಸಿನ ಪ್ರಚಾರ ನಡೆ-ಸುತ್ತಿದ್ದಾರೆ. ಕಾಂಗ್ರೆಸ್ ಅಭ್ಯರ್ಥಿಗಳೂ ತಮ್ಮ ಕಾರ್ಯಕರ್ತರ ಜೊತೆಗೆ ಪ್ರಚಾರ ನಡೆಸುತ್ತಿದ್ದಾರೆ.

ಬಸವನಗುಡಿಯ ಎಂ.ಎನ್. ಕೃಷ್ಣರಾವ್ ಉದ್ಯಾನದಲ್ಲಿ ವಾಯುವಿಹಾರಿಗಳ ಜೊತೆಗೆ ಚರ್ಚೆ ನಡೆಸಿದ ತೇಜಸ್ವಿ ಸೂರ್ಯ

ಮೈತ್ರಿ ಮೊದಲೇ ಆಗಬೇಕಿತ್ತು: ಸಂಸದ ತೇಜಸ್ವಿ ಸೂರ್ಯ

ಬೆಂಗಳೂರು: ವಿಧಾನಸಭೆ ಚುನಾವಣೆಯಲ್ಲಿಯೇ ಜೆಡಿಎಸ್-ಬಿಜೆಪಿ ಮೈತ್ರಿಯಾಗಿದ್ದರೆ ರಾಜ್ಯದಲ್ಲಿ ಕಾಂಗ್ರೆಸ್ ಅಧಿಕಾರಕ್ಕೆ ಬರುತ್ತಿರಲಿಲ್ಲ ಎಂದು ಸಂಸದ ತೇಜಸ್ವಿ ಸೂರ್ಯ ಹೇಳಿದರು.

ಜೆಡಿಎಸ್ ಕಚೇರಿಗೆ ಬುಧವಾರ ಭೇಟಿ ನೀಡಿದ ನಂತರ ಅವರು ಮಾತನಾಡಿದರು.

ಆಗ ಎರಡೂ ಪಕ್ಷಗಳ ನಡುವೆ ಮೈತ್ರಿಯಾಗದೇ ರಾಜ್ಯಕ್ಕೆ ಬಹುದೊಡ್ಡ ನಷ್ಟವಾಗಿದೆ. ಕಾಂಗ್ರೆಸ್ ದುರಾಡಳಿತ ಕರ್ನಾಟಕವನ್ನು ಬಾಧಿಸುತ್ತಿದೆ. ಕಳೆದ ಹತ್ತು ತಿಂಗಳಲ್ಲಿ ರಾಜ್ಯ ಆರ್ಥಿಕ ದಿವಾಳಿಯತ್ತ ಸಾಗಿದೆ. ರಸ್ತೆ, ಚರಂಡಿ ರಿಪೇರಿ ಸೇರಿದಂತೆ ಸಣ್ಣಪುಟ್ಟ ಕಾಮಗಾರಿ ನಡೆಸುವುದಕ್ಕೂ ಶಾಸಕರಿಗೆ ಹಣ ನೀಡುತ್ತಿಲ್ಲ. ತಮ್ಮ ಕ್ಷೇತ್ರಗಳಲ್ಲಿ ಮುಖ ತೋರಿಸಲೂ ಅವರಿಗೆ ಆಗುತ್ತಿಲ್ಲ ಎಂದರು.

ಜೆಡಿಎಸ್ ನಗರ ಘಟಕದ ಅಧ್ಯಕ್ಷ ಎಚ್.ಎಂ.ರಮೇಶ್ ಗೌಡ, ವಿಧಾನ ಪರಿಷತ್ ಸದಸ್ಯ ಟಿ.ಎ.ಶರವಣ, ಬಿಜೆಪಿ ಶಾಸಕ ಸಿ.ಕೆ.ರಾಮಮೂರ್ತಿ, ಮುಖಂಡರಾದ ಅಂದಾನಪ್ಪ, ಭಾಗೇಗೌಡ, ಗಂಗಾಧರ ಮೂರ್ತಿ, ದೇವರಾಜ್ ಉಪಸ್ಥಿತರಿದ್ದರು.

ಗುಂಪುಗಾರಿಕೆಗೆ ಅವಕಾಶ ಇಲ್ಲ: ಡಿಕೆಶಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಯುವ ಕಾಂಗ್ರೆಸ್‌ನಲ್ಲಿ ಗುಂಪುಗಾರಿಕೆಗೆ ಅವಕಾಶ ನೀಡುವುದಿಲ್ಲ. ಗುಂಪುಗಾರಿಕೆ ಮಾಡಿದರೆ ಅಧಿಕಾರದಿಂದ ಇಳಿಸಿ ಬೇರೆಯವರಿಗೆ ಅವಕಾಶ ನೀಡಲಾಗುವುದು’ ಎಂದು ಯುವ ಕಾಂಗ್ರೆಸ್ ಕಾರ್ಯಕರ್ತರಿಗೆ ಕೆಪಿಸಿಸಿ ಅಧ್ಯಕ್ಷ ಡಿ.ಕೆ ಶಿವಕುಮಾರ್ ಎಚ್ಚರಿಕೆ ನೀಡಿದರು.

ಕೆಪಿಸಿಸಿ ಕಚೇರಿಯಲ್ಲಿ ಬುಧವಾರ ನಡೆದ ಯುವ ಕಾಂಗ್ರೆಸ್ ನೂತನ ಕಾರ್ಯಾಧ್ಯಕ್ಷ ಎಚ್.ಎಸ್. ಮಂಜುನಾಥ ಗೌಡ ಅವರ ಪದಗ್ರಹಣ ಮತ್ತು ‘ಯುವ ನ್ಯಾಯ’ ಗ್ಯಾರಂಟಿ ಬಿಡುಗಡೆ ಕಾರ್ಯ-ಕ್ರಮದಲ್ಲಿ ಮಾತನಾಡಿದ ಅವರು, ‘ರಾಜ್ಯದಲ್ಲಿ 20ಕ್ಕೂ ಹೆಚ್ಚು ಕ್ಷೇತ್ರಗಳನ್ನು ಗೆಲ್ಲಲು ಎಲ್ಲರೂ ಶ್ರಮಿಸಬೇಕು. ಎಐಸಿಸಿ ಅಧ್ಯಕ್ಷರಾದ ಮಲ್ಲಿಕಾರ್ಜುನ ಖರ್ಗೆ ಅವರೂ ಕೂಡ ಒಂದು ಕಾಲದಲ್ಲಿ ಬ್ಲಾಕ್ ಕಾಂಗ್ರೆಸ್ ಅಧ್ಯಕ್ಷರಾಗಿದ್ದರು. ಅವರ ಬದುಕು, ಹೆಜ್ಜೆ ನಮಗೆ ಆದರ್ಶವಾಗಿರ-ಬೇಕು’ ಎಂದರು.

ಕೆಪಿಸಿಸಿ ಅಧ್ಯಕ್ಷ ಡಿ.ಕೆ. ಶಿವಕುಮಾರ್ ಅವರು ಯುವ ಕಾಂಗ್ರೆಸ್ ನೂತನ ಕಾರ್ಯಾಧ್ಯಕ್ಷ ಮಂಜುನಾಥ ಗೌಡ ಅವರಿಗೆ ಪಕ್ಷದ ಧ್ವಜ ನೀಡಿ ಪದಗ್ರಹಣ ಮಾಡಿದರು. ವಿಧಾನ ಪರಿಷತ್ ಸದಸ್ಯ ಮಂಜುನಾಥ್ ಭಂಡಾರಿ, ಯುವ ಕಾಂಗ್ರೆಸ್ ಅಧ್ಯಕ್ಷ ಮೊಹಮದ್ ಹ್ಯಾರಿಸ್ ನಲಪಾಡ್, ಸಚಿವ ದಿನೇಶ್ ಗುಂಡೂರಾವ್, ಮುಖಂಡ ವಿನಯ್ ಕುಮಾರ್ ಸೊರಕೆ ಭಾಗವಹಿಸಿದ್ದರು

‘ರಾಜ್ಯದಲ್ಲಿ ಡಬಲ್ ಎಂಜಿನ್ ಸರ್ಕಾರ ವಿಫಲವಾಗಿ, ನಮ್ಮ ಮತ್ತು ನಿಮ್ಮ ಕಾಂಗ್ರೆಸ್ ಸರ್ಕಾರ ನುಡಿದಂತೆ ನಡೆದಿದೆ. ರಾಜ್ಯದಲ್ಲಿ ಬಿಜೆಪಿ ಹಾಗೂ ಮೋದಿ ಅಲೆ ಇಲ್ಲ. ಮಂದಿರ ಹಾಗೂ ಧರ್ಮ ಒಂದು ಪಕ್ಷದ ಆಸ್ತಿಯಲ್ಲ. ರಾಮಮಂದಿರಕ್ಕೆ ಮೊದಲು ಪೂಜೆಗೆ ಅವಕಾಶ ನೀಡಿದ್ದೇ ರಾಜೀವ್ ಗಾಂಧಿ’ ಎಂದರು.

‘ರಾಹುಲ್ ಗಾಂಧಿ ಅವರಿಗೆ ಯುವಕರ ಮೇಲೆ ಅಪಾರ ನಂಬಿಕೆ. ಹೀಗಾಗಿ, ಯುವ ನ್ಯಾಯದ ಮೂಲಕ ಐದು ಗ್ಯಾರಂಟಿ ಯೋಜನೆಗಳನ್ನು ಘೋಷಿಸಿದ್ದಾರೆ. ಆ ಮೂಲಕ, ಕೇಂದ್ರ ಸರ್ಕಾರದ ವ್ಯಾಪ್ತಿಯಲ್ಲಿ ಖಾಲಿ ಇರುವ 30 ಲಕ್ಷ ಹುದ್ದೆಗಳ ಭರ್ತಿ, ಪ್ರಶ್ನೆಪತ್ರಿಕೆ ಸೋರಿಕೆ ತಡೆಯಲು ಪ್ರತ್ಯೇಕ ಕಾನೂನು ಜಾರಿ, ಗಿಗ್ ಆರ್ಥಿಕತೆಯಲ್ಲಿ ತೊಡಗಿ-ರುವವರಿಗೆ ಸಾಮಾಜಿಕ ಭದ್ರತೆ, ಯುವ ಬೆಳಕು ಕಾರ್ಯಕ್ರಮದ ಮೂಲಕ ಯುವ ಉದ್ಯಮಿಗಳಿಗೆ ಉತ್ತೇಜನ ನೀಡಲು ಪ್ರತಿ ಜಿಲ್ಲೆಗೆ ₹ 5 ಸಾವಿರ ಕೋಟಿ ಅನುದಾನ ನೀಡಲು ತೀರ್ಮಾನಿಸಿದ್ದೇವೆ’ ಎಂದೂ ಹೇಳಿದರು.

ಯುವ ಕಾಂಗ್ರೆಸ್ ಕಾರ್ಯಾಧ್ಯಕ್ಷ ಮಂಜುನಾಥ್ ಗೌಡ ಮಾತನಾಡಿ, ‘ಯಾರು ಇರಲಿ, ಇಲ್ಲದಿರಲಿ ಪಕ್ಷ ಮುನ್ನ-ಡೆಯುತ್ತದೆ. ವ್ಯಕ್ತಿಗಿಂತ ಪಕ್ಷ ದೊಡ್ಡದು ಎಂದು ಕೆಪಿಸಿಸಿ ಅಧ್ಯಕ್ಷರು ಯಾವಾಗಲೂ ಹೇಳುತ್ತಾರೆ. ಅವರ ಮಾತು ನಿಜ. ನಾವೆಲ್ಲ ಅವರ ಕೈ ಬಲಪಡಿಸೋಣ’ ಎಂದರು.

ವಿಧಾನಪರಿಷತ್ ಸ್ಥಾನಕ್ಕೆ ತೇಜಸ್ವಿನಿಗೌಡ ರಾಜೀನಾಮೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿಧಾನಪರಿಷತ್‌ನ ಬಿಜೆಪಿ ಸದಸ್ಯೆ ತೇಜಸ್ವಿನಿಗೌಡ ಅವರು ಪರಿಷತ್‌ನ ಸದಸ್ಯತ್ವಕ್ಕೆ ಬುಧವಾರ ರಾಜೀನಾಮೆ ನೀಡಿದರು.

ವಿಧಾನಪರಿಷತ್ ಸಭಾಪತಿ ಬಸವರಾಜ ಹೊರಟ್ಟಿ ಅವರ ಮನೆಯಲ್ಲೇ ತೇಜಸ್ವಿನಿ ರಾಜೀನಾಮೆ ಪತ್ರ ನೀಡಿದ್ದು, ಸಭಾಪತಿಯವರು ಅಂಗೀಕರಿಸಿದ್ದಾರೆ. ಅವರ ಸದಸ್ಯತ್ವದ ಅವಧಿ ಜೂನ್ 24ರವರೆಗೆ ಇದೆ.

ರಾಜೀನಾಮೆ ಕುರಿತು ಮಾತನಾಡಿದ ಬಸವರಾಜ ಹೊರಟ್ಟಿ, ‘ತೇಜಸ್ವಿನಿ ಅವರ ಅವಧಿ ಜೂನ್‌ವರೆಗೆ ಇದ್ದು, ಅವರ ಮನವೊಲಿಕೆಗೆ ಸಾಕಷ್ಟು ಪ್ರಯತ್ನಿಸಿದೆ. ವೈಯಕ್ತಿಕ ಕಾರಣಗಳಿಗಾಗಿ ರಾಜೀನಾಮೆ ನೀಡುತ್ತಿರುವುದಾಗಿ ಹೇಳಿದರು. ಅಂಗೀಕರಿಸಿದ್ದೇನೆ’ ಎಂದರು.

ಇತ್ತೀಚೆಗೆ ಜೆಡಿಎಸ್‌ನ ಸದಸ್ಯ ಮರಿತಿಬ್ಬೇಗೌಡ ಅವರು ರಾಜೀನಾಮೆ ನೀಡಿ ಕಾಂಗ್ರೆಸ್ ಪಕ್ಷವನ್ನು ಸೇರಿದರು. ಈ ಸಂದರ್ಭದಲ್ಲಿ ಸುದ್ದಿಗೋಷ್ಠಿ ನಡೆಸಿ ಮಾತನಾಡಿದ ಬಸವರಾಜ ಹೊರಟ್ಟಿ, ‘ನಾನು ಸಭಾಪತಿ ಆದ ಬಳಿಕ ಸುಮಾರು 11 ಮಂದಿ ರಾಜೀನಾಮೆ ನೀಡಿದ್ದಾರೆ. ಇದೊಂದು ಇತಿಹಾಸ’ ಎಂದು ಹೇಳಿದ್ದರು.

ತೇಜಸ್ವಿನಿಯವರು ಮೈಸೂರು–ಕೊಡಗು ಕ್ಷೇತ್ರದ ಬಿಜೆಪಿ ಟಿಕೆಟ್ ಆಕಾಂಕ್ಷಿಯಾಗಿದ್ದರು. ಇದಕ್ಕಾಗಿ ಪ್ರಯತ್ನ ನಡೆಸಿದ್ದರು. ಪ್ರಯತ್ನ ಫಲನೀಡದೇ ಇರುವುದಕ್ಕೆ, ಸದಸ್ಯತ್ವಕ್ಕೆ ರಾಜೀನಾಮೆ ನೀಡಿ ಕಾಂಗ್ರೆಸ್ ಕಡೆ ಮುಖ ಮಾಡಿದ್ದಾರೆ.

‘ಜನಾರ್ದನ ರೆಡ್ಡಿ ಬಿಜೆಪಿ ಸೇರ್ಪಡೆ ಪಕ್ಷಾಂತರ ನಿಷೇಧ ಕಾಯ್ದೆ ಉಲ್ಲಂಘನೆ’

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಶಾಸಕ ಜನಾರ್ದನ ರೆಡ್ಡಿಯವರು ಏಕಾಏಕಿ ಬಿಜೆಪಿಗೆ ಸೇರಿ, ಕರ್ನಾಟಕ ಕಲ್ಯಾಣ ರಾಜ್ಯ ಪ್ರಗತಿ ಪಕ್ಷವನ್ನು (ಕೆಆರ್‌ಪಿಪಿ) ಬಿಜೆಪಿ ಜತೆ ವಿಲೀನ ಮಾಡಿರುವುದಾಗಿ ಹೇಳಿರುವುದು ಪಕ್ಷಾಂತರ ನಿಷೇಧ ಕಾಯ್ದೆಯ ಉಲ್ಲಂಘನೆ-ಯಾಗಿದೆ’ ಎಂದು ಕೆಪಿಸಿಸಿ ಮಾಧ್ಯಮ ವಿಭಾಗದ ಉಪಾಧ್ಯಕ್ಷ ರಮೇಶ್ ಬಾಬು ಹೇಳಿದರು.

ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಅವರು, ‘ಬಿಜೆಪಿ ಸೇರಿ ತಮ್ಮ ಪಕ್ಷದ ಸದಸ್ಯತ್ವವನ್ನು ತ್ಯಜಿಸಿರುವುದರಿಂದ ಸಂವಿಧಾನದ 10ನೇ ವಿಧಿ ಅನ್ವಯ ರೆಡ್ಡಿ ಅವರ ಸದಸ್ಯತ್ವವನ್ನು ಅಸಿಂಧುಗೊಳಿಸಿ, ಶೋಕಾಸ್ ನೋಟಿಸ್ ಜಾರಿ ಮಾಡುವಂತೆ ಸಭಾಧ್ಯಕ್ಷರಿಗೆ ದೂರು ಸಲ್ಲಿಸಿದ್ದೇವೆ’ ಎಂದರು.

‘ಒಂದು ಪಕ್ಷ ಮತ್ತೊಂದು ಪಕ್ಷದ ಜತೆ ವಿಲೀನವಾಗಲು ಅದರದೇ ಆದ ಪ್ರಕ್ರಿಯೆಗಳಿವೆ. ಚುನಾವಣಾ ಆಯೋಗಕ್ಕೆ ಕೊಟ್ಟಿರುವ ಮಾಹಿತಿ ಪ್ರಕಾರ ಜನಾರ್ದನ ರೆಡ್ಡಿ ಕರ್ನಾಟಕ ಕಲ್ಯಾಣ ರಾಜ್ಯ ಪ್ರಗತಿ ಪಕ್ಷಕ್ಕೆ ಪದಾಧಿಕಾರಿಯಲ್ಲ. ಇದು ನೋಂದಾಯಿತ ರಾಜಕೀಯ ಪಕ್ಷ. ಇದರ ರಾಷ್ಟ್ರೀಯ ಅಧ್ಯಕ್ಷರು ಜೆ. ರಾಮಣ್ಣ. ಇದರಲ್ಲಿ ಅನೇಕ ಪದಾಧಿಕಾರಿಗಳಿದ್ದಾರೆ’ ಎಂದರು.

‘2023ರ ಮಾರ್ಚ್ 30ರಂದು ಚುನಾವಣಾ ಆಯೋಗಕ್ಕೆ ಕಲ್ಯಾಣ ರಾಜ್ಯ ಪ್ರಗತಿ ಪಕ್ಷ ಸಲ್ಲಿಸಿರುವ ಲೆಕ್ಕಪರಿಶೋಧನಾ ವರದಿ ಪ್ರಕಾರ ಆ ಪಕ್ಷದ-ಲ್ಲಿರುವ ಮೊತ್ತ ₹ 1,320 ಮಾತ್ರ. ಗಣಿ ಖ್ಯಾತಿ ಜನಾರ್ದನ ರೆಡ್ಡಿ ಅವರು ಬೇನಾಮಿ ಹೆಸರಲ್ಲಿ ಪಕ್ಷ ಹುಟ್ಟು ಹಾಕಿ, ಈಗ ಬಿಜೆಪಿ ಜತೆ ವಿಲೀನ-ಗೊಳಿಸಿದ್ದಾರೆ. ಈ ವಿಚಾರದಲ್ಲೂ ರೆಡ್ಡಿ ಬೇನಾಮಿ ವ್ಯವಹಾರ ನಡೆಸಿರುವುದು ಸ್ಪಷ್ಟವಾಗಿದೆ’ ಎಂದರು.

ಕೆಆರ್‌ಎಸ್: 2 ಕ್ಷೇತ್ರಗಳ ಅಭ್ಯರ್ಥಿಗಳ ಹೆಸರು ಪ್ರಕಟ

ಬೆಂಗಳೂರು: ಕರ್ನಾಟಕ ರಾಷ್ಟ್ರ ಸಮಿತಿ ಪಕ್ಷ (ಕೆಆರ್‌ಎಸ್) ಪಕ್ಷವು ಬುಧವಾರ ಚಿಕ್ಕೋಡಿ ಮತ್ತು ಬಳ್ಳಾರಿ ಲೋಕಸಭಾ ಕ್ಷೇತ್ರಗಳ ಅಭ್ಯರ್ಥಿಗಳ ಹೆಸರುಗಳನ್ನು ಪ್ರಕಟಿಸಿದೆ.

ಮುಂಬರುವ ಲೋಕಸಭಾ ಚುನಾವಣೆಯಲ್ಲಿ ರಾಜ್ಯದ 28 ಲೋಕಸಭಾ ಕ್ಷೇತ್ರಗಳಲ್ಲಿ ಕೆಆರ್‌ಎಸ್ ಪಕ್ಷವು ಸ್ಪರ್ಧಿಸಲಿದ್ದು, ಈಗಾಗಲೇ 24 ಕ್ಷೇತ್ರಗಳ ಅಭ್ಯರ್ಥಿಗಳನ್ನು ಘೋಷಣೆ ಮಾಡಿದೆ. ಚಿಕ್ಕೋಡಿ ಲೋಕಸಭಾ ಕ್ಷೇತ್ರದಲ್ಲಿ ಕುಮಾರ್ ಸಂಭಾಜಿ ಡೋಂಗರೆ ಹಾಗೂ ಬಳ್ಳಾರಿ ಲೋಕಸಭಾ ಕ್ಷೇತ್ರದಲ್ಲಿ ಚನ್ನವೀರ ಚಿತ್ತಾರ ಅವರು ಸ್ಪರ್ಧಿಸಲಿದ್ದಾರೆ ಎಂದು ಪ್ರಕಟಣೆ ತಿಳಿಸಿದೆ.

ಡಿಕೆಶಿ, ಹೇಮಂತ್ ನಿಂಬಾಳ್ಕರ್ ವಿರುದ್ಧ ದೂರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಉಪಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ವಾರ್ತಾ ಮತ್ತು ಸಾರ್ವಜನಿಕ ಸಂಪರ್ಕ ಇಲಾಖೆ ಆಯುಕ್ತ ಹೇಮಂತ್ ನಿಂಬಾಳ್ಕರ್ ವಿರುದ್ಧ ಚುನಾವಣಾ ಆಯೋಗಕ್ಕೆ ಬಿಜೆಪಿ ದೂರು ನೀಡಿದೆ.

ಡಿ.ಕೆ.ಶಿವಕುಮಾರ್ ಅವರು ತಮ್ಮ ಅಧಿಕೃತ ಫೇಸ್‌ಬುಕ್ ಖಾತೆಯಲ್ಲಿ ಕರ್ನಾಟಕ ಸರ್ಕಾರದ ಚಿಹ್ನೆ, ಕಾಂಗ್ರೆಸ್ ಪಕ್ಷದ ಚಿಹ್ನೆ ಬಳಸಿಕೊಂಡು ಡಿ.ಕೆ.ಸುರೇಶ್ ಪರವಾಗಿ ಚುನಾವಣಾ ಪ್ರಚಾರ ಮಾಡಿ ಚುನಾವಣಾ ನೀತಿ ಸಂಹಿತೆ ಉಲ್ಲಂಘಿಸಿದ್ದಾರೆ ಎಂದು ದೂರಿನಲ್ಲಿ ತಿಳಿಸಿದ್ದಾರೆ.

‘ಹೇಮಂತ್ ನಿಂಬಾಳ್ಕರ್ ಅವರು ತಮ್ಮ ಪತ್ನಿ ಹಾಗೂ ಉತ್ತರ ಕನ್ನಡ ಕ್ಷೇತ್ರದ ಕಾಂಗ್ರೆಸ್ ಅಭ್ಯರ್ಥಿ ಅಂಜಲಿ ನಿಂಬಾಳ್ಕರ್ ಪರವಾಗಿ ಮತ ನೀಡುವಂತೆ ಪ್ರಭಾವ ಬೀರುತ್ತಿದ್ದಾರೆ ಎಂಬ ಮಾಹಿತಿ ಸಿಕ್ಕಿದೆ. ತಕ್ಷಣವೇ ಅವರನ್ನು ಅಲ್ಲಿಂದ ವರ್ಗಾವಣೆ ಮಾಡಬೇಕು. ರಾಜ್ಯ ಒಳಗೇ ಇದ್ದರೆ ಮತ್ತೆ ತಮ್ಮ ಪ್ರಭಾವ ಬಳಸುವ ಸಾಧ್ಯತೆ ಇದ್ದು, ಅವರಿಗೆ ಕರ್ನಾಟಕದಿಂದ ಹೊರಗೆ ಕೆಲಸ ಮಾಡಲು ಅವಕಾಶ ಕೊಡಿ’ ಎಂದು ಮನವಿಯಲ್ಲಿ ಹೇಳಿದ್ದಾರೆ.

ಬಿಜೆಪಿ ನಿಯೋಗದಲ್ಲಿ ವಿಧಾನಪರಿಷತ್ ಸದಸ್ಯ ಛಲವಾದಿ ನಾರಾಯಣಸ್ವಾಮಿ, ಕಾನೂನು ಪ್ರಕೋಷ್ಠದ ವಿವೇಕ್ ರೆಡ್ಡಿ ಇದ್ದರು.

ಎಸ್‌ಯುಸಿಐ: ಅಭ್ಯರ್ಥಿಗಳ ನಾಮಪತ್ರ ಸಲ್ಲಿಕೆ ಇಂದು

ಬೆಂಗಳೂರು: ಬೆಂಗಳೂರು ಗ್ರಾಮಾಂತರ, ಉತ್ತರ ಮತ್ತು ಕೇಂದ್ರ ಲೋಕಸಭಾ ಕ್ಷೇತ್ರಗಳಿಂದ ಸ್ಪರ್ಧೆ ಮಾಡಲು ಸೋಷಿಯಲಿಸ್ಟ್ ಯೂನಿಟಿ ಸೆಂಟರ್ ಆಫ್ ಇಂಡಿಯಾ (ಕಮ್ಯುನಿಸ್ಟ್) ಪಕ್ಷ (ಎಸ್‌ಯುಸಿಐ) ನಿರ್ಧರಿಸಿದ್ದು, ಅಭ್ಯರ್ಥಿಗಳು ಮಾರ್ಚ್ 28ರಂದು ಬೆಳಿಗ್ಗೆ 10.45ಕ್ಕೆ ನಾಮಪತ್ರ ಸಲ್ಲಿಸಲಿದ್ದಾರೆ.

ಬೆಂಗಳೂರು ಗ್ರಾಮಾಂತರ ಕ್ಷೇತ್ರ ದಿಂದ ಹೇಮಾವತಿ ಕೆ., ಬೆಂಗಳೂರು ಉತ್ತರದಿಂದ ನಿರ್ಮಲಾ ಎಚ್.ಎಲ್. ಹಾಗೂ ಬೆಂಗಳೂರು ಕೇಂದ್ರದಿಂದ ಎಚ್.ಪಿ. ಶಿವಪ್ರಕಾಶ್ ನಾಮಪತ್ರ ಸಲ್ಲಿಸಲಿದ್ದಾರೆ.

‘ರಂಗ ಭೂಪತಿ’ ಪ್ರಶಸ್ತಿಗೆ ಶ್ರೀಪಾದ ಭಟ್ ಆಯ್ಕೆ

ಬೆಂಗಳೂರು: ನಾಟಕಕಾರ ದಿ.ಗೋಪಾಲ ವಾಜಪೇಯಿ ಅವರ ಹೆಸರಿನಲ್ಲಿ ಸ್ಥಾಪಿಸ ಲಾಗಿರುವ ‘ರಂಗ ಭೂಪತಿ’ ಪ್ರಶಸ್ತಿಗೆ ರಂಗ ನಿರ್ದೇಶಕ ಶ್ರೀಪಾದ ಭಟ್ ಅವರು ಆಯ್ಕೆಯಾಗಿದ್ದಾರೆ.

ಶ್ರೀಪಾದ ಭಟ್

ಧಾರವಾಡದ ಗೋ.ವಾ. ರಂಗ–ಸಂಗ, ಆಟ–ಮಾಟ ಹಾಗೂ ಬೆಂಗಳೂರಿನ ಬಹುರೂಪಿ ಫೌಂಡೇಶನ್ ಸಂಸ್ಥೆಗಳು ಈ ಪ್ರಶಸ್ತಿಯನ್ನು ಸ್ಥಾಪಿಸಿದ್ದು, ಮಾರ್ಚ್ 30ರಂದು ಧಾರವಾಡದಲ್ಲಿ ನಡೆಯುವ ಸಮಾರಂಭದಲ್ಲಿ ಪ್ರಶಸ್ತಿ ಪ್ರದಾನ ಮಾಡಲಾಗುವುದು ಎಂದು ಪ್ರಕಟಣೆ ತಿಳಿಸಿದೆ.

ಉತ್ತರ ಕನ್ನಡ ಜಿಲ್ಲೆಯ ಧಾರೇಶ್ವರದ ಶ್ರೀಪಾದ ಭಟ್ ಅವರು ಕನ್ನಡ ರಂಗಭೂಮಿಯಲ್ಲಿ ಸಾಕಷ್ಟು ಸಾಧನೆ ಮಾಡಿದ್ದಾರೆ. ಗಾಂಧಿ–150ರ ಸಂದರ್ಭದಲ್ಲಿ ಇವರು ನಿರ್ದೇಶಿಸಿದ ‘ಪಾಪು-ಬಾಪು’ ನಾಟಕವು 2 ಸಾವಿರ ಪ್ರಯೋಗ ಕಂಡಿದೆ. ಇದುವರೆಗೂ ಸುಮಾರು 150ಕ್ಕೂ ಹೆಚ್ಚು ನಾಟಕಗಳನ್ನು ನಿರ್ದೇಶಿಸಿದ್ದಾರೆ. ‘ದಡವ ನೆಕ್ಕಿದ ಹೊಳೆ’ ನಟನೆಯ ಕೈಪಿಡಿ ಸೇರಿದಂತೆ ಹಲವಾರು ಕೃತಿಗಳನ್ನು ರಚಿಸಿದ್ದಾರೆ.

290 ರೌಡಿ ಮನೆಗಳ ಮೇಲೆ ದಾಳಿ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭಾ ಚುನಾವಣೆ ಸಂದರ್ಭದಲ್ಲಿ ಕೆಲ ರೌಡಿಗಳು ಮತದಾರರನ್ನು ಬೆದರಿಸುತ್ತಿರುವ ಮಾಹಿತಿ ಕಲೆ ಹಾಕಿರುವ ಪೊಲೀಸರು, ನಗರದ 290 ರೌಡಿಗಳ ಮನೆಗಳ ಮೇಲೆ ಮಂಗಳವಾರ ತಡರಾತ್ರಿ ದಾಳಿ ಮಾಡಿ ಪರಿಶೀಲನೆ ನಡೆಸಿದರು.

ಉತ್ತರ ವಿಭಾಗದ ಮಲ್ಲೇಶ್ವರ, ಶ್ರೀರಾಮಪುರ, ರಾಜಾಜಿನಗರ, ಸುಬ್ರಹ್ಮಣ್ಯನ-ಗರ, ಮಹಾಲಕ್ಷ್ಮಿ ಲೇಔಟ್, ರಾಜಗೋಪಾಲನ-ಗರ, ನಂದಿನಿ ಲೇಔಟ್, ಯಶವಂತಪುರ, ಆರ್.ಎಂ.ಸಿ ಯಾರ್ಡ್, ಪೀಣ್ಯ, ಸೋಲದೇವನಹಳ್ಳಿ, ಗಂಗಮ್ಮನಗುಡಿ, ಜಾಲಹಳ್ಳಿ, ಬಾಗಲಗುಂಟೆ, ಜೆ.ಸಿ.ನಗರ, ಸಂಜಯನಗರ, ಹೆಬ್ಬಾಳ ಹಾಗೂ ಆರ್.ಟಿ. ನಗರ ಠಾಣೆ ವ್ಯಾಪ್ತಿಯಲ್ಲಿ ವಾಸವಿರುವ ರೌಡಿಗಳ ಮನೆಗಳಗಳಲ್ಲಿ ಪೊಲೀಸರು ಶೋಧ ನಡೆಸಿದರು.

‘ಲೋಕಸಭಾ ಚುನಾವಣೆ ಹಿನ್ನೆಲೆಯಲ್ಲಿ ನಗರದಲ್ಲಿ ಯಾವುದೇ ಅಹಿತಕರ ಘಟನೆಗಳು ನಡೆಯದಂತೆ ನಿಗಾ ವಹಿಸಲಾಗಿದೆ. ಕೆಲ ರೌಡಿಗಳು, ಮತದಾರರನ್ನು ಬೆದರಿಸುತ್ತಿರುವ ಮಾಹಿತಿ ಇತ್ತು. ಜೊತೆಗೆ, ಕೆಲವರು ಪದೇ ಪದೇ ಅಪರಾಧಗಳಲ್ಲಿ ಭಾಗಿಯಾಗುತ್ತಿರುವುದು ಗೊತ್ತಾಗಿತ್ತು. ಇದೇ ಕಾರಣಕ್ಕೆ ಈ ದಾಳಿ ಮಾಡಲಾಯಿತು’ ಎಂದು ಪೊಲೀಸ್ ಅಧಿಕಾರಿ-ಯೊಬ್ಬರು ಹೇಳಿದರು.

‘ಇನ್‌ಸ್ಪೆಕ್ಟರ್, ಪಿಎಸ್‌ಐ ಒಳಗೊಂಡಂತೆ 50 ವಿಶೇಷ ತಂಡಗಳನ್ನು ರಚಿಸಲಾಗಿತ್ತು. ಮಂಗಳವಾರ ತಡರಾತ್ರಿ 1 ಗಂಟೆಗೆ ರೌಡಿಗಳ ಮನೆಗೆ ಹೋಗಿದ್ದ ಪೊಲೀಸರು, ಮನೆಯೊಳಗೆ ಶೋಧ ನಡೆಸಿದವು. ಕೆಲ ರೌಡಿಗಳನ್ನು ವಶಕ್ಕೆ ಪಡೆದು ವಿಚಾರಣೆ ನಡೆಸಿದರು’ ಎಂದರು.

‘ಯಾವುದೇ ಅಪರಾಧಗಳಲ್ಲಿ ತೊಡಗದಂತೆ ರೌಡಿಗಳಿಗೆ ಎಚ್ಚರಿಕೆ ನೀಡಲಾಗಿದೆ. ಕೆಲವರಿಂದ ಮುಚ್ಚಳಿಕೆ ಬರೆಸಿಕೊಳ್ಳಲಾಗಿದೆ’ ಎಂದರು.

ಮನರಂಜನಾ ಕ್ಲಬ್: ಪರವಾನಗಿ ಪಡೆಯಲು ಹೈಕೋರ್ಟ್ ಸೂಚನೆ

‘ಮಾರ್ಗದರ್ಶಿ ಸೂತ್ರ ಪಾಲಿಸಿ’

ಪ್ರಜಾವಾಣಿ ವಾರ್ತೆ

ಮುಖ್ಯಾಂಶಗಳು

- ಮನರಂಜನಾ ಕ್ಲಬ್‌ಗಳಲ್ಲಿ ಜೂಜಾಟದ ಆರೋಪ
- ಪೊಲೀಸರ ಎಫ್‌ಐಆರ್ ಪ್ರಶ್ನಿಸಿದ ಅರ್ಜಿ

ಬೆಂಗಳೂರು: ‘ಬಸವೇಶ್ವರ ನಗರ ಪೊಲೀಸ್ ಠಾಣೆ ವ್ಯಾಪ್ತಿಯಲ್ಲಿರುವ ಅಡಿಗ ರಿಕ್ರಿಯೇಶನ್ (ಮನರಂಜನಾ) ಕ್ಲಬ್ ಮಾಲೀಕರು ಮಾಹಿತಿ ಹಕ್ಕು ಕಾಯ್ದೆ ಕಾರ್ಯಕರ್ತನ ಹೆಸರಿನಲ್ಲಿ ಕಾನೂನು ಬಾಹಿರವಾಗಿ ಕ್ಲಬ್ ನಡೆಸುತ್ತಿದ್ದಾರೆ, ಮಾತ್ರವಲ್ಲ; ಶಸ್ತ್ರಾಸ್ತ್ರ ಕಾಯ್ದೆಯನ್ನೂ ಉಲ್ಲಂಘಿಸಿದ್ದು ಕಳೆದ 10 ವರ್ಷಗಳಿಗೂ ಹೆಚ್ಚು ಕಾಲದಿಂದ ರೌಡಿ ಶೀಟರ್‌ನಲ್ಲಿದ್ದು ಅನೇಕ ಕ್ರಿಮಿನಲ್ ಪ್ರಕರಣ ಎದುರಿಸುತ್ತಿದ್ದಾರೆ’ ಎಂದು ರಾಜ್ಯ ಸರ್ಕಾರ ಹೈಕೋರ್ಟ್‌ಗೆ ಅರುಹಿದೆ.

‘ನನ್ನ ವಿರುದ್ಧ ಬಸವೇಶ್ವರ ನಗರ ಪೊಲೀಸ್ ಠಾಣೆಯಲ್ಲಿ ದಾಖಲಿಸಿರುವ ಪ್ರಕರಣ ರದ್ದುಪಡಿಸಬೇಕು’ ಎಂದು ಕೋರಿ ಕ್ಲಬ್ ಮಾಲೀಕ ಅಶೋಕ ಕುಮಾರ್ ಅಡಿಗ ಸಲ್ಲಿಸಿದ್ದ ರಿಟ್ ಅರ್ಜಿಯನ್ನು ನ್ಯಾಯಮೂರ್ತಿ ಎಂ.ನಾಗಪ್ರಸನ್ನ ಅವರಿದ್ದ ಏಕಸದಸ್ಯ ನ್ಯಾಯಪೀಠ ಬುಧವಾರ ವಿಚಾರಣೆ ನಡೆಸಿತು.

ವಿಚಾರಣೆ ವೇಳೆ ಸರ್ಕಾರದ ಪರ ಹಾಜರಿದ್ದ ಅಡ್ವೊಕೇಟ್ ಜನರಲ್ ಕೆ.ಶಶಿಕಿರಣ ಶೆಟ್ಟಿ, ‘ಕ್ಲಬ್ ಮಾಲೀಕರು ಕಾರ್ಮಿಕ ಇಲಾಖೆಯ ಪರವಾನಗಿಯನ್ನು ಮಾತ್ರವೇ ಪಡೆದು ಕ್ಲಬ್ ನಡೆಸುತ್ತಿದ್ದಾರೆ. ಯಾವುದೇ ಶಾಸನಾತ್ಮಕ ಪರವಾನಗಿ ಪಡೆದಿಲ್ಲ. ಪೊಲೀಸರು ಸ್ಥಳಕ್ಕೆ ತೆರಳಿದಾಗ ಕ್ಲಬ್‌ನ ಎರಡು ಮತ್ತು ಮೂರನೇ ಅಂತಸ್ತಿನಲ್ಲಿ ಸುಮಾರು 300 ನೌಕರರು ಇರುವುದು ಕಂಡು ಬಂದಿದೆ. ಇಲ್ಲೆಲ್ಲಾ ಅನೇಕ ಕಾನೂನು ಬಾಹಿರವಾದ ಜೂಜಾಟಗಳನ್ನು ಆಡಲು ಆಸ್ಪದ ಕಲ್ಪಿಸಲಾಗಿದೆ’ ಎಂದು ಆರೋಪಿಸಿದರು.

ಇದನ್ನು ಅಲ್ಲಗಳೆದ ಅರ್ಜಿದಾರರ ಪರ ವಕೀಲ ಎಂ.ವಿನೋದ್ ಕುಮಾರ್, ‘ಅರ್ಜಿದಾರರ ವಿರುದ್ಧ ಇತ್ತೀಚೆಗೆ ರೌಡಿ ಶೀಟ್ ತೆರೆಯಲಾಗಿದೆ. ಪೊಲೀಸರು ಎರಡು ಮೂರು ದಿನಗಳಿಗೊಮ್ಮೆ ಮನೆಗೆ ತೆರಳಿ ಕಿರುಕುಳ ನೀಡುತ್ತಿದ್ದಾರೆ. ಅಷ್ಟಕ್ಕೂ ಪೊಲೀಸರು ಕೇಳುತ್ತಿರುವ ಪರವಾನಗಿಗೆ ಅರ್ಜಿ ಸಲ್ಲಿಸಲಾಗಿದೆ’ ಎಂದು ತಿಳಿಸಿದರು.

ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಪೀಠ, ‘ಅರ್ಜಿದಾರರ ವಿರುದ್ಧ ದಶಕದ ಹಿಂದಿನಿಂದಲೂ ರೌಡಿ ಶೀಟರ್ ತೆರೆಯಲಾಗಿದೆ ಎಂದು ಅಡ್ವೊಕೇಟ್ ಜನರಲ್ ಹೇಳುತ್ತಿದ್ದಾರೆ. ಕ್ಲಬ್ ನಡೆಸಲು ಈಗಾಗಲೇ ಇರುವ ಮಾರ್ಗಸೂಚಿಪಾಲಿಸುತ್ತಿಲ್ಲ, ಟ್ರಸ್ಟ್ ಕಾಯ್ದೆ ಅಡಿಯಲ್ಲಿ ಬ್ಯಾಂಕ್‌ನಿಂದ ಸಾಲ ಕೂಡಾ ಪಡೆಯಲಾಗಿದೆ ಎಂದೆಲ್ಲಾ ಆಕ್ಷೇಪಿಸಿದ್ದಾರೆ. ಹೀಗಿರುವಾಗ ಕ್ಲಬ್ ನಡೆಸಲು ಹೇಗೆ ಅವಕಾಶ ನೀಡಬೇಕು’ ಎಂದು ಪ್ರಶ್ನಿಸಿತು. ಅಂತೆಯೇ, ’ಸೂಕ್ತ ಪರವಾನಗಿ ಪಡೆಯಲು ಸಕ್ಷಮ ಪ್ರಾಧಿಕಾರಗಳಲ್ಲಿ ಎರಡು ವಾರಗಳ ಒಳಗಾಗಿ ಅರ್ಜಿ ಸಲ್ಲಿಸಿ’ ಎಂದು ಅರ್ಜಿದಾರರಿಗೆ ಆದೇಶಿಸಿತು. ಅಂತೆಯೇ, ‘ಕ್ಲಬ್‌ಗಳು ಮಾರ್ಗದರ್ಶಿ ಸೂತ್ರಗಳನ್ನು ಕಟ್ಟುನಿಟ್ಟಾಗಿ ಪಾಲಿಸಬೇಕು ಹಾಗೂ ಈ ಪ್ರಕರಣದ ಅರ್ಜಿದಾರರಿಗೆ ಕಿರುಕುಳ ನೀಡಬಾರದು’ ಎಂದು ಅಡ್ವೊಕೇಟ್ ಜನರಲ್ ಅವರಿಗೆ ಸೂಚಿಸಿ ಅರ್ಜಿ ವಿಲೇವಾರಿ ಮಾಡಿತು.

ರಮ್ಮಿ ಆಡಿಸಲು ಆರ್‌ಟಿಐ ಕಾರ್ಯಕರ್ತನ ಅಡಿಯಲ್ಲಿ ರಕ್ಷಣೆ ಪಡೆದುಕೊಂಡಿದ್ದೀರಿ. 2011ರಿಂದಲೂ ಹತ್ತಾರು ಕ್ರಿಮಿನಲ್ ಕೇಸುಗಳನ್ನು ಎದುರಿಸುತ್ತಿದ್ದೀರಿ. 5–6 ವರ್ಷಗಳ ಹಿಂದೆಯೇ ಅರ್ಜಿದಾರರ ಹೆಸರನ್ನು ರೌಡಿ ಶೀಟ್‌ನಲ್ಲಿ ಹೆಸರನ್ನು ಸೇರಿಸಲಾಗಿದ್ದರೂ ಇತ್ತೀಚೆಗಷ್ಟೇ ಸೇರಿಸಲಾಗಿದೆ ಎನ್ನುತ್ತಿದ್ದೀರಲ್ಲಾ?

ಎಂ.ನಾಗಪ್ರಸನ್ನ, ನ್ಯಾಯಮೂರ್ತಿ

‘ಲೇಬರ್ ಲಾ–ಗೂ ರಮ್ಮಿಗೂ ಏನು ಸಂಬಂಧ?’

‘ಕ್ಲಬ್‌ನಲ್ಲಿ ರಮ್ಮಿ ಆಡಿಸಲಾಗುತ್ತಿದೆ. ಅದು ಕಾನೂನು ಬಾಹಿರವಲ್ಲ’ ಎಂಬ ಅರ್ಜಿದಾರರ ಪರ ವಕೀಲರ ಮಾತಿಗೆ ಕುಟುಕಿದ ನ್ಯಾಯಮೂರ್ತಿಗಳು, ‘ಅಲ್ಲಾರೀ, ನೀವು ಕ್ಲಬ್ ಪರವಾನಗಿ ಎಲ್ಲಿದೆ ಎಂದು ಕೇಳಿದರೆ ಲೇಬರ್ ಲಾ (ಕಾರ್ಮಿಕ ಕಾನೂನು) ಅಡಿಯಲ್ಲಿ ಪರವಾನಗಿ ಪಡೆದಿದ್ದೇವೆ ಎಂದು ಹೇಳುತ್ತಿದ್ದೀರಿ. ಲೇಬರ್ ಲಾ–ಗೂ ರಮ್ಮಿಗೂ ಏನ್ರೀ ಸಂಬಂಧ’ ಎಂದು ಪ್ರಶ್ನಿಸಿತು.

ಕ್ಲಬ್ ಮಾಲೀಕರೂ ಆದ ಅರ್ಜಿದಾರರ ವಿರುದ್ಧ ಬಸವೇಶ್ವರ ನಗರ ಠಾಣೆ ಪೊಲೀಸರು ಕರ್ನಾಟಕ ಪೊಲೀಸ್ ಕಾಯ್ದೆ-1963ರ ಕಲಂ 79 ಮತ್ತು 80, ಬಾಲನ್ಯಾಯ (ಮಕ್ಕಳ ಆರೈಕೆ ಮತ್ತು ರಕ್ಷಣೆ)–2015ರ ಕಲಂ 78, ಭಾರತೀಯ ದಂಡ ಸಂಹಿತೆ–1860ರ ಕಲಂ 506, 278 ಮತ್ತು 283 ಹಾಗೂ ಸಿಗರೇಟು ಮತ್ತು ಇತರೆ ತಂಬಾಕು ಉತ್ಪನ್ನಗಳ ಕಾಯ್ದೆ–2003ರ ಕಲಂ 24, 6 (ಬಿ) ಅಡಿಯಲ್ಲಿ ಎಫ್‌ಐಆರ್ ದಾಖಲಿಸಿದ್ದರು. ಇದನ್ನು ರದ್ದುಪಡಿಸುವಂತೆ ಅರ್ಜಿದಾರರು ಕೋರಿದ್ದರು.

ಸಿ.ಇ ನಂಜುಂಡಪ್ಪ ಲೋಕಾಯುಕ್ತದಿಂದ ವಾಪಸ್

ವಿಚಾರಣೆ ಮಾಹಿತಿ ಮುಚ್ಚಿಟ್ಟು ವಿಭಾಗದ ಮುಖ್ಯಸ್ಥರ ಹುದ್ದೆಗೆ ವರ್ಗವಾಗಿದ್ದರು

ಪ್ರಜಾವಾಣಿ ವಾರ್ತೆ

ಬೆಂಗಳೂರು: ನಾಲ್ಕು ಪ್ರಕರಣಗಳಲ್ಲಿ ವಿಚಾರಣೆ ಎದುರಿಸುತ್ತಿರುವುದನ್ನು ಮುಚ್ಚಿಟ್ಟು ಲೋಕಾಯುಕ್ತದ ತಾಂತ್ರಿಕ ವಿಭಾಗದ ಮುಖ್ಯಸ್ಥರ ಹುದ್ದೆಗೆ ವರ್ಗವಾಗಿ ಬಂದಿದ್ದ ಮುಖ್ಯ ಎಂಜಿನಿಯರ್ (ಸಿ.ಇ) ಟಿ.ಡಿ. ನಂಜುಂಡಪ್ಪ ಅವರನ್ನು ಲೋಕಾಯುಕ್ತದಿಂದ ವಾಪಸ್ ಕಳುಹಿಸಲಾಗಿದೆ.

ನಂಜುಂಡಪ್ಪ ಲೋಕಾಯುಕ್ತದ ತಾಂತ್ರಿಕ ವಿಭಾಗದ ಮುಖ್ಯ ಎಂಜಿನಿಯರ್ ಹುದ್ದೆಯಲ್ಲಿ ಮಾರ್ಚ್ 18ರಂದು ಮಧ್ಯಾಹ್ನ ಕರ್ತವ್ಯಕ್ಕೆ ವರದಿ ಮಾಡಿಕೊಂಡಿದ್ದರು. ಸಂಸ್ಥೆಯಲ್ಲೇ ಅವರ ವಿರುದ್ಧ ದೂರುಗಳು ವಿಚಾರಣೆಗೆ ಬಾಕಿ ಇರುವುದರಿಂದ ಅವರ ಸೇವೆಯನ್ನು ಮಾತೃ ಇಲಾಖೆಗೆ ಹಿಂದಿರುಗಿಸಿ ಲೋಕಾಯುಕ್ತದ ರಿಜಿಸ್ಟ್ರಾರ್ ಮಂಗಳವಾರ ಆದೇಶ ಹೊರಡಿಸಿದ್ದಾರೆ.

ನಂಜುಂಡಪ್ಪ ಹಿಂದೆ ಕರ್ನಾಟಕ ಗೃಹ ಮಂಡಳಿ (ಕೆಎಚ್‌ಬಿ) ಮುಖ್ಯ ಎಂಜಿನಿಯರ್ ಹುದ್ದೆಯಲ್ಲಿದ್ದರು. ಆಗ, ಬಂಡೆಮಠ ಕೆಎಚ್‌ಬಿ ಬಡಾವಣೆ ನಿರ್ಮಾಣ ಕಾಮಗಾರಿಯಲ್ಲಿ ಅವ್ಯವಹಾರ ನಡೆಸಿರುವ ಆರೋಪದ ಮೇಲೆ ಆ ಬಡಾವಣೆಯ ನಿವಾಸಿಗಳ ಕ್ಷೇಮಾಭಿವೃದ್ಧಿ ಸಂಘದ ಬಿ. ರಾಮಕೃಷ್ಣೇಗೌಡ ಲೋಕಾಯುಕ್ತಕ್ಕೆ ದೂರು ಸಲ್ಲಿಸಿದ್ದರು. ಆ ಪ್ರಕರಣ ವಿಚಾರಣೆಗೆ ಬಾಕಿ ಇರುವಾಗಲೇ ನಂಜುಂಡಪ್ಪ ಅವರನ್ನು ಲೋಕಾಯುಕ್ತದ ಮುಖ್ಯ ಎಂಜಿನಿಯರ್ ಹುದ್ದೆಗೆ ನೇಮಿಸಿರುವುದಕ್ಕೆ ಆಕ್ಷೇಪ ವ್ಯಕ್ತಪಡಿಸಿದ್ದರು.

‘ಬಂಡೆಮಠ ಬಡಾವಣೆ ಪ್ರಕರಣದ ಕುರಿತು ನಂಜುಂಡಪ್ಪ ಅವರಿಂದ ವಿವರಣೆ ಕೇಳಲಾಗಿತ್ತು. ಮಂಗಳವಾರ ಅವರು ವಿವರಣೆ ನೀಡಿದ್ದರು. ನಂಜುಂಡಪ್ಪ ವಿರುದ್ಧ ಇನ್ನೂ ಮೂರು ಪ್ರಕರಣಗಳು ವಿಚಾರಣೆಗೆ ಬಾಕಿ ಇವೆ. ನಮ್ಮ ಸಂಸ್ಥೆಗೆ ಅವರನ್ನು ನಿಯೋಜಿಸುವ ಮುನ್ನ ಸಹಮತಿಯನ್ನೂ ಪಡೆದಿರಲಿಲ್ಲ. ಈ ಕಾರಣದಿಂದ ಅವರನ್ನು ಲೋಕಾಯುಕ್ತದ ಮುಖ್ಯ ಎಂಜಿನಿಯರ್ ಹುದ್ದೆಯ ಕರ್ತವ್ಯದಿಂದ ಬಿಡುಗಡೆಗೊಳಿಸಲಾಗಿದೆ’ ಎಂದು ರಿಜಿಸ್ಟ್ರಾರ್ ತಿಳಿಸಿದ್ದಾರೆ.

ಸಂಸ್ಥೆಯ ಕಾರ್ಯನಿರ್ವಾಹಕ ಎಂಜಿನಿಯರ್ ಆರ್. ರವಿಶಂಕರ್ ಅವರಿಗೆ ಮುಖ್ಯ ಎಂಜಿನಿಯರ್ ಹುದ್ದೆಯ ಪ್ರಭಾರ ವಹಿಸಲಾಗಿದೆ. ಸಂಸ್ಥೆಯ ಸಹಮತಿ ಪಡೆದು ಮುಖ್ಯ ಎಂಜಿನಿಯರ್ ಒಬ್ಬರನ್ನು ನಿಯೋಜಿಸಲು ಸರ್ಕಾರಕ್ಕೆ ಪತ್ರ ಬರೆಯಲಾಗುವುದು ಎಂದು ಮಾಹಿತಿ ನೀಡಿದ್ದಾರೆ.

ಅಪ್ಪಾಜಿ ಗೌಡ ವಿರುದ್ಧದ ಪ್ರಕರಣ ರದ್ದತಿಗೆ ನಕಾರ

ಪ್ರಜಾವಾಣಿ ವಾರ್ತೆ

ಬೆಂಗಳೂರು: ವಿದ್ಯಾರ್ಥಿನಿಯೊಬ್ಬರಿಂದ ಕಾಲೇಜು ಅಭಿವೃದ್ಧಿ ಶುಲ್ಕ ಸಂಗ್ರಹಿಸಿ ಅದನ್ನು ದುರುಪಯೋಗ ಪಡಿಸಿಕೊಂಡ ಆರೋಪದಡಿ ರಾಜ್ಯ ಒಕ್ಕಲಿಗರ ಸಂಘದ ಮಾಜಿ ಅಧ್ಯಕ್ಷ ಡಾ.ಅಪ್ಪಾಜಿ ಗೌಡ ವಿರುದ್ಧ ದಾಖಲಾಗಿರುವ ಕ್ರಿಮಿನಲ್ ಪ್ರಕರಣ ರದ್ದುಪಡಿಸಲು ಹೈಕೋರ್ಟ್ ನಿರಾಕರಿಸಿದೆ.

ಎಫ್‌ಐಆರ್ ರದ್ದತಿ ಕೋರಿ ಅಪ್ಪಾಜಿ ಗೌಡ ಸಲ್ಲಿಸಿದ್ದ ಕ್ರಿಮಿನಲ್ ಅರ್ಜಿ ವಿಚಾರಣೆ ನಡೆಸಿದ ನ್ಯಾಯಮೂರ್ತಿ ಎಸ್.ವಿಶ್ವಜಿತ್ ಶೆಟ್ಟಿ ಅವರಿದ್ದ ಏಕಸದಸ್ಯ ನ್ಯಾಯಪೀಠ ಈ ಕುರಿತಂತೆ ಆದೇಶಿಸಿದೆ.

‘ಆರೋಪಗಳಲ್ಲಿ ಹುರುಳಿಲ್ಲ ಎಂಬ ಅಭಿಪ್ರಾಯಕ್ಕೆ ಬರಲು ಮೇಲ್ನೋಟಕ್ಕೆ ಸಾಧ್ಯವಿಲ್ಲ. ಪೊಲೀಸರು ಈಗಾಗಲೇ ತನಿಖೆ ಪೂರ್ಣಗೊಳಿಸಿ ವಿಚಾರಣಾ ನ್ಯಾಯಾಲಯಕ್ಕೆ ದೋಷಾರೋಪ ಪಟ್ಟಿ ಸಲ್ಲಿಸಿದ್ದಾರೆ. ಆದ್ದರಿಂದ, ದೂರು ರದ್ದುಪಡಿಸಲು ಈ ಅರ್ಜಿ ಅರ್ಹವಾಗಿಲ್ಲ’ ಎಂದು ನ್ಯಾಯಪೀಠ ತಿಳಿಸಿದೆ.

ಪ್ರಕರಣವೇನು?: ‘ಒಕ್ಕಲಿಗರ ಸಂಘದ ಒಡೆತನದಲ್ಲಿರುವ ಕೆಂಪೇಗೌಡ ವೈದ್ಯಕೀಯ ವಿಜ್ಞಾನಗಳ ಸಂಸ್ಥೆಯಲ್ಲಿ ಸಾಕ್ಷಿ ಎಂಬ ವಿದ್ಯಾರ್ಥಿನಿ ಎಂಬಿಬಿಎಸ್ ಕೋರ್ಸ್‌ಗೆ ದಾಖಲಾಗಿದ್ದರು. ಆರೋಪಿಗಳು ಅಭಿವೃದ್ಧಿ ಶುಲ್ಕದ ಹೆಸರಿನಲ್ಲಿ ವಿದ್ಯಾರ್ಥಿನಿಯಿಂದ ₹ 50 ಲಕ್ಷ ಪಡೆದು ದುರುಪಯೋಗ ಪಡಿಸಿಕೊಂಡಿದ್ದಾರೆ’ ಎಂಬುದು ಆರೋಪ.

ಡ್ರಗ್ಸ್ ಜಾಗೃತಿ: ಗೂಳಿಗೌಡ ಮನವಿಗೆ ಸ್ಪಂದನೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಶಿಕ್ಷಣ ಸಂಸ್ಥೆಗಳ ಸುತ್ತ ಮಾದಕ ದ್ರವ್ಯಗಳ ಮಾರಾಟ ಮತ್ತು ಸೇವನೆ ತಡೆಗಟ್ಟುವ ಮತ್ತು ಡ್ರಗ್ಸ್ ಮುಕ್ತ ಸಮಾಜ ನಿರ್ಮಿಸುವ ನಿಟ್ಟಿನಲ್ಲಿ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಲು ಪೊಲೀಸ್ ಇಲಾಖೆ ಮುಂದಾಗಿದೆ.

ಈ ಕುರಿತು ಮುಖ್ಯಮಂತ್ರಿ ಸಿದ್ದರಾಮಯ್ಯ ಅವರಿಗೆ ವಿಧಾನ ಪರಿಷತ್ ಕಾಂಗ್ರೆಸ್ ಸದಸ್ಯ ದಿನೇಶ ಗೂಳಿಗೌಡ ಅವರು ಮನವಿ ಸಲ್ಲಿಸಿದ್ದರು. ಈ ಮನವಿಯನ್ನು ಪರಿಗಣಿಸಿದ್ದ ಮುಖ್ಯಮಂತ್ರಿ, ಸೂಕ್ತ ಕ್ರಮ ತೆಗೆದುಕೊಳ್ಳುವಂತೆ ಪೊಲೀಸ್ ಮಹಾನಿರ್ದೇಶಕರಿಗೆ ಸೂಚನೆ ನೀಡಿದ್ದರು.

ದಿನೇಶ್ ಗೂಳಿಗೌಡ

ಇದೀಗ ಎಲ್ಲ ಪೊಲೀಸ್ ಕಮಿಷನರ್‌ಗಳು, ಐಜಿಗಳು ಹಾಗೂ ಎಸ್‌ಪಿಗಳಿಗೆ ಸುತ್ತೋಲೆ ಹೊರಡಿಸಿರುವ ಪೊಲೀಸ್ ಮಹಾನಿರ್ದೇಶಕರು, ಮಾದಕ ದ್ರವ್ಯಗಳ ಮಾರಾಟ ಮತ್ತು ಸೇವನೆ ತಡೆಗಟ್ಟುವ ನಿಟ್ಟಿನಲ್ಲಿ ವಿದ್ಯಾರ್ಥಿಗಳಲ್ಲಿ ಜಾಗೃತಿ ಮೂಡಿಸಲು ಕ್ರಮ ತೆಗೆದುಕೊಳ್ಳುವಂತೆ ನಿರ್ದೇಶನ ನೀಡಿದ್ದಾರೆ.

ದಿನೇಶ ಗೂಳಿಗೌಡ ಅವರು ಬೆಂಗಳೂರು ನಗರ ಪೊಲೀಸ್ ಕಮಿಷನರ್‌ಗೆ ನೀಡಿದ್ದ ದೂರನ್ನು ಪರಿಗಣಿಸಿ ಮಾದಕ ವಸ್ತುಗಳಿಂದ ಆಗುವ ದುಷ್ಪರಿಣಾಮಗಳ ಕುರಿತು ವಿಧಾನಸೌಧ ಪೊಲೀಸ್ ಠಾಣೆಯ ವತಿಯಿಂದ ಎಸ್‌ಜೆಪಿ ಕಾಲೇಜಿನಲ್ಲಿ ಮಾರ್ಚ್ 13ರಂದು ಜಾಗೃತಿ ಕಾರ್ಯಕ್ರಮ ಆಯೋಜಿಸಲಾಗಿತ್ತು.

ಮತದಾನ ಜಾಗೃತಿ

ಮತದಾನದ ಬಗ್ಗೆ ಅರಿವು ಮೂಡಿಸಲು ಬುಧವಾರ ನಗರದಲ್ಲಿ ಹಮ್ಮಿಕೊಂಡಿದ್ದ ಅಂಗವಿಕಲರ ದ್ವಿಚಕ್ರ, ತ್ರಿಚಕ್ರ ವಾಹನ ಜಾಥಾಕ್ಕೆ ಸರ್ಕಾರದ ಮುಖ್ಯ ಕಾರ್ಯದರ್ಶಿ ರಜನೀಶ್ ಗೋಯಲ್ ಚಾಲನೆ ನೀಡಿದರು. ಬಿಬಿಎಂಪಿ ಆಯುಕ್ತ ತುಷಾರ್ ಗಿರಿನಾಥ್ ಭಾಗವಹಿಸಿದ್ದರು –ಪ್ರಜಾವಾಣಿ ಚಿತ್ರ

ಪರಿಚಯಸ್ಥರೇ ಕೃತ್ಯ ಎಸಗಿರುವ ಶಂಕೆ

ಅಪಾರ್ಟ್‌ಮೆಂಟ್‌ನಲ್ಲಿ ರೌಡಿ ಹತ್ಯೆ

ಪ್ರಜಾವಾಣಿ ವಾರ್ತೆ

ಬೆಂಗಳೂರು: ಬಾಣಸವಾಡಿ ಠಾಣೆ ವ್ಯಾಪ್ತಿಯಲ್ಲಿ ರೌಡಿ ದಿನೇಶ್‌ನನ್ನು ಮಾರಕಾಸ್ತ್ರಗಳಿಂದ ಕೊಚ್ಚಿ ಹತ್ಯೆ ಮಾಡಲಾಗಿದ್ದು, ಪರಿಚಯಸ್ಥರೇ ಕೃತ್ಯ ಎಸಗಿರುವ ಶಂಕೆ ವ್ಯಕ್ತವಾಗಿದೆ.

‘ರೌಡಿ ದಿನೇಶ್, ಹಲವು ಪ್ರಕರಣಗಳಲ್ಲಿ ಭಾಗಿಯಾಗಿದ್ದ. ಕಮ್ಮನಹಳ್ಳಿ ಬಳಿಯ ಸರ್ವೀಸ್ ಅಪಾರ್ಟ್‌ಮೆಂಟ್‌ವೊಂದಕ್ಕೆ ಸಹಚರರ ಜೊತೆ ಬುಧವಾರ ಬಂದಿದ್ದ. ಇದೇ ಸಂದರ್ಭದಲ್ಲಿ ದುಷ್ಕರ್ಮಿಗಳ ತಂಡ, ದಾಳಿ ಮಾಡಿ ಕೊಂದಿದೆ’ ಎಂದು ಪೊಲೀಸರು ಹೇಳಿದರು.

‘ತೀವ್ರ ಗಾಯಗೊಂಡಿದ್ದ ದಿನೇಶ್, ಸರ್ವೀಸ್ ಅಪಾರ್ಟ್‌ಮೆಂಟ್‌ನಲ್ಲಿಯೇ ಮೃತಪಟ್ಟಿದ್ದಾನೆ. ಸೋಫಾ ಮೇಲಿದ್ದ ಮೃತದೇಹವನ್ನು ಮರಣೋತ್ತರ ಪರೀಕ್ಷೆಗಾಗಿ ಆಸ್ಪತ್ರೆಗೆ ಸಾಗಿಸಲಾಗಿದೆ’ ಎಂದು ತಿಳಿಸಿದರು.

ಕೊಠಡಿ ಕೇಳಿ ಬಂದಿದ್ದರು: ‘ದಿನೇಶ್ ಹಾಗೂ ಸಹಚರರು, ಒಂದು ದಿನದ ಬಾಡಿಗೆಗೆಂದು ಕೊಠಡಿ ಕೇಳಿಕೊಂಡು ಸರ್ವೀಸ್ ಅಪಾರ್ಟ್‌ಮೆಂಟ್‌ಗೆ ಬಂದಿದ್ದರು. ಸೋಫಾ ಮೇಲೆ ದಿನೇಶ್ ಕುಳಿತಿದ್ದರು. ಇಬ್ಬರು, ಹಣ ಪಾವತಿಸಲು ಕೌಂಟರ್ ಬಳಿ ಹೋಗಿದ್ದರು’ ಎಂದು ಪೊಲೀಸರು ಹೇಳಿದರು.

‘ಸಹಚರರ ಬಳಿ ನಗದು ಇರಲಿಲ್ಲ. ಗೂಗಲ್ ಪೇ ಮಾಡುವುದಾಗಿ ಹೇಳಿದ್ದರು. ಆದರೆ, ನಗದು ಮಾತ್ರ ಸ್ವೀಕರಿಸುವುದಾಗಿ ಸಿಬ್ಬಂದಿ ತಿಳಿಸಿದ್ದರು. ಹಣ ಡ್ರಾ ಮಾಡಿಕೊಂಡು ಬರುವುದಾಗಿ ಹೇಳಿ ಸಹಚರರು, ಎಟಿಎಂ ಘಟಕಕ್ಕೆ ಹೋಗಿದ್ದರು. ಇದೇ ಸಂದರ್ಭದಲ್ಲಿ ಸರ್ವೀಸ್ ಅಪಾರ್ಟ್‌ಮೆಂಟ್‌ಗೆ ನುಗ್ಗಿದ್ದ ಆರೋಪಿಗಳು, ದಿನೇಶ್‌ನನ್ನು ಕೊಂದು ಪರಾರಿಯಾಗಿದ್ದಾರೆ’ ಎಂದು ತಿಳಿಸಿದರು.

ಸ್ನೇಹಿತನ ಕೊಂದು ಠಾಣೆಗೆ ದೂರು

ಬೆಂಗಳೂರು: ಗೋವಿಂದಪುರ ಠಾಣೆ ವ್ಯಾಪ್ತಿಯಲ್ಲಿ ರಾಜ್‌ಕುಮಾರ್ (35) ಎಂಬುವವರನ್ನು ಕುತ್ತಿಗೆಗೆ ಚಾಕುವಿನಿಂದ ಇರಿದು ಕೊಲೆ ಮಾಡಲಾಗಿದ್ದು, ಕೃತ್ಯ ಎಸಗಿರುವ ಆರೋಪದಡಿ ಇಬ್ಬರು ಸ್ನೇಹಿತರನ್ನು ಪೊಲೀಸರು ಬಂಧಿಸಿದ್ದಾರೆ.

‘ಉತ್ತರ ಪ್ರದೇಶದ ರಾಜ್‌ಕುಮಾರ್, ನಗರದಲ್ಲಿ ಪೇಟಿಂಗ್ ಕೆಲಸ ಮಾಡುತ್ತಿದ್ದರು. ಇವರ ಕೊಲೆ ಪ್ರಕರಣದಲ್ಲಿ ಸ್ನೇಹಿತರಾದ ಸೂರಜ್‌ಕುಮಾರ್ ಹಾಗೂ ಜೈಸಿಂಗ್‌ನನ್ನು ಬಂಧಿಸಲಾಗಿದೆ’ ಎಂದು ಪೊಲೀಸರು ಹೇಳಿದರು. ‘ರಾಜ್‌ಕುಮಾರ್‌ನನ್ನು ಕೊಂದಿದ್ದ ಆರೋಪಿಗಳೇ, ಅಮಾಯಕರಂತೆ ಠಾಣೆಗೆ ಬಂದು ದೂರು ನೀಡಿದ್ದರು. ‘ಅಪರಿಚಿತರು ನಮ್ಮ ಸ್ನೇಹಿತನನ್ನು ಕೊಂದಿದ್ದಾರೆ. ತನಿಖೆ ಮಾಡಿ’ ಎಂದಿದ್ದರು. ಸ್ಥಳಕ್ಕೆ ಹೋಗಿ ಶವ ಪರಿಶೀಲಿಸಲಾಗಿತ್ತು. ಕೆಲ ಪುರಾವೆಗಳು ಸಿಗುತ್ತಿದ್ದಂತೆ, ಇಬ್ಬರ ಮೇಲೂ ಅನುಮಾನ ಬಂದಿತ್ತು. ವಶಕ್ಕೆ ಪಡೆದು ವಿಚಾರಿಸಿದಾಗ ತಪ್ಪೊಪ್ಪಿಕೊಂಡರು’ ಎಂದು ತಿಳಿಸಿದರು.

ಆಟೊ ಅಕ್ರಮ ಜಪ್ತಿ: ಏಜೆಂಟರಿಬ್ಬರು ಬಂಧನ

ಬೆಂಗಳೂರು: ಸಾಲ ಮರು ಪಾವತಿ ಮಾಡಿಲ್ಲವೆಂದು ಚಾಲಕ ಜಗನ್ನಾಥ್ ಎಂಬುವವರ ಆಟೊವನ್ನು ಅಕ್ರಮವಾಗಿ ಜಪ್ತಿ ಮಾಡಿದ್ದ ಇಬ್ಬರು ಆರೋಪಿಗಳನ್ನು ತಿಲಕ್‌ನಗರ ಠಾಣೆ ಪೊಲೀಸರು ಬಂಧಿಸಿದ್ದಾರೆ.

‘ಬಿಟಿಎಂ ಲೇಔಟ್‌ನ ಆಟೊ ಚಾಲಕ ಜಗನ್ನಾಥ್, ಅಕ್ರಮ ಜಪ್ತಿ ಬಗ್ಗೆ ದೂರು ನೀಡಿದ್ದರು. ಆರೋಪಿಗಳಾದ ಸಲ್ಮಾನ್ ಹಾಗೂ ಪಠಾಣ್ ಅವರನ್ನು ಬಂಧಿಸಲಾಗಿದೆ. ಸದ್ಯ ಅವರಿಬ್ಬರು ನ್ಯಾಯಾಂಗ ಬಂಧನದಲ್ಲಿದ್ದಾರೆ’ ಎಂದು ಪೊಲೀಸ್ ಮೂಲಗಳು ಹೇಳಿವೆ. ‘ಬಂಧಿತರು, ಬ್ಯಾಂಕ್ ಸಾಲ ವಸೂಲಾತಿ ಏಜೆಂಟರು. ಕರ್ನಾಟಕ ರಿಕವರಿ ಏಜೆನ್ಸಿಯಲ್ಲಿ ಕೆಲಸ ಮಾಡುತ್ತಿದ್ದ ಮಾಹಿತಿ ಇದೆ’ ಎಂದು ಹೇಳಿವೆ.

ಸಾಲ ಮಾಡಿ ಆಟೊ ಖರೀದಿ: ‘ಜಗನ್ನಾಥ್, ಎಂ.ಜಿ. ರಸ್ತೆಯಲ್ಲಿರುವ ಫೈನಾನ್ಸ್ ಕಂಪನಿಯೊಂದರಲ್ಲಿ ₹ 2 ಲಕ್ಷ ಸಾಲ ಮಾಡಿ ಆಟೊ ಖರೀದಿಸಿದ್ದರು. ಅವರು 1 ತಿಂಗಳು ಸಾಲದ ಕಂತು ತುಂಬಿರಲಿಲ್ಲ. ಹೀಗಾಗಿ ಆರೋಪಿಗಳು, ಬಿಟಿಎಂ ಲೇಔಟ್ ಬಳಿ ಮಾರ್ಚ್ 25ರಂದು ಆಟೊ ಜಪ್ತಿ ಮಾಡಿದ್ದರು. ಆರೋಪಿಗಳು, ದೂರುದಾರರ ಧರ್ಮವನ್ನು ನಿಂದಿಸಿದ್ದರೆಂದು ಗೊತ್ತಾಗಿದೆ’ ಎಂದು ಮೂಲಗಳು ಹೇಳಿವೆ.

ಪಂಚಾಯಿತಿ ಅಭಿವೃದ್ಧಿ ಅಧಿಕಾರಿಯ ಜೀವನ ಕಂಡು ದಂಗಾದ ಲೋಕಾಯುಕ್ತ ಪೊಲೀಸರು

ಐಷಾರಾಮಿ ರೆಸಾರ್ಟ್‌ನಲ್ಲಿ ಪಿಡಿಒ ವಾಸ...

ಪ್ರಜಾವಾಣಿ ವಾರ್ತೆ

ರಾಮನಗರ: ಅಕ್ರಮವಾಗಿ ಆಸ್ತಿ ಸಂಪಾದಿಸಿದ ಆರೋಪದ ಮೇಲೆ ತಾಲ್ಲೂಕಿನ ಮಂಚನಾಯಕನಹಳ್ಳಿ ಗ್ರಾಮ ಪಂಚಾಯಿತಿಯ ಪಿಡಿಒ ಯತೀಶ್ ಚಂದ್ರ ಅವರ ಮನೆ ಹಾಗೂ ಕಚೇರಿ ಸೇರಿದಂತೆ ಅವರಿಗೆ ಸೇರಿದ ಐದು ಸ್ಥಳಗಳ ಮೇಲೆ ಬುಧವಾರ ದಾಳಿ ನಡೆಸಿರುವ ಲೋಕಾಯುಕ್ತ ಪೊಲೀಸರು ಅಧಿಕಾರಿಯ ಐಷಾರಾಮಿ ಜೀವನ ಕಂಡು ದಂಗಾಗಿದ್ದಾರೆ.

ಕರ್ತವ್ಯ ನಿಮಿತ್ತ ಅವರು ಬಿಡದಿ ಸಮೀಪದ ದುಬಾರಿ ಈಗಲ್ಟನ್ ರೆಸಾರ್ಟ್‌ನಲ್ಲಿ ಮನೆ ಬಾಡಿಗೆಗೆ ಪಡೆದು ವಾಸವಾಗಿದ್ದರು. ಬೆಳಿಗ್ಗೆಯೇ ರೆಸಾರ್ಟ್‌ಗೆ ತೆರಳಿದ ಪೊಲೀಸರು ಯತೀಶ್ ಅವರ ವಿಚಾರಣೆ ನಡೆಸಿದರು. ಮನೆ ಜೊತೆಗೆ ಕಚೇರಿಯನ್ನು ಪರಿಶೀಲಿಸಿ ದಾಖಲೆ ಹಾಗೂ ಕಡತ ವಶಕ್ಕೆ ಪಡೆದಿದ್ದಾರೆ.

ಯತೀಶ್ ಅವರ ಮಾಸಿಕ ಸಂಬಳ ಮತ್ತು ರೆಸಾರ್ಟ್‌ನಲ್ಲಿ ಪಾವತಿಸುತ್ತಿರುವ ಬಾಡಿಗೆ ಮೊತ್ತದ ನಡುವಣ ವ್ಯತ್ಯಾಸ ಪರಿಶೀಲಿಸಲಾಗುತ್ತಿದೆ. ಯತೀಶ್ ಅವರ ಇತರ ಆದಾಯದ ಮೂಲಗಳನ್ನು ಸಹ ಪರಿಶೀಲನೆ ನಡೆಸಲಾಗುತ್ತಿದೆ. ಯತೀಶ್ ಸಹೋದ್ಯೋಗಿಯಾಗಿರುವ ಚನ್ನಪಟ್ಟಣ ತಾಲ್ಲೂಕಿನ ಮೈಲನಾಯಕನಹಳ್ಳಿ ಪಿಡಿಒ ಒಬ್ಬರ ಚನ್ನಪಟ್ಟಣದಲ್ಲಿರುವ ಮನೆ ಮೇಲೂ ಪೊಲೀಸರು ದಾಳಿ ನಡೆಸಿದ್ದಾರೆ. ಮನೆಯಲ್ಲಿ ಪರಿಶೀಲನೆ ನಡೆಸಿದ ಪೊಲೀಸರು, ಅವರನ್ನು ವಿಚಾರಣೆಗೆ ಒಳಪಡಿಸಿದ್ದಾರೆ ಎಂದು ಮೂಲಗಳು ತಿಳಿಸಿವೆ.

ಮುಖ್ಯಾಂಶಗಳು

- ಪಿಡಿಒ ಮನೆಯ ಮೇಲೆ ಲೋಕಾಯುಕ್ತ ದಾಳಿ
- ಏಕಕಾಲಕ್ಕೆ ಐದು ಕಡೆಗಳಲ್ಲಿ ಅಧಿಕಾರಿಗಳಿಂದ ದಾಳಿ
- ತೆರಿಗೆ ಹಣದ ದುರುಪಯೋಗ ಮಾಡಿಕೊಂಡ ಆರೋಪ

ಯತೀಶ್ ಚಂದ್ರ

ಕೋಟ್ಯಂತರ ರೂಪಾಯಿ ಅವ್ಯವಹಾರ: 'ಪಂಚಾಯಿತಿಯಲ್ಲಿ ವಾರ್ಷಿಕ ಸುಮಾರು ₹60 ಕೋಟಿ ತೆರಿಗೆ ವಸೂಲಿಯಾಗುತ್ತದೆ. ಈ ಹಣವನ್ನು ಯತೀಶ್ ದುರುಪಯೋಗ ಮಾಡಿಕೊಂಡಿದ್ದಾರೆ. ಕುಡಿಯುವ ನೀರು ಸಾಮಗ್ರಿ ಖರೀದಿಯಲ್ಲಿ ಅಕ್ರಮ, ಲೇಔಟ್ ಮಾಡದ ಜಾಗಕ್ಕೆ ಇ- ಖಾತೆ ನೀಡುವುದು ಸೇರಿದಂತೆ ಹಲವು ಅವ್ಯವಹಾರ ನಡೆಸಿ ಕೋಟ್ಯಂತರ ರೂಪಾಯಿ ಲೂಟಿ ಮಾಡಿದ್ದಾರೆ. ಈ ಕುರಿತು ಉನ್ನತ ಮಟ್ಟದ ತನಿಖೆಯಾಗಬೇಕು' ಎಂದು ಮಂಚನಾಯಕನಹಳ್ಳಿ ಗ್ರಾಮ ಪಂಚಾಯಿತಿ ಮಾಜಿ ಸದಸ್ಯ ಶೇಷಗಿರಿಹಳ್ಳಿ ಶಿವಣ್ಣ ಒತ್ತಾಯಿಸಿದರು.

'ಯತೀಶ್ ಅಕ್ರಮವಾಗಿ ಹಣ ಸಂಪಾದಿಸುತ್ತಿರುವ ಕುರಿತು ತಾಲ್ಲೂಕು ಪಂಚಾಯಿತಿ ಇ.ಒ ಮತ್ತು ಜಿಲ್ಲಾ ಪಂಚಾಯಿತಿ ಸಿಇಒ ಅವರಿಗೆ ದೂರು ಕೊಟ್ಟಿದ್ದೆ. ಆದರೆ, ಇಬ್ಬರೂ ಕ್ರಮ ಕೈಗೊಳ್ಳಲಿಲ್ಲ. ಕಡೆಗೆ ಲೋಕಾಯುಕ್ತಕ್ಕೆ ದೂರು ಕೊಟ್ಟಿದ್ದೆ. ಪೊಲೀಸರೇ ದಾಳಿ ನಡೆಸಿದ್ದಾರೆ' ಎಂದರು.

ಮನೆಯಲ್ಲಿ ₹2.23 ಕೋಟಿ ಆಸ್ತಿ ಪತ್ತೆ (ಮೈಸೂರು ವರದಿ): ರಾಮನಗರ ತಾಲ್ಲೂಕಿನ ಬಿಡದಿ ಹೋಬಳಿಯ ಮಂಚನಾಯಕಹಳ್ಳಿ ಪಿಡಿಒ ಯತೀಶ್ ಅವರ ಇಲ್ಲಿನ ರಾಘವೇಂದ್ರ ನಗರದ ಮನೆ ಮೇಲೆ ಬುಧವಾರ ಬೆಳಿಗ್ಗೆ ದಿಢೀರ್ ದಾಳಿ ನಡೆಸಿದ ಲೋಕಾಯುಕ್ತ ಪೊಲೀಸರು ₹ 2.23 ಕೋಟಿ ಮೌಲ್ಯದ ಆಸ್ತಿ ಪತ್ತೆ ಮಾಡಿದ್ದಾರೆ.

ಪಿಡಿಒ ಯತೀಶ್ ಅವರ ಮನೆಯಲ್ಲಿ ಪತ್ತೆಯಾದ ಚಿನ್ನಾಭರಣ ಹಾಗೂ ನಗದು

ಯತೀಶ್ ಅವರ ಬಳಿ ₹ 1.16 ಕೋಟಿ ಮೌಲ್ಯದ 4 ನಿವೇಶನಗಳಿದ್ದು, 2 ನಿವೇಶನಗಳಲ್ಲಿ ಮನೆ ನಿರ್ಮಾಣ ಕಾಮಗಾರಿ ನಡೆಸಿದ್ದಾರೆ. ಮನೆಯೊಂದರ ಮೌಲ್ಯ ₹ 92 ಲಕ್ಷವಾಗಿದೆ.

'ಚರಾಸ್ತಿಯಲ್ಲಿ ₹ 5.31 ಲಕ್ಷ ನಗದು, ₹ 24.83 ಲಕ್ಷ ಮೌಲ್ಯದ 448 ಗ್ರಾಂ ಚಿನ್ನ, ₹ 71,800 ಮೌಲ್ಯದ 415 ಗ್ರಾಂ ಬೆಳ್ಳಿ ವಶಕ್ಕೆ ಪಡೆಯಲಾಗಿದೆ. ₹ 22.98 ಲಕ್ಷ ಮೌಲ್ಯದ ವಾಹನಗಳು ಹಾಗೂ ₹ 39.59 ಲಕ್ಷ ಮೌಲ್ಯದ ಇತರ ಬೆಲೆಬಾಳುವ ವಸ್ತುಗಳೂ ಇವೆ' ಎಂದು ಪೊಲೀಸರು ತಿಳಿಸಿದ್ದಾರೆ.

ಕಾರ್ಯಾಚರಣೆಯಲ್ಲಿ ಎಸ್‌ಪಿ ಸಜಿತ್, ಡಿವೈಎಸ್‌ಪಿ ಕೃಷ್ಣಯ್ಯ, ಇನ್‌ಸ್ಪೆಕ್ಟರ್ ರೂಪಶ್ರೀ ಪಾಲ್ಗೊಂಡಿದ್ದರು.

ಯಡಿಯೂರಪ್ಪ ವಿರುದ್ಧ ಪೋಕ್ಸೊ: ತನಿಖೆ ಚುರುಕು

ಪ್ರಜಾವಾಣಿ ವಾರ್ತೆ

ಬೆಂಗಳೂರು: ಹದಿನೇಳು ವರ್ಷದ ಬಾಲಕಿ ಮೇಲೆ ಲೈಂಗಿಕ ದೌರ್ಜನ್ಯ ಎಸಗಿರುವ ಆರೋಪದಡಿ ಬಿಜೆಪಿ ಸಂಸದೀಯ ಮಂಡಳಿ ಸದಸ್ಯ ಬಿ.ಎಸ್. ಯಡಿಯೂರಪ್ಪ ವಿರುದ್ಧ ದಾಖಲಾಗಿರುವ ಪ್ರಕರಣದ ತನಿಖೆ ಚುರುಕುಗೊಳಿಸಿರುವ ಸಿಐಡಿ ಅಧಿಕಾರಿಗಳು, ಹಲವು ಪುರಾವೆಗಳನ್ನು ಸಂಗ್ರಹಿಸಿದ್ದಾರೆ.

ಯಡಿಯೂರಪ್ಪ

ಯಡಿಯೂರಪ್ಪ ಅವರ ಮನೆಯಲ್ಲಿ ಫೆಬ್ರುವರಿ 2ರಂದು ನಡೆದಿದ್ದ ಕೃತ್ಯದ ಬಗ್ಗೆ ಬಾಲಕಿಯ ತಾಯಿ ದೂರು ನೀಡಿದ್ದರು. ಮಕ್ಕಳ ಮೇಲಿನ ಲೈಂಗಿಕ ದೌರ್ಜನ್ಯ ತಡೆ (ಪೋಕ್ಸೊ) ಕಾಯ್ದೆ ಸೆಕ್ಷನ್ 8 ಹಾಗೂ ಐಪಿಸಿ ಸೆಕ್ಷನ್ 354(ಎ) ಅಡಿ ಸದಾಶಿವನಗರ ಠಾಣೆಯಲ್ಲಿ ಮಾರ್ಚ್ 14ರಂದು ಎಫ್‌ಐಆರ್ ದಾಖಲಾಗಿತ್ತು.

'ರಾಜ್ಯ ಸರ್ಕಾರದ ಆದೇಶದಂತೆ, ಸದಾಶಿವನಗರ ಠಾಣೆ ಪೊಲೀಸರಿಂದ ಪ್ರಕರಣದ ಕಡತಗಳನ್ನು ಸುಪರ್ದಿಗೆ ಪಡೆದು ತನಿಖೆ ಆರಂಭಿಸಲಾಗಿದೆ. ಯಡಿಯೂರಪ್ಪ ವಿರುದ್ಧದ ಆರೋಪಕ್ಕೆ ಸಂಬಂಧಪಟ್ಟಂತೆ ಬಾಲಕಿ ಹಾಗೂ ಅವರ ತಾಯಿಯಿಂದ ಮಾಹಿತಿ ಪಡೆಯಲಾಗುತ್ತಿದೆ' ಎಂದು ಸಿಐಡಿ ಮೂಲಗಳು ಹೇಳಿವೆ.

'ಪ್ರಕರಣಕ್ಕೆ ಸಂಬಂಧಪಟ್ಟಂತೆ ಕೆಲ ವಿಡಿಯೊಗಳು ಲಭ್ಯವಾಗಿವೆ. ಅವುಗಳ ಪರಿಶೀಲನೆ ನಡೆಸಲಾಗುತ್ತಿದೆ. ಜೊತೆಗೆ, ಹಲವರ ಹೇಳಿಕೆ ದಾಖಲಿಸಿಕೊಳ್ಳಲಾಗಿದೆ. ಸಿಆರ್‌ಪಿಸಿ 164 ಅಡಿ ಬಾಲಕಿಯ ಹೇಳಿಕೆ ದಾಖಲಿಸುವ ಪ್ರಕ್ರಿಯೆ ಆರಂಭವಾಗಿದೆ' ಎಂದು ತಿಳಿಸಿವೆ.

'ಪುರಾವೆ ಆಧರಿಸಿ ಆರೋಪಿಯ ವಿಚಾರಣೆ ನಡೆಸಲಾಗುವುದು. ಇದಾದ ನಂತರ, ಕಾನೂನು ಕ್ರಮ ಜರುಗಿಸಲಾಗುವುದು' ಎಂದು ಮೂಲಗಳು ಹೇಳಿವೆ.

ಇ.ಒ ಬಳಿ ₹1.30 ಕೋಟಿ ಆಸ್ತಿ

ಪ್ರಜಾವಾಣಿ ವಾರ್ತೆ

ಮಡಿಕೇರಿ: ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕು ಪಂಚಾಯಿತಿ ಕಾರ್ಯನಿರ್ವಾಹಕ ಅಧಿಕಾರಿಯಾಗಿದ್ದ, ಚುನಾವಣಾ ಕಾರಣಕ್ಕೆ ಕಡಬಕ್ಕೆ ವರ್ಗಾವಣೆಗೊಂಡಿರುವ ಬಿ.ವಿ.ಜಯಣ್ಣ ಅವರ ಕುಶಾಲನಗರದ ಮನೆ ಹಾಗೂ ಕಡಬದ ಕಚೇರಿಯಲ್ಲಿ ಒಟ್ಟು ₹ 1.30 ಕೋಟಿ ಮೌಲ್ಯದ ಆಸ್ತಿ ಪತ್ತೆಯಾಗಿದೆ.

ಅದರಲ್ಲಿ, ₹ 9.20 ಲಕ್ಷ ನಗದು, ₹1.09 ಕೋಟಿ ಮೌಲ್ಯದ 3 ಮನೆಗಳು, 5 ಎಕರೆ ಭೂಮಿ, 1 ನಿವೇಶನ, ₹ 8.63 ಲಕ್ಷ ಮೌಲ್ಯದ ಚಿನ್ನಾಭರಣ, ₹ 25.70 ಲಕ್ಷ ಮೌಲ್ಯದ 3 ಕಾರುಗಳು ಸೇರಿವೆ.

ಜಿಲ್ಲಾ ಪಂಚಾಯಿತಿಯ ಸಹಾಯಕ ಎಂಜನಿಯರ್ ಎಂ.ಎಂ.ಫಯಾಜ್ ಅಹಮ್ಮದ್ ಅವರ ಕುಶಾಲನಗರದ ಮನೆ, ಪಿರಿಯಾಪಟ್ಟಣ ತಾಲ್ಲೂಕಿನ ರಾಣಿಗೇಟ್‌ನ ತೋಟದ ಮನೆ, ಮಡಿಕೇರಿಯ ಸಂಬಂಧಿಕರ ಮನೆ ಸೇರಿದಂತೆ ಒಟ್ಟು 5 ಸ್ಥಳಗಳಲ್ಲಿ ₹ 1.69 ಕೋಟಿ ಮೌಲ್ಯದ ಆಸ್ತಿ ಪತ್ತೆಯಾಗಿದೆ.

ಅದರಲ್ಲಿ ₹ 75 ಲಕ್ಷ ಮೌಲ್ಯದ 2 ಮನೆ, ₹ 40 ಲಕ್ಷ ಮೌಲ್ಯದ 4 ಎಕರೆ ಕೃಷಿ ಭೂಮಿ, ₹ 48,070 ನಗದು, ₹95,800, ಮೌಲ್ಯದ ಚಿನ್ನಾಭರಣ, ₹24.75 ಲಕ್ಷ ಮೌಲ್ಯದ ವಾಹನಗಳು ಸೇರಿವೆ ಎಂದು ಪೊಲೀಸರು ತಿಳಿಸಿದ್ದಾರೆ.

ಲೋಕಾಯುಕ್ತ ಡಿವೈಎಸ್‌ಪಿ ಪವನ್‌ಕುಮಾರ್, ಮ್ಯಾಥ್ಯೂ ಥಾಮಸ್, ಲೋಹಿತ್, ಎಂ.ಆರ್ ಗೌತಮ್, ಇನ್‌ಸ್ಪೆಕ್ಟರ್‌ಗಳಾದ ಲೋಕೇಶ್, ಅನಂತರಾಮ್, ಸಿಬ್ಬಂದಿಯಾದ ಮಂಜು, ಲೋಹಿತ್, ಸಲಾಹುದ್ದೀನ್, ಮಾಲಿಂಗಸ್ವಾಮಿ ನೇತೃತ್ವದಲ್ಲಿ ಈ ದಾಳಿ ನಡೆದಿದೆ.

ಪತ್ತೆಯಾಗಿರುವ ಅಕ್ರಮ ಆಸ್ತಿಗಳ ವಿವರ

ಅಧಿಕಾರಿ ಹೆಸರು	ಹುದ್ದೆ	ಅಕ್ರಮ ಆಸ್ತಿಗಳ ಮೌಲ್ಯ
ನಾಗರಾಜಪ್ಪ	ಸಹಾಯಕ ನಿರ್ದೇಶಕ, ಮಾಗಡಿ ಯೋಜನಾ ಪ್ರಾಧಿಕಾರ	₹ 11.13 ಕೋಟಿ
ರಂಗನಾಥ್ ಎಸ್.ಪಿ.	ಮುಖ್ಯ ಎಂಜಿನಿಯರ್, ಬಿಬಿಎಂಪಿ	₹ 5.28 ಕೋಟಿ
ಶಿವಕುಮಾರಸ್ವಾಮಿ	ಇಇ, ಕಾರಂಜಾ ಯೋಜನೆ	₹ 2.78 ಕೋಟಿ
ಪ್ರಕಾಶ್ ರೇವಣ್ಕರ್	ಕಿರಿಯ ಎಂಜಿನಿಯರ್	₹ 2.59 ಕೋಟಿ
ರೂಪಾ ಎಂ.	ಅಬಕಾರಿ ಡಿಸಿ, ಉಡುಪಿ	₹ 2.26 ಕೋಟಿ
ಯತೀಶ್	ಪಿಡಿಒ, ಮಂಚನಾಯಕನಹಳ್ಳಿ, ಬಿಡದಿ	₹ 2.23 ಕೋಟಿ
ಷಣ್ಮುಖಪ್ಪ ಭಿಮ್ಮಾ ತೀರ್ಥ	ಎಆರ್‌ಟಿಒ, ಜಮಖಂಡಿ	₹ 2.17 ಕೋಟಿ
ಮಹೇಶ್ ಚಂದ್ರಯ್ಯ ಹಿರೇಮಠ	ಆರ್‌ಎಫ್‌ಒ, ಧಾರವಾಡ	₹1.93 ಕೋಟಿ
ಎಂ.ಎಂ. ಫಯಾಜ್ ಅಹಮದ್	ಎಇ, ಸೋಮವಾರಪೇಟೆ ತಾ.ಪಂ	₹ 1.69 ಕೋಟಿ
ಬಿ.ವಿ.ಜಯಣ್ಣ	ಇ.ಒ, ಸೋಮವಾರಪೇಟೆ ತಾ.ಪಂ.	₹1.30 ಕೋಟಿ
ಸದಾಶಿವಯ್ಯ	ಇಇ,ಕೆಆರ್‌ಐಡಿಎಲ್, ಚಿಕ್ಕಬಳ್ಳಾಪುರ	₹ 1.27 ಕೋಟಿ
ಸದಾಶಿವ ಜಯಪ್ಪ	ಕಾರ್ಯದರ್ಶಿ, ನಿಡಗುಂದಿ ಗ್ರಾ.ಪಂ.	₹ 93.71 ಲಕ್ಷ
ಕೃಷ್ಣೇಗೌಡ	ಎಸ್‌ಡಿಎ, ಅಗಸನಪುರ ಗ್ರಾ.ಪಂ., ಮಳವಳ್ಳಿ	₹ 21.89 ಲಕ್ಷ

'ಎಕ್ಸ್‌ಪ್ರೆಸ್'ಗೆ ₹ 10 ಲಕ್ಷ ದಂಡ ವಿಧಿಸಿದ ಹೈಕೋರ್ಟ್

ಪ್ರಜಾವಾಣಿ ವಾರ್ತೆ

ಬೆಂಗಳೂರು: ಜಿಲ್ಲಾ ನ್ಯಾಯಾಧೀಶರೊಬ್ಬರ ವಿರುದ್ಧದ ಆರೋಪಗಳಿಗೆ ಸಂಬಂಧಿಸಿದಂತೆ ಹೈಕೋರ್ಟ್ ಆಡಳಿತಾತ್ಮಕ ಸಮಿತಿಯ ತನಿಖಾ ವರದಿಯನ್ನು ಪ್ರಕಟಿಸಿದ ಆರೋಪಕ್ಕೆ ಸಂಬಂಧಿಸಿದಂತೆ 'ದಿ ನ್ಯೂ ಇಂಡಿಯನ್ ಎಕ್ಸ್‌ಪ್ರೆಸ್' ಆಂಗ್ಲ ದಿನಪತ್ರಿಕೆಗೆ ಹೈಕೋರ್ಟ್ ₹ 10 ಲಕ್ಷ ದಂಡ ವಿಧಿಸಿದೆ.

ಹೈಕೋರ್ಟ್ ಆಡಳಿತಾತ್ಮಕ ಸಮಿತಿಯ ವರದಿ ಪತ್ರಿಕೆಗೆ ಹೇಗೆ ಸೋರಿಕೆಯಾಯಿತು ಎಂಬ ಬಗ್ಗೆ ವಿಚಾರಣೆ ನಡೆಸುವಂತೆಯೂ ಆದೇಶಿಸಿದೆ.

ಪ್ರಕರಣಕ್ಕೆ ಸಂಬಂಧಿಸಿದಂತೆ ಆರೋಪ ಎದುರಿಸುತ್ತಿದ್ದ ಜಿಲ್ಲಾ ನ್ಯಾಯಾಧೀಶರು (ಈಗ ನಿವೃತ್ತರು) ಸಲ್ಲಿಸಿದ್ದ ರಿಟ್ ಅರ್ಜಿಯನ್ನು ತಿರಸ್ಕರಿಸಿರುವ ನ್ಯಾಯಮೂರ್ತಿ ಎನ್.ಎಸ್. ಸಂಜಯಗೌಡ ಅವರಿದ್ದ ಏಕಸದಸ್ಯ ನ್ಯಾಯಪೀಠ, 'ಪತ್ರಿಕೆಯ ಮಾಲೀಕರು ದಂಡದ ಮೊತ್ತವನ್ನು ಎರಡು ತಿಂಗಳ ಒಳಗಾಗಿ ಕಾನೂನು ಸೇವೆಗಳ ಪ್ರಾಧಿಕಾರಕ್ಕೆ ಪಾವತಿಸಬೇಕು' ಎಂದು ಆದೇಶಿಸಿದೆ.

'ನ್ಯಾಯಾಂಗ ಅಧಿಕಾರಿಗೆ ಸಂಬಂಧಿಸಿದ ಸೂಕ್ಷ್ಮ ಪ್ರಕರಣದ ಕುರಿತು ಪತ್ರಿಕೆ ಅರೆಬೆಂದ ಅಂಶಗಳನ್ನು ಒಳಗೊಂಡ ವರದಿಯನ್ನು ಪ್ರಕಟಿಸಬಾರದಿತ್ತು. ಪತ್ರಿಕೆ ವೃತ್ತಿಪರವಾಗಿ ನಡೆದುಕೊಳ್ಳದೇ ಇರುವುದರಿಂದ ಅರ್ಜಿದಾರರಿಗೆ ಅಪಾರ ನಷ್ಟವಾಗಿದೆ. ನ್ಯಾಯಾಂಗ ಅಧಿಕಾರಿಯ ನಡತೆಯನ್ನು ನಿರ್ಧರಿಸುವ ಸಂಪೂರ್ಣ ನ್ಯಾಯಾಂಗ ಪ್ರಕ್ರಿಯೆಗೆ ವರದಿಯಿಂದ ಹಿನ್ನಡೆಯಾಗಿದೆ' ಎಂದು ನ್ಯಾಯಪೀಠ ಅಭಿಪ್ರಾಯಪಟ್ಟಿದೆ.

'ಪತ್ರಿಕೆ ಜವಾಬ್ದಾರಿಯುತವಾಗಿ ನಡೆದುಕೊಂಡಿಲ್ಲ. ಪತ್ರಿಕೆಯ ವರದಿಗಾರ ಮತ್ತು ಸಂಪಾದಕರ ನಡೆ ಒಪ್ಪಿತ ರೀತಿಯಲ್ಲಿ ಇಲ್ಲ' ಎಂದು ಪೀಠವು ಹೇಳಿದೆ.

'ಆಕ್ಷೇಪಾರ್ಹ ವರದಿ ಪ್ರಕಟಿಸುವುದಕ್ಕೂ ಆರು ತಿಂಗಳ ಮೊದಲೇ ಹೈಕೋರ್ಟ್ ವರದಿಯನ್ನು ಒಪ್ಪದೇ ಇರಲು ನಿರ್ಧರಿಸಿತ್ತು. ಆದರೆ, ಪತ್ರಿಕೆ ತನ್ನ ವರದಿಯಲ್ಲಿ ಈ ಮಹತ್ವದ ಅಂಶವನ್ನು ಉಲ್ಲೇಖ ಮಾಡಿಲ್ಲ' ಎಂದು ನ್ಯಾಯಪೀಠ ಹೇಳಿದೆ.

ಫಾರಂ ನಂ. ಎನ್‌ಸಿಎಲ್‌ಟಿ 3ಎ

ಕಂಪನಿಗಳ ಕಾಯ್ದೆ, 2013ರ ವಿಷಯದಲ್ಲಿ ಮತ್ತು ಅವೊನ್ ಪ್ಲಾಸ್ಟಿಕ್ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್ ಜೊತೆಗೆ ತುಂಗಾ ಪಿವಿಸಿ ಪೈಪ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿ ಹಾಗೂ ಅವರವರ ಷೇರುದಾರರ ವಿಲೀನ ಯೋಜನೆಯ ವಿಷಯದಲ್ಲಿ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧಿಕರಣ ಬೆಂಗಳೂರು ಪೀಠ ಬೆಂಗಳೂರು ಇವರ ಸಮ್ಮುಖದಲ್ಲಿ ಸಲ್ಲಿಸಲಾಗಿರುವ ಅರ್ಜಿಯನ್ನು ವಿವರಿಸುವ ಜಾಹೀರಾತು

ಸಿಪಿ (ಸಿಎಎ) ನಂ. 08//ಬಿ1312024

ಸಿ/ಡಬ್ಲ್ಯು

ಸಿಎ (ಸಿಎಎ) ನಂ. 38/ಬಿ1312023

ತುಂಗಾ ಪಿವಿಸಿ ಪೈಪ್ಸ್ ಪ್ರೈವೇಟ್ ಲಿಮಿಟೆಡ್ GIN: U25191KA1992PTC013685

ನೋಂದಾಯಿತ ಕಚೇರಿ ವಿಳಾಸ: ಪ್ಲಾಟ್ ನಂ. 134, ಬೊಮ್ಮಸಂದ್ರ ಕೈಗಾರಿಕಾ ಪ್ರದೇಶ, ಹೊಸೂರು ರಸ್ತೆ, ಬೆಂಗಳೂರು – 562158

... ಅರ್ಜಿದಾರ ಕಂಪನಿ ನಂ. 1/ಟ್ರಾನ್ಸ್‌ಫೆರರ್ ಕಂಪನಿ

ಅವೊನ್ ಪ್ಲಾಸ್ಟಿಕ್ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್ ಸಿಐಎನ್: GIN: U25209KA1994PTC015521, ನೋಂದಾಯಿತ ಕಚೇರಿ ವಿಳಾಸ: ಪ್ಲಾಟ್ ನಂ. 53, ಬೊಮ್ಮಸಂದ್ರ, ಜಿಗಣಿ ಲಿಂಕ್ ರಸ್ತೆ, ಆನೇಕಲ್ ತಾಲ್ಲೂಕು, ಬೆಂಗಳೂರು – 562106

... ಅರ್ಜಿದಾರ ಕಂಪನಿ ನಂ. 2/ಟ್ರಾನ್ಸ್‌ಫೆರಿ ಕಂಪನಿ

ನೋಟಿಸ್

ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 230 ಮತ್ತು 232ರ ಅಡಿಯಲ್ಲಿ ಅರ್ಜಿ ಸಲ್ಲಿಕೆಯಾಗಿದ್ದು, ಅವೊನ್ ಪ್ಲಾಸ್ಟಿಕ್ ಇಂಡಸ್ಟ್ರೀಸ್ ಪ್ರೈವೇಟ್ ಲಿಮಿಟೆಡ್ ('ಅರ್ಜಿದಾರ ಕಂಪನಿ ನಂ. 2/ಟ್ರಾನ್ಸ್‌ಫೆರಿ ಕಂಪನಿ') ಜೊತೆಗೆ ತುಂಗಾ ಪಿವಿಸಿ ಪೈಪ್ಸ್ ಪ್ರೈವೇಟ್ ಲಿಮಿಟೆಡ್ ಕಂಪನಿ ('ಅರ್ಜಿದಾರ ಕಂಪನಿ ನಂ. 1/ಟ್ರಾನ್ಸ್‌ಫೆರರ್ ಕಂಪನಿ') (ಜಂಟಿಯಾಗಿ 'ಅರ್ಜಿದಾರ ಕಂಪನಿಗಳು' ಎನ್ನಲಾಗುವ) ಹಾಗೂ ಅವರವರ ಷೇರುದಾರರ ವಿಲೀನ ಯೋಜನೆಯ ಮಂಜೂರಾತಿಗಾಗಿ, 14.02.2024 ರಂದು ಅರ್ಜಿದಾರ ಕಂಪನಿಗಳು ಅರ್ಜಿ ಸಲ್ಲಿಸಿರುತ್ತವೆ ಮತ್ತು ಸದರಿ ಅರ್ಜಿಯು 13.03.2024 ರಂದು ಪ್ರವೇಶಾತಿ ಪಡೆದಿದ್ದು, ಮಾನ್ಯ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಾಧಿಕರಣ, ಬೆಂಗಳೂರು ಪೀಠ, ಬೆಂಗಳೂರು ಇವರ ಸಮಕ್ಷಮದಲ್ಲಿ 30.05.2024 ರಂದು ವಿಚಾರಣೆಗೆ ನಿಗದಿಯಾಗಿರುತ್ತದೆ. ಸದರಿ ಅರ್ಜಿಯನ್ನು ಯಾರಾದರೂ ಬೆಂಬಲಿಸಲು ಅಥವಾ ವಿರೋಧಿಸಲು ಬಯಸುವವರು, ತಮ್ಮ ಉದ್ದೇಶದ ನೋಟಿಸ್‌ನ್ನು ಲಿಖಿತ ರೂಪದಲ್ಲಿ ನಮೂದಿಸಿ, ಅದಕ್ಕೆ ತನ್ನ ಅಥವಾ ತಮ್ಮ ವಕೀಲರ ಸಹಿ ಹಾಕಿ, ಜೊತೆಗೆ ತಮ್ಮ ಸಂಪೂರ್ಣ ಹೆಸರು ಮತ್ತು ವಿಳಾಸವನ್ನು ನಮೂದಿಸಿ, ವಿಚಾರಣೆಗೆ ನಿಗದಿಯಾಗಿರುವ ದಿನಾಂಕಕ್ಕೆ ಎರಡು ದಿನ ಮುಂಚಿತವಾಗಿ ಅರ್ಜಿದಾರರ ವಕೀಲರಿಗೆ, ಇಲ್ಲಿ ಕೆಳಗೆ ನೀಡಲಾಗಿರುವ ಅವರ ವಿಳಾಸಕ್ಕೆ ತಲುಪುವಂತೆ ರವಾನಿಸತಕ್ಕದ್ದು. ಒಂದು ವೇಳೆ ಅರ್ಜಿಯನ್ನು ವಿರೋಧಿಸಲು ಬಯಸುವಿರಾದಲ್ಲಿ, ಅಂತಹವರು ತಮ್ಮ ನೋಟಿಸ್ ಜೊತೆಗೆ ತಮ್ಮ ವಿರೋಧದ ಹಿನ್ನಲೆಗಳನ್ನು ಉಲ್ಲೇಖಿಸಿರುವ ಒಂದು ಅಫಿಡವಿಟ್ ಕೂಡ ಲಗತ್ತಿಸಿ ರವಾನಿಸತಕ್ಕದ್ದು. ಈ ಕೆಳಗೆ ಸಹಿ ಹಾಕಿರುವವರು ಮೇಲ್ಕಂಡ ಅರ್ಜಿಯ ಪ್ರತಿಗಳನ್ನು ಒದಗಿಸುತ್ತಿದ್ದು, ಅಗತ್ಯವಿರುವವರು ನಿಗದಿತ ಶುಲ್ಕ ಪಾವತಿಸಿ ಅವರಿಂದ ಅರ್ಜಿ ಪ್ರತಿ ಪಡೆದುಕೊಳ್ಳಬಹುದು.

ದಿನಾಂಕ: 28.03.2024

ಸ್ಥಳ: ಬೆಂಗಳೂರು

ಸಾಜಿ ಪಿ ಜಾನ್

ಎಸ್‌ಪಿಜೆ ಲೀಗಲ್, ವಕೀಲರು ಯೂನಿಟ್ ನಂ.306, 3ನೇ ಮಹಡಿ, ನಂ.30, ಪ್ರೆಸ್ಟೀಜ್ ಮೆರಿಡಿಯನ್2, ಎಂ.ಜಿ.ರೋಡ್, ಬೆಂಗಳೂರು – 560001.ಫೋನ್: +91 9845209798, ಇ–ಮೇಲ್: saji©spi

₹36 ಕೋಟಿ ಮೌಲ್ಯದ ಅಕ್ರಮ ಆಸ್ತಿ ಪತ್ತೆ

ಒಂದನೇ ಪುಟದಿಂದ...

ಬಿಬಿಎಂಪಿ ಯಲಹಂಕ ವಲಯದ ಮುಖ್ಯ ಎಂಜಿನಿಯರ್ ರಂಗನಾಥ್ ಎಸ್.ಪಿ. ಮನೆಯಲ್ಲಿ ₹ 7 ಲಕ್ಷ ನಗದು ವಶಪಡಿಸಿಕೊಳ್ಳಲಾಗಿದೆ. ಈ ಅಧಿಕಾರಿ ತಲಾ ಎರಡು ನಿವೇಶನ, ಎರಡು ಮನೆ ಮತ್ತು ಎರಡು ವಾಣಿಜ್ಯ ಸಂಕೀರ್ಣ ಹೊಂದಿದ್ದಾರೆ.

ಕೊಡಗು ಜಿಲ್ಲೆಯ ಸೋಮವಾರಪೇಟೆ ತಾಲ್ಲೂಕು ಪಂಚಾಯಿತಿಯ ಕಾರ್ಯನಿರ್ವಾಹಕ ಅಧಿಕಾರಿ ಬಿ.ವಿ. ಜಯಣ್ಣ ಮನೆಯಲ್ಲಿ ₹ 9.20 ಲಕ್ಷ ನಗದು ಪತ್ತೆಯಾಗಿದೆ. ಕೆಲವು ದಿನಗಳ ಹಿಂದಷ್ಟೇ ವರ್ಗಾವಣೆಯಾಗಿದ್ದು, ಇನ್ನೂ ಸೋಮವಾರಪೇಟೆಯಲ್ಲೇ ಇದ್ದರು.

ಅಬಕಾರಿ ಇಲಾಖೆಯ ಉಡುಪಿ ಉಪ ಆಯುಕ್ತೆ ರೂಪಾ ಎಂ. ಐದು ಮನೆಗಳ ಒಡತಿ. 8 ಎಕರೆ 18 ಗುಂಟೆ ಕೃಷಿ ಜಮೀನು ಕೂಡ ಇದೆ.

ಧಾರವಾಡದ ವಲಯ ಅರಣ್ಯಾಧಿಕಾರಿ ಮಹೇಶ್ ಚಂದ್ರಯ್ಯ ಹಿರೇಮಠ ಏಳು ನಿವೇಶನ, ಒಂದು ಮನೆ, 27 ಎಕರೆ ಕೃಷಿ ಜಮೀನು ಹೊಂದಿರುವುದು ಪತ್ತೆಯಾಗಿದೆ. ಇವರ ಮನೆಯಲ್ಲಿ ₹ 3 ಲಕ್ಷ ನಗದು ವಶಕ್ಕೆ ಪಡೆಯಲಾಗಿದೆ.

ಬಾಗಲಕೋಟೆ ಜಿಲ್ಲೆ ಜಮಖಂಡಿಯ ಸಹಾಯಕ ಪ್ರಾದೇಶಿಕ ಅಧಿಕಾರಿ ಷಣ್ಮುಖಪ್ಪ ಭಿಮ್ಮಾತೀರ್ಥ 48 ಎಕರೆ ಕೃಷಿ ಜಮೀನು ಹೊಂದಿದ್ದಾರೆ. ಮನೆಯಲ್ಲಿ ₹ 2.82 ಲಕ್ಷ ನಗದು ಸಿಕ್ಕಿದೆ. ಬೀದರ್‌ನ ಕಾರಂಜಾ ಯೋಜನೆಯ ಕಾರ್ಯನಿರ್ವಾಹಕ ಎಂಜಿನಿಯರ್ ಶಿವಕುಮಾರಸ್ವಾಮಿ ಮೂರು ನಿವೇಶನ ಮತ್ತು ನಾಲ್ಕು ಮನೆ ಹೊಂದಿದ್ದಾರೆ. ₹ 20 ಲಕ್ಷ ಬ್ಯಾಂಕ್ ಠೇವಣಿಯೂ ಪತ್ತೆಯಾಗಿದೆ.

ಕರ್ನಾಟಕ ಗ್ರಾಮೀಣ ಮೂಲಸೌಕರ್ಯ ಅಭಿವೃದ್ಧಿ ನಿಗಮದ (ಕೆಆರ್‌ಐಡಿಎಲ್) ಚಿಕ್ಕಬಳ್ಳಾಪುರ ಕಾರ್ಯನಿರ್ವಾಹಕ ಎಂಜಿನಿಯರ್ ಸದಾಶಿವಯ್ಯ ಮೂರು ಮನೆ ಹೊಂದಿದ್ದಾರೆ. ಕಾರವಾರದ ಕಿರಿಯ ಎಂಜಿನಿಯರ್ ಪ್ರಕಾಶ್ ರೇವಣ್ಕರ್ ಬಳಿ ಐದು ಮನೆ, ಒಂದು ನಿವೇಶನಗಳಿವೆ.

ಕುಬೇರ ಪಂಚಾಯಿತಿ ಅಧಿಕಾರಿಗಳು

ಬುಧವಾರ ದಾಳಿಗೊಳಗಾದ ಸರ್ಕಾರಿ ಅಧಿಕಾರಿಗಳ ಪೈಕಿ ಗ್ರಾಮ ಪಂಚಾಯಿತಿ ಅಭಿವೃದ್ಧಿ ಅಧಿಕಾರಿಗಳು, ಕಾರ್ಯದರ್ಶಿಗಳು ಮತ್ತು ದ್ವಿತೀಯ ದರ್ಜೆ ಸಹಾಯಕರ ಬಳಿಕ ಬೃಹತ್ ಪ್ರಮಾಣದ ಆಸ್ತಿ ಪತ್ತೆಯಾಗಿದೆ.

ಮಂಡ್ಯ ಜಿಲ್ಲೆಯ ಅಗಸನಪುರ ಗ್ರಾಮ ಪಂಚಾಯಿತಿಯ ದ್ವಿತೀಯ ದರ್ಜೆ ಸಹಾಯಕ ಕೃಷ್ಣೇಗೌಡ ಬಳಿ ಐದು ನಿವೇಶನ, ಒಂದು ಮನೆ ಪತ್ತೆಯಾಗಿದೆ. ಮನೆಯಲ್ಲಿ ₹ 1.66 ಲಕ್ಷ ನಗದು ಸಿಕ್ಕಿದೆ.

29ರಿಂದ ಕಾಂಗ್ರೆಸ್‌ನ 'ಪ್ರಜಾಧ್ವನಿ– 2'

ಪ್ರಜಾವಾಣಿ ವಾರ್ತೆ

ಬೆಂಗಳೂರು: ಲೋಕಸಭೆ ಚುನಾವಣೆಗೆ ಈ ಬಾರಿ ಕೋಲಾರ ಜಿಲ್ಲೆಯ ಮುಳಬಾಗಿಲು ಕ್ಷೇತ್ರದ ಕುರುಡುಮಲೆಯಿಂದ ಇದೇ 29ರಂದು 'ಪ್ರಜಾಧ್ವನಿ– 2' ಹೆಸರಿನಲ್ಲಿ ಪ್ರಚಾರ ಆರಂಭಿಸಲು ಕಾಂಗ್ರೆಸ್ ನಿರ್ಧರಿಸಿದೆ.

'ಏಪ್ರಿಲ್ 8ರವರೆಗೆ ನಿರಂತರ ನಡೆಯಲಿರುವ ಮೊದಲ ಹಂತದ ಚುನಾವಣಾ ಪ್ರಚಾರ ಸಭೆಯಲ್ಲಿ ಮುಖ್ಯಮಂತ್ರಿ ಸಿದ್ದರಾಮಯ್ಯ, ಉಪ ಮುಖ್ಯಮಂತ್ರಿ ಡಿ.ಕೆ. ಶಿವಕುಮಾರ್, ಕೇಂದ್ರ ಮತ್ತು ರಾಜ್ಯದ ಪಕ್ಷದ ನಾಯಕರು ಭಾಗವಹಿಸಲಿದ್ದಾರೆ' ಎಂದು ಚುನಾವಣಾ ಉಸ್ತುವಾರಿ ಜಿ.ಸಿ. ಚಂದ್ರಶೇಖರ್ ತಿಳಿಸಿದ್ದಾರೆ.

ಮೊದಲ ಹಂತದಲ್ಲಿ ಕೋಲಾರ, ಹಾಸನ, ಚಾಮರಾಜನಗರ, ಮೈಸೂರು. ಚಿತ್ರದುರ್ಗ, ಉಡುಪಿ, ಚಿಕ್ಕಬಳ್ಳಾಪುರ, ಮಂಡ್ಯ, ಬೆಂಗಳೂರು ದಕ್ಷಿಣ, ಬೆಂಗಳೂರು ಉತ್ತರ ಮತ್ತು ಬೆಂಗಳೂರು ಕೇಂದ್ರ ಕ್ಷೇತ್ರಗಳಲ್ಲಿ ಚುನಾವಣಾ ಪ್ರಚಾರ ಸಭೆಗಳು ನಡೆಯಲಿವೆ.

ತೋಳಗಳ ಹಿಂಡು ದಾಳಿ: 31 ಕುರಿ ಮರಿ ಸಾವು

ಪ್ರಜಾವಾಣಿ ವಾರ್ತೆ

ಕುರುಗೋಡು (ಬಳ್ಳಾರಿ ಜಿಲ್ಲೆ): ಗ್ರಾಮದ ಭೈರಾಪುರ ರಸ್ತೆಯ ಹೊರವಲಯದ ಜಮೀನಿನಲ್ಲಿ ನಿರ್ಮಿಸಿರುವ ಕುರಿಹಟ್ಟಿಯ ಮೇಲೆ ತೋಳಗಳ ಹಿಂಡು ಬುಧವಾರ ಏಕಾಏಕಿ ದಾಳಿ ನಡೆಸಿದ್ದರಿಂದ 10 ಮೇಕೆ ಮರಿ ಮತ್ತು 21 ಕುರಿಮರಿಗಳು ಮೃತಪಟ್ಟಿವೆ.

ಸಿರಿಗೇರಿ ಗ್ರಾಮದ ಮೌಲಾಲಿ ಎನ್ನುವ ಕುರಿಗಾಹಿಗೆ ಸೇರಿದ ಕುರಿಗಳು ಎಂದು ಗುರುತಿಸಲಾಗಿದೆ. ತೋಳಗಳ ದಾಳಿಯಲ್ಲಿ ಅಸ್ವಸ್ಥಗೊಂಡಿದ್ದ 15 ಕುರಿ ಮರಿಗಳು ಚೇತರಿಸಿಕೊಂಡಿವೆ. ಘಟನೆಯಿಂದ ₹1.70 ಲಕ್ಷ ನಷ್ಟ ಸಂಭವಿಸಿದೆ ಎಂದು ಅಂದಾಜಿಸಲಾಗಿದೆ. ಈ ಕುರಿತು ಸಿರಿಗೇರಿ ಠಾಣೆಯಲ್ಲಿ ಪ್ರಕರಣ ದಾಖಲಾಗಿದೆ.

The Printers (Mysore) Pvt. Ltd

Publishers of DECCAN HERALD, PRAJAVANI, SUDHA & MAYURA

No.7-12, Kumbalgodu Indl. Area, Mysore Road, Bangalore - 74

NEWSPRINT WASTE FOR SALE

Sealed Tenders are invited for the disposal of the following Newsprint wastes from our Press at Bangalore, Dharwad, Mangalore, Harihara, Mysore, Gulbarga and Hospet. For the period **April to June 2024**

Details	Location-wise quantity in MT per month						
	Bangalore	Dharwad	Mangalore	Harihara	Mysore	Gulbarga	Hospet
DH &PV Print waste & unsolds (Voucher & Office Copies)	12	6	4.5	4	4	4.5	2
Mixed Print & Folded waste	3	1.5	0.6	0.3	0.2	0.3	0.2
DH,PV, Sudha & Mayura White cut Peel waste	4	0.6	0.2	0.5	0.4	0.3	0.3
White Reel ends including core DH,PV, Sudha & Mayura	8	1.8	0.6	1	2	1	1
DH, PV, Sudha & Mayura Reel Wrappers/Miscellaneous sweep/Bale pattie waste	6	2	0.9	1.2	1.2	0.9	0.9
Sudha & Mayura Print waste & unsolds-Magazine	1	0.4	0.9	0.4	0.6	0.9	0.05
Miscellaneous Tissue/Mixed White waste/ Carton boxes	2	0.2	0.3	0.4	0.2	0.5	0.2

For clarification, contact Procurement Head at **25880340/430.** Sealed Tenders/mail may be addressed to Procurement Head and sent to the above address **within 7 days** from the date of this advertisement.

ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ, ಬೆಂಗಳೂರು ಪೀಠ, ಬೆಂಗಳೂರುರವರ ಸಮಕ್ಷಮ

ಕಂಪನಿಗಳ ಕಾಯ್ದೆ 2013ರ ವಿಚಾರವಾಗಿ

ಮತ್ತು

ಸಾಂಖ್ಯ ಲ್ಯಾಬ್ಸ್ ಪ್ರೈವೇಟ್ ಲಿಮಿಟೆಡ್ ಮತ್ತು ಸಾಂಖ್ಯ ಸ್ಟ್ಯಾಟರ್ಜಿಕ್ ಎಲೆಕ್ಟ್ರಾನಿಕ್ಸ್ ಪ್ರೈವೇಟ್ ಲಿಮಿಟೆಡ್ ಮತ್ತು ತೇಜಸ್ ನೆಟ್‌ವರ್ಕ್ಸ್ ಲಿಮಿಟೆಡ್ ಹಾಗೂ ಅದರ ಸಂಬಂಧಿತ ಷೇರುದಾರರೊಂದಿಗೆ ವಿಲೀನಕರಣ ಯೋಜನೆಯ ವಿಚಾರವಾಗಿ ("ಸ್ಕೀಮ್")

ಸಿಪಿ (ಸಿಎಎ) ನಂ. 09/ಬಿಬಿ/2024

ಸಿ/ಡಬ್ಲ್ಯು

ಸಿ.ಎ. (ಸಿಎಎ) ನಂ. 29/ಬಿಬಿ/2023

ಸಾಂಖ್ಯ ಲ್ಯಾಬ್ಸ್ ಪ್ರೈವೇಟ್ ಲಿಮಿಟೆಡ್
ಸಿಐಎನ್: U72200KA2006PTC041339
ನೋಂದಾಯಿತ ಕಛೇರಿ: 3ನೇ ಲೆವೆಲ್, ಮೆರ್ಯುನ್ಯನ್ ಫ್ಲೋರ್, ನಂ.3, ಇನ್‌ಫೆಂಟ್ರಿ ರಸ್ತೆ, ವಸಂತ ನಗರ, ಎಂಬೆಸಿ ಐಕಾನ್ ಬಿಲ್ಡಿಂಗ್, ಬೆಂಗಳೂರು–560 001, ಕರ್ನಾಟಕ, ಭಾರತ

ಅರ್ಜಿದಾರ ಕಂಪನಿ ನಂ. 1 / ಟ್ರಾನ್ಸ್‌ಫರರ್ ಕಂಪನಿ ನಂ. 1

ಸಾಂಖ್ಯ ಸ್ಟ್ಯಾಟರ್ಜಿಕ್ ಎಲೆಕ್ಟ್ರಾನಿಕ್ಸ್ ಪ್ರೈವೇಟ್ ಲಿಮಿಟೆಡ್
ಸಿಐಎನ್: U72900KA2020PTC136822
ನೋಂದಾಯಿತ ಕಛೇರಿ: ಎಂಬೆಸಿ ಐಕಾನ್, 3ನೇ ಮಹಡಿ, #3, ಇನ್‌ಫೆಂಟ್ರಿ ರಸ್ತೆ, ಬೆಂಗಳೂರು–560 001, ಕರ್ನಾಟಕ, ಭಾರತ

ಅರ್ಜಿದಾರ ಕಂಪನಿ ನಂ. 2 / ಟ್ರಾನ್ಸ್‌ಫರರ್ ಕಂಪನಿ ನಂ. 2

ತೇಜಸ್ ನೆಟ್‌ವರ್ಕ್ಸ್ ಲಿಮಿಟೆಡ್
ಸಿಐಎನ್: L72900KA2000PLC026980
ನೋಂದಾಯಿತ ಕಛೇರಿ: ಜೆ.ಪಿ. ಸಾಫ್ಟ್‌ವೇರ್ ಪಾರ್ಕ್, ಪ್ಲಾಟ್ ನಂ. 25, ಸರ್ವೇ ನಂ. 13, 14, 17, 18 ಕೋನಪ್ಪನ ಅಗ್ರಹಾರ ವಿಲೇಜ್, ಬೇಗೂರು ಹೋಬಳಿ, ಬೆಂಗಳೂರು–560 100, ಕರ್ನಾಟಕ, ಭಾರತ

ಅರ್ಜಿದಾರ ಕಂಪನಿ ನಂ. 3 / ಟ್ರಾನ್ಸ್‌ಫರೀ ಕಂಪನಿ

[ಒಟ್ಟಾರೆಯಾಗಿ **"ಅರ್ಜಿದಾರ ಕಂಪನಿಗಳು"** ಎಂದು ಕರೆಯಲಾಗುತ್ತದೆ]

ಪ್ರಕಟಣೆ

ಕಂಪನಿಗಳ ಕಾಯ್ದೆ, 2013ರ ಸೆಕ್ಷನ್ 230 ಮತ್ತು 232ರ ಅಡಿಯಲ್ಲಿ ಅರ್ಜಿದಾರರಾದ **ಸಾಂಖ್ಯ ಲ್ಯಾಬ್ಸ್ ಪ್ರೈವೇಟ್ ಲಿಮಿಟೆಡ್** ಮತ್ತು **ಸಾಂಖ್ಯ ಸ್ಟ್ಯಾಟರ್ಜಿಕ್ ಎಲೆಕ್ಟ್ರಾನಿಕ್ಸ್ ಪ್ರೈವೇಟ್ ಲಿಮಿಟೆಡ್** ಮತ್ತು **ತೇಜಸ್ ನೆಟ್‌ವರ್ಕ್ಸ್ ಲಿಮಿಟೆಡ್** ಮತ್ತು ಅದರ ಸಂಬಂಧಿತ ಷೇರುದಾರರೊಂದಿಗೆ ಸಂಯೋಜನೆಯ ಯೋಜನೆಯನ್ನು ("ಸ್ಕೀಮ್") ಮಂಜೂರು ಮಾಡಲು ಫೆಬ್ರವರಿ 21, 2024ರಂದು ಅರ್ಜಿಯನ್ನು ಸಲ್ಲಿಸಲಾಗಿರುತ್ತದೆ ಮತ್ತು ಸದರಿ ಅರ್ಜಿಯು ಮಾರ್ಚ್ 13, 2024ರಂದು ಅಡ್ಮಿಷನ್‌ಗೆ ಬಂದಿರುತ್ತದೆ ಹಾಗೂ ಗೌರವಾನ್ವಿತ ರಾಷ್ಟ್ರೀಯ ಕಂಪನಿ ಕಾನೂನು ನ್ಯಾಯಮಂಡಳಿ, ಬೆಂಗಳೂರು ಪೀಠದ ಮುಂದೆ ಮೇ 31, 2024ರಂದು ವಿಚಾರಣೆಗೆ ನಿಗದಿಪಡಿಸಲಾಗಿದೆ.

ಸದರಿ ಅರ್ಜಿಯನ್ನು ಬೆಂಬಲಿಸಲು ಅಥವಾ ವಿರೋಧಿಸಲು ಇಚ್ಛಿಸುವ ಯಾವುದೇ ವ್ಯಕ್ತಿಯು ತನ್ನ ಸಹಿಯೊಂದಿಗೆ ಪೂರ್ಣ ಹೆಸರು ಮತ್ತು ವಿಳಾಸದೊಂದಿಗೆ ಅವನ/ಅವಳ ಅಥವಾ ವಕೀಲರ ಮೂಲಕ ಅಂತಹ ನೋಟೀಸ್‌ನ ಉದ್ದೇಶವನ್ನು ಲಿಖಿತವಾಗಿ ಈ ಕೆಳಗಿನ ವಿಳಾಸಕ್ಕೆ ಅರ್ಜಿದಾರರ ವಕೀಲರಿಗೆ ಅರ್ಜಿಯ ವಿಚಾರಣೆಗೆ ನಿಗದಿಪಡಿಸಿದ ದಿನಾಂಕಕ್ಕಿಂತ ಎರಡು (2) ದಿನಗಳ ಮುಂಚಿತವಾಗಿ ತಲುಪುವಂತೆ ಕಳುಹಿಸತಕ್ಕದ್ದು. ಅರ್ಜಿಯನ್ನು ವಿರೋಧಿಸಲು ಬಯಸಿದಲ್ಲಿ ಅಂತಹ ನೋಟೀಸ್‌ನೊಂದಿಗೆ ಅವನು/ಅವಳು ವಿರೋಧದ ಕಾರಣಗಳು ಅಥವಾ ಅಫಿಡವಿಟ್‌ನ ಪ್ರತಿಯನ್ನು ಒದಗಿಸತಕ್ಕದ್ದು. ಅರ್ಜಿಯ ಪ್ರತಿಯ ಅಗತ್ಯವಿರುವ ಯಾವುದೇ ವ್ಯಕ್ತಿಯು, ಕೆಳ ಸಹಿದಾರರಿಂದ ಅದಕ್ಕೆ ನಿಗದಿತ ಶುಲ್ಕವನ್ನು ಪಾವತಿಸಿದನಂತರ ಅರ್ಜಿಯ ಪ್ರತಿಯನ್ನು ಪಡೆದುಕೊಳ್ಳಬಹುದು.

ಸಹಿ/–

ಸ್ಥಳ: ಬೆಂಗಳೂರು
ದಿನಾಂಕ: ಮಾರ್ಚ್ 27, 2024

ಸಜಿ ಪಿ ಜಾನ್
ಅರ್ಜಿದಾರರ ವಕೀಲರು
ಎಸ್‌ಪಿಜೆ ಲೀಗಲ್, ಅಡ್ವಕೇಟ್ಸ್
ಯೂನಿಟ್ ನಂ. 306, 3ನೇ ಮಹಡಿ, #30,
ಪ್ರೆಸ್ಟೀಜ್ ಮೆರಿಡಿಯನ್ II, ಎಂಜಿ ರಸ್ತೆ, ಬೆಂಗಳೂರು–560001
ದೂ: +91 9845209798
ಇ–ಮೇಲ್: saji@spjlegal.com

ಓಂ

ಜನ್ಮ ಶತಾಬ್ದಿ

ಹೊಸದುರ್ಗದ ಪೂಜಾರ್ ವಂಶಸ್ಥರಾದ ಜ್ಯೋತಿಷ್ಯ ವಿದ್ವಾನ್

ವೇ.ಬ್ರಂ.ಶ್ರೀ ಪೌರೋಹಿತ ಟಿ. ನಾಗೇಶ ಶಾಸ್ತ್ರಿಗಳವರು

ಜನನ: 28-03-1924 ಮರಣ: 26-02-1999

ತಮ್ಮ ಜ್ಯೋತಿಷ್ಯ ಹಾಗೂ ವಾಸ್ತು ಶಾಸ್ತ್ರದ ಅಪಾರ ಜ್ಞಾನ ಹಾಗೂ ಅನುಭವದ ಮೂಲಕ ಸಹಸ್ರಾರು ಜನರನ್ನು ಉದ್ಧರಿಸಿದವರು. ಸಹಸ್ರಾರು ಜನರ ಕಷ್ಟ ಕಾರ್ಪಣ್ಯಗಳನ್ನು ಕರಗಿಸಿ ಅವರ ಬದುಕನ್ನು ಹಸನಾಗಿಸಿದ ದೈವಾಂಶ ಸಂಭೂತರು. ಯಾವುದೇ ಕಿಂಚಿತ್ ಪ್ರತಿಫಲಾಪೇಕ್ಷೆಯನ್ನೂ ನಿರೀಕ್ಷಿಸದೇ ಪರೋಪಕಾರವೇ ಉಪಾಸನೆ ಎಂದು ನಡೆದು, ಸರಳ ಹಾಗೂ ಸಜ್ಜನಿಕೆಯ ಬದುಕಿನಿಂದ ಸಾರ್ಥಕ ಜೀವನ ನಡೆಸಿದವರು. ಸಹಸ್ರಾರು ಜನರ ಮನ ಮತ್ತು ಮನೆಯಲ್ಲಿ ಇಂದಿಗೂ ನೆಲೆಸಿ ಪೂಜೆ ಸ್ವೀಕರಿಸುತ್ತಿರುವವರು. ನಿಮ್ಮಂತಹ ತಂದೆಯನ್ನು ಪಡೆದ ನಾವೇ ಧನ್ಯರು. ಸದಾ ಕಾಲ ನಿಮ್ಮನ್ನು ಸ್ಮರಿಸುತ್ತಾ, ನಿಮ್ಮ ಆದರ್ಶಗಳನ್ನೇ ಪಾಲಿಸುತ್ತಾ, ನೀವು ತೋರಿಸಿದ ದಾರಿಯಲ್ಲೇ ನಡೆಯುತ್ತಿರುವ-

ನಿಮ್ಮ ಕುಟುಂಬದವರು
9845089062

ಧಗೆ ತಡೆಗೆ ಹೆಚ್ಚಿನ ವಿದ್ಯುತ್ ಬಳಕೆ • ಮಿತಿ ದಾಟಿದವರಿಗೆ ಪೂರ್ಣ ಶುಲ್ಕ ಪಾವತಿಯ ಬರೆ

‘ಗೃಹ ಜ್ಯೋತಿ’ ಯೋಜನೆಗೆ ಬೇಸಿಗೆ ತಾಪ

• ಚಂದ್ರಹಾಸ ಹಿರೇಮಳಲಿ

ಬೆಂಗಳೂರು: ರಾಜ್ಯದಲ್ಲಿ ಬಿಸಿಲಿನ ತಾಪ ನಿರಂತರವಾಗಿ ಏರುತ್ತಿದ್ದು, ಕಳೆದ ವರ್ಷದ ಫೆಬ್ರುವರಿ–ಮಾರ್ಚ್‌ಗಿಂತ ಈ ಬಾರಿ ಗೃಹ ವಿದ್ಯುತ್ ಬಳಕೆ ಶೇ 30ರಷ್ಟು ಹೆಚ್ಚಳವಾಗಿದೆ. ‘ಗೃಹ ಜ್ಯೋತಿ’ ಫಲಾನುಭವಿಗಳಿಗೂ ‘ಬಿಸಿ’ ತಟ್ಟಿದೆ.

ಗ್ಯಾರಂಟಿ ಯೋಜನೆಗಳಲ್ಲಿ ಒಂದಾದ ಗೃಹ ಜ್ಯೋತಿ ನಿಯಮಗಳ ಪ್ರಕಾರ ಸೌಲಭ್ಯ ಪಡೆದಿರುವ ಕುಟುಂಬಗಳು ಹಿಂದಿನ ಒಂದು ವರ್ಷ ಬಳಸಿದ್ದ ಸರಾಸರಿ ಯೂನಿಟ್ ಹಾಗೂ ಅದರ ಮೇಲೆ 10 ಹೆಚ್ಚುವರಿ ಯೂನಿಟ್ ಮಾತ್ರ ಉಚಿತವಾಗಿ ಪಡೆಯಬಹುದಾಗಿದೆ. ಅದಕ್ಕಿಂತ ಎಷ್ಟು ಹೆಚ್ಚು ಬಳಕೆ ಮಾಡಲಾಗುತ್ತದೆಯೇ ಅಷ್ಟು ಯೂನಿಟ್‌ಗಳಿಗೆ ಶುಲ್ಕ ಭರಿಸಬೇಕಾಗುತ್ತದೆ. ಬಳಕೆ 200 ಯೂನಿಟ್ ದಾಟಿದರೆ ಸಂಪೂರ್ಣ ಶುಲ್ಕ ತೆರಬೇಕಾಗುತ್ತದೆ.

ರಾಜ್ಯದ ಬಹುತೇಕ ಜಿಲ್ಲೆಗಳಲ್ಲಿ ಬಿಸಿಲಿನ ಧಗೆ ನಿರಂತರವಾಗಿ ಏರುತ್ತಿದೆ. ಹವಾಮಾನ ವೈಪರೀತ್ಯದಿಂದಾಗಿ ವಾಡಿಕೆಗಿಂತ ಮುನ್ನವೇ ಬಿಸಿಲಿನ ಕಾವು ಹೆಚ್ಚಾಗಿದೆ. ಉತ್ತರ ಕರ್ನಾಟಕ ಜಿಲ್ಲೆಗಳಲ್ಲಿ ಉಷ್ಣಾಂಶ 40 ಡಿಗ್ರಿ ಸೆಲ್ಸಿಯಸ್‌ಗೂ ಹೆಚ್ಚು ದಾಖಲಾಗುತ್ತಿದೆ.

> **ಗೃಹ ವಿದ್ಯುತ್ ಬಳಕೆ ಕಳೆದ ಬಾರಿಗಿಂತ ಶೇ 30ರಷ್ಟು ಹೆಚ್ಚಾಗಿದೆ. ಫಲಾನುಭವಿಗಳು ತಮಗೆ ನಿಗದಿಯಾದ ಯೂನಿಟ್‌ಗಳಿಗಿಂತ ಹೆಚ್ಚುವರಿ ಬಳಕೆಗಷ್ಟೇ ಶುಲ್ಕ ಪಾವತಿಸಬೇಕು**
> **ಕೆ.ಜೆ. ಜಾರ್ಜ್,** ಇಂಧನ ಸಚಿವ.

ಉಷ್ಣಾಂಶ ಹೆಚ್ಚಳ ಹಾಗೂ ಗಾಳಿಯಲ್ಲಿ ತೇವಾಂಶ ಕಡಿಮೆ ಆಗಿರುವ ಕಾರಣ ಹಗಲು ಹಾಗೂ ರಾತ್ರಿ ಸಮಯದಲ್ಲೂ ಸೆಖೆ ಸಹಿಸಲಸಾಧ್ಯವಾಗಿದೆ.

ಕರಾವಳಿ ಹಾಗೂ ಕಲಬುರಗಿ, ವಿಜಯಪುರ, ರಾಯಚೂರು, ಕೊಪ್ಪಳ, ಗದಗ, ಬಳ್ಳಾರಿ, ಬಾಗಲಕೋಟೆ, ದಾವಣಗೆರೆ, ಧಾರವಾಡ, ಹಾವೇರಿ, ಚಿತ್ರದುರ್ಗ ಸೇರಿ ಉತ್ತರ ಕರ್ನಾಟಕದ ಬಹುತೇಕ ಜಿಲ್ಲೆಗಳಲ್ಲಿ ವಾಡಿಕೆಗಿಂತ 2 ಡಿಗ್ರಿ ಸೆಲ್ಸಿಯಸ್ ಹೆಚ್ಚು ಉಷ್ಣಾಂಶ ದಾಖಲಾಗಿದೆ. ತುಮಕೂರು, ಮಂಡ್ಯ, ಮೈಸೂರು, ಬೆಂಗಳೂರು, ಹಾಸನಗಳಲ್ಲೂ ವಾಡಿಕೆಗಿಂತ 3 ಡಿಗ್ರಿ ಸೆಲ್ಸಿಯಸ್ ಅಧಿಕ ಉಷ್ಣಾಂಶವಿದೆ. ರಾತ್ರಿ ವೇಳೆ ಸೆಖೆಯಿಂದ ಮುಕ್ತಿ ಪಡೆಯಲು ಜನರು ಫ್ಯಾನ್, ಕೂಲರ್‌ಗಳನ್ನು ಹೆಚ್ಚಾಗಿ ಉಪಯೋಗಿಸುತ್ತಿದ್ದಾರೆ. ಇದರಿಂದ ಹೆಚ್ಚು ವಿದ್ಯುತ್ ಬಳಕೆಯಾಗುತ್ತಿದೆ. ಉಚಿತಕ್ಕೆ ನಿಗದಿ ಮಾಡಿರುವ ಯೂನಿಟ್‌ಗಳ ಮಿತಿ ದಾಟುತ್ತಿದೆ.

ಚುನಾವಣಾ ಸಮಯದಲ್ಲಿ ಕಾಂಗ್ರೆಸ್ ನೀಡಿದ್ದ ಭರವಸೆಯಂತೆ ಐದು ಗ್ಯಾರಂಟಿಗಳಲ್ಲಿ ಒಂದಾದ ಗೃಹ ಜ್ಯೋತಿ ಯೋಜನೆಗೆ 2023ರ ಆಗಸ್ಟ್‌ನಲ್ಲಿ ಚಾಲನೆ ನೀಡಲಾಗಿತ್ತು. ರಾಜ್ಯದ 1.60 ಕೋಟಿ ಗ್ರಾಹಕರು ಗೃಹ ಜ್ಯೋತಿ ಯೋಜನೆಯ ಸೌಲಭ್ಯ ಪಡೆಯುತ್ತಿದ್ದಾರೆ.

ಯೋಜನೆ ಜಾರಿಯಾದ 6 ತಿಂಗಳು ತಮಗೆ ನಿಗದಿಯಾದ ಯೂನಿಟ್ ಮಿತಿಯಲ್ಲಿಯೇ ಶೇ 99ರಷ್ಟು ಜನರು ಬಳಕೆ ಮಾಡುವ ಮೂಲಕ ಉಚಿತ ವಿದ್ಯುತ್ ಸೌಲಭ್ಯ ಅನುಭವಿಸುತ್ತಿದ್ದರು. ಆದರೆ, ಈ ತಿಂಗಳಲ್ಲಿ ಶೇ 16ರಷ್ಟು ಗ್ರಾಹಕರು ಹೆಚ್ಚುವರಿ ಬಳಕೆಯ ಶುಲ್ಕ ಪಾವತಿಸಬೇಕಿದೆ. ಶೇ 4ರಷ್ಟು ಗ್ರಾಹಕರು 200 ಯೂನಿಟ್ ಮಿತಿ ದಾಟಿದ್ದು, ಉಚಿತ ಸೌಲಭ್ಯದ ಅವಕಾಶದಿಂದ ವಂಚಿತರಾಗಿದ್ದಾರೆ. ಏಪ್ರಿಲ್ ವೇಳೆಗೆ ಇನ್ನಷ್ಟು ಏರಿಕೆಯಾಗುವ ಸಾಧ್ಯತೆ ಇದೆ.

ಅಂಕಿಅಂಶಗಳು

15,300 ಮೆಗಾವಾಟ್ — ಕಳೆದ ಫೆಬ್ರುವರಿ–ಮಾರ್ಚ್ ಬಳಕೆ

17,000 ಮೆಗಾವಾಟ್ — ಪ್ರಸಕ್ತ ಫೆಬ್ರುವರಿ–ಮಾರ್ಚ್ ಬಳಕೆ

2 ಕೋಟಿ — ಒಟ್ಟು ಗೃಹ ವಿದ್ಯುತ್ ಬಳಕೆದಾರರು

1.60 ಕೋಟಿ — ಗೃಹ ಜ್ಯೋತಿ ಸೌಲಭ್ಯ ಪಡೆದವರು

25.60 ಲಕ್ಷ — ಹೆಚ್ಚುವರಿ ಶುಲ್ಕ ಪಾವತಿಸಬೇಕಿರುವ ಗ್ರಾಹಕರು

6.40 ಲಕ್ಷ — ಉಚಿತ ಸೌಲಭ್ಯದ ಮಿತಿ ದಾಟಿದವರು

ಗೃಹ ಜ್ಯೋತಿಯ ವೆಚ್ಚ

2023–24	2024–25
₹6,479 ಕೋಟಿ (8 ತಿಂಗಳು)	₹9,657 ಕೋಟಿ

ಜಲ ವಿದ್ಯುತ್ ಕುಂಠಿತ, ಇತರೆ ಹೆಚ್ಚಳ

ರಾಜ್ಯದ ಜಲಾಶಯಗಳಲ್ಲಿ ನೀರಿನ ಸಂಗ್ರಹ ಕಡಿಮೆಯಾಗಿರುವ ಕಾರಣ ಜಲ ವಿದ್ಯುತ್ ಉತ್ಪಾದನೆ 1 ಸಾವಿರ ಮೆಗಾವಾಟ್‌ಗೆ ಸೀಮಿತವಾಗಿದೆ. ಉಳಿದ ಮೂಲಗಳಿಂದ ಹೆಚ್ಚುವರಿ ಪಡೆಯುತ್ತಿರುವ ಕಾರಣ ವಿದ್ಯುತ್ ಅಭಾವ ಎದುರಾಗಿಲ್ಲ ಎಂದು ಇಂಧನ ಸಚಿವ ಕೆ.ಜೆ. ಜಾರ್ಜ್ ಹೇಳಿದರು.

ಉಷ್ಣ ವಿದ್ಯುತ್ ಸ್ಥಾವರಗಳಿಂದ 3,250, ಉತ್ತರ ಪ್ರದೇಶ–ಪಂಜಾಬ್‌ನಿಂದ 900, ಖಾಸಗಿ ವಿದ್ಯುತ್ ಉತ್ಪಾದಕರಿಂದ 500, ಕೇಂದ್ರ ಗ್ರಿಡ್‌ನಿಂದ 452, ಕೇಂದ್ರೀಯ ಉತ್ಪಾದನಾ ಕೇಂದ್ರಗಳಿಂದ (ಸಿಜಿಎಸ್) 4 ಸಾವಿರ ಮೆಗಾವಾಟ್ ಪಡೆಯಲಾಗುತ್ತಿದೆ. ರಾಜ್ಯದ ಪವನ, ಸೌರಶಕ್ತಿ ಮತ್ತು ಇತರ ಯೋಜನೆಗಳಿಂದ ಬೇಡಿಕೆ ಇರುವ 17 ಸಾವಿರ ಮೆಗಾವಾಟ್ ಸಿಗುತ್ತಿದೆ ಎಂದರು. ಕೃಷಿ ಪಂಪ್‌ಸೆಟ್, ಕೈಗಾರಿಕೆ ಹಾಗೂ ಗೃಹ ಬಳಕೆಗೆ ಸಮರ್ಪಕ ವಿದ್ಯುತ್ ಲಭ್ಯವಾಗಿದೆ. ಎಸ್‌ಎಸ್‌ಎಲ್‌ಸಿ ಪರೀಕ್ಷೆ ನಡೆಯುತ್ತಿದ್ದು, ಲೋಡ್‌ಶೆಡ್ಡಿಂಗ್ ಮಾಡದಂತೆ ಸೂಚಿಸಲಾಗಿದೆ. ಸಮರ್ಪಕ ವಿದ್ಯುತ್ ಸರಬರಾಜಿನ ಮೇಲ್ವಿಚಾರಣೆಗೆ ಪ್ರತಿ ಜಿಲ್ಲೆಗೆ ಮುಖ್ಯ ಎಂಜಿನಿಯರ್ ಶ್ರೇಣಿಯ ಅಧಿಕಾರಿಗಳನ್ನು ನೇಮಿಸಲಾಗಿದೆ ಎಂದು ವಿವರ ನೀಡಿದರು.

ಬಾಡಿಗೆ ಮನೆಗಳ ಬವಣೆ

‘ಗೃಹ ಜ್ಯೋತಿ’ ಯೋಜನೆಯ ಫಲಾನುಭವಿ ಬಾಡಿಗೆದಾರರು ತಮ್ಮ ಮನೆ ಬದಲಿಸಿದರೂ ಈ ಯೋಜನೆಯನ್ನು ಮುಂದುವರಿಸಲು ಇಂಧನ ಇಲಾಖೆ ‘ಡಿ–ಲಿಂಕ್’ ಸೌಲಭ್ಯವನ್ನು ಕಲ್ಪಿಸಿದೆ. ಆದರೆ, ಬದಲಿಸಿದ ಬಾಡಿಗೆ ಮನೆಯಲ್ಲಿ ಹಿಂದಿನ ಬಾಡಿಗೆದಾರರು ಬಳಸಿದ್ದ ಸರಾಸರಿ ಯೂನಿಟ್‌ನಷ್ಟೇ ಬಳಸಬೇಕಿದೆ.

‘ರಾಜಾಜಿನಗರದ ಬಾಡಿಗೆ ಮನೆಯಲ್ಲಿ 3 ವರ್ಷ ಇದ್ದೆವು. ಗೃಹ ಜ್ಯೋತಿ ಸೌಲಭ್ಯ ಪಡೆದಾಗ ಸರಾಸರಿ 140 ಯೂನಿಟ್ ಸಿಕ್ಕಿತ್ತು. ಈಗಿರುವ ಮಂಜುನಾಥ ಬಡಾವಣೆಯ ಮನೆಯ ಸರಾಸರಿ 90 ಯೂನಿಟ್ ಇದೆ. ಇದರಿಂದ ಪ್ರತಿ ತಿಂಗಳು ಹೆಚ್ಚುವರಿ ಶುಲ್ಕ ಭರಿಸುತ್ತಿದ್ದೇವೆ’ ಎನ್ನುತ್ತಾರೆ ರಾಜೀವ್ ಏಕಬೋಟೆ.

ಸುದ್ದಿ 2 ನಿಮಿಷ

ಮಾಜಿ ಸಂಸದರಿಗೆ ಟಿಕೆಟ್ ನೀಡಲು ಆಗ್ರಹ: ಆತ್ಮಹತ್ಯೆಗೆ ಯತ್ನ

ರಾಯಚೂರು: ಮಾಜಿ ಸಂಸದ ಬಿ.ವಿ.ನಾಯಕ ಅವರಿಗೆ ಟಿಕೆಟ್ ನೀಡುವಂತೆ ಬಿಜೆಪಿ ವರಿಷ್ಠರ ಮೇಲೆ ಒತ್ತಡ ಹೇರಲು ನಗರದ ರಾಯಚೂರು ಹಬ್‌ನಲ್ಲಿ ಕರೆದಿದ್ದ ಬೆಂಬಲಿಗರ ಸಭೆಯಲ್ಲಿ ಇಬ್ಬರು ಯುವಕರು ಮೈಮೇಲೆ ಡೀಸೆಲ್ ಸುರಿದುಕೊಂಡು ಆತ್ಮಹತ್ಯೆಗೆ ಯತ್ನಿಸಿದ ಪ್ರಹಸನ ನಡೆಯಿತು.

ಸಭೆ ನಡೆಯುತ್ತಿರುವಾಗಲೇ ಯುವಕರು ಮೈಮೇಲೆ ಡೀಸೆಲ್ ಸುರಿದುಕೊಂಡದ್ದರಿಂದ ಕೆಲ ಹೊತ್ತು ಆತಂಕ ಸೃಷ್ಟಿಯಾಗಿತ್ತು. ಸ್ಥಳದಲ್ಲಿದ್ದ ಕಾರ್ಯಕರ್ತರು ತಕ್ಷಣ ಅವರನ್ನು ತಡೆದರು. ಇದೇ ಸಂದರ್ಭದಲ್ಲಿ ಬಿ.ವಿ. ನಾಯಕ ಬೆಂಬಲಿಗರು, ‘ರಾಜಾ ಅಮರೇಶ್ವರ ಗೋ ಬ್ಯಾಕ್’ ಎಂದು ಘೋಷಣೆ ಕೂಗಿದರು.

‘ಐದು ವರ್ಷ ಕಾಣೆಯಾಗಿದ್ದ ರಾಜಾ ಅಮರೇಶ್ವರ ನಾಯಕರನ್ನು ಪಕ್ಷದ ಹೈಕಮಾಂಡ್ ಹುಡುಕಿ ಕೊಟ್ಟಿದೆ’ ಎಂದು ಫಲಕವನ್ನೂ ಪ್ರದರ್ಶಿಸಿ ಆಕ್ರೋಶ ವ್ಯಕ್ತಪಡಿಸಿದರು.

‘ರಾಯಚೂರು ಲೋಕಸಭೆ ಟಿಕೆಟ್ ಪುನರ್ ಪರಿಶೀಲನೆ ಮಾಡದಿದ್ದರೆ ಮುಖಂಡರು ಹಾಗೂ ಕಾರ್ಯಕರ್ತರೊಂದಿಗೆ ಚರ್ಚಿಸಿ ಮುಂದಿನ ತೀರ್ಮಾನ ಕೈಗೊಳ್ಳಲಾಗುವುದು’ ಎಂದು ಬಿ.ವಿ.ನಾಯಕ ಎಚ್ಚರಿಸಿದರು.

ಕಳೆದ ಚುನಾವಣೆಯಲ್ಲಿ ಕಾಂಗ್ರೆಸ್‌ನಿಂದ ಸ್ಪರ್ಧಿಸಿ, ಹಾಲಿ ಸಂಸದ ರಾಜಾ ಅಮರೇಶ್ವರ ನಾಯಕ ವಿರುದ್ಧವೇ ಸೋತಿದ್ದ ಬಿ.ವಿ.ನಾಯಕ ವಿಧಾನಸಭೆ ಚುನಾವಣೆ ಸಂದರ್ಭದಲ್ಲಿ ಬಿಜೆಪಿ ಸೇರಿದ್ದರು. ಈ ಬಾರಿ ಬಿಜೆಪಿ ಟಿಕೆಟ್ ಆಕಾಂಕ್ಷಿಯೂ ಆಗಿದ್ದರು. ಚುನಾವಣೆಗೆ ತಯಾರಿಯನ್ನೂ ನಡೆಸಿದ್ದರು. ಕೊನೆ ಗಳಿಗೆಯಲ್ಲಿ ರಾಜಾ ಅಮರೇಶ್ವರ ನಾಯಕ ಅವರಿಗೆ ಟಿಕೆಟ್ ಘೋಷಿಸಿರುವುದು ಕಾರ್ಯಕರ್ತರ ಆಕ್ರೋಶಕ್ಕೆ ಕಾರಣವಾಗಿದೆ.

ನಿರ್ಮಾಣ ಹಂತದ ಸೇತುವೆ ಕುಸಿತ

ಕುಮಟಾ (ಉತ್ತರ ಕನ್ನಡ ಜಿಲ್ಲೆ): ತಾಲ್ಲೂಕಿನ ಮಿರ್ಜಾನ್–ಹೆಗಡೆ ತಾರಿಬಾಗಿಲ ಗ್ರಾಮಗಳನ್ನು ಸಂಪರ್ಕಿಸಲು ಅಘನಾಶಿನಿ ನದಿಗೆ ಅಡ್ಡಲಾಗಿ ನಿರ್ಮಿಸುತ್ತಿದ್ದ ಸೇತುವೆಯ ಮಧ್ಯಭಾಗ ಬುಧವಾರ ಕುಸಿದು ಬಿತ್ತು.

ಸೇತುವೆಯ ಒಂದು ಕಂಬದಿಂದ ಇನ್ನೊಂದು ಕಂಬಕ್ಕೆ ಅಳವಡಿಸಿದ್ದ ಕಾಂಕ್ರೀಟ್ ತೊಲೆ (ಬೀಮ್) ಏಕಾಏಕಿ ಕುಸಿದ ಕಾರಣ ಬೃಹತ್ ಗಾತ್ರದ ಕ್ರೇನ್, ಹಿಟಾಚಿ, ದ್ವಿಚಕ್ರ ವಾಹನಗಳು ಸೇರಿ ಕೋಟ್ಯಂತರ ಮೌಲ್ಯದ ಪರಿಕರಕ್ಕೆ ಹಾನಿಯಾಗಿದೆ. ಯಾವುದೇ ಪ್ರಾಣಾಪಾಯ ಸಂಭವಿಸಿಲ್ಲ.

‘₹18 ಕೋಟಿ ವೆಚ್ಚದಲ್ಲಿ ಸೇತುವೆ ನಿರ್ಮಿಸಲಾಗುತ್ತಿದ್ದು, ಒಂದು ವರ್ಷದಿಂದ ಕಾಮಗಾರಿ ಪ್ರಗತಿಯಲ್ಲಿದೆ. ಈಗಾಗಲೇ ಶೇ 40ಕ್ಕಿಂತ ಹೆಚ್ಚು ಭಾಗದ ಕಾಮಗಾರಿ ನಡೆದಿದ್ದು, ಎರಡು ಕಂಬಗಳ ನಡುವೆ ಜೋಡಿಸಿಟ್ಟಿದ್ದ ಕಾಂಕ್ರೀಟ್ ತೊಲೆ ಕುಸಿದು ಹಾನಿಯಾಗಿದೆ. ಅಂದಾಜು ₹4 ಕೋಟಿ ಮೌಲ್ಯದ ಪರಿಕರ ಹಾನಿಯಾಗಿದೆ. ಕಾಮಗಾರಿ ವೇಳೆ ಕ್ರೇನ್ ಬಡಿದು ತೊಲೆ ಕುಸಿದು ಬಿದ್ದಿರಬಹುದು’ ಎಂದು ಲೋಕೋಪಯೋಗಿ ಇಲಾಖೆ ಸಹಾಯಕ ಕಾರ್ಯನಿರ್ವಾಹಕ ಎಂಜಿನಿಯರ್ ಎಂ.ಪಿ.ನಾಯ್ಕ ‘ಪ್ರಜಾವಾಣಿ’ಗೆ ತಿಳಿಸಿದರು.

6, 7ರಂದು ‘ಪ್ರಜಾವಾಣಿ ಮತ್ತು ಡೆಕ್ಕನ್ ಹೆರಾಲ್ಡ್’ ಬಳಗದ ಶೈಕ್ಷಣಿಕ ಮೇಳ

ಎಡ್ಯುವರ್ಸ್‌ನಲ್ಲಿ ವಿಶೇಷ ಉಪನ್ಯಾಸಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ‘ಪ್ರಜಾವಾಣಿ’ ಮತ್ತು ‘ಡೆಕ್ಕನ್ ಹೆರಾಲ್ಡ್’ ಬಳಗ ಪ್ರಸ್ತುತಪಡಿಸುವ ಕರ್ನಾಟಕದ ಪ್ರತಿಷ್ಠಿತ ಶೈಕ್ಷಣಿಕ ಮೇಳ ‘ಎಡ್ಯುವರ್ಸ್’ ಏಪ್ರಿಲ್ 6 ಮತ್ತು 7ರಂದು ಬೆಂಗಳೂರಿನಲ್ಲಿ ನಡೆಯಲಿದ್ದು, ಸಿಇಟಿ ಹಾಗೂ ಕಾಮೆಡ್–ಕೆ ಕುರಿತು ವಿಶೇಷ ಗೋಷ್ಠಿಗಳು ನಡೆಯಲಿವೆ. ಏಪ್ರಿಲ್ 13 ಮತ್ತು 14ರಂದು ಹುಬ್ಬಳ್ಳಿಯಲ್ಲಿಯೂ ಆಯೋಜಿಸಲಾಗಿದೆ.

ಹದಿಮೂರು ವರ್ಷಗಳಿಂದ ಈ ಶೈಕ್ಷಣಿಕ ಮೇಳವನ್ನು ಹಮ್ಮಿಕೊಳ್ಳಲಾಗುತ್ತಿದೆ. ಪಿಯುಸಿ ನಂತರ ಮುಂದೇನು ಎಂಬ ಪ್ರಶ್ನೆಗೆ ಪರಿಹಾರವನ್ನು ಇಲ್ಲಿ ಪಡೆಯಬಹುದಾಗಿದೆ. ಎರಡು ದಿನಗಳ ಈ ಮೇಳದಲ್ಲಿ ಪರಿಣತರು, ತಜ್ಞರು ಪಾಲ್ಗೊಳ್ಳುತ್ತಿದ್ದಾರೆ. ಪರಿಣತರೊಂದಿಗೆ ಸಂವಾದ, ಉಪನ್ಯಾಸ ಮತ್ತು ಚರ್ಚೆಗಳನ್ನು ಆಯೋಜಿಸಲಾಗುತ್ತದೆ.

50ಕ್ಕೂ ಹೆಚ್ಚಿನ ಶಿಕ್ಷಣ ಸಂಸ್ಥೆಗಳು ಈ ಮೇಳದಲ್ಲಿ ಪಾಲ್ಗೊಳ್ಳಲಿವೆ. ಪಿಯುಸಿ ಅಥವಾ ತತ್ಸಮಾನ ವಿದ್ಯಾಭ್ಯಾಸ ಮುಗಿಸಿದ ವಿದ್ಯಾರ್ಥಿಗಳಿಗೆ ವೃತ್ತಿಪರ ಕೋರ್ಸುಗಳಿಗೆ ಸಂಬಂಧಿಸಿದಂತೆ ವಿವರವಾದ ಮಾಹಿತಿ ದೊರೆಯಲಿದೆ. ರಾಜ್ಯದಲ್ಲಿರುವ ಪ್ರತಿಷ್ಠಿತ ವಿಶ್ವವಿದ್ಯಾಲಯಗಳ ಸಿಬ್ಬಂದಿ ತಮ್ಮಲ್ಲಿರುವ ವಿಶೇಷ ಕೋರ್ಸ್‌ಗಳ, ಪದವಿಗಳ ಮಾಹಿತಿ ನೀಡಲಿದ್ದಾರೆ.

ವಿದ್ಯಾರ್ಥಿಗಳಿಗಷ್ಟೇ ಅಲ್ಲ, ಪಾಲಕರಿಗೂ ಸಹ ಮಾರ್ಗದರ್ಶಿಯಾಗಿರಲಿದೆ. ಶಿಕ್ಷಣ ಸಾಲದ ಕುರಿತೂ ಮಾಹಿತಿ ಪಡೆಯಬಹುದಾಗಿದೆ.

ವಿದ್ಯಾರ್ಥಿಗಳಲ್ಲಿ ಆತ್ಮವಿಶ್ವಾಸ ಮೂಡಿಸುವ ವಿಶೇಷ ಉಪನ್ಯಾಸಗಳನ್ನು ಹಮ್ಮಿಕೊಳ್ಳಲಾಗುತ್ತದೆ. ಸಿಇಟಿ ಮತ್ತು ಕಾಮೆಡ್–ಕೆಗೆ ಸಂಬಂಧಿಸಿದ ಎಲ್ಲ ಮಾಹಿತಿಯನ್ನೂ ಸಮಗ್ರವಾಗಿ ನೀಡಲಾಗುತ್ತದೆ. Ad6 Advertising ಬೆಂಬಲಿಸುತ್ತಿರುವ ಈ ಮೇಳಕ್ಕೆ ‘ನ್ಯೂಸ್ ಫಸ್ಟ್’ ಕನ್ನಡ ಟೆಲಿವಿಷನ್ ಸಹಭಾಗಿತ್ವವಿದೆ.

ಮಾಕ್ ಟೆಸ್ಟ್: ಸಿಇಟಿ ಮತ್ತು ಕಾಮೆಡ್–ಕೆಗೆ ಪರೀಕ್ಷಾರ್ಥಿಗಳಿಗೆ ಎರಡೂ ದಿನ ಮಾಕ್ ಟೆಸ್ಟ್ (ಅಣಕು ಪರೀಕ್ಷೆ) ಅನ್ನು ಹಮ್ಮಿಕೊಳ್ಳಲಾಗುವುದು. ಆಸಕ್ತ ವಿದ್ಯಾರ್ಥಿಗಳು www.deccanherald.com/eduverse ಜಾಲತಾಣಕ್ಕೆ ಲಾಗಿನ್ ಆಗಿ, ಕ್ಯುಆರ್ ಕೋಡ್ ಸ್ಕ್ಯಾನ್ ಮಾಡಿ, ನಿಮ್ಮ ಸ್ಥಳವನ್ನು ಕಾಯ್ದಿರಿಸಿಕೊಳ್ಳಿ. ಈ–ಮಾಕ್ ಟೆಸ್ಟ್‌ನಲ್ಲಿ ಹೆಚ್ಚು ಅಂಕ ಗಳಿಸಿದ ವಿದ್ಯಾರ್ಥಿಗಳಿಗೆ ಒಂದು ಲಕ್ಷ ಮೌಲ್ಯದ ಬಹುಮಾನಗಳನ್ನು ಗೆಲ್ಲುವ ಅವಕಾಶಗಳಿವೆ.

ಬೆಂಗಳೂರಿನಲ್ಲಿ ಗೇಟ್ 2/3 ತ್ರಿಪುರವಾಸಿನಿ ಅರಮನೆ ಮೈದಾನದಲ್ಲಿ ಶನಿವಾರ ಮತ್ತು ಭಾನುವಾರ ಬೆಳಿಗ್ಗೆ 10ರಿಂದ ಸಂಜೆ 5ರ ವರೆಗೆ ಮೇಳಕ್ಕೆ ಮುಕ್ತ ಅವಕಾಶವಿದೆ.

ವಿಶೇಷ ಉಪನ್ಯಾಸಗಳು: ಏಪ್ರಿಲ್ 6ರಂದು ಬೆಳಿಗ್ಗೆ 10ಕ್ಕೆ ಕರ್ನಾಟಕ ಪರೀಕ್ಷಾ ಪ್ರಾಧಿಕಾರದ ನಿವೃತ್ತ ಪಿಆರ್‌ಒ ಎ.ಎಸ್.ರವಿ ಅವರು ಸಿಇಟಿ ಕುರಿತು ವಿಶೇಷ ಉಪನ್ಯಾಸ ನೀಡಲಿದ್ದಾರೆ. ಸಿ.ಇ.ಟಿ ಕೌನ್ಸೆಲಿಂಗ್‌ಗೆ ಸಿದ್ಧತೆ ಹೇಗೆ? ಬೇಕಾಗುವ ದಾಖಲೆಗಳು ಯಾವುವು? ಎಂಜಿನಿಯರಿಂಗ್ ಕಾಲೇಜು ಆಯ್ಕೆ ಹೇಗೆ? ಎಂಬ ವಿದ್ಯಾರ್ಥಿಗಳ ಪ್ರಶ್ನೆಗಳಿಗೆ ಈ ಗೋಷ್ಠಿಯಲ್ಲಿ ಉತ್ತರ ಸಿಗಲಿದೆ.

ಏಪ್ರಿಲ್ 7ರಂದು ಕಾಮೆಡ್–ಕೆ ಕಾರ್ಯನಿರ್ವಾಹಕ ಕಾರ್ಯದರ್ಶಿ ಡಾ.ಎಸ್.ಕುಮಾರ್ ಅವರು ಕಾಮೆಡ್ –ಕೆ ಕುರಿತು ಮಾಹಿತಿ ನೀಡಲಿದ್ದಾರೆ. ಈ ಗೋಷ್ಠಿಯಲ್ಲಿ ಕೋರ್ಸ್‌ಗಳ ಆಯ್ಕೆ, ಉದ್ಯೋಗಾವಕಾಶ, ಕಾಲೇಜಿನಲ್ಲಿರುವ ಶೈಕ್ಷಣಿಕ ಸೌಲಭ್ಯಗಳ ಬಗ್ಗೆ ಮಾಹಿತಿ ಪಡೆದುಕೊಳ್ಳಬಹುದಾಗಿದೆ. ಇದರೊಂದಿಗೆ ‘ರೇಡಿಯೊ ಸಿಟಿ’ ಎಫ್‌ಎಂನ ಆರ್‌ಜೆ ರಜಸ್ ಅವರು ರೇಡಿಯೊ ಹಾಗೂ ವಾಯ್ಸ್ ಇಂಡಸ್ಟ್ರಿಯಲ್ಲಿರುವ ಅವಕಾಶಗಳ ಬಗ್ಗೆ ಮಾಹಿತಿ ನೀಡಲಿದ್ದಾರೆ. ಅಪೊಲೊ ನ್ಯಾಷನಲ್ ಸ್ಕೂಲ್‌ನ ಉಪಾಧ್ಯಕ್ಷೆ ಐಶ್ವರ್ಯಾ ಡಿ.ಕೆ.ಎಸ್ ಹೆಗ್ಡೆ ಅವರು ‘ಕಲಿಕೆ ಹಾಗೂ ಬೆಳವಣಿಗೆ’ ಕುರಿತು ಉಪನ್ಯಾಸ ನೀಡಲಿದ್ದಾರೆ.

ಪತ್ರಕರ್ತನನ್ನು ಕೋಮುವಾದಿ ಎಂದ ಸಂಸದ

ಕಾಸರಗೋಡು: ಸುದ್ದಿವಾಹಿನಿಯೊಂದರ ವರದಿಗಾರನನ್ನು ‘ಕೋಮುವಾದಿ’ ಎಂದು ಕರೆದ ಕಾಂಗ್ರೆಸ್ ಸಂಸದ ರಾಜ್‌ಮೋಹನ್ ಉಣ್ಣಿತ್ತಾನ್, ಪತ್ರಕರ್ತರ ಪ್ರತಿಭಟನೆಗೆ ಮಣಿದು ಕ್ಷಮೆ ಯಾಚಿಸಿದರು.

ಕಾಸರಗೋಡು ಪ್ರೆಸ್ ಕ್ಲಬ್‌ನಲ್ಲಿ ಲೋಕಸಭೆ ಚುನಾವಣೆಯ ಅಂಗವಾಗಿ ಬುಧವಾರ ನಡೆದ ‘ಜನಸಭಾ’ ಕಾರ್ಯಕ್ರಮದಲ್ಲಿ ಅತಿಥಿಯಾಗಿದ್ದ ರಾಜ್‌ಮೋಹನ್, ಕೈರಳಿ ಚಾನಲ್‌ನ ಸಿಜು ಕಣ್ಣನ್ ಅವರ ಪ್ರಶ್ನೆಯಿಂದ ಕೆರಳಿ ಕೋಮುವಾದಿ ಎಂದರಲ್ಲದೆ ‘ನೀವು ಪ್ರಶ್ನೆ ಕೇಳುವುದು ಬೇಡ, ನಿಮ್ಮ ಪ್ರಶ್ನೆಗೆ ನಾನು ಉತ್ತರಿಸಲಾರೆ’ ಎಂದರು.

ಅಧ್ಯಕ್ಷತೆ ವಹಿಸಿದ್ದ ಪ್ರೆಸ್ ಕ್ಲಬ್ ಅಧ್ಯಕ್ಷ ಮುಹಮ್ಮದ್ ಹಾಶಿಂ ಸಂಸದರ ಮಾತನ್ನು ಖಂಡಿಸಿ, ಹೇಳಿಕೆ ಹಿಂತೆಗೆದುಕೊಳ್ಳುವಂತೆ ಕೋರಿದಾಗ ಮತ್ತಷ್ಟು ಕೆರಳಿದ ಸಂಸದ ಅಧ್ಯಕ್ಷರ ಮೇಲೆಯೂ ರೇಗಾಡಿದರು. ಆಗ ಪತ್ರಕರ್ತರು ಪ್ರತಿಭಟನೆ ವ್ಯಕ್ತಪಡಿಸಿದರು. ಕೊನೆಗೆ ರಾಜ್‌ಮೋಹನ್ ತಮ್ಮ ಹೇಳಿಕೆ ಹಿಂತೆಗೆದುಕೊಂಡರು. ಶಾಸಕ ಎನ್.ಎ.ನೆಲ್ಲಿಕುನ್ನು ಪಾಲ್ಗೊಂಡಿದ್ದರು.

ಜೋಶಿಗೆ ಟಿಕೆಟ್ ಬೇಡ: ಮಠಾಧೀಶರ ಒತ್ತಾಯ

ಒಂದನೇ ಪುಟದಿಂದ...

‘ಲಿಂಗಾಯತರು ಜೋಶಿ ಅವರ ಬೆನ್ನಿಗೆ ನಿಂತು ನಾಲ್ಕು ಬಾರಿ ಆಯ್ಕೆ ಮಾಡಿದ್ದಾರೆ. ಆ ಉಪಕಾರಕ್ಕೆ ಅವರು ಕ್ಷೇತ್ರ ತ್ಯಾಗ ಮಾಡಬೇಕು. ಲಿಂಗಾಯತರ ಪ್ರಾಬಲ್ಯದ ಕ್ಷೇತ್ರದಲ್ಲಿ ಬ್ರಾಹ್ಮಣರು ಅನಿವಾರ್ಯವಾದರೆ, ಬ್ರಾಹ್ಮಣರ ಪ್ರಾಬಲ್ಯ ಇರುವ ಕ್ಷೇತ್ರದಲ್ಲಿ ಲಿಂಗಾಯತರನ್ನು ನಿಲ್ಲಿಸಿ ಆರಿಸಿ ತರಬೇಕು. ಒಂದು ವೇಳೆ ಲಿಂಗಾಯತರು ಅಲ್ಲಿ ಸೋತರೆ ಅವರನ್ನು ರಾಜ್ಯಸಭಾ ಸದಸ್ಯರನ್ನಾಗಿ ಮಾಡಬೇಕು’ ಎಂದು ಆಗ್ರಹಿಸಿದರು.

ಯಡಿಯೂರಪ್ಪ ಕೆಳಗಿಳಿಸಲು ಜೋಶಿ ಕಾರಣ: ‘ಯಡಿಯೂರಪ್ಪ ಅವರನ್ನು ಮುಖ್ಯಮಂತ್ರಿ ಸ್ಥಾನದಿಂದ ಇಳಿಸಿದವರು ಯಾರು ಎಂಬುದು ಇಡೀ ರಾಜ್ಯಕ್ಕೆ ಗೊತ್ತು. ಅವರನ್ನು ಕೆಳಗಿಳಿಸಿ, ಆ ಜಾಗದಲ್ಲಿ ಕೂರಲು ಜಾಕೆಟ್ ಹೊಲಿಸಿಕೊಂಡು ಪ್ರಲ್ಹಾದ ಜೋಶಿ ಸಿದ್ಧರಾಗಿದ್ದರು. ನಮ್ಮ ಹೋರಾಟದಿಂದ ಅವರ ಜಾಕೆಟ್ ಮೂಲೆ ಸೇರಿತು’ ಎಂದು ದಿಂಗಾಲೇಶ್ವರ ಸ್ವಾಮೀಜಿ ಹೇಳಿದರು.

> **ಸ್ವಾಮೀಜಿ ಬಗ್ಗೆ ಅಪಾರ ಗೌರವವಿದೆ. ಅವರು ಮಾಡಿದ ವೈಯಕ್ತಿಕ ಆರೋಪಗಳಿಗೆ ಉತ್ತರಿಸಲ್ಲ. ಅವರಿಗಾದ ತಪ್ಪು ತಿಳಿವಳಿಕೆಯನ್ನು ಸರಿಪಡಿಸಲಾಗುವುದು**
> **ಪ್ರಲ್ಹಾದ ಜೋಶಿ,** ಕೇಂದ್ರ ಸಚಿವ

> **‘ದಿಂಗಾಲೇಶ್ವರ ಸ್ವಾಮೀಜಿ ಅವರ ಹೇಳಿಕೆ ತಪ್ಪು ಗ್ರಹಿಕೆಯಿಂದ ಕೂಡಿದೆ. ಧಾರವಾಡ ಲೋಕಸಭಾ ಕ್ಷೇತ್ರದಿಂದ ಸ್ಪರ್ಧಿಸಿರುವ ಜೋಶಿ ಅವರನ್ನು ಯಾವುದೇ ಕಾರಣಕ್ಕೂ ಬದಲಾವಣೆ ಮಾಡಲ್ಲ. ಸ್ವಾಮೀಜಿ ಜೊತೆ ಮಾತನಾಡಿ, ಅವರಿಗಾದ ತಪ್ಪು ಗ್ರಹಿಕೆಯನ್ನು ಹೋಗಲಾಡಿಸುವೆ**
> **ಬಿ.ಎಸ್. ಯಡಿಯೂರಪ್ಪ,** ಬಿಜೆಪಿ ಸಂಸದೀಯ ಮಂಡಳಿ ಸದಸ್ಯ

ಚಿತ್ರದುರ್ಗ: ಕಾರಜೋಳ ಬಿಜೆಪಿ ಅಭ್ಯರ್ಥಿ

ನವದೆಹಲಿ: ಚಿತ್ರದುರ್ಗ (ಮೀಸಲು) ಲೋಕಸಭಾ ಕ್ಷೇತ್ರದಲ್ಲಿ ಮಾಜಿ ಉಪಮುಖ್ಯಮಂತ್ರಿ ಗೋವಿಂದ ಕಾರಜೋಳ ಅವರನ್ನು ಬಿಜೆಪಿ ಕಣಕ್ಕಿಳಿಸಿದೆ. ಕೇಂದ್ರ ಸಚಿವ ಎ.ನಾರಾಯಣಸ್ವಾಮಿ ಅವರಿಗೆ ಟಿಕೆಟ್ ಕೈ ತಪ್ಪಿದೆ.

ರಾಜ್ಯದಲ್ಲಿ 25 ಕ್ಷೇತ್ರಗಳಲ್ಲಿ ಬಿಜೆಪಿ ಸ್ಪರ್ಧಿಸುತ್ತಿದ್ದು, ಮೂರು ಕ್ಷೇತ್ರಗಳನ್ನು ಜೆಡಿಎಸ್‌ಗೆ ಬಿಟ್ಟುಕೊಟ್ಟಿದೆ. 24 ಕ್ಷೇತ್ರಗಳಿಗೆ ಅಭ್ಯರ್ಥಿಗಳ ಅಂತಿಮಗೊಳಿಸಿದ್ದ ಬಿಜೆಪಿಯು ಚಿತ್ರದುರ್ಗ ಕ್ಷೇತ್ರವನ್ನು ಮಾತ್ರ ಬಾಕಿ ಉಳಿಸಿಕೊಂಡಿತ್ತು.

ಬಾಗಲಕೋಟೆ ಜಿಲ್ಲೆಯ ಮುಧೋಳ ವಿಧಾನಸಭಾ ಕ್ಷೇತ್ರದಿಂದ 5 ಬಾರಿ ಆಯ್ಕೆಯಾಗಿದ್ದ ಕಾರಜೋಳ, 2023ರ ವಿಧಾನ ಸಭಾ ಚುನಾವಣೆಯಲ್ಲಿ ಸೋತಿದ್ದರು. ಮಾಜಿ ಸಂಸದ ಬಿ.ಎನ್. ಚಂದ್ರಪ್ಪ ಕಾಂಗ್ರೆಸ್ ಅಭ್ಯರ್ಥಿ; ಮೂಲತಃ ಮೂಡಿಗೆರೆಯವರು. ಮೀಸಲು ಕ್ಷೇತ್ರದಲ್ಲಿ ಇಬ್ಬರು ‘ವಲಸೆ’ ಅಭ್ಯರ್ಥಿಗಳ ಹಣಾಹಣಿಗೆ ವೇದಿಕೆ ಸಜ್ಜಾಗಿದೆ.

ಕಾಂಗ್ರೆಸ್‌ಗೆ ಕೋಲಾರದ ಕಿಚ್ಚು

ಒಂದನೇ ಪುಟದಿಂದ...

ಚಿಂತಾಮಣಿ ಶಾಸಕ, ಉನ್ನತ ಶಿಕ್ಷಣ ಸಚಿವರೂ ಆಗಿರುವ ಡಾ.ಎಂ.ಸಿ. ಸುಧಾಕರ್, ಕೋಲಾರ ಶಾಸಕ ಕೊತ್ತೂರು ಮಂಜುನಾಥ್, ಮಾಲೂರು ಶಾಸಕ ಕೆ.ವೈ. ನಂಜೇಗೌಡ, ಮುಖ್ಯಮಂತ್ರಿ ರಾಜಕೀಯ ಕಾರ್ಯದರ್ಶಿಯೂ ಆಗಿರುವ ವಿಧಾನಪರಿಷತ್ ಸದಸ್ಯ ನಸೀರ್ ಅಹ್ಮದ್ ಮತ್ತು ಮತ್ತೊಬ್ಬ ಸದಸ್ಯ ಅನಿಲ್ ಕುಮಾರ್ ಅವರು ತಮ್ಮ ಸ್ಥಾನಕ್ಕೆ ರಾಜೀನಾಮೆ ನೀಡುವುದಾಗಿ ಬೆದರಿಕೆ ಹಾಕುವ ಮೂಲಕ, ತಮ್ಮ ಎದುರಾಳಿಯನ್ನು ಕಟ್ಟಿಹಾಕುವ ತಂತ್ರ ಹೆಣೆದರು.

ರಾಜೀನಾಮೆ ಸಲ್ಲಿಸಲು ಮುಂದಾದ ನಸೀರ್ ಅಹ್ಮದ್ ಮತ್ತು ಅನಿಲ್ ಕುಮಾರ್ ಅವರು ಸಭಾಪತಿ ಹೊರಟ್ಟಿಯವರ ಕಚೇರಿಗೆ ಬಂದರು. ಮಾಧ್ಯಮದವರ ಎದುರು ರಾಜೀನಾಮೆ ಪತ್ರ ಪ್ರದರ್ಶಿಸಿದ ನಸೀರ್, ಅದನ್ನು ಸಲ್ಲಿಸಲು ಮುಂದಾದರು. ‘ಬಿಳಿಹಾಳೆಯ ಮೇಲಲ್ಲ, ಲೆಟರ್ ಹೆಡ್‌ನಲ್ಲಿ ರಾಜೀನಾಮೆ ಪತ್ರ ಬರೆದು ಕೊಡಿ’ ಎಂದು ನಸೀರ್ ಮತ್ತು ಅನಿಲ್ ಕುಮಾರ್ ಅವರಿಗೆ ಹೊರಟ್ಟಿ ಸೂಚಿಸಿದರು. ಈ ಬೆಳವಣಿಗೆಗಳ ಮಧ್ಯೆಯೇ, ಅಲ್ಲಿಗೆ ದೌಡಾಯಿಸಿದ ಸಚಿವ ಬೈರತಿ ಸುರೇಶ್ ಅವರು ಶಾಸಕರ ಮನವೊಲಿಸಿದರು.

ಹೊರಟ್ಟಿ ಕಚೇರಿಯಲ್ಲಿಯೇ ಬೈರತಿ ಸುರೇಶ್ ಮಾತನಾಡಿ, ‘ಅಸಮಾಧಾನಗೊಂಡವರ ಮನವೊಲಿಸುವಂತೆ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ, ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ನನಗೆ ಹೇಳಿದರು. ಸೌಹಾರ್ದಯುತವಾಗಿ ಸಮಸ್ಯೆ ಪರಿಹರಿಸೋಣ ಎಂದಿದ್ದಾರೆ. ಅದರಂತೆ ಪಕ್ಷದ ನಾಯಕರ ಸಂದೇಶವನ್ನು ಶಾಸಕರಿಗೆ ತಿಳಿಸಿದ್ದೇನೆ. ಅವರೂ ಒಪ್ಪಿಕೊಂಡಿದ್ದಾರೆ’ ಎಂದರು.

ಹೊರಟ್ಟಿ ಮಾತನಾಡಿ, ‘ಕಾಂಗ್ರೆಸ್‌ನ ಇಬ್ಬರು ಸದಸ್ಯರು ರಾಜೀನಾಮೆ ಕೊಡುವುದಾಗಿ ಬೆಳಿಗ್ಗೆ 11ಕ್ಕೆ ಕರೆ ಮಾಡಿದ್ದರು. ಅವರಿಗೆ 12.30ರಿಂದ 1 ಗಂಟೆಯ ಸಮಯ ನೀಡಿದ್ದೆ. ಹಾಳೆಯಲ್ಲಿ ರಾಜೀನಾಮೆ ಪತ್ರ ತಂದಿದ್ದರು. ಲೆಟರ್ ಹೆಡ್‌ನಲ್ಲಿ ಬರೆದುಕೊಡಿ ಎಂದೆ. ನಂತರ ಲೆಟರ್‌ಹೆಡ್ ತರಿಸಿಕೊಂಡು ರಾಜೀನಾಮೆ ಪತ್ರ ಬರೆದರು. ಆದರೆ, ನನಗೆ ಕೊಡಲಿಲ್ಲ. ಅವರು ರಾಜೀನಾಮೆ ಕೊಟ್ಟರೆ ಸ್ವೀಕರಿಸುತ್ತೇನೆ’ ಎಂದರು.

‘ಸಾಕಷ್ಟು ಜನರನ್ನು ಶಾಸಕರಾಗಿ ಮಾಡಿದ್ದೇನೆ’

‘ಕೋಲಾರದ ಜನ ನನ್ನನ್ನು ಏಳು ಬಾರಿ ಗೆಲ್ಲಿಸಿದ್ದಾರೆ. ನಾನೇ ಸಾಕಷ್ಟು ಜನರನ್ನು ಶಾಸಕರನ್ನಾಗಿ ಮಾಡಿದ್ದೇನೆ. ಕೋಲಾರ ಟಿಕೆಟ್ ವಿಚಾರ ಸಂಬಂಧ ಶಾಸಕರ ಟೀಕೆಗೆ ನಾನು ಉತ್ತರಿಸುವುದಿಲ್ಲ. ಎಲ್ಲವನ್ನೂ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ನಿರ್ಧರಿಸಲಿದ್ದಾರೆ’ ಎಂದು ಸಚಿವ ಕೆ.ಎಚ್. ಮುನಿಯಪ್ಪ ಹೇಳಿದರು.

ಸುದ್ದಿಗಾರರ ಜೊತೆ ಮಾತನಾಡಿದ ಅವರು, ‘ಚಿಕ್ಕಪೆದ್ದಣ್ಣ ಅವರಿಗೆ ಟಿಕೆಟ್ ನೀಡುವುದನ್ನು ವಿರೋಧಿಸಿ ಕೋಲಾರ ಭಾಗದ ಶಾಸಕರು ರಾಜೀನಾಮೆ ನೀಡಲು ಮುಂದಾಗಿರುವ ಬಗ್ಗೆ ಅವರನ್ನೇ ಕೇಳಿ. ಸಚಿವ ಸುಧಾಕರ್ ಸೇರಿದಂತೆ ಅಸಮಾಧಾನಿತರ ಹೇಳಿಕೆಗಳಿಗೆ ಪ್ರತಿಕ್ರಿಯಿಸುವುದಿಲ್ಲ’ ಎಂದರು.

‘ರಮೇಶ್ ಕುಮಾರ್, ನಾವು ಎಲ್ಲರೂ ಒಟ್ಟಿಗಿದ್ದೇವೆ. ಸಚಿವರೂ ಜೊತೆಗಿದ್ದಾರೆ. ಎಲ್ಲರೂ ಒಟ್ಟಿಗೆ ಕೆಲಸ ಮಾಡಿ ಗೆಲ್ಲಿಸುವುದಾಗಿ ಮುಖ್ಯಮಂತ್ರಿ, ಉಪ ಮುಖ್ಯಮಂತ್ರಿ ಮುಂದೆ ಹೇಳಿದ್ದೇವೆ. ಇಷ್ಟಾದರೂ ಹೈಕಮಾಂಡ್ ತೀರ್ಮಾನಕ್ಕೆ ಬದ್ಧರಾಗಿರುತ್ತೇವೆ’ ಎಂದರು.

‘ಪುಟಗೋಸಿ ಬ್ಯಾಗ್ ಹಿಡಿದು ಬರುತ್ತಿದ್ದ’

‘ಕೋಲಾರದಲ್ಲಿ ನಾಯಕರನ್ನು ಬೆಳೆಸಿದವ ನಾನು’ ಎಂಬ ಕೆ.ಎಚ್. ಮುನಿಯಪ್ಪ ಹೇಳಿಕೆಗೆ ಗರಂ ಆಗಿ ಪ್ರತಿಕ್ರಿಯಿಸಿದ ನಸೀರ್ ಅಹ್ಮದ್, ‘ನಾನು 1991ರಲ್ಲಿಯೇ ಸಚಿವನಾಗಿದ್ದೆ. ಆಗ ಆತ (ಮುನಿಯಪ್ಪ) ಪುಟಗೋಸಿ ಬ್ಯಾಗ್ ಹಿಡಿದುಕೊಂಡು ಬರುತ್ತಿದ್ದ’ ಎಂದರು.

ನಸೀರ್ ಅಹ್ಮದ್ ಪದ ಬಳಕೆ ಕುರಿತು ಮಾತನಾಡಿದ ಮುನಿಯಪ್ಪ, ‘ಕೋಪದಲ್ಲಿ ಸಣ್ಣತನದ ಮಾತನಾಡುತ್ತಾರೆ. ನಾನು ಅವರಷ್ಟು ಕೆಳಮಟ್ಟಕ್ಕೆ ಇಳಿದು ಮಾತನಾಡುವುದಿಲ್ಲ. ನಾನು ರಾಷ್ಟ್ರ ಮಟ್ಟದಲ್ಲಿ ರಾಜಕಾರಣ ಮಾಡಿದ್ದೇನೆ. ಹತ್ತು ವರ್ಷ ಕೇಂದ್ರ ಸಚಿವನಾಗಿದ್ದೆ. ಅವರ ಯಾವುದೇ ಹೇಳಿಕೆಗಳಿಗೆ ಪ್ರತಿಕ್ರಿಯಿಸುವುದಿಲ್ಲ’ ಎಂದು ಹೇಳಿದರು.

ಬಾಂಬ್ ಸ್ಫೋಟ: ಬೆಂಗಳೂರು, ತೀರ್ಥಹಳ್ಳಿಯಲ್ಲಿ ಎನ್‌ಐಎ ಶೋಧ

ಪ್ರಜಾವಾಣಿ ವಾರ್ತೆ

ಬೆಂಗಳೂರು/ತೀರ್ಥಹಳ್ಳಿ: ದಿ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟದ ತನಿಖೆ ನಡೆಸುತ್ತಿರುವ ರಾಷ್ಟ್ರೀಯ ತನಿಖಾ ದಳದ (ಎನ್‌ಐಎ) ಅಧಿಕಾರಿಗಳು, ಬೆಂಗಳೂರು ಹಾಗೂ ತೀರ್ಥಹಳ್ಳಿಯ ಹಲವೆಡೆ ಬುಧವಾರ ದಾಳಿ ಮಾಡಿ ಶೋಧ ನಡೆಸಿದರು.

ಇಸ್ಲಾಮಿಕ್ ಸ್ಟೇಟ್ (ಐಎಸ್) ಜೊತೆ ನಂಟು ಹೊಂದಿದ್ದ ಕೆಲ ವ್ಯಕ್ತಿಗಳು, ಬೆಂಗಳೂರಿನ ಸುದ್ದಗುಂಟೆಪಾಳ್ಯ ಠಾಣೆ ವ್ಯಾಪ್ತಿಯಲ್ಲಿರುವ ಗುರಪ್ಪನಪಾಳ್ಯದಲ್ಲಿ ಸಭೆ ನಡೆಸಿದ್ದರು. ರಾಮೇಶ್ವರಂ ಕೆಫೆಯಲ್ಲಿ ಬಾಂಬ್ ಇರಿಸಿದ್ದ ಎನ್ನಲಾದ ಶಂಕಿತ ಮುಸಾವೀರ್ ಹುಸೇನ್ ಶಾಜೇಬ್ ಸಹ ಸಭೆಯಲ್ಲಿ ಪಾಲ್ಗೊಂಡಿದ್ದನೆಂಬ ಮಾಹಿತಿ ತನಿಖಾ ತಂಡಕ್ಕೆ ಲಭ್ಯವಾಗಿದೆ.

ತಲೆಮರೆಸಿಕೊಂಡಿರುವ ಮುಸಾವೀರ್ ಬಗ್ಗೆ ಮಾಹಿತಿ ಸಂಗ್ರಹಿಸಲು ಹಲವು ವ್ಯಕ್ತಿಗಳನ್ನು ಎನ್‌ಐಎ ಅಧಿಕಾರಿಗಳು ವಿಚಾರಣೆ ನಡೆಸುತ್ತಿದ್ದಾರೆ. ಇದರಿಂದ ಲಭ್ಯವಾದ ಮಾಹಿತಿ ಆಧರಿಸಿ ಗುರುಪ್ಪನಪಾಳ್ಯ ಸೇರಿದಂತೆ ಕೆಲ ಸ್ಥಳಗಳಲ್ಲಿ ಅಧಿಕಾರಿಗಳು ಬುಧವಾರ ನಸುಕಿನಲ್ಲಿ ಶೋಧ ನಡೆಸಿದರು ಎಂದು ಮೂಲಗಳು ಹೇಳಿವೆ.

ತೀರ್ಥಹಳ್ಳಿಯ ಮನೆಗಳಲ್ಲಿ ಶೋಧ: ಮುಸಾವೀರ್ ಹುಸೇನ್ ಶಾಜೇಬ್‌ನ ಸೊಪ್ಪುಗುಡ್ಡೆಯ ಮಾರ್ಕೆಟ್ ರಸ್ತೆಯಲ್ಲಿರುವ ಮನೆಯಲ್ಲಿ ಎನ್‌ಐಎ ಅಧಿಕಾರಿಗಳು ಬುಧವಾರ ಬೆಳಿಗ್ಗೆ ಶೋಧ ನಡೆಸಿದರು.

ಕುಕ್ಕರ್ ಸ್ಫೋಟ ಹಾಗೂ ಐಇಡಿ ತಯಾರಿಸಿ ಪರೀಕ್ಷಾರ್ಥ ಸ್ಫೋಟ ಪ್ರಕರಣದಲ್ಲಿ ಜೈಲು ಸೇರಿರುವ ಅರಾಫತ್ ಅಲಿ, ಮಾಝ್ ಮುನೀರ್ ಅಹ್ಮದ್, ಮೊಹಮ್ಮದ್ ಶಾರೀಕ್‌ನ ಮನೆಯಲ್ಲೂ ಅಧಿಕಾರಿಗಳು ಪರಿಶೀಲನೆ ನಡೆಸಿದರು.

ಕೃತ್ಯದಲ್ಲಿ ಭಾಗಿಯಾಗಿ ತಲೆಮರೆಸಿಕೊಂಡಿದ್ದಾನೆ ಎನ್ನಲಾದ ಶಂಕಿತ ಅಬ್ದುಲ್ ಮತೀನ್ ಅಹ್ಮದ್ ತಾಹಾ ಮನೆಯಲ್ಲೂ ಶೋಧ ನಡೆಸಿದರು. ಪಾಪ್ಯುಲರ್ ಫ್ರಂಟ್ ಆಫ್ ಇಂಡಿಯಾ (ಪಿಎಫ್‌ಐ) ಜೊತೆ ನಂಟು ಹೊಂದಿರುವ ಆರೋಪ ಎದುರಿಸುತ್ತಿರುವ ನವೀದ್‌ನ ಮೊಬೈಲ್ ಮಳಿಗೆಯಲ್ಲೂ ಶೋಧ ನಡೆಸಿ ಕೆಲ ವಸ್ತುಗಳನ್ನು ಜಪ್ತಿ ಮಾಡಿದರು.

ಸೊಪ್ಪುಗುಡ್ಡೆ, ಬೆಟ್ಟಮಕ್ಕಿ, ಇಂದಿರಾನಗರ, ಆಜಾದ್ ರಸ್ತೆ, ಮಾರ್ಕೆಟ್ ರಸ್ತೆಯ ಹಲವೆಡೆ ನಡೆದ ಶೋಧದಲ್ಲಿ 15ಕ್ಕೂ ಹೆಚ್ಚು ಅಧಿಕಾರಿಗಳು ಪಾಲ್ಗೊಂಡಿದ್ದರು. ಸ್ಥಳೀಯ ಪೊಲೀಸರು ಭದ್ರತೆ ಒದಗಿಸಿದ್ದರು.

ಹಲವರಿಗೆ ನೋಟಿಸ್: ‘ಶಂಕಿತರ ಜೊತೆ ಒಡನಾಟ ಹೊಂದಿದ್ದ ಕೆಲವರನ್ನು ವಿಚಾರಣೆ ನಡೆಸಿದ ಅಧಿಕಾರಿಗಳು, ಅವರೆಲ್ಲರಿಗೂ ನೋಟಿಸ್ ನೀಡಿದ್ದಾರೆ. ವಿಚಾರಣೆಗಾಗಿ ಬೆಂಗಳೂರಿಗೆ ಬರುವಂತೆ ತಿಳಿಸಿದ್ದಾರೆ’ ಎಂದು ಮೂಲಗಳು ಹೇಳಿವೆ.

‘ಮುಸ್ಲಿಂ ಸಮುದಾಯದಲ್ಲಿ ಆತಂಕ’

‘ಮುಸ್ಲಿಂ ಸಮುದಾಯ ವ್ಯವಹಾರ ನಂಬಿ ಬದುಕುತ್ತಿದೆ. ಭಯೋತ್ಪಾದನಾ ಕೃತ್ಯಗಳಲ್ಲಿ ಭಾಗಿಯಾಗಿರುವ ಯುವಕರಿಂದ, ಇಡೀ ಮುಸ್ಲಿಂ ಸಮುದಾಯದ ಮರ್ಯಾದೆ ಹರಾಜಾಗುತ್ತಿದೆ. ಯುವಕರ ಕುಟುಂಬಸ್ಥರಿಗೆ ಧೈರ್ಯ ಹೇಳುವ ವ್ಯಕ್ತಿಗಳಿಗೂ ವಿಚಾರಣೆಗಾಗಿ ನೋಟಿಸ್ ನೀಡಲಾಗುತ್ತಿದೆ. ತಾಲ್ಲೂಕಿನಲ್ಲಿ ಸುಮಾರು 65 ಜನರಿಗೆ ಈಗಾಗಲೇ ನೋಟಿಸ್ ಜಾರಿಯಾಗಿದೆ. ತೀರ್ಥಹಳ್ಳಿ ಬಿಟ್ಟು ಹೊರಗಡೆ ಹೋಗದ ಸ್ಥಿತಿ ಎದುರಾಗಿದೆ. ಯಾವಾಗ, ಎಲ್ಲಿ, ಯಾವ ಅನಾಹುತ ನಡೆಯುತ್ತದೆಯೋ ಎಂಬ ಭಯ ಶುರುವಾಗಿದೆ’ ಎಂದು ತೀರ್ಥಹಳ್ಳಿಯ ಕೆಲ ಮುಸ್ಲಿಂ ವ್ಯಾಪಾರಿಗಳು ಆತಂಕ ವ್ಯಕ್ತಪಡಿಸಿದರು.

ಇಕ್ಬಾಲ್ ಪುತ್ರನಿಗೆ ನೋಟಿಸ್

ಭಟ್ಕಳ: ಇಂಡಿಯನ್ ಮುಜಾಹಿದ್ದೀನ್ ನಿಷೇಧಿತ ಸಂಘಟನೆಯ ಮುಖ್ಯಸ್ಥ ಎನ್ನಲಾದ ಇಕ್ಬಾಲ್ ಭಟ್ಕಳನ ಪುತ್ರನಿಗೆ ಎನ್‌ಐಎ ಅಧಿಕಾರಿಗಳು ಬುಧವಾರ ನೋಟಿಸ್ ನೀಡಿದ್ದು, ವಿಚಾರಣೆಗಾಗಿ ಶುಕ್ರವಾರ ಬೆಂಗಳೂರಿನ ಕಚೇರಿಗೆ ಬರುವಂತೆ ಸೂಚಿಸಿದ್ದಾರೆ.

ಪಟ್ಟಣದ ತಕೀಯಾ ಸ್ಟ್ರೀಟ್‌ನಲ್ಲಿರುವ ಇಕ್ಬಾಲ್ ಭಟ್ಕಳ ಮನೆಗೆ ಬುಧವಾರ ಬೆಳಿಗ್ಗೆ ಬಂದಿದ್ದ ಅಧಿಕಾರಿಗಳ ತಂಡ, ಇಕ್ಬಾಲ್ ಮಗ ಅಬ್ದುಲ್ ರಾಬಿದ್‌ನನ್ನು ವಿಚಾರಣೆ ನಡೆಸಿತು. ಪ್ರಾಥಮಿಕ ವಿಚಾರಣೆಯ ಬಳಿಕ ನೋಟಿಸ್ ಜಾರಿ ಮಾಡಿದೆ.

ದಿ ರಾಮೇಶ್ವರಂ ಕೆಫೆ ಬಾಂಬ್ ಸ್ಫೋಟದ ಪ್ರಮುಖ ಶಂಕಿತ, ಬಸ್ ಮೂಲಕ ಭಟ್ಕಳಕ್ಕೆ ಬಂದಿದ್ದನೆಂಬ ಮಾಹಿತಿ ಇತ್ತು. ಇದೇ ಮಾಹಿತಿ ಆಧರಿಸಿ ಎನ್‌ಐಎ ಅಧಿಕಾರಿಗಳು, ಭಟ್ಕಳದಲ್ಲಿ ಶೋಧ ನಡೆಸಿದ್ದರು.

ಜಾತಿ– ಮತ ಮೀರಿದ, ಮರೆಯಲಾಗದ ಗುರು

ನುಡಿ ನಮನ

• ಸಿದ್ಧಲಿಂಗ ಪಟ್ಟಣಶೆಟ್ಟಿ

ಸಾಹಿತಿ ಗುರುಲಿಂಗ ಕಾಪಸೆ ಅವರು ಶಿಷ್ಯರು ಮರೆಯಲಾಗದಂಥ ಗುರುವಾಗಿದ್ದರು. ಜಾತಿ, ಮತ ಯಾವುದೇ ತಾರತಮ್ಯ ಮಾಡದೆ ವಿದ್ಯಾರ್ಥಿಗಳನ್ನು ಪ್ರೋತ್ಸಾಹಿಸಿ, ಬೆಳೆಸಿದ ಶಿಕ್ಷಕರು.

ಮನದಟ್ಟಾಗುವಂತೆ ಬೋಧಿಸುತ್ತಿದ್ದ ಅವರ ತರಗತಿಯನ್ನು ವಿದ್ಯಾರ್ಥಿಗಳು ತಪ್ಪಿಸುತ್ತಿರಲಿಲ್ಲ. ವಿಶೇಷ ತರಗತಿ ತೆಗೆದುಕೊಂಡು ಹಳಗನ್ನಡ, ಛಂದಸ್ಸು ಮೊದಲಾದ ವಿಷಯ ಕಲಿಸುತ್ತಿದ್ದರು.

ತಯಾರಿ ಇಲ್ಲದೆ ತರಗತಿ, ಸಭೆಗೆ ಹೋಗುತ್ತಿರಲಿಲ್ಲ. ಯಾವುದೇ ವಿಷಯ ವ್ಯಾಖ್ಯಾನಿಸುವಾಗ ಅದರ ಬಗ್ಗೆ ಪೂರ್ಣ ಸಿದ್ಧತೆ ಮಾಡಿಕೊಳ್ಳುತ್ತಿದ್ದರು. ಮುತ್ತಿನಂಥ (ಅಂದವಾಗಿ) ಬರವಣಿಗೆ ಅವರದು.

ಎಲ್ಲಿಯೂ ಸಂಘ–ಸಂಸ್ಥೆ ರಾಜಕೀಯ ಮಾಡಲಿಲ್ಲ. ಕರ್ನಾಟಕ ವಿಶ್ವವಿದ್ಯಾಲಯವು ಬೆಳಗಾವಿಯಲ್ಲಿ ಸ್ನಾತಕೋತ್ತರ ಅಧ್ಯಯನ ಕೇಂದ್ರ ಆರಂಭಿಸಿದಾಗ ಕೆಲವರು (ಬೋಧಕರು) ಅಲ್ಲಿಗೆ ಹೋಗಲು ಒಲ್ಲೆ ಎಂದರು. ಆದರೆ, ಗುರುಲಿಂಗ ಕಾಪಸೆ ಒಪ್ಪಿಕೊಂಡು ಅಲ್ಲಿಗೆ ಹೋದರು. ಅಲ್ಲಿ ಕನ್ನಡ ಮತ್ತು ಮರಾಠಿ ಅಧ್ಯಯನ ವಿಭಾಗದ ನಡುವೆ ಬಾಂಧವ್ಯ ಬೆಸೆದರು. ಮರಾಠಿಗರಲ್ಲಿ ಕನ್ನಡ ಪ್ರೀತಿ ಬೆಳೆಸಿದರು.

ಹಟ ತೊಟ್ಟು ಇಂಗ್ಲಿಷ್ ಕಲಿತ ಅವರು ಅರವಿಂದರ ಸಾಹಿತ್ಯ ಓದಿದರು. ಅವರಿಗೆ ನೆನಪಿನ ಶಕ್ತಿ ಚೆನ್ನಾಗಿತ್ತು. ಓದಿದ ಕಾವ್ಯಗಳನ್ನು ಮತ್ತೆ ಮತ್ತೆ ಕಲಿಸಿದ್ದರಿಂದ ಆಯಾ ಪ್ರಸಂಗಕ್ಕೆ ತಕ್ಕಂತೆ ಉಲ್ಲೇಖಿಸುತ್ತಿದ್ದರು. ಕಾದಂಬರಿ, ಕಥೆ ಸಾಹಿತ್ಯವನ್ನು ಓದಿದ್ದರು. ಅವರಿಗೆ ವೈಚಾರಿಕ ಸಾಹಿತ್ಯ ಮತ್ತು ತತ್ವಜ್ಞಾನ (ದಾರ್ಶನಿಕ ಸಾಹಿತ್ಯ) ಬಗ್ಗೆ ಅಪಾರ ಪ್ರೀತಿ ಇತ್ತು.

ಮಧುರ ಚೆನ್ನರ ಸಂಪರ್ಕದಿಂದ ಅವರಿಗೆ ಅನುಭಾವ ಕಾವ್ಯದಲ್ಲಿ ಪ್ರೀತಿ ಮೂಡಿತು. ಮಧುರ ಚೆನ್ನರ ಸಂಪರ್ಕ ಮತ್ತು ಪ್ರಾಥಮಿಕ ಶಾಲಾ ಶಿಕ್ಷಕರಾಗಿ ಕಾರ್ಯನಿರ್ವಹಿಸಿದ್ದು ಅವರ ವಿಶಿಷ್ಟ ಸ್ವಭಾವಕ್ಕೆ ಕಾರಣ. ತಾನು ಶಾಲಾ ಶಿಕ್ಷಕನಾಗಿದ್ದು ಪುಣ್ಯ ಎಂದು ಅವರು ಹೇಳಿಕೊಂಡಿದ್ದರು.

ಗುರುಲಿಂಗ ಕಾಪಸೆ ಅವರಿಗೆ ಚೆನ್ನವೀರ ಕಣವಿ ಬಗ್ಗೆ ಅಪಾರ ಪ್ರೀತಿ ಇತ್ತು. ಕಣವಿ ಅವರಿಗೆ ಬೆಳೆಯಲು ಪ್ರೋತ್ಸಾಹಿಸಿದರು.

ಕಾವ್ಯಗಳನ್ನು ಓದಿ ಅರ್ಥ ವಿವರಿಸುವ ಕಲೆ ಕಾಪಸೆ ಅವರಿಗೆ ಕರಗತವಾಗಿತ್ತು. ಓದುಗರಿಗೆ ಕಾವ್ಯದ ಹೊಳಹುಗಳನ್ನು ಅರ್ಥೈಸುತ್ತಿದ್ದರು. ಕವಿಗಳು, ಕೃತಿಕಾರರು, ಕೃತಿಗಳನ್ನು ಉಳಿಸುವ ಕಾಯಕ ಮಾಡಿದ ವಿರಳ ಅಧ್ಯಾಪಕ ಅವರು.

ಬೇಂದ್ರೆ ಅವರನ್ನು ಚೆನ್ನಾಗಿ ಓದಿಕೊಂಡಿದ್ದರು. ಜಾತಿ, ಮತ ಎಲ್ಲ ಮೀರಿ ಬರಹಗಳನ್ನು ಪ್ರೀತಿ ಮಾಡುತ್ತಿದ್ದದ್ದು ಅವರ ದೊಡ್ಡ ಗುಣ. ಜಾತಿಯನ್ನು ಎಂದೂ ತಲೆಗೆ ಹಾಕಿಕೊಳ್ಳಲಿಲ್ಲ. ಸಮಾಜ ಕಟ್ಟುವ ಕೆಲಸ ಮಾಡಿದರು.

ಬಾಗಲಕೋಟೆ ಜಿಲ್ಲೆಯಲ್ಲಿ ತಮ್ಮ ಹಾಗೆಯೇ ಪ್ರಾಥಮಿಕ ಶಾಲಾ ಶಿಕ್ಷಕಿಯಾಗಿದ್ದ ಹಸೀನಾ ಎಂ.ಬೀಳಗಿ ಅವರನ್ನು ಪ್ರೋತ್ಸಾಹಿಸಿ, ಎಂ.ಎ ಕಲಿಯಲು ಮತ್ತು ಕಾಲೇಜು ಅಧ್ಯಾಪಕಿಯಾಗಲು ನೆರವಾದರು. ಹಸೀನಾ ಅವರೂ ಕಾಪಸೆ ಅವರಂತೆಯೇ ಯಶಸ್ವಿಯಾಗಿ ಅಧ್ಯಾಪಕಿ, ಲೇಖಕಿಯಾದರು.

ಮಕ್ಕಳ ಸಾಹಿತ್ಯದ ಬಗ್ಗೆಯೂ ಅವರಿಗೆ ಅಪಾರ ಪ್ರೀತಿ ಇತ್ತು. ಸಹೋದರ ಈಶ್ವರ ಕಾಪಸೆ ಅದಕ್ಕೆ ಕಾರಣ. ಈಶ್ವರ ಕಾಪಸೆ ಅವರು ಶಿಕ್ಷಕರಾಗಿದ್ದು, ಮಕ್ಕಳ ಸಾಹಿತ್ಯದ ಪುಸ್ತಕ ಬರೆದಿದ್ದಾರೆ.

ಗುರುಲಿಂಗ ಕಾಪಸೆ ಅವರು ಸಿದ್ದೇಶ್ವರ ಸ್ವಾಮೀಜಿ ಅವರಿಗೆ ಆಪ್ತರಾಗಿದ್ದರು. ನವಕಲ್ಯಾಣಮಠದಲ್ಲಿ ಪುಸ್ತಕಗಳ ಪ್ರಕಟಣೆ ಹೊಣೆ ನಿರ್ವಹಿಸಿದರು. ಪ್ರತಿದಿನ ಬೆಳಿಗ್ಗೆ ‘ವಾಕ್’ ಮಾಡುವುದನ್ನು ರೂಢಿಸಿಕೊಂಡಿದ್ದರು. ಧಾರವಾಡದಲ್ಲಿ ಅವರಷ್ಟು ವಾಕ್ ಮಾಡಿದವರನ್ನು ನಾನು ನೋಡಿಲ್ಲ.

ಸಾಹಿತಿ ಗುರುಲಿಂಗ ಕಾಪಸೆ ನಿಧನ

ಧಾರವಾಡ: ಸಾಹಿತಿ ಗುರುಲಿಂಗ ಕಾಪಸೆ (96) ನಗರದ ಆಸ್ಪತ್ರೆಯಲ್ಲಿ ಮಂಗಳವಾರ ರಾತ್ರಿ ನಿಧನರಾದರು. ಅವರಿಗೆ ಪುತ್ರರಾದ ಚಂದ್ರಶೇಖರ್, ರವಿ, ಪುತ್ರಿಯರಾದ ಶಶಿಕಲಾ ಹಾಗೂ ಉಷಾ ಇದ್ದಾರೆ.

ನಗರದ ಸಪ್ತಾಪುರದ ದುರ್ಗಾಕಾಲೊನಿಯ ಸ್ವಗೃಹ ‘ನೋಂಪಿ’ಯಲ್ಲಿ ಪಾರ್ಥಿವ ಶರೀರದ ಅಂತಿಮ ದರ್ಶನಕ್ಕೆ ಬುಧವಾರ ಮಧ್ಯಾಹ್ನದವರೆಗೆ ವ್ಯವಸ್ಥೆ ಮಾಡಲಾಗಿತ್ತು. ಅವರು ಬದುಕಿದ್ದಾಗ ಇಚ್ಛೆಪಟ್ಟಂತೆ ದೇಹವನ್ನು ಬೆಳಗಾವಿ ಜಿಲ್ಲೆಯ ಬೈಲಹೊಂಗಲದ ಡಾ.ರಾಮಣ್ಣವರ ಚಾರಿಟಬಲ್ ಟ್ರಸ್ಟ್‌ಗೆ ದಾನ ಮಾಡಲಾಯಿತು.

ವಿಜಯಪುರ ಜಿಲ್ಲೆಯ ಇಂಡಿ ತಾಲ್ಲೂಕಿನ ಹಿರೇಲೋಣಿ ಗ್ರಾಮದಲ್ಲಿ ಕೃಷಿಕರಾದ ಶಂಕರಪ್ಪ ಮತ್ತು ವೀರಮ್ಮ ದಂಪತಿಗೆ 1928ರ ಏಪ್ರಿಲ್ 2ರಂದು ಗುರುಲಿಂಗ ಜನಿಸಿದರು. ವಿಜಯಪುರ ಜಿಲ್ಲೆಯಲ್ಲಿ ಪ್ರಾಥಮಿಕ ಶಾಲಾ ಶಿಕ್ಷಕರಾಗಿ ವೃತ್ತಿ ಆರಂಭಿಸಿದ ಅವರು ನಂತರದ ವರ್ಷಗಳಲ್ಲಿ ಧಾರವಾಡದ ಕರ್ನಾಟಕ ವಿಶ್ವವಿದ್ಯಾಲಯದ ಬೋಧಕರಾದರು.

‘ಮಧುರ ಚೆನ್ನರ ಜೀವನ ಹಾಗೂ ಕೃತಿಗಳ ಸಮೀಕ್ಷೆ’, ‘ಸಾಹಿತ್ಯ ಸಂಬಂಧ’, ‘ಅಕ್ಕಮಹಾದೇವಿ’, ಶಾಲ್ಮಲೆಯಿಂದ ಗೋದಾವರಿಯವರೆಗೆ’ (ಪ್ರವಾಸ ಕಥನ) ಸೇರಿದಂತೆ ಹಲವು ಕೃತಿಗಳನ್ನು ರಚಿಸಿರುವ ಅವರು ಹಲವು ಮರಾಠಿ ಕೃತಿಗಳನ್ನು ಕನ್ನಡಕ್ಕೆ ಅನುವಾದಿಸಿದ್ದಾರೆ. ‘ವರದರಾಜ ಆದ್ಯ ಪ್ರಶಸ್ತಿ’, ‘ಕರ್ನಾಟಕ ಸಾಹಿತ್ಯ ಅಕಾಡೆಮಿ ಗೌರವ ಪ್ರಶಸ್ತಿ’, ‘ಆನಂದಕಂದ ಪ್ರಶಸ್ತಿ’, ‘ಕೇಂದ್ರ ಸಾಹಿತ್ಯ ಅಕಾಡೆಮಿ ಪ್ರಶಸ್ತಿ’ ಮುಂತಾದ ಪ್ರಶಸ್ತಿಗಳು ಸಂದಿವೆ. ಕರ್ನಾಟಕ ಸಾಹಿತ್ಯ ಅಕಾಡೆಮಿ ಅಧ್ಯಕ್ಷ, ಗೋಕಾಕ್ ಚಳವಳಿಯ ಸಂಘಟನಾ ಕಾರ್ಯದರ್ಶಿಯಾಗಿಯೂ ಕಾರ್ಯನಿರ್ವಹಿಸಿದ್ದರು.

ಹಣ ಅಕ್ರಮ ವರ್ಗಾವಣೆ ಆರೋಪದ ಪ್ರಕರಣದಲ್ಲಿ ದೆಹಲಿ ಮುಖ್ಯಮಂತ್ರಿ ಬಂಧನ ಪ್ರಕರಣ

ಅಮೆರಿಕ ಹೇಳಿಕೆಗೆ ಭಾರತ ಆಕ್ಷೇಪ

ನವದೆಹಲಿ(ಪಿಟಿಐ): ಹಣ ಅಕ್ರಮ ವರ್ಗಾವಣೆ ಆರೋಪದ ಪ್ರಕರಣದಲ್ಲಿ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರನ್ನು ಬಂಧಿಸಿರುವ ಕುರಿತು ಅಮೆರಿಕದ ಹೇಳಿಕೆಗೆ ಭಾರತ ಬುಧವಾರ ಆಕ್ಷೇಪ ವ್ಯಕ್ತಪಡಿಸಿದೆ.

ಭಾರತದಲ್ಲಿನ ಅಮೆರಿಕ ರಾಯಭಾರ ಕಚೇರಿಯ ಹಂಗಾಮಿ ಉಪ ಮುಖ್ಯಸ್ಥೆ ಗ್ಲಾರಿಯಾ ಬರ್ಬೆನಾ ಅವರನ್ನು ಕಚೇರಿಗೆ ಕರೆಯಿಸಿಕೊಂಡ ವಿದೇಶಾಂಗ ಸಚಿವಾಲಯ ಅಧಿಕಾರಿಗಳು, ಪ್ರತಿಭಟನೆ ದಾಖಲಿಸಿದ್ದಾರೆ.

‘ಕೇಜ್ರಿವಾಲ್ ಬಂಧನ ಕುರಿತು ನ್ಯಾಯಯುತ, ಪಾರದರ್ಶಕ ಹಾಗೂ ಸಕಾಲದಲ್ಲಿ ಕಾನೂನು ಪ್ರಕ್ರಿಯೆ ನಡೆಯುವಂತೆ ನೋಡಿಕೊಳ್ಳಬೇಕು’ ಎಂದು ಅಮೆರಿಕ ವಿದೇಶಾಂಗ ಇಲಾಖೆ ವಕ್ತಾರ ಹೇಳಿದ್ದರು.

‘ಅಮೆರಿಕದ ವಿದೇಶಾಂಗ ಇಲಾಖೆ ವಕ್ತಾರ ನೀಡಿರುವ ಹೇಳಿಕೆಯನ್ನು ಬಲವಾಗಿ ಆಕ್ಷೇಪಿಸುತ್ತೇವೆ. ರಾಜತಾಂತ್ರಿಕ ವಿಷಯ ಬಂದಾಗ, ಪ್ರತಿಯೊಂದು ಸರ್ಕಾರವು ಇತರ ದೇಶಗಳ ಸಾರ್ವಭೌಮತೆ ಹಾಗೂ ಆಂತರಿಕ ವ್ಯವಹಾರಗಳ ಕುರಿತಂತೆ ಗೌರವ ಹೊಂದಿರಬೇಕು. ಪ್ರಜಾಪ್ರಭುತ್ವ ರಾಷ್ಟ್ರಗಳ ವಿಚಾರದಲ್ಲಿ ಇಂತಹ ಹೊಣೆಗಾರಿಕೆ ಮತ್ತಷ್ಟು ಹೆಚ್ಚಿರಬೇಕು. ಇಲ್ಲದಿದ್ದರೆ ಇಂತಹ ನಡೆಗಳು ಅನಾರೋಗ್ಯಕರ ಪೂರ್ವನಿದರ್ಶನಕ್ಕೆ ಕಾರಣವಾಗುತ್ತವೆ. ಭಾರತದ ಸ್ವತಂತ್ರ ನ್ಯಾಯಾಂಗ ವ್ಯವಸ್ಥೆಯು ಈ ಕಾನೂನು ಪ್ರಕ್ರಿಯೆ ನಡೆಸುತ್ತಿದೆ. ಇಂತಹ ವ್ಯವಸ್ಥೆಗೆ ಮಸಿಬಳಿಯುವ ಯತ್ನ ಅನಪೇಕ್ಷಿತ’ ಎಂದೂ ಸಚಿವಾಲಯ ಹೇಳಿದೆ.

ಇಂದು ಕೋರ್ಟ್‌ನಲ್ಲಿ ಮಹತ್ವದ ಸಂಗತಿ ಬಹಿರಂಗ: ಸುನೀತಾ ಹೇಳಿಕೆ

ಸುನೀತಾ ಕೇಜ್ರಿವಾಲ್

ನವದೆಹಲಿ(ಪಿಟಿಐ): ‘ಆರೋಪಕ್ಕೆ ಸಂಬಂಧಿಸಿದಂತೆ ನನ್ನ ಪತಿ ಮಾರ್ಚ್ 28ರಂದು ನ್ಯಾಯಾಲಯದಲ್ಲಿ ಮಹತ್ವದ ವಿಷಯಗಳನ್ನು ಬಹಿರಂಗಪಡಿಸಲಿದ್ದಾರೆ’ ಎಂದು ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಪತ್ನಿ ಸುನೀತಾ ಕೇಜ್ರಿವಾಲ್ ಬುಧವಾರ ಹೇಳಿದ್ದಾರೆ.

ಡಿಜಿಟಲ್ ವಿಧಾನದ ಮೂಲಕ ಈ ಮಾಹಿತಿ ನೀಡಿದ ಅವರು,‘ಹಗರಣಕ್ಕೆ ಸಂಬಂಧಿಸಿದ ನೈಜ ವಿವರಗಳನ್ನು ಬಹಿರಂಗಪಡಿಸುವ ಜೊತೆಗೆ, ಸಾಕ್ಷ್ಯಗಳನ್ನು ಸಹ ಹಾಜರುಪಡಿಸಲಿರುವುದಾಗಿ ಅರವಿಂದ ಕೇಜ್ರಿವಾಲ್ ತಿಳಿಸಿದ್ದಾರೆ’ ಎಂದರು.

‘ಅಬಕಾರಿ ನೀತಿ ಹಗರಣಕ್ಕೆ ಸಂಬಂಧಿಸಿ ಜಾರಿ ನಿರ್ದೇಶನಾಲಯ (ಇ.ಡಿ) ಕಳೆದ ಎರಡು ವರ್ಷಗಳ ಅವಧಿಯಲ್ಲಿ 250ಕ್ಕೂ ಹೆಚ್ಚು ಬಾರಿ ದಾಳಿಗಳನ್ನು ನಡೆಸಿದೆ. ಈ ಯಾವುದೇ ದಾಳಿ ಸಂದರ್ಭದಲ್ಲಿಯೂ ಒಂದು ಪೈಸೆಯೂ ಪತ್ತೆಯಾಗಿಲ್ಲ ಎಂದು ಇ.ಡಿ ವಶದಲ್ಲಿರುವ ವೇಳೆ ಭೇಟಿ ಮಾಡಿದ ನನಗೆ ಕೇಜ್ರಿವಾಲ್ ತಿಳಿಸಿದ್ದರು’ ಎಂದು ಹೇಳಿದರು.

‘ಇ.ಡಿ ಅಧಿಕಾರಿಗಳು ಮನೀಷ್ ಸಿಸೋಡಿಯಾ, ಸಂಜಯ್ ಸಿಂಗ್ ಹಾಗೂ ಸತ್ಯೇಂದ್ರ ಜೈನ್ ಅವರಿಗೆ ಸೇರಿದ ಸ್ಥಳಗಳ ಮೇಲೆಯೂ ದಾಳಿ ನಡೆಸಿದ್ದರು. ಅಲ್ಲಿಯೂ ಹಣ ಪತ್ತೆಯಾಗಿಲ್ಲ. ಮುಖ್ಯಮಂತ್ರಿಗಳ ನಿವಾಸದ ಮೇಲೆ ನಡೆದ ದಾಳಿಯಲ್ಲಿ ಇ.ಡಿ ಅಧಿಕಾರಿಗಳಿಗೆ ಕೇವಲ ₹73 ಸಾವಿರ ಸಿಕ್ಕಿತ್ತು’ ಎಂದ ಅವರು, ‘ಅಬಕಾರಿ ಹಗರಣದ ಹಣ ಎಲ್ಲಿದೆ’ ಎಂದು ಪ್ರಶ್ನಿಸಿದರು.

‘ದೆಹಲಿಯ ಕುಡಿಯುವ ನೀರಿನ ಸಮಸ್ಯೆ ಬಗೆಹರಿಸುವ ಸಂಬಂಧ, ಇ.ಡಿ ವಶದಲ್ಲಿರುವ ನನ್ನ ಪತಿ ಜಲ ಸಚಿವೆ ಆತಿಶಿ ಅವರಿಗೆ ನಿರ್ದೇಶನಗಳನ್ನು ನೀಡಿದ್ದರು. ನನ್ನ ಪತಿಯ ಈ ನಡೆ ಕೇಂದ್ರದ ಕೆಂಗಣ್ಣಿಗೆ ಗುರಿಯಾಗಿತ್ತು’ ಎಂದು ಹೇಳಿದ ಸುನೀತಾ, ‘ಅವರು (ಕೇಂದ್ರ) ದೆಹಲಿಯನ್ನು ಹಾಳು ಮಾಡಲು ಹೊರಟಿದ್ದಾರೆಯೇ’ ಎಂದು ಪ್ರಶ್ನಿಸಿದರು.

‘ಕೇಜ್ರಿವಾಲ್ ಧೈರ್ಯವಂತ, ಪ್ರಾಮಾಣಿಕ ಹಾಗೂ ದೇಶಪ್ರೇಮಿ. ಮಧುಮೇಹ ಇದ್ದರೂ ದೃಢಸಂಕಲ್ಪ ಹೊಂದಿದವರಾಗಿದ್ದಾರೆ. ಅವರ ಆರೋಗ್ಯಕ್ಕಾಗಿ ಪ್ರಾರ್ಥಿಸುವಂತೆ ದೆಹಲಿ ಜನರನ್ನು ಕೋರುವೆ’ ಎಂದರು.

ಆರೋಗ್ಯ ಹದಗೆಟ್ಟಿದೆ: ಇ.ಡಿ ವಶದಲ್ಲಿರುವ ಅರವಿಂದ ಕೇಜ್ರಿವಾಲ್ ಅವರ ಆರೋಗ್ಯ ಹದಗೆಟ್ಟಿದೆ. ಮಧುಮೇಹಿ ಆಗಿರುವ ಅವರ ರಕ್ತದಲ್ಲಿ ಗ್ಲುಕೋಸ್ ಮಟ್ಟ ಏರುಪೇರಾಗುತ್ತಿದೆ ಎಂದು ಎಎಪಿ ಮೂಲಗಳು ಬುಧವಾರ ಹೇಳಿವೆ.

ಬಂಧನ ಖಂಡಿಸಿ ‘ಕೇಜ್ರಿವಾಲ್’ ಮುಖವಾಡ ಧರಿಸಿ ವಿಧಾನಸಭೆಗೆ ಬಂದ ಎಎಪಿ ಶಾಸಕರು

ನವದೆಹಲಿ (ಪಿಟಿಐ): ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಬಂಧನವನ್ನು ಖಂಡಿಸಿ ಆಮ್ ಆದ್ಮಿ ಪಕ್ಷದ (ಎಎಪಿ) ಶಾಸಕರು ಹಳದಿ ಬಣ್ಣದ ಟಿ–ಶರ್ಟ್ ಮತ್ತು ‘ಕೇಜ್ರಿವಾಲ್ ಮುಖವಾಡ’ ಹಾಕಿಕೊಂಡು ಬುಧವಾರ ವಿಧಾನಸಭೆಗೆ ಬಂದಿದ್ದರು.

ಸಚಿವರಾದ ಆತಿಶಿ ಮತ್ತು ಸೌರಭ್ ಭಾರದ್ವಾಜ್ ಸೇರಿದಂತೆ ಎಎಪಿ ನಾಯಕರು ಸಾಮಾಜಿಕ ಮಾಧ್ಯಮದಲ್ಲಿ ಆರಂಭಿಸಿದ್ದ ಅಭಿಯಾನವನ್ನು ಸಾಂಕೇತಿಕವಾಗಿ ವಿಧಾನಸಭೆ ತಂದಿದ್ದರು. ಅವರು ಧರಿಸಿದ್ದ ಟಿ–ಶರ್ಟ್ ಮೇಲೆ ‘ನಾನೂ ಕೇಜ್ರಿವಾಲ್”, ‘ಮೋದಿ ಅತಿ ಹೆಚ್ಚು ಭಯ ಪಡುವ ವ್ಯಕ್ತಿ ಕೇಜ್ರಿವಾಲ್’ ಎಂದು ಬರೆದಿತ್ತು.

ಅಧಿವೇಶನ ಆರಂಭ ಆಗುತ್ತಿದ್ದಂತೆಯೇ ಎಎಪಿ ನಾಯಕರು ಸದನದಲ್ಲಿ ಬಿಜೆಪಿ ವಿರುದ್ಧ ‘ಧಿಕ್ಕಾರ’ದ ಘೋಷಣೆ ಕೂಗಿದರು. ಗದ್ದಲ ಉಂಟಾದ ಕಾರಣ ಕಲಾಪವನ್ನು ಏ.1ಕ್ಕೆ ಮುಂದೂಡಲಾಯಿತು.

ನಂತರ ಮಾತನಾಡಿದ ಆತಿಶಿ, ‘ಕೇಜ್ರಿವಾಲ್ ಅವರ ಅಕ್ರಮ ಬಂಧನವನ್ನು ಖಂಡಿಸಿ ಎಎಪಿಯ ಎಲ್ಲಾ ಶಾಸಕರು ಪ್ರತಿಭಟಿಸುತ್ತಿದ್ದಾರೆ.

ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಬಂಧನವನ್ನು ಖಂಡಿಸಿ ಎಎಪಿ ಶಾಸಕರು ಹಳದಿ ಬಣ್ಣದ ಟಿ–ಶರ್ಟ್ ಮತ್ತು ಮುಖಕ್ಕೆ ಕೇಜ್ರಿವಾಲ್ ಮುಖವಾಡ ಹಾಕಿಕೊಂಡು ಬುಧವಾರ ವಿಧಾನಸಭೆಗೆ ಬಂದಿದ್ದರು –ಪಿಟಿಐ ಚಿತ್ರ

ದೇಶದಿಂದ ಪ್ರಜಾಪ್ರಭುತ್ವವನ್ನು ತೊಲಗಿಸುವ ಯತ್ನ ನಡೆಯುತ್ತಿದೆ. ಭಾರತ ಇತಿಹಾಸದಲ್ಲಿಯೇ ಮೊದಲ ಬಾರಿಗೆ ಹಾಲಿ ಮುಖ್ಯಮಂತ್ರಿಯನ್ನು ಬಂಧಿಸಲಾಗಿದೆ, ಅದೂ ಲೋಕಸಭಾ ಚುನಾವಣೆಗೂ ಕೆಲವೇ ದಿನ ಮುನ್ನ’ ಎಂದು ಆಕ್ರೋಶ ವ್ಯಕ್ತಪಡಿಸಿದರು.

ಕೇಜ್ರಿವಾಲ್ ಬಂಧನವನ್ನು ಖಂಡಿಸಿ ಎಎಪಿ ಸೋಮವಾರದಿಂದ ಸಾಮಾಜಿಕ ಜಾಲತಾಣಗಳಲ್ಲಿ ಅಭಿಯಾನವನ್ನು ಆರಂಭಿಸಿದೆ. ಪಕ್ಷದ ನಾಯಕರು ತಮ್ಮ ಸಾಮಾಜಿಕ ಜಾಲತಾಣ ಖಾತೆಗಳ ‘ಡಿಪಿ’ಯಲ್ಲಿ ಕಂಬಿ ಹಿಂದಿರುವ ಕೇಜ್ರಿವಾಲ್ ಅವರ ಭಾವಚಿತ್ರವನ್ನು ಹಾಕಿಕೊಂಡಿದ್ದಾರೆ.

ರಾಜೀನಾಮೆಗೆ ಆಗ್ರಹ: ಕಲಾಪ ಮುಂದೂಡಿದ ನಂತರ ಬಿಜೆಪಿ ದೆಹಲಿ ಘಟಕದ ಅಧ್ಯಕ್ಷ ವೀರೇಂದ್ರ ಸಚ್‌ದೇವ್ ಅವರ ನೇತೃತ್ವದಲ್ಲಿ ಪಕ್ಷದ ನಾಯಕರು ಸಹ ಪ್ರತಿಭಟನೆ ನಡೆಸಿ ಕೇಜ್ರಿವಾಲ್ ರಾಜೀನಾಮೆಗೆ ಒತ್ತಾಯಿಸಿದರು.

ಪಕ್ಷದ ಶಾಸಕರು ಮತ್ತು ಕಾರ್ಯಕರ್ತರು ವಿಧಾನಸಭೆ ಆವರಣದಲ್ಲಿ ಫಲಕಗಳನ್ನು ಹಿಡಿದು ಘೋಷಣೆ ಕೂಗಿದರು. ಬಳಿಕ ಪೊಲೀಸರು ಅವರನ್ನು ವಶಕ್ಕೆ ಪಡೆದರು.

ಕೇರಳ ಮುಖ್ಯಮಂತ್ರಿ ಪುತ್ರಿ ವಿರುದ್ಧ ಇ.ಡಿ ಪ್ರಕರಣ

ಕೊಚ್ಚಿ (ಪಿಟಿಐ): ಕೇರಳ ಮುಖ್ಯಮಂತ್ರಿ ಪಿಣರಾಯಿ ವಿಜಯನ್ ಅವರ ಪುತ್ರಿ ವೀಣಾ ವಿಜಯನ್ ವಿರುದ್ಧ, ಅವರ ಒಡೆತನದ ಐ.ಟಿ. ಕಂಪನಿ ಹಾಗೂ ಇತರ ಕೆಲವರ ವಿರುದ್ಧ ಜಾರಿ ನಿರ್ದೇಶನಾಲಯವು ಹಣದ ಅಕ್ರಮ ವರ್ಗಾವಣೆಗೆ ಸಂಬಂಧಿಸಿದ ಪ್ರಕರಣವೊಂದನ್ನು ದಾಖಲಿಸಿಕೊಂಡಿದೆ.

ಖಾಸಗಿ ಖನಿಜ ಕಂಪನಿಯೊಂದು ವೀಣಾ ಅವರಿಗೆ ಮತ್ತು ಅವರ ಕಂಪನಿಗೆ ಅಕ್ರಮವಾಗಿ ಹಣ ಪಾವತಿ ಮಾಡಿದೆ ಎಂಬ ಆರೋಪಗಳ ಬಗ್ಗೆ ತನಿಖೆ ನಡೆಸಲು ಪ್ರಕರಣ ದಾಖಲಿಸಿಕೊಳ್ಳಲಾಗಿದೆ ಎಂದು ಮೂಲಗಳು ಬುಧವಾರ ತಿಳಿಸಿವೆ.

ಹಣದ ಅಕ್ರಮ ವರ್ಗಾವಣೆ ತಡೆ ಕಾಯ್ದೆಯ (ಪಿಎಂಎಲ್‌ಎ) ಅಡಿಯಲ್ಲಿ ಪ್ರಕರಣವನ್ನು ದಾಖಲು ಮಾಡಿಕೊಳ್ಳಲಾಗಿದೆ, ಪ್ರಕರಣಕ್ಕೆ ಸಂಬಂಧಿಸಿದವರನ್ನು ವಿಚಾರಣೆಗೆ ಕರೆಯುವ ಸಾಧ್ಯತೆ ಇದೆ ಎಂದು ಮೂಲಗಳು ವಿವರಿಸಿವೆ.

ಕೇಂದ್ರ ಕಾರ್ಪೊರೇಟ್ ವ್ಯವಹಾರಗಳ ಸಚಿವಾಲಯದ ಅಧೀನದಲ್ಲಿ ಕಾರ್ಯ ನಿರ್ವಹಿಸುವ ‘ಗಂಭೀರಸ್ವರೂಪದ ವಂಚನೆಗಳ ತನಿಖಾ ಕಚೇರಿ’ (ಎಸ್‌ಎಫ್‌ಐಒ) ದಾಖಲಿಸಿದ ಪ್ರಕರಣವನ್ನು ಪರಿಗಣಿಸಿ ಇ.ಡಿ. ಪ್ರಕರಣ ದಾಖಲು ಮಾಡಿಕೊಂಡಿದೆ ಎಂದು ಮೂಲಗಳು ಹೇಳಿವೆ.

ಆದಾಯ ತೆರಿಗೆ ಇಲಾಖೆಯು ನಡೆಸಿದ್ದ ತನಿಖೆಯೊಂದು, ‘ಕೊಚಿನ್ ಮಿನರಲ್ಸ್ ಆ್ಯಂಡ್ ರುಟೈಲ್ ಲಿಮಿಟೆಡ್ (ಸಿಎಂಆರ್‌ಎಲ್) ಹೆಸರಿನ ಖಾಸಗಿ ಕಂಪನಿಯು ವೀಣಾ ಅವರ ಎಕ್ಸಾಲಾಜಿಕ್ ಸಲ್ಯೂಷನ್ಸ್ ಕಂಪನಿಗೆ 2018ರಿಂದ 2019ರ ನಡುವಿನ ಅವಧಿಯಲ್ಲಿ ₹1.72 ಕೋಟಿ ಪಾವತಿಸಿದೆ. ವೀಣಾ ಅವರ ಕಂಪನಿಯು ಯಾವುದೇ ಸೇವೆ ಒದಗಿಸದೆ ಇದ್ದರೂ ಈ ಪಾವತಿ ಆಗಿದೆ’ ಎಂದು ಆರೋಪಿಸಿದೆ. ಇದು ಈ ಪ್ರಕರಣಕ್ಕೆ ಮೂಲ.

ಎಸ್‌ಎಫ್‌ಐಒ ಆರಂಭಿಸಿದ ತನಿಖೆಯನ್ನು ಪ್ರಶ್ನಿಸಿ ಎಕ್ಸಾಲಾಜಿಕ್ ಸಲ್ಯೂಷನ್ಸ್ ಕಂಪನಿ ಸಲ್ಲಿಸಿದ್ದ ಅರ್ಜಿಯನ್ನು ಕರ್ನಾಟಕ ಹೈಕೋರ್ಟ್ ಕಳೆದ ತಿಂಗಳು ವಜಾಗೊಳಿಸಿದೆ.

ಕೇಜ್ರಿವಾಲ್ ಬಂಧನ: ಮಧ್ಯ ಪ್ರವೇಶಕ್ಕೆ ಕೋರ್ಟ್ ನಕಾರ

ಒಂದನೇ ಪುಟದಿಂದ...

ಕೇಜ್ರಿವಾಲ್ ಸಲ್ಲಿಸಿರುವ ಅರ್ಜಿಗಳಿಗೆ ಸಂಬಂಧಿಸಿ ಏಪ್ರಿಲ್ 2ರ ಒಳಗಾಗಿ ಪ್ರತಿಕ್ರಿಯೆ ಸಲ್ಲಿಸುವಂತೆ ಜಾರಿ ನಿರ್ದೇಶನಾಲಯಕ್ಕೆ ನೋಟಿಸ್ ಜಾರಿ ಮಾಡಿದ ನ್ಯಾಯಮೂರ್ತಿ ಶರ್ಮಾ, ವಿಚಾರಣೆಯನ್ನು ಏಪ್ರಿಲ್ 3ಕ್ಕೆ ಮುಂದೂಡಿದರು.

‘ಕೇಜ್ರಿವಾಲ್ ಸಲ್ಲಿಸಿರುವ ಮೂಲ ಅರ್ಜಿ ಹಾಗೂ ಮಧ್ಯಂತರ ರಕ್ಷಣೆ ಕೋರಿ ಸಲ್ಲಿಸಿರುವ ಅರ್ಜಿಗೆ ಜಾರಿ ನಿರ್ದೇಶನಾಲಯ ಪ್ರತಿಕ್ರಿಯೆಗಳನ್ನು ಏಪ್ರಿಲ್ 2ರ ಒಳಗಾಗಿ ಸಲ್ಲಿಸಬೇಕು. ಈ ಪ್ರತಿಕ್ರಿಯೆಗಳ ಮುದ್ರಿತ ಹಾಗೂ ಡಿಜಿಟಲ್ ಪ್ರತಿಗಳನ್ನು ಅರ್ಜಿದಾರರ ಪರ ವಕೀಲರಿಗೆ ಒದಗಿಸಬೇಕು’ ಎಂದು ಆದೇಶದಲ್ಲಿ ತಿಳಿಸಲಾಗಿದೆ.

‘ಏಪ್ರಿಲ್ 3ರಂದು ಅರ್ಜಿಯ ಅಂತಿಮ ವಿಚಾರಣೆ ನಡೆಸಲಾಗುವುದು. ಯಾವುದೇ ಕಾರಣಕ್ಕೂ ವಿಚಾರಣೆಯನ್ನು ಮುಂದೂಡಲಾಗುವುದಿಲ್ಲ’ ಎಂದೂ ಆದೇಶದಲ್ಲಿ ಸ್ಪಷ್ಟಪಡಿಸಲಾಗಿದೆ.

ದೆಹಲಿ ಅಬಕಾರಿ ನೀತಿ ಹಗರಣದ ಜೊತೆ ನಂಟು ಹೊಂದಿರುವ ಹಣ ಅಕ್ರಮ ವರ್ಗಾವಣೆ ಆರೋಪಕ್ಕೆ ಸಂಬಂಧಿಸಿ ಕೇಜ್ರಿವಾಲ್ ಅವರನ್ನು ಮಾರ್ಚ್ 21ರಂದು ಬಂಧಿಸಲಾಗಿತ್ತು. ದೆಹಲಿಯ ನ್ಯಾಯಾಲಯವು ಅವರನ್ನು ಮಾರ್ಚ್ 28ರವರೆಗೆ ಇ.ಡಿ ವಶಕ್ಕೆ ಒಪ್ಪಿಸಿದೆ.

ಎನ್‌ಕೌಂಟರ್: 6 ನಕ್ಸಲರು ಹತ

ಬಿಜಾಪುರ (ಪಿಟಿಐ): ಛತ್ತೀಸಗಢದ ಬಿಜಾಪುರ ಜಿಲ್ಲೆಯಲ್ಲಿ ಭದ್ರತಾ ಸಿಬ್ಬಂದಿ ಬುಧವಾರ ನಡೆಸಿದ ಎನ್‌ಕೌಂಟರ್‌ನಲ್ಲಿ ಇಬ್ಬರು ಮಹಿಳೆಯರು ಸೇರಿದಂತೆ ಆರು ಜನ ನಕ್ಸಲರು ಹತರಾಗಿದ್ದಾರೆ ಎಂದು ಪೊಲೀಸ್ ಅಧಿಕಾರಿಗಳು ತಿಳಿಸಿದ್ದಾರೆ.

ಇಲ್ಲಿನ ಬಸಗುಡ ಪೊಲೀಸ್ ಠಾಣಾ ವ್ಯಾಪ್ತಿಯ ಚಿಪುರಭಟ್ಟಿ ಗ್ರಾಮದ ಬಳಿಯ ತಲಪೇರು ನದಿ ತೀರದ ಅರಣ್ಯ ಪ್ರದೇಶದಲ್ಲಿ ಭದ್ರತಾ ಸಿಬ್ಬಂದಿ ನಕ್ಸಲರ ವಿರುದ್ಧ ಕಾರ್ಯಾಚರಣೆ ನಡೆಸುತ್ತಿದ್ದ ವೇಳೆ ಗುಂಡಿನ ಚಕಮಕಿ ನಡೆಯಿತು. ಈ ವೇಳೆ ನಕ್ಸಲರು ಹತರಾಗಿದ್ದಾರೆ ಎಂದು ಐಜಿಪಿ ಸುಂದರರಾಜ್. ಪಿ ತಿಳಿಸಿದ್ದಾರೆ. ಸ್ಥಳದಲ್ಲಿ ನಕ್ಸಲರು ಇರುವ ಕುರಿತ ಮಾಹಿತಿ ಮೇರೆಗೆ ಜಿಲ್ಲಾ ಮೀಸಲು ಪಡೆ (ಡಿಆರ್‌ಜಿ), ಕೇಂದ್ರೀಯ ಮೀಸಲು ಪೊಲೀಸ್ ಪಡೆ (ಸಿಆರ್‌ಪಿಎಫ್) ಹಾಗೂ ಸಿಒಬಿಆರ್‌ಎ ಘಟಕದ ಸಿಬ್ಬಂದಿ ಜಂಟಿ ಕಾರ್ಯಾಚರಣೆ ನಡೆಸುತ್ತಿದ್ದ ವೇಳೆ ನಕ್ಸಲರು ಹಾಗೂ ಸಿಬ್ಬಂದಿ ನಡುವೆ ಗುಂಡಿನ ಚಕಮಕಿ ನಡೆಯಿತು. ಈ ಸಂದರ್ಭದಲ್ಲಿ ಆರು ಜನ ನಕ್ಸಲರು ಹತರಾಗಿದ್ದು ಸ್ಥಳದಲ್ಲಿ ಅಪಾರ ಪ್ರಮಾಣದ ಶಸ್ತ್ರಾಸ್ತ್ರ ಮತ್ತು ಸ್ಫೋಟಕಗಳನ್ನು ವಶಪಡಿಸಿಕೊಳ್ಳಲಾಗಿದೆ.

ದೆಹಲಿ ಅಬಕಾರಿ ಹಗರಣ: ಹೈಕೋರ್ಟ್‌ನಲ್ಲಿ ವಿಚಾರಣೆ ವೇಳೆ ಕೇಜ್ರಿವಾಲ್ ಪರ ವಾದ

‘ನನ್ನ ಬಂಧನ ಸಂವಿಧಾನಕ್ಕೆ ವಿರುದ್ಧವಾದುದು’

ಪ್ರಜಾವಾಣಿ ವಾರ್ತೆ/ಪಿಟಿಐ

ನವದೆಹಲಿ: ‘ಲೋಕಸಭಾ ಚುನಾವಣೆಗಳು ಘೋಷಣೆಯಾಗಿರುವ ಈ ಸಂದರ್ಭದಲ್ಲಿ ನನ್ನ ಬಂಧನ ಸಂವಿಧಾನದ ಮೂಲ ರಚನೆಗೇ ವಿರುದ್ಧವಾದುದು. ಹೀಗಾಗಿ, ದೆಹಲಿ ಅಬಕಾರಿ ಹಗರಣದ ಜೊತೆ ನಂಟಿನ ಹಣ ಅಕ್ರಮ ವರ್ಗಾವಣೆ ಪ್ರಕರಣದಲ್ಲಿ ಬಂಧಿತನಾಗಿ ಇ.ಡಿ ವಶದಲ್ಲಿರುವ ನನ್ನನ್ನು ತಕ್ಷಣವೇ ಬಿಡುಗಡೆ ಮಾಡುವಂತೆ ಆದೇಶಿಸಬೇಕು..’

ಇ.ಡಿ ವಶದಿಂದ ತಮ್ಮನ್ನು ಬಿಡುಗಡೆ ಮಾಡುವಂತೆ ಕೋರಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ಹಿರಿಯ ವಕೀಲ ಅಭಿಷೇಕ್ ಸಿಂಘ್ವಿ ಮೂಲಕ ದೆಹಲಿ ಹೈಕೋರ್ಟ್‌ಗೆ ಬುಧವಾರ ಸಲ್ಲಿಸಿದ್ದ ಅರ್ಜಿಯಲ್ಲಿ ಕೋರಿದ್ದು ಹೀಗೆ.

ನ್ಯಾಯಮೂರ್ತಿ ಸ್ವರ್ಣಕಾಂತಾ ಶರ್ಮಾ ಅವರಿದ್ದ ಪೀಠ ಅರ್ಜಿ ವಿಚಾರಣೆ ನಡೆಸಿತು.

‘ನನ್ನನ್ನು ಬಂಧಿಸಿರುವ ಉದ್ದೇಶ, ನನ್ನ ವಿರುದ್ಧದ ಆರೋಪಕ್ಕೆ ಸಂಬಂಧಿಸಿ ದಾಖಲೆ/ಸಾಕ್ಷ್ಯಗಳನ್ನು ಪತ್ತೆ ಮಾಡುವುದು ಆಗಿಲ್ಲ, ಬದಲಾಗಿ ನನ್ನನ್ನು ಹಾಗೂ ನನ್ನ ಪಕ್ಷವನ್ನು ದುರ್ಬಲಗೊಳಿಸುವುದಾಗಿದೆ. ಹೀಗಾಗಿ, ತಕ್ಷಣವೇ ನನ್ನ ಬಿಡುಗಡೆ ಮಾಡಬೇಕು’ ಎಂದು ಕೇಜ್ರಿವಾಲ್ ಅರ್ಜಿಯಲ್ಲಿ ಕೋರಿದ್ದರು.

‘ಈ ಆರೋಪಕ್ಕೆ ಸಂಬಂಧಿಸಿ, ಹಣ ಅಕ್ರಮ ವರ್ಗಾವಣೆ ಕಾಯ್ದೆಯಡಿ ಕೇಜ್ರಿವಾಲ್ ಅವರನ್ನು ಬಂಧಿಸುವ ಅಗತ್ಯ ಇರಲಿಲ್ಲ. ಅಲ್ಲದೇ, ತನಿಖೆಗೆ ಸಹಕಾರ ನೀಡುತ್ತಿಲ್ಲ ಎಂಬ ಕಾರಣ ನೀಡಿ ಬಂಧಿಸಲಾಗಿದೆ. ಕಾಯ್ದೆಯಲ್ಲಿರುವ ಈ ಅವಕಾಶವನ್ನು ಇ.ಡಿ ಹೆಚ್ಚು ದುರ್ಬಳಕೆ ಮಾಡಿಕೊಂಡಿದೆ’ ಎಂದು ಸಿಂಘ್ವಿ ವಾದಿಸಿದರು.

ಇ.ಡಿ ಪರ ಹಾಜರಿದ್ದ ಹೆಚ್ಚುವರಿ ಸಾಲಿಸಿಟರ್ ಜನರಲ್ ಎಸ್‌.ವಿ. ರಾಜು,‘ಪ್ರಕರಣಕ್ಕೆ ಸಂಬಂಧಿಸಿ ದೊಡ್ಡ ಅರ್ಜಿ ಮಂಗಳವಾರವಷ್ಟೆ ಕೈಸೇರಿದೆ. ಈ ವಿಚಾರವಾಗಿ ಸಂಸ್ಥೆಯ ಅಧಿಕೃತ ನಿಲುವು ತಿಳಿಸುವುದಕ್ಕೆ ಮೂರು ವಾರಗಳ ಅವಕಾಶ ನೀಡಬೇಕು’ ಎಂದು ಪೀಠಕ್ಕೆ ಕೋರಿದರು. ‘ಅರ್ಜಿದಾರರಿಗೆ ಮಧ್ಯಂತರ ರಕ್ಷಣೆ ನೀಡುವುದಕ್ಕೆ ಸಂಬಂಧಿಸಿ ಕೂಡ ಪ್ರತಿಕ್ರಿಯೆ ನೀಡಲು ಅಗತ್ಯ ಸಮಯಾವಕಾಶ ನೀಡಬೇಕು’ ಎಂದರು.

ಇದಕ್ಕೆ ಆಕ್ಷೇಪ ವ್ಯಕ್ತಪಡಿಸಿದ ಸಿಂಘ್ವಿ, ‘ಪ್ರತಿಕ್ರಿಯೆ ಸಲ್ಲಿಸಲು ಉದ್ದೇಶಪೂರ್ವಕವಾಗಿ ಹೆಚ್ಚು ಸಮಯ ಕೇಳಲಾಗುತ್ತಿದೆ. ಪ್ರತಿಕ್ರಿಯೆ ಸಲ್ಲಿಸುವುದನ್ನು ವಿಳಂಬ ಮಾಡುವ ತಂತ್ರವಿದು. ಅಲ್ಲದೇ, ಇ.ಡಿ ಪರವಾಗಿ ಪ್ರತಿಕ್ರಿಯೆ ಸಲ್ಲಿಸುವ ಅಗತ್ಯವೇ ಇಲ್ಲ’ ಎಂದರು. ಇದಕ್ಕೆ ಪ್ರತಿಕ್ರಿಯಿಸಿದ ನ್ಯಾಯಮೂರ್ತಿ ಶರ್ಮಾ, ‘ವಿಸ್ತೃತ ಪ್ರತಿಕ್ರಿಯೆ ಸಲ್ಲಿಸಲು ಇ.ಡಿ ಗೆ ಅವಕಾಶ ನೀಡದಿರುವುದು ಸರಿ ಎನಿಸದು. ಪ್ರತಿಕ್ರಿಯೆ ಸಲ್ಲಿಸುವುದಕ್ಕೆ ಅವಕಾಶ ನಿರಾಕರಿಸುವುದೆಂದರೆ, ನ್ಯಾಯಯುತ ವಿಚಾರಣೆ ನಿರಾಕರಿಸಿದಂತೆ ಹಾಗೂ ಸಹಜ ನ್ಯಾಯ ತತ್ವಗಳ ಉಲ್ಲಂಘನೆ ಯಾಗುತ್ತದೆ. ಇದು ಎರಡೂ ಕಡೆಯವರಿಗೆ ಅನ್ವಯಿಸುತ್ತದೆ’ ಎಂದು ಹೇಳಿದರು.

ತನಿಖೆಗೆ ಬಿಜೆಪಿ ಆಗ್ರಹ

ನವದೆಹಲಿ(ಪಿಟಿಐ): ‘ಜಾರಿ ನಿರ್ದೇಶನಾಲಯ (ಇ.ಡಿ) ವಶದಲ್ಲಿರುವ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರು ತನ್ನ ಸಚಿವರಿಗೆ ನಿರ್ದೇಶನ ನೀಡಿ ‘ಪತ್ರ’ಗಳನ್ನು ಬರೆಯುತ್ತಿರುವ ಕುರಿತು ತನಿಖೆ ನಡೆಸಬೇಕು’ ಎಂದು ಬಿಜೆಪಿಯ ದೆಹಲಿ ಘಟಕ ಬುಧವಾರ ಒತ್ತಾಯಿಸಿದೆ.
ಬಿಜೆಪಿಯ ದೆಹಲಿ ಘಟಕದ ಅಧ್ಯಕ್ಷ ವೀರೇಂದ್ರ ಸಚದೇವ್ ನೇತೃತ್ವದ ನಿಯೋಗವೊಂದು ಪೊಲೀಸ್ ಕಮಿಷನರ್ ಸಂಜಯ್ ಅರೋರಾ ಅವರನ್ನು ಭೇಟಿ ಮಾಡಿ, ಮನವಿ ಸಲ್ಲಿಸಿದೆ.

ಬಳಿಕ ಸುದ್ದಿಗಾರರೊಂದಿಗೆ ಮಾತನಾಡಿದ ಸಚದೇವ್, ‘ಇ.ಡಿ ವಶದಲ್ಲಿರುವ ಕೇಜ್ರಿವಾಲ್ ಅವರು ಬರೆದಿದ್ದಾರೆ ಎನ್ನಲಾದ ಪತ್ರಗಳ ನೈಜತೆ ಹಾಗೂ ಈ ವಿಷಯದಲ್ಲಿ ಸಚಿವರಾದ ಆತಿಶಿ ಮತ್ತು ಸೌರಭ್ ಭಾರದ್ವಾಜ್ ಅವರ ಪಾತ್ರ ಕುರಿತು ತನಿಖೆ ನಡೆಸುವಂತೆ ಪೊಲೀಸ್ ಕಮಿಷನರ್‌ಗೆ ಒತ್ತಾಯಿಸಿದ್ದೇವೆ’ ಎಂದು ತಿಳಿಸಿದರು.
‘ಇ.ಡಿ ವಶದಲ್ಲಿರುವ ವ್ಯಕ್ತಿ ಪತ್ರ ಕಳುಹಿಸಲು ಪ್ರತ್ಯೇಕ ಪ್ರಕ್ರಿಯೆಯೇ ಇದೆ. ಇಂತಹ ವ್ಯಕ್ತಿಗಳು ಬರೆಯುವ ಪತ್ರಗಳು ಸೂಕ್ತ ರೀತಿಯಲ್ಲಿ ದೃಢೀಕರಣಗೊಳ್ಳಬೇಕು’ ಎಂದ ಅವರು, ‘ನನಗೆ ಬಂದಿರುವ ಮಾಹಿತಿ ಪ್ರಕಾರ, ಈ ಪತ್ರಗಳು ನಕಲಿ’ ಎಂದು ಹೇಳಿದರು.

‘ಜೈಲಿನಿಂದ ಸರ್ಕಾರ ಮುನ್ನಡೆಸಲಾಗದು’

ವಿ.ಕೆ.ಸಕ್ಸೇನಾ

ನವದೆಹಲಿ(ಪಿಟಿಐ): ‘ದೆಹಲಿ ಸರ್ಕಾರವನ್ನು ಜೈಲಿನಿಂದ ಮನ್ನಡೆಸಲು ಸಾಧ್ಯ ಇಲ್ಲ’ ಎಂದು ಲೆಫ್ಟಿನೆಂಟ್ ಗವರ್ನರ್ ವಿ.ಕೆ.ಸಕ್ಸೇನಾ ಬುಧವಾರ ಹೇಳಿದ್ದಾರೆ.

‘ಜೈಲಿನಲ್ಲಿದ್ದರೂ ಅರವಿಂದ ಕೇಜ್ರಿವಾಲ್ ಅವರು ಮುಖ್ಯಮಂತ್ರಿಯಾಗಿ ಮುಂದುವರಿಯುವರು’ ಎಂಬ ಆಮ್ ಆದ್ಮಿ ಪಕ್ಷದ (ಎಎಪಿ) ಮುಖಂಡರ ಹೇಳಿಕೆಗೆ ಅವರು ಈ ರೀತಿ ಪ್ರತಿಕ್ರಿಯಿಸಿದ್ದಾರೆ.

ಟೈಮ್ಸ್ ನೌ ಸುದ್ದಿವಾಹಿನಿ ಆಯೋಜಿಸಿದ್ದ ಶೃಂಗಸಭೆಯಲ್ಲಿ ಮಾತನಾಡಿರುವ ಸಕ್ಸೇನಾ,‘ಜೈಲಿನಿಂದ ಸರ್ಕಾರ ಮುನ್ನಡೆಸಲು ಅವಕಾಶ ನೀಡುವುದಿಲ್ಲ ಎಂಬುದಾಗಿ ದೆಹಲಿ ನಿವಾಸಿಗಳಿಗೆ ನಾನು ಭರವಸೆ ನೀಡುತ್ತೇನೆ’ ಎಂದು ಹೇಳಿದ್ದಾರೆ.

‘ಜೀವನದಲ್ಲಿ ಕಠಿಣ ಪರಿಸ್ಥಿತಿಗಳನ್ನು ಎದುರಿಸಬೇಕಾಗುತ್ತದೆ (ಲೋಹೆ ಕೆ ಚನೆ ಚಬಾನಾ) ಎಂಬ ಗಾದೆಮಾತನ್ನು ನಾವೆಲ್ಲಾ ಚಿಕ್ಕವರಿದ್ದಾಗ ಕೇಳಿದ್ದೇವೆ. ದೆಹಲಿಗೆ ಬಂದ ನಂತರ ಈ ಗಾದೆಮಾತಿನ ಅರ್ಥ ನನಗೆ ಮನವರಿಕೆಯಾಯಿತು’ ಎಂದು ಹೇಳಿದ್ದಾರೆ.

‘ದೆಹಲಿಯಲ್ಲಿ ಯಾವುದೇ ಕೆಲಸ ಕಾರ್ಯಗತಗೊಳಿಸಬೇಕು ಎಂದಾಗ ಈ ಗಾದೆಮಾತು ಅನುಭವಕ್ಕೆ ಬರುತ್ತದೆ. ಕೆಲ ಶಕ್ತಿಗಳು ಅಡ್ಡಿಯನ್ನುಂಟು ಮಾಡುತ್ತವೆ. ಒಂದು ವೇಳೆ ನೀವು ಹಿಡಿದ ಕಾರ್ಯವನ್ನು ಪೂರ್ಣಗೊಳಿಸಿದಲ್ಲಿ, ಅದರ ಶ್ರೇಯವನ್ನು ತಮ್ಮ ಮುಡಿಗೇರಿಸಿಕೊಳ್ಳಲು ಈ ಶಕ್ತಿಗಳು ಯತ್ನಿಸುತ್ತವೆ’ ಎಂದು ಪರೋಕ್ಷವಾಗಿ ಎಎಪಿ ನೇತೃತ್ವದ ಆಡಳಿತಕ್ಕೆ ಚಾಟಿ ಬೀಸಿದ್ದಾರೆ.

> **ಅರವಿಂದ ಕೇಜ್ರಿವಾಲ್ ಬಂಧನದ ಹಿನ್ನೆಲೆಯಲ್ಲಿ ದೆಹಲಿಯಲ್ಲಿ ಒಂದು ವೇಳೆ ರಾಷ್ಟ್ರಪತಿ ಆಡಳಿತ ಹೇರಿದಲ್ಲಿ ಅದು ರಾಜಕೀಯ ಸೇಡು ಎಂಬುದು ಸ್ಪಷ್ಟವಾಗಲಿದೆ**
> **ಆತಿಶಿ ಮರ್ಲೆನಾ,** ದೆಹಲಿ ಸಚಿವೆ

ಮಹುವಾ, ಹೀರಾನಂದಾನಿಗೆ ಇ.ಡಿ. ಸಮನ್ಸ್ ಜಾರಿ

ನವದೆಹಲಿ/ಕೋಲ್ಕತ್ತ (ಪಿಟಿಐ): ವಿದೇಶಿ ವಿನಿಮಯ ನಿರ್ವಹಣಾ ಕಾಯ್ದೆಯನ್ನು (ಎಫ್‌ಇಎಂಎ) ಉಲ್ಲಂಘಿಸಿದ ಆರೋಪಕ್ಕೆ ಸಂಬಂಧಿಸಿ ಟಿಎಂಸಿ ನಾಯಕಿ ಮಹುವಾ ಮೊಯಿತ್ರಾ ಮತ್ತು ದುಬೈ ಉದ್ಯಮಿ ದರ್ಶನ್ ಹೀರಾನಂದಾನಿ ಅವರು ಮಾರ್ಚ್ 28ಕ್ಕೆ ವಿಚಾರಣೆಗೆ ಹಾಜರಾಗಬೇಕು ಎಂದು ಇ.ಡಿ ಮತ್ತೆ ಸಮನ್ಸ್ ಜಾರಿಗೊಳಿಸಿದೆ ಎಂದು ಮೂಲಗಳು ತಿಳಿಸಿವೆ.

ಮಹುವಾ ಅವರನ್ನು ಈ ಮೊದಲು ಎರಡು ಬಾರಿ ವಿಚಾರಣೆಗೆ ಕರೆಯಲಾಗಿತ್ತು. ಆದರೆ ಕೆಲವು ಅಧಿಕೃತ ಕೆಲಸಗಳು ತಮಗೆ ಇವೆ ಎಂದು ಹೇಳಿದ್ದ ಮಹುವಾ, ವಿಚಾರಣೆಯನ್ನು ಮುಂದೂಡಬೇಕು ಎಂದು ಕೋರಿದ್ದರು. ಇ.ಡಿ.ಯ ನವದೆಹಲಿಯ ಕಚೇರಿಗೆ ವಿಚಾರಣೆಗೆ ಬರಬೇಕು ಎಂದು ಈಗ ಸೂಚಿಸಲಾಗಿದೆ ಎಂದು ಗೊತ್ತಾಗಿದೆ.

ದರ್ಶನ್ ಹೀರಾನಂದಾನಿ ಅವರನ್ನು ಎಫ್‌ಇಎಂಎ ಉಲ್ಲಂಘನೆಗೆ ಸಂಬಂಧಿಸಿದ ಇನ್ನೊಂದು ಪ್ರಕರಣದಲ್ಲಿಯೂ ವಿಚಾರಣೆಗೆ ಕರೆಯಲಾಗಿದೆ. ದರ್ಶನ್ ಅವರ ತಂದೆ ನಿರಂಜನ್ ಹೀರಾನಂದಾನಿ ಅವರು ಈ ಮೊದಲು ಮುಂಬೈನಲ್ಲಿ ಇ.ಡಿ ಅಧಿಕಾರಿಗಳ ಎದುರು ವಿಚಾರಣೆಗೆ ಹಾಜರಾಗಿದ್ದರು.

ಮಹುವಾ

‘ಹತಾಶೆಯ ಕುಟಿಲ ತಂತ್ರ’: ಮಹುವಾ ಅವರಿಗೆ ಸಮನ್ಸ್ ಜಾರಿಗೊಳಿಸಿರುವುದು ಲೋಕಸಭಾ ಚುನಾವಣೆ ಹತ್ತಿರವಾಗಿರುವಾಗ ಬಿಜೆಪಿ ನೇತೃತ್ವದ ಕೇಂದ್ರ ಸರ್ಕಾರವು ಹತಾಶೆಯಿಂದ ರೂಪಿಸಿರುವ ಕುಟಿಲ ತಂತ್ರ ಎಂದು ಟಿಎಂಸಿ ಆಕ್ರೋಶ ವ್ಯಕ್ತಪಡಿಸಿದೆ. ಮಹುವಾ ಅವರನ್ನು ಟಿಎಂಸಿ ಪಕ್ಷವು ಕೃಷ್ಣಾನಗರ ಲೋಕಸಭಾ ಕ್ಷೇತ್ರದಿಂದ ಕಣಕ್ಕೆ ಇಳಿಸಿದೆ.

‘ಇದು ಮಹುವಾ ಅವರನ್ನು ಗುರಿಯಾಗಿಸಿಕೊಂಡಿರುವ ದ್ವೇಷದ ರಾಜಕಾರಣವಲ್ಲದೆ ಮತ್ತೇನೂ ಅಲ್ಲ. ಟಿಎಂಸಿ ವಿರುದ್ಧ ಸೆಣಸಲು ಬಿಜೆಪಿಗೆ ವಿಷಯಗಳೇ ಇಲ್ಲ. ಅದು ಕೇಂದ್ರೀಯ ತನಿಖಾ ಸಂಸ್ಥೆಗಳನ್ನು ದುರ್ಬಳಕೆ ಮಾಡಿಕೊಳ್ಳುತ್ತಿದೆ’ ಎಂದು ಟಿಎಂಸಿ ವಕ್ತಾರ ಕೃಷ್ಣ ಮಿತ್ರಾ ಆರೋಪಿಸಿದ್ದಾರೆ.

ಜನರಲ್ಲಿ ಅಸಮಾಧಾನ ಹೆಚ್ಚಾಗುತ್ತಿದೆ ಎಂಬುದನ್ನು ಕಂಡುಕೊಂಡಿರುವ ಬಿಜೆಪಿಯು ತನ್ನ ಕೈಯಲ್ಲಿರುವ ಎಲ್ಲವನ್ನೂ ಬಳಸಿಕೊಂಡು ಸಂಕಥನ ಬದಲಿಸಲು ಮುಂದಾಗಿದೆ ಎಂದು ಅವರು ಹೇಳಿದ್ದಾರೆ.

ಶ್ರದ್ಧೆ–ಮೆರವಣಿಗೆ... ‘ಗುಡ್ ಫ್ರೈಡೇ’ ಹಾಗೂ ಈಸ್ಟರ್ ಅಂಗವಾಗಿ ಜಮ್ಮುವಿನಲ್ಲಿ ಬುಧವಾರ ನಡೆದ ಮೆರವಣಿಗೆಯಲ್ಲಿ ಕ್ರೈಸ್ತರು ಪಾಲ್ಗೊಂಡಿದ್ದರು –ಪಿಟಿಐ ಚಿತ್ರ

ಕ್ಷಮೆಯಾಚಿಸಿದ ಬಿಜೆಪಿಯ ದಿಲೀಪ್ ಘೋಷ್

ಮಮತಾ ಬ್ಯಾನರ್ಜಿ ಕೌಟುಂಬಿಕ ಹಿನ್ನೆಲೆ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿದ್ದ ಪ್ರಕರಣ

ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ಕೌಟುಂಬಿಕ ಹಿನ್ನೆಲೆ ಬಗ್ಗೆ ಅವಹೇಳನಕಾರಿ ಹೇಳಿಕೆ ನೀಡಿ ವಿವಾದ ಸೃಷ್ಟಿಸಿದ್ದ ಬಿಜೆಪಿ ಹಿರಿಯ ನಾಯಕ ದಿಲೀಪ್ ಘೋಷ್ ಬುಧವಾರ ಕ್ಷಮೆಯಾಚಿಸಿದರು.

ತಮ್ಮ ಹೇಳಿಕೆ ಬಗ್ಗೆ ಸ್ಪಷ್ಟನೆ ನೀಡುವಂತೆ ಪಕ್ಷವು ತಾಕೀತು ಮಾಡಿದ ಬೆನ್ನಲ್ಲೇ ಘೋಷ್, ‘ನನ್ನಿಂದ ತಪ್ಪಾಗಿದ್ದರೆ ಕ್ಷಮೆ ಕೇಳುತ್ತೇನೆ’ ಎಂದು ಹೇಳಿದರು.

ಮುಖ್ಯಮಂತ್ರಿ ಮಮತಾ ಬಗ್ಗೆ ವೈಯಕ್ತಿಕವಾಗಿ ಯಾವುದೇ ದ್ವೇಷ ಇಲ್ಲ ಎಂದು ಅವರು ಹೇಳಿದರು.

‘ಟಿಎಂಸಿ ನಾಯಕರು ಕೆಲ ವಿಚಾರಗಳಲ್ಲಿ ಮಾತ್ರ ‘ಮಹಿಳಾ ಕಾರ್ಡ್’ ಬಳಸುತ್ತಾರೆ. ಇತ್ತ ಅವರೇ ವಿರೋಧ ಪಕ್ಷದ ನಾಯಕ ಸುವೇಂದು ಅಧಿಕಾರಿ ಮತ್ತು ಅವರ ತಂದೆ ಸಿಸಿರ್ ಅಧಿಕಾರಿ ವಿರುದ್ಧ ನಿಂದನಾತ್ಮಕ ಹೇಳಿಕೆ ನೀಡಿದ್ದರು’ ಎಂದು ಹೇಳಿದರು.


ದಿಲೀಪ್ ಘೋಷ್

ಏನಿದು ಪ್ರಕರಣ: ದಿಲೀಪ್ ಘೋಷ್ ಮಂಗಳವಾರ, ‘ಬಂಗಾಳವು ತನ್ನ ಮಗಳನ್ನು ಬಯಸುತ್ತದೆ’ ಎಂಬ ಟಿಎಂಸಿ ಘೋಷವಾಕ್ಯವನ್ನು ಅಣಕಿಸಿದ್ದರು. ‘ಮಮತಾ ಬ್ಯಾನರ್ಜಿ ಗೋವಾಗೆ ಹೋದಾಗ, ತಾನು ಗೋವಾದ ಮಗಳು ಎನ್ನುತ್ತಾರೆ. ತ್ರಿಪುರಾದಲ್ಲಿ ‘ತ್ರಿಪುರಾದ ಮಗಳು’ ಎನ್ನುತ್ತಾರೆ. ಮೊದಲು...ಸ್ಪಷ್ಟಪಡಿಸಲಿ’ ಎಂದು ಹೇಳಿದ್ದರು.

ಈ ಹೇಳಿಕೆಗೆ ಟಿಎಂಸಿ ಮಾತ್ರ ಅಷ್ಟೇ ಅಲ್ಲದೆ ಬಿಜೆಪಿ, ಕಾಂಗ್ರೆಸ್ ನಾಯಕರೂ ಖಂಡನೆ ವ್ಯಕ್ತಪಡಿಸಿದ್ದರು.

ಚುನಾವಣಾ ಆಯೋಗದಿಂದ ನೋಟಿಸ್ ಜಾರಿ

ನವದೆಹಲಿ: ಅವಹೇಳನಕಾರಿ ಹೇಳಿಕೆ ವಿಚಾರವಾಗಿ ಬಿಜೆಪಿ ನಾಯಕ ದಿಲೀಪ್ ಘೋಷ್ ಮತ್ತು ಕಾಂಗ್ರೆಸ್ ನಾಯಕಿ ಸುಪ್ರಿಯಾ ಶ್ರೀನೇತ್ ಅವರಿಗೆ ಚುನಾವಣಾ ಆಯೋಗ ಬುಧವಾರ ನೋಟಿಸ್ ಜಾರಿ ಮಾಡಿದೆ.

ಘೋಷ್ ಅವರು ಪಶ್ಚಿಮ ಬಂಗಾಳ ಮುಖ್ಯಮಂತ್ರಿ ಮಮತಾ ಬ್ಯಾನರ್ಜಿ ವಿರುದ್ಧ ಮತ್ತು ಸುಪ್ರಿಯಾ ಅವರು, ನಟಿ ಕಂಗನಾ ರನೌತ್ ವಿರುದ್ಧ ಅವಹೇಳನಕಾರಿ ಹೇಳಿಕೆ ನೀಡಿದ್ದರು. ಇಬ್ಬರ ಹೇಳಿಕೆಗಳು ‘ಕೆಟ್ಟ ಅಭಿರುಚಿಯಿಂದ ಕೂಡಿವೆ ಮತ್ತು ಗೌರವಕ್ಕೆ ಧಕ್ಕೆ ತರುವಂತಿವೆ’ ಎಂದು ಆಯೋಗ ಹೇಳಿದೆ.

ಇಬ್ಬರೂ ನಾಯಕರು ಚುನಾವಣಾ ನೀತಿ ಸಂಹಿತೆಯನ್ನು ಉಲ್ಲಂಘಿಸಿದ್ದಾರೆ. ಹೀಗಾಗಿ ಮಾ.29ರ ಸಂಜೆ ಒಳಗಾಗಿ ನೋಟಿಸ್‌ಗೆ ಪ್ರತಿಕ್ರಿಯಿಸುವಂತೆ ಸೂಚಿಸಲಾಗಿದೆ ಎಂದು ತಿಳಿಸಿದೆ.

ಬಿಜೆಪಿ ಅಭ್ಯರ್ಥಿ ಅಮೃತಾ ರಾಯ್ ಜತೆ ದೂರವಾಣಿ ಸಂಭಾಷಣೆ ನಡೆಸಿದ ಪ್ರಧಾನಿ

‘ಬಡವರಿಂದ ಲೂಟಿ ಮಾಡಿದ ಹಣ ವಾಪಸ್‌ಗೆ ಯತ್ನ’

ನರೇಂದ್ರ ಮೋದಿ

ನವದೆಹಲಿ/ಕೋಲ್ಕತ್ತ (ಪಿಟಿಐ): ಪಶ್ಚಿಮ ಬಂಗಾಳದ ಬಡ ಜನರಿಂದ ಲೂಟಿ ಮಾಡಲಾದ ಮತ್ತು ಜಾರಿ ನಿರ್ದೇಶನಾಲಯ (ಇ.ಡಿ) ಜಪ್ತಿ ಮಾಡಿರುವ ಸುಮಾರು ₹3,000 ಕೋಟಿಯನ್ನು ಆ ಜನರಿಗೆ ಹಿಂತಿರುಗಿಸಲು ತಾನು ಕೆಲಸ ಮಾಡುತ್ತಿರುವುದಾಗಿ ಪ್ರಧಾನಿ ನರೇಂದ್ರ ಮೋದಿ ಬುಧವಾರ ಹೇಳಿದ್ದಾರೆ.

ಕೃಷ್ಣಾನಗರ ಲೋಕಸಭಾ ಕ್ಷೇತ್ರದ ಬಿಜೆಪಿ ಅಭ್ಯರ್ಥಿ, ರಾಜಮನೆತನದವರಾದ ಅಮೃತಾ ರಾಯ್ ಅವರೊಂದಿಗೆ ದೂರವಾಣಿ ಸಂಭಾಷಣೆ ನಡೆಸಿದ ಮೋದಿ ಅವರು, ವಿರೋಧ ಪಕ್ಷಗಳಿಗೆ ಅಧಿಕಾರ ಮುಖ್ಯವಾಗಿದೆಯೇ ಹೊರತು, ದೇಶವಲ್ಲ ಎಂದು ವಾಗ್ದಾಳಿ ನಡೆಸಿದ್ದಾರೆ.

ಕೃಷ್ಣಾನಗರದಲ್ಲಿ ಟಿಎಂಸಿ ಅಭ್ಯರ್ಥಿಯಾಗಿ ಮಹುವಾ ಮೊಯಿತ್ರಾ ಸ್ಪರ್ಧಿಸಲಿದ್ದಾರೆ.

‘ಬಡವರಿಂದ ಲೂಟಿ ಮಾಡಿದ ಹಣ ಅವರಿಗೆ ಹಿಂತಿರುಗಿಸಬೇಕು. ಭ್ರಷ್ಟರಿಂದ ಇ.ಡಿ ಜಪ್ತಿ ಮಾಡಿರುವ ಆಸ್ತಿ ಮತ್ತು ಹಣ ಬಡಜನರಿಗೆ ಹಿಂತಿಗುವುದನ್ನು ಖಚಿತಪಡಿಸಿಕೊಳ್ಳಲು ಕಾನೂನು ಆಯ್ಕೆಗಳ ಕುರಿತು ಪರಿಶೀಲಿಸುತ್ತಿರುವುದಾಗಿ’ ಪ್ರಧಾನಿ ಮೋದಿ ಅವರು ‘ರಾಜಮಾತಾ’ ಅಮೃತಾ ರಾಯ್ ಅವರಿಗೆ ತಿಳಿಸಿದ್ದಾರೆ ಎಂದು ಬಿಜೆಪಿ ನಾಯಕರೊಬ್ಬರು ಮಾಹಿತಿ ನೀಡಿದರು.

ಬಿಜೆಪಿ ಹಂಚಿಕೊಂಡಿರುವ ಸಂಭಾಷಣೆಯ ವಿವರಗಳ ಪ್ರಕಾರ, ಉದ್ಯೋಗ ಪಡೆಯಲು ರಾಜ್ಯದ ಜನರು ಲಂಚವಾಗಿ ₹3,000 ಕೋಟಿ ಪಾವತಿಸಿದ್ದಾರೆ. ತಾವು ಮತ್ತೆ ಅಧಿಕಾರಕ್ಕೆ ಬಂದ ಬಳಿಕ ಈ ಕುರಿತು ಕಾನೂನು ಸಾಧ್ಯತೆ ಪರಿಶೀಲಿಸಿ, ಮೊತ್ತವನ್ನು ಬಡವರಿಗೆ ಹಿಂತಿರುಗಿಸಲು ಮಾರ್ಗ ಕಂಡುಕೊಳ್ಳುವುದಾಗಿ ಪ್ರಧಾನಿ ತಿಳಿಸಿದ್ದಾರೆ. ಈ ಮಾಹಿತಿ ಜನರೊಂದಿಗೆ ಹಂಚಿಕೊಳ್ಳುವಂತೆಯೂ ಅವರು ಹೇಳಿದ್ದಾರೆ.

ಕಾಂಗ್ರೆಸ್ ವಿರುದ್ಧ ವಾಗ್ದಾಳಿ: ಭ್ರಷ್ಟಾಚಾರ ಪ್ರಕರಣದಲ್ಲಿ ದೆಹಲಿ ಮುಖ್ಯಮಂತ್ರಿಯನ್ನು ಇ.ಡಿ ಬಂಧಿಸಿದೆ. ಈ ಮೊದಲು ಎಎಪಿ ವಿರುದ್ಧ ದೂರು ನೀಡಿದ್ದ ಕಾಂಗ್ರೆಸ್ ಇದೀಗ ಪಥ ಬದಲಿಸಿದ್ದು, ಕೇಜ್ರಿವಾಲ್ ಬೆಂಬಲಕ್ಕೆ ನಿಂತಿದೆ ಎಂದು ಪ್ರಧಾನಿ ಮೋದಿ ಅವರು ವಾಗ್ದಾಳಿ ನಡೆಸಿದ್ದಾರೆ. ಇದು ವಿರೋಧ ಪಕ್ಷಗಳ ಆದ್ಯತೆ ಅಧಿಕಾರವೇ ಹೊರತು ದೇಶವಲ್ಲ ಎಂಬುದನ್ನು ತೋರಿಸುತ್ತದೆ ಎಂದು ಅವರು ಟೀಕಿಸಿದ್ದಾರೆ.

ರಾಯ್ ಅವರನ್ನು ಬಿಜೆಪಿ ಅಭ್ಯರ್ಥಿ ಎಂದು ಘೋಷಿಸಿದ ಬಳಿಕ, ವಿರೋಧ ಪಕ್ಷಗಳು ರಾಜಮನೆತನವನ್ನು ಗುರಿಯಾಗಿಸಿ ಟೀಕೆ ಮಾಡಿವೆ. ಈ ರಾಜಮನೆತನವು ಬ್ರಿಟಿಷರಿಗೆ ಬೆಂಬಲ ನೀಡಿತ್ತು ಎಂದೂ ದೂರಿವೆ.

ಈ ಕುರಿತು ಮೋದಿ ಅವರ ಬಳಿ ಅಲವತ್ತುಕೊಂಡ ರಾಯ್ ಅವರು, ‘ನನ್ನ ಕುಟುಂಬವನ್ನು ದೇಶದ್ರೋಹಿ ಎಂದು ಕರೆಯಲಾಗುತ್ತಿದೆ. 18ನೇ ಶತಮಾನದ ರಾಜ ಕೃಷ್ಣಚಂದ್ರ ರಾಯ್ ಅವರು ಸನಾತನ ಧರ್ಮ ಉಳಿಸಲು, ಇತರ ರಾಜರೊಂದಿಗೆ ಕೈಜೋಡಿಸಿದ್ದರು’ ಎಂದು ಹೇಳಿದ್ದಾರೆ. ಅದಕ್ಕೆ ಪ್ರತಿಕ್ರಿಯಿಸಿದ ಮೋದಿ ಅವರು, ಟಿಎಂಸಿ ಮತ ಬ್ಯಾಂಕ್ ರಾಜಕಾರಣ ಮಾಡುತ್ತಿದ್ದು, ಇಂಥ ಆರೋಪಗಳಿಂದ ಒತ್ತಡಕ್ಕೆ ಒಳಗಾಗಬೇಡಿ ಎಂದು ಸಲಹೆ ನೀಡಿದ್ದಾರೆ. ‘ವಿರೋಧ ಪಕ್ಷಗಳು ಭಗವಾನ್ ರಾಮನ ಅಸ್ತಿತ್ವದ ಪುರಾವೆ ಒಂದೆಡೆ ಹುಡುಕುತ್ತಿದ್ದರೆ, ಇನ್ನೊಂದೆಡೆ ಇತರರನ್ನು ದೂಷಿಸಲು ಎರಡು, ಮೂರು ಶತಮಾನಗಳ ಹಿಂದಿನ ಘಟನೆಗಳನ್ನು ಉಲ್ಲೇಖಿಸುತ್ತಿವೆ. ಇದು ಅವರ ದ್ವಂದ್ವ ನೀತಿಯಾಗಿದೆ’ ಎಂದು ಮೋದಿ ಟೀಕಿಸಿದ್ದಾರೆ.

ರಾಯ್ ಅವರ ಗೆಲುವಿನ ಕುರಿತು ವಿಶ್ವಾಸ ವ್ಯಕ್ತಪಡಿಸಿದ ಪ್ರಧಾನಿ, ಪಶ್ಚಿಮ ಬಂಗಾಳದಲ್ಲಿ ಬದಲಾವಣೆಗಾಗಿ ಜನ ಮತ ಹಾಕುತ್ತಾರೆ ಎಂದಿದ್ದಾರೆ.

ಜನರು ಮೋದಿ ಸರ್ಕಾರದ ಕಾರ್ಯಗಳಲ್ಲಿ ವಿಶ್ವಾಸ ವ್ಯಕ್ತಪಡಿಸಿದ್ದಾರೆ. ಕ್ಷೇತ್ರದ ಟಿಎಂಸಿ ಅಭ್ಯರ್ಥಿ ಭ್ರಷ್ಟಾಚಾರದ ಪ್ರಕರಣದಲ್ಲಿ ಜೈಲಿಗೆ ಹೋಗುತ್ತಾರೆ ಎಂದು ರಾಯ್ ಹೇಳಿದಾಗ, ಪ್ರಧಾನಿ ಅವರು ನಗೆಗಡಲಲ್ಲಿ ತೇಲಿದರು.

‘ಚೆನ್ನಾಗಿ ರಚಿಸಿದ ನಾಟಕ’: ಟಿಎಂಸಿ ಟೀಕೆ

ಬಿಜೆಪಿ ಮಹಿಳಾ ಅಭ್ಯರ್ಥಿಗೆ ಪ್ರಧಾನಿ ಮಾಡಿದ ದೂರವಾಣಿ ಕರೆಯು ‘ಚೆನ್ನಾಗಿ ರಚಿಸಿದ ನಾಟಕ’ ಎಂದು ಟಿಎಂಸಿ ಬಣ್ಣಿಸಿದೆ. ಚುನಾವಣೆ ಸಂದರ್ಭದಲ್ಲಿ ಬಿಜೆಪಿಯ ಈ ನಡೆಯು ನಾಟಕವಲ್ಲದೇ ಮತ್ತೇನು? ಮಣಿಪುರದ ಮಹಿಳೆಯರು, ಉತ್ತರ ಪ್ರದೇಶದ ಹತ್ರಾಸ್‌ನ ಸಂತ್ರಸ್ತರ ಕುಟುಂಬದ ಸದಸ್ಯರೊಂದಿಗೂ ಇದೇ ರೀತಿಯ ದೂರವಾಣಿ ಸಂಭಾಷಣೆ ನಡೆಸುತ್ತೀರಾ?’ ಎಂದು ಟಿಎಂಸಿ ನಾಯಕ ಕುನಾಲ್ ಘೋಷ್ ಪ್ರಶ್ನಿಸಿದ್ದಾರೆ.

ಮಹಿಳೆಯನ್ನು ವಿವಸ್ತ್ರಗೊಳಿಸಿ ಮೆರವಣಿಗೆ: 4 ಮಹಿಳೆಯರ ಸೆರೆ

ಇಂದೋರ್ (ಪಿಟಿಐ): ಮಧ್ಯಪ್ರದೇಶದ ಇಂದೋರ್ ಜಿಲ್ಲೆಯ ಗ್ರಾಮವೊಂದರಲ್ಲಿ 30 ವರ್ಷದ ಮಹಿಳೆಯನ್ನು ಥಳಿಸಿ, ವಿವಸ್ತ್ರಗೊಳಿಸಿ ಮೆರವಣಿಗೆ ಮಾಡಿದ ಆರೋಪದ ಮೇರೆಗೆ ನಾಲ್ವರು ಮಹಿಳೆಯರನ್ನು ಬಂಧಿಸಲಾಗಿದೆ ಎಂದು ಪೊಲೀಸರು ಬುಧವಾರ ತಿಳಿಸಿದ್ದಾರೆ.

ಹೋಳಿ ಆಚರಣೆ ವೇಳೆ ಈ ಘಟನೆ ನಡೆದಿದ್ದು, ಈ ವಿಡಿಯೊ ಸಾಮಾಜಿಕ ಜಾಲತಾಣಗಳಲ್ಲಿ ಹಂಚಿಕೆಯಾಗಿದೆ.

ಗೌತಮಪುರ ಪೊಲೀಸ್ ಠಾಣೆ ವ್ಯಾಪ್ತಿಯ ಬಚೋರಾ ಗ್ರಾಮದಲ್ಲಿ ಸೋಮವಾರ ನಾಲ್ವರು ಮಹಿಳೆಯರು ಸಂತ್ರಸ್ತೆಯನ್ನು ಬಲವಂತವಾಗಿ ಮನೆಯಿಂದ ಹೊರಗೆಳೆದು ಥಳಿಸಿ, ಸಾರ್ವಜನಿಕವಾಗಿ ವಿವಸ್ತ್ರಗೊಳಿಸಿ ಅವಮಾನಿಸಿದ್ದಾರೆ ಎಂದು ಪೊಲೀಸ್ ವರಿಷ್ಠಾಧಿಕಾರಿ (ಗ್ರಾಮೀಣ) ಸುನಿಲ್ ಮೆಹ್ತಾ ತಿಳಿಸಿದ್ದಾರೆ.

ಅವಮಾನದಿಂದ ವಿಚಲಿತರಾಗಿರುವ ಸಂತ್ರಸ್ತೆ ತನ್ನ ಪೋಷಕರ ಮನೆಗೆ ಹೋಗಿದ್ದಾರೆ. ಸಂತ್ರಸ್ತೆಯು ತನ್ನ ಅತ್ತೆಯನ್ನು ತನ್ನ ವಿರುದ್ಧ ಪ್ರಚೋದಿಸುತ್ತಿದ್ದಾಳೆ ಎಂದು ಒಬ್ಬ ಆರೋಪಿ ಶಂಕೆ ವ್ಯಕ್ತಪಡಿಸಿರುವುದಾಗಿ ಮೆಹ್ತಾ ಹೇಳಿದ್ದಾರೆ.

ಸಂತ್ರಸ್ತೆ ಮತ್ತು ಆರೋಪಿ ಮಹಿಳೆಯರು ಪರಿಶಿಷ್ಟ ಜಾತಿ (ಎಸ್‌ಸಿ) ವರ್ಗಕ್ಕೆ ಸೇರಿದವರಾಗಿದ್ದಾರೆ ಎಂದ ಅವರು, ಈ ಪ್ರಕರಣಕ್ಕೆ ಸಂಬಂಧಿಸಿದಂತೆ ವಿಡಿಯೊ ಚಿತ್ರೀಕರಿಸಿ, ಪ್ರಸಾರ ಮಾಡಿದವರ ವಿರುದ್ಧ ಕಾನೂನು ಕ್ರಮ ತೆಗೆದುಕೊಳ್ಳಲಾಗುವುದು ಎಂದು ತಿಳಿಸಿದ್ದಾರೆ.

ಆರೋಪಿಗಳು ದೌರ್ಜನ್ಯ ನಡೆಸುವಾಗ ಸಂತ್ರಸ್ತೆ ಪರಿಪರಿಯಾಗಿ ಬೇಡಿಕೊಂಡಿದ್ದಾರೆ. ಆದರೂ ಕರುಣೆ ತೋರದ ಆರೋಪಿಗಳು ಸಂತ್ರಸ್ತೆಯ ಬಟ್ಟೆಗಳನ್ನು ಹರಿದಿದ್ದಾರೆ ಎಂದು ಪ್ರತ್ಯಕ್ಷದರ್ಶಿಯೊಬ್ಬರು ಹೇಳಿದ್ದಾರೆ.

ಅಭಿಮತ ಪುಟದ ವಿಳಾಸ
ಸಂಪಾದಕರು, ಅಭಿಮತ ವಿಭಾಗ, ಪ್ರಜಾವಾಣಿ, 75, ಎಂ.ಜಿ.ರಸ್ತೆ, ಬೆಂಗಳೂರು-01
ಇ-ಮೇಲ್ : editpage@prajavani.co.in

ಅಭಿಮತ

ಸುಭಾಷಿತ

ಹಿಂಸೆ ಅನ್ನುವುದು ಶಾರೀರಿಕವಾದುದಷ್ಟೇ ಅಲ್ಲ, ಮಾತುಗಳಿಂದ ಎದುರಿನವರಿಗೆ ನೋವುಂಟು ಮಾಡಿದರೂ ಅದು ಹಿಂಸೆಯೇ ಆಗಿರುತ್ತದೆ.

–ಗೌತಮ ಬುದ್ಧ

ಮಾಸ್ಕೊ ಮೇಲೆ ದಾಳಿ ಪುಟಿನ್‌ಗೆ ಎಚ್ಚರಿಕೆಯ ಗಂಟೆ

ಮಾಸ್ಕೊದಲ್ಲಿ ಕಳೆದ ವಾರ ನಡೆದ ಭಯೋತ್ಪಾದಕ ದಾಳಿಯ ಹೊಣೆಯನ್ನು ಇಸ್ಲಾಮಿಕ್ ಸ್ಟೇಟ್–ಖೊರಾಸಾನ್ (ಐಎಸ್–ಕೆ) ಹೊತ್ತುಕೊಂಡಿದೆ. ಇದು ರಷ್ಯಾ ಪಾಲಿನ ದುಃಸ್ವಪ್ನವೊಂದು ವಾಸ್ತವದಲ್ಲಿ ಘಟಿಸಿದಂತೆ ಇದೆ. 1990ರ ದಶಕದ ಕೊನೆಯ ಭಾಗದಿಂದ ಹೊಸ ಶತಮಾನದ ಮೊದಲ ದಶಕದವರೆಗೆ ಚೆಚೆನ್ ಪ್ರತ್ಯೇಕತಾವಾದವು ರಷ್ಯಾದಲ್ಲಿ ಹಲವು ಭಯೋತ್ಪಾದಕ ದಾಳಿಗಳಿಗೆ ಮೂಲವಾಯಿತು. ಇದಾದ ನಂತರದಲ್ಲಿ ಸರಿಸುಮಾರು ಒಂದು ದಶಕದಿಂದಲೂ ರಷ್ಯಾ ಮೇಲೆ ಇಸ್ಲಾಮಿಕ್ ಸ್ಟೇಟ್ ದಾಳಿಯ ಅಪಾಯ ಇದ್ದೇ ಇತ್ತು. 2015ರಲ್ಲಿ ಶರ್ಮ್ ಎಲ್ ಶೇಖ್ ವಿಮಾನ ನಿಲ್ದಾಣದಿಂದ ಮಾಸ್ಕೊಗೆ ತೆರಳುತ್ತಿದ್ದ ವಿಮಾನವೊಂದನ್ನು ಆಗಸದಲ್ಲೇ ಸ್ಫೋಟಿಸಿದ ಪ್ರಕರಣದ ಹೊಣೆಯನ್ನು ಇಸ್ಲಾಮಿಕ್ ಸ್ಟೇಟ್ ಆಫ್ ಇರಾಕ್ ಆ್ಯಂಡ್ ಲವಂತ್ (ಐಎಸ್ಐಎಲ್) ಹೊತ್ತುಕೊಂಡಿತ್ತು. ಈ ವಿಮಾನದಲ್ಲಿ ಇದ್ದ 217 ಮಂದಿ ಪ್ರಯಾಣಿಕರು ಹಾಗೂ ಏಳು ಮಂದಿ ಸಿಬ್ಬಂದಿ ಮೃತಪಟ್ಟಿದ್ದರು. ಸಿರಿಯಾದಲ್ಲಿ ಬಶರ್ ಅಲ್ ಅಸದ್ ಆಡಳಿತಕ್ಕೆ ಮಿಲಿಟರಿ ನೆರವನ್ನು ರಷ್ಯಾ ಒದಗಿಸಿದಾಗಿನಿಂದಲೂ ರಷ್ಯಾ ಮೇಲೆ ದಾಳಿ ನಡೆಸಲು ಐಎಸ್ ಹೊಂಚು ಹಾಕಿತ್ತು. ಏಕೆಂದರೆ, ಐಎಸ್ಐಎಲ್ ಹಿಡಿತದಲ್ಲಿದ್ದ ಪ್ರದೇಶಗಳನ್ನು ಸ್ವಾಧೀನಕ್ಕೆ ತೆಗೆದುಕೊಳ್ಳಲು ಅಲ್ ಅಸದ್ ಆಡಳಿತಕ್ಕೆ ಈ ಮಿಲಿಟರಿ ನೆರವು ಸಹಾಯಕ್ಕೆ ಬಂದಿತ್ತು. ಮುಂದೆ ಈ ಪ್ರದೇಶದಲ್ಲಿ ಐಎಸ್ಐಎಲ್ ಪ್ರಾಬಲ್ಯ ಕಳೆದುಕೊಂಡಿತು. ಇಸ್ಲಾಮಿಕ್ ಸ್ಟೇಟ್ ಸಂಘಟನೆಗೆ ಅಫ್ಗಾನಿಸ್ತಾನದಲ್ಲಿ ಹೊಸ ನೆಲೆ ದೊರೆತ ನಂತರದಲ್ಲಿ, ತಾಲಿಬಾನ್ ನಾಯಕರ ನಡೆಯ ಬಗ್ಗೆ ಅಸಮಾಧಾನ ಹೊಂದಿರುವವರನ್ನು, ಉಯ್ಘರ್, ಉಜ್ಬೇಕ್ ಸಮುದಾಯದವರನ್ನು ತನ್ನತ್ತ ಸೆಳೆದು ಅದು ಕಾರ್ಯಾಚರಣೆ ನಡೆಸುತ್ತಿದೆ. ಅಫ್ಗಾನಿಸ್ತಾನದಲ್ಲಿ ತಾಲಿಬಾನ್ ಆಡಳಿತ ಮತ್ತೆ ಆರಂಭವಾದ ನಂತರದಲ್ಲಿ ಐಎಸ್–ಕೆ ಸಂಘಟನೆಯಲ್ಲಿ ಮಧ್ಯ ಏಷ್ಯಾದವರ ಸಂಖ್ಯೆ ಹೆಚ್ಚಾಗಿದೆ. 2021ರ ನಂತರದಲ್ಲಿ ರಷ್ಯಾ ಹಾಗೂ ಮಧ್ಯ ಏಷ್ಯಾದ ಕೆಲವು ದೇಶಗಳು ಅಫ್ಗಾನಿಸ್ತಾನದ ಜೊತೆ ಮಾತುಕತೆ ಆರಂಭಿಸಿದ್ದರ ಹಿಂದೆ ಇದ್ದ ಆಶಯಗಳಲ್ಲಿ, ಐಎಸ್ ಮಾದರಿಯ ಭಯೋತ್ಪಾದನಾ ಚಟುವಟಿಕೆಗಳು ಹೆಚ್ಚಾಗದಂತೆ ನೋಡಿಕೊಳ್ಳುವುದೂ ಒಂದು.

ಉಕ್ರೇನ್ ಯುದ್ಧದ ಸವಾಲನ್ನು ಪುಟಿನ್ ಈಗಾಗಲೇ ಎದುರಿಸುತ್ತಿದ್ದಾರೆ. ಮಾಸ್ಕೊ ಮೇಲಿನ ದಾಳಿಯು ಹೊಸ ಸವಾಲನ್ನು ಸೃಷ್ಟಿಸಿದೆ

ಮಾಸ್ಕೊ ಮೇಲೆ ನಡೆದ ದಾಳಿಯು ಐಎಸ್–ಕೆ ಸಂಘಟನೆಯು ರಷ್ಯಾ ಮೇಲೆ ನಡೆಸಿದ ಮೊದಲ ದೊಡ್ಡ ದಾಳಿ. ಅಲ್ಲದೆ, ರಷ್ಯಾ ದೇಶವು ಎರಡು ದಶಕಗಳಲ್ಲಿ ಕಂಡ ಅತ್ಯಂತ ಕೆಟ್ಟ ದಾಳಿ ಕೂಡ ಹೌದು. ಈ ದಾಳಿಯು ರಷ್ಯಾದ ಆತಂಕಗಳಿಗೆ ಕಾರಣಗಳು ಇದ್ದವು ಎಂಬುದನ್ನು ತೋರಿಸಿಕೊಟ್ಟಿದೆ. ಅಫ್ಗಾನಿಸ್ತಾನದ ಆಚೆಗೂ ಐಎಸ್–ಕೆ ಸಂಘಟನೆಯು ಕಾರ್ಯಾಚರಣೆ ವಿಸ್ತರಿಸಿದೆ ಎಂಬುದನ್ನು ಕೂಡ ಇದು ಜಾಹೀರುಗೊಳಿಸಿದೆ. ಐಎಸ್–ಕೆ ಒಡ್ಡಿದ ಸವಾಲನ್ನು ನಿವಾರಿಸಲಾಗಿದೆ ಎಂದು ತಾಲಿಬಾನ್ ಹೇಳಿಕೊಂಡಿದೆಯಾದರೂ, ಅಫ್ಗಾನಿಸ್ತಾನದಲ್ಲಿ 2023ರಲ್ಲಿ ನಡೆದ ದಾಳಿಗಳ ಸಂಖ್ಯೆಯು 2022ರಲ್ಲಿ ನಡೆದ ದಾಳಿಗಳಿಗಿಂತ ಕಡಿಮೆಯಾಗಿದ್ದರೂ, ಇರಾನ್‌ನ ಕೆರ್ಮಾನ್‌ನಲ್ಲಿ ನಡೆದ ಅವಳಿ ಬಾಂಬ್ ಸ್ಫೋಟದ ಹೊಣೆಯನ್ನು ಐಎಸ್–ಕೆ ಹೊತ್ತುಕೊಂಡಿದೆ. ಈ ದಾಳಿಯಲ್ಲಿ 100ಕ್ಕೂ ಹೆಚ್ಚು ಮಂದಿ ಮೃತಪಟ್ಟರು.

ರಷ್ಯಾದ ಅಧ್ಯಕ್ಷ ವ್ಲಾದಿಮಿರ್ ಪುಟಿನ್ ಅವರು ಉಕ್ರೇನ್ ಯುದ್ಧದ ಸವಾಲನ್ನು ಈಗಾಗಲೇ ಎದುರಿಸುತ್ತಿದ್ದಾರೆ. ಆ ಸವಾಲಿನ ಜೊತೆಗೆ ಈಗ ಮಾಸ್ಕೊ ಮೇಲಿನ ದಾಳಿಯು ಹೊಸದೊಂದು ಸವಾಲನ್ನು ಸೃಷ್ಟಿಸಿದೆ. ರಷ್ಯಾದಲ್ಲಿ ಜನರು ಹೆಚ್ಚಿನ ಸಂಖ್ಯೆಯಲ್ಲಿ ಸೇರುವ ಪ್ರದೇಶದಲ್ಲಿ ಭಯೋತ್ಪಾದಕ, ತೀವ್ರಗಾಮಿ ಗುಂಪುಗಳ ಕಡೆಯಿಂದ ದಾಳಿ ನಡೆಯಬಹುದು ಎಂಬ ಎಚ್ಚರಿಕೆಯನ್ನು ಅಮೆರಿಕ ನೀಡಿತ್ತು. ಆದರೆ ಈ ಎಚ್ಚರಿಕೆಗೆ ರಷ್ಯಾ ಕಿವಿಗೊಡಲಿಲ್ಲ. ಪುಟಿನ್ ಅವರು ದೇಶದ ಭದ್ರತೆಗೆ ಸಂಬಂಧಿಸಿದ ವಿಚಾರಗಳ ಬಗ್ಗೆ ಅರಿವಿಲ್ಲದವರೇನೂ ಅಲ್ಲ. ಮಾಸ್ಕೊ ಮೇಲೆ ಐಎಸ್ ನಡೆಸಲು ಉದ್ದೇಶಿಸಿದ್ದ ದಾಳಿಯನ್ನು ತಡೆಯಲಾಗಿದೆ ಎಂದು ರಷ್ಯಾದ ಗುಪ್ತಚರ ಸಂಸ್ಥೆಗಳು ಕೆಲವೇ ದಿನಗಳ ಹಿಂದೆ ಹೇಳಿದ್ದವು. ಈಗ ಆಗಿರುವ ದುರಂತವನ್ನು ಪುಟಿನ್ ಅವರು ಬಳಸಿಕೊಂಡು, ದೇಶದ ಮೇಲಿನ ತಮ್ಮ ಹಿಡಿತವನ್ನು ಇನ್ನಷ್ಟು ಬಿಗಿಗೊಳಿಸಲು ಹಾಗೂ ಅಳಿದುಳಿದ ಭಿನ್ನ ದನಿಗಳನ್ನು ಹತ್ತಿಕ್ಕಲು ಮುಂದಾಗಬಹುದು. ದಾಳಿಗೆ ಅಮೆರಿಕ ಮತ್ತು ಉಕ್ರೇನ್ ದೇಶಗಳನ್ನು ಪುಟಿನ್ ಅವರು ದೂಷಿಸಬಹುದು. ಆದರೆ ರಷ್ಯಾದಲ್ಲಿ ತಾವು ಕಟ್ಟಿರುವ ವ್ಯವಸ್ಥೆಗೆ ಐಎಸ್–ಕೆ ಒಂದು ಸವಾಲು ಎಂಬುದನ್ನು ಅವರು ಅರ್ಥಮಾಡಿಕೊಳ್ಳಬೇಕು.

ದಿನದ ಟ್ವೀಟ್

ಬದಲಾದ ಗ್ರಹಿಕೆ

ಸಾಮಾಜಿಕ ಮಾಧ್ಯಮವು ಕೊನೇಪಕ್ಷ ತಮಿಳುನಾಡಿನಲ್ಲಾದರೂ ರಾಜಕಾರಣಿಗಳು ಮತ್ತು ರಾಜಕೀಯ ಪಕ್ಷಗಳ ಬಗೆಗೆ ಜನಸಾಮಾನ್ಯರ ಗ್ರಹಿಕೆಯನ್ನು ಬದಲಾಯಿಸಿದೆ. ಜನ ಕೋಪಗೊಂಡಿದ್ದಾರೆ, ಹೆಚ್ಚು ಪ್ರಶ್ನಿಸಲು ಸಿದ್ಧರಾಗಿದ್ದಾರೆ ಮತ್ತು ಹುಸಿ ಭರವಸೆಗಳನ್ನು ಅಷ್ಟಾಗಿ ನಂಬುತ್ತಿಲ್ಲ. ಹಲವು ಕಡೆಗಳಲ್ಲಿ ಮತ್ತು ಪಕ್ಷಗಳಾದ್ಯಂತ ಭಿನ್ನಮತ ಇದೆ. ಪ್ರಜಾಪ್ರಭುತ್ವದ ದೃಷ್ಟಿಯಿಂದ ಒಳ್ಳೆಯ ಬೆಳವಣಿಗೆ. #Elections2024

ಸುಮಂತ್ ರಾಮನ್, ರಾಜಕೀಯ ವಿಶ್ಲೇಷಕ

ಕಿಡಿನುಡಿ

ಸಾಮಾಜಿಕ ಮಾಧ್ಯಮ ಒಂದು ಬಗೆಯ ವಿಶಿಷ್ಟವಾದ ಅಡ್ಡ ಪರಿಣಾಮ ಬೀರುತ್ತಿದ್ದು, ಪ್ರತಿಯೊಬ್ಬರೂ ಅಲ್ಪಾವಧಿಗಾಗಿ ಕೆಲಸ ಮಾಡುವಂತೆ ಮಾಡಿದೆ. ದೀರ್ಘಾವಧಿಯನ್ನು ದೃಷ್ಟಿಯಲ್ಲಿಡುವ ಯಾವುದೇ ಕೆಲಸ ಮಾಡುವುದಕ್ಕೂ ಅವರಿಗೆ ಸಾಧ್ಯವಿಲ್ಲದಂತೆ ಮಾಡುತ್ತಿದೆ. ಕೌಶಲಗಳು, ಸಂಬಂಧಗಳು, ಐಶ್ವರ್ಯ, ಪ್ರತಿಷ್ಠೆ, ಆರೋಗ್ಯ. ವ್ಯಸನಕ್ಕೆ ಒಳಗಾಗಿರುವ ಈ ಪ್ರಪಂಚದಲ್ಲಿ ದೀರ್ಘಾವಧಿಯ ಬಹುತೇಕ ಎಲ್ಲ ಕಾರ್ಯಗಳೂ ಕಠಿಣ ಎನಿಸುವಂತೆ ಆಗುತ್ತಿದೆ.

ಕುನಾಲ್ ಶಾ

25 ವರ್ಷಗಳ ಹಿಂದೆ

ಭಾನುವಾರ, 28-3-1999

● **ಕಾರ್ನಾಡ್‌ಗೆ ಜ್ಞಾನಪೀಠ ಪ್ರಶಸ್ತಿ ಪ್ರದಾನ**

ನವದೆಹಲಿ, ಮಾರ್ಚ್ 27– ಖ್ಯಾತ ನಾಟಕಕಾರ, ನಿರ್ದೇಶಕ, ನಟ ಮತ್ತು ಬಹುಮುಖ ಪ್ರತಿಭೆಯ ಗಿರೀಶ ಕಾರ್ನಾಡ ಅವರಿಗೆ ಪ್ರಧಾನ ಮಂತ್ರಿ ಅಟಲ್ ಬಿಹಾರಿ ವಾಜಪೇಯಿ ಅವರು ಸಾಹಿತ್ಯ ಕ್ಷೇತ್ರದ ಅತ್ಯುನ್ನತ ಜ್ಞಾನಪೀಠ ಪ್ರಶಸ್ತಿ ಪ್ರದಾನ ಮಾಡಿ ಗೌರವಿಸಿ, ಸಾಹಿತ್ಯ ಕ್ಷೇತ್ರದಲ್ಲಿ ಕರ್ನಾಟಕದ ಮೇರು ಸಾಧನೆಯನ್ನು ಕೊಂಡಾಡಿದರು.

ಇಲ್ಲಿಯ ಪ್ರತಿಷ್ಠಿತ ಅಂತಾರಾಷ್ಟ್ರೀಯ ಸಮ್ಮೇಳನ ಸಭಾಂಗಣವಾದ ವಿಜ್ಞಾನ ಭವನದಲ್ಲಿ ಇಂದು ಸಂಜೆ ನಡೆದ ಸುಂದರ ಸಮಾರಂಭದಲ್ಲಿ ಭಾರತೀಯ ಜ್ಞಾನಪೀಠ ಸಂಸ್ಥೆಯ 34ನೇ ಪ್ರಶಸ್ತಿ ವಿತರಣೆಯು ನಡೆಯಿತು. ಜ್ಞಾನಪೀಠ ಪ್ರಶಸ್ತಿಯ ಸಿಂಹಪಾಲು ಇಂದು ಕರ್ನಾಟಕದ್ದಾಯಿತು.

1998ರ ಸಾಲಿನ ಈ ಪ್ರಶಸ್ತಿಯು ಕನ್ನಡಕ್ಕೆ ದೊರೆತ ಏಳನೇ ಜ್ಞಾನಪೀಠವಾಗಿದ್ದು, ಗಿರೀಶ ಕಾರ್ನಾಡ ಅದನ್ನು ತಮ್ಮದಾಗಿಸಿಕೊಂಡರು.

ವಾಜಪೇಯಿ ಅವರು ಕಾರ್ನಾಡ ಅವರ ಹಣೆಗೆ ಕುಂಕುಮ ಇಟ್ಟು, ತೆಂಗಿನಕಾಯಿ ನೀಡಿ, ಶಾಲು ಹೊದಿಸಿದರು. ಆನಂತರ ವಾಗ್ದೇವಿ ಪ್ರತಿಮೆ, ಪ್ರಶಸ್ತಿ ಪತ್ರ ಮತ್ತು ಐದು ಲಕ್ಷ ರೂಪಾಯಿ ಚೆಕ್ ನೀಡಿ ಆಶೀರ್ವದಿಸಿದರು.

● **ದೂರವಾಣಿ ದರ ಏರಿಕೆ ವಿವಾದ**

ನವದೆಹಲಿ, ಮಾರ್ಚ್ 27 (ಯುಎನ್ಐ)– ಗ್ರಾಮೀಣ ಪ್ರದೇಶದ ಗ್ರಾಹಕರು ಹಾಗೂ ನಗರಗಳಲ್ಲಿರುವ ಕಡಿಮೆ ಆದಾಯ ಗುಂಪಿನ ಜನರಿಗೆ ದೂರವಾಣಿ ಬಾಡಿಗೆ ಹಾಗೂ ಕರೆ ದರ ಹೆಚ್ಚಿಸದಿರಲು ಸರ್ಕಾರ ನಿರ್ಧರಿಸುವುದರೊಂದಿಗೆ ದೂರವಾಣಿ ಪ್ರಾಧಿಕಾರದ ಹೊಸ ದರಪಟ್ಟಿ ವಿವಾದ ಬಗೆಹರಿದಂತಾಗಿದೆ.

50 ವರ್ಷಗಳ ಹಿಂದೆ

ಗುರುವಾರ, 28-3-1974

● **ರಾಜಸ್ಥಾನ ಟೀಮಿನ ಮೇಲೆ 185 ರನ್ ಭಾರಿ ಜಯ**

ಜಯಪುರ, ಮಾರ್ಚ್ 27– ರಣಜಿ ಟ್ರೋಫಿ ವಿಜಯಿಗಳ ಪಟ್ಟಿಗೆ ಕರ್ನಾಟಕದ ಹೆಸರು ಇಂದು ಸೇರಿತು.

ಜಯಪುರದ ಸವಾಯ್ ಮಾನ್‌ಸಿಂಗ್ ಕ್ರೀಡಾಂಗಣದಲ್ಲಿ ನಡೆದ ಐದು ದಿನಗಳ ಫೈನಲ್ ಪಂದ್ಯದ ನಾಲ್ಕನೇ ದಿನದ ಟೀ ವಿರಾಮ ಅರ್ಧಗಂಟೆ ಇದ್ದಾಗ, ಕರ್ನಾಟಕ ಟೀಮಿನವರು ರಾಜಸ್ಥಾನದ ವಿರುದ್ಧ 185 ರನ್‌ಗಳ ಐತಿಹಾಸಿಕ ವಿಜಯ ಸಾಧಿಸಿದರು.

● **ಖಾಸಗಿ ಶಾಲೆಗಳ ಸಮರ್ಪಕ ನಿಯಂತ್ರಣಕ್ಕೆ ಖಚಿತ ಕ್ರಮ**

ಬೆಂಗಳೂರು, ಮಾರ್ಚ್ 27– ಬಹುತೇಕ ಪ್ರಕರಣಗಳಲ್ಲಿ ಸಾರ್ವಜನಿಕರಿಗೆ ಕಿರಿಕಿರಿಯೂ ಆಡಳಿತಕ್ಕೆ ತಲೆನೋವಾಗಿಯೂ ಉಳಿದು, ಬೆಳೆದಿರುವ ಕರ್ನಾಟಕದ ಖಾಸಗಿ ಶಿಕ್ಷಣ ಶಾಲಾ ವ್ಯವಸ್ಥೆಯು ಶ್ರೀ ಜೆ.ಬಿ. ಮಲ್ಲಾರಾಧ್ಯ ಅವರ ಸಮಿತಿ ತಯಾರಿಸಿದ ಕರಡು ವಿಧೇಯಕದ ಪ್ರಕಾರ ತೀವ್ರ ನಿಯಂತ್ರಣದ ಹದ್ದುಬಸ್ತಿಗೆ ಒಳಪಡುತ್ತದೆ.

ಶಾಲಾ ಶಿಕ್ಷಣ ವ್ಯವಸ್ಥೆಯ ಬಗ್ಗೆ ಕಳೆದ ಹಲವಾರು ವರ್ಷಗಳಿಂದ ವಿಧಾನಮಂಡಲದ ಹೊರಗೂ ಒಳಗೂ ಕೇಳಿಬರುತ್ತಿರುವ ಟೀಕೆಗಳನ್ನು ಅನುಸರಿಸಿ, ಈ ವ್ಯವಸ್ಥೆಯ ಸುಧಾರಣೆಗೆ ಸೂಚಿಸಲು ಕಳೆದ ವರ್ಷ ರಚಿತವಾದ ಹಿರಿಯ ತಜ್ಞ ಶ್ರೀ ಮಲ್ಲಾರಾಧ್ಯ ನೇತೃತ್ವದ ಸಮಿತಿಯು, ಸುಮಾರು 200 ಪುಟಗಳ ವರದಿಯನ್ನು ತಯಾರಿಸಿದೆ.

ವಿಧಾನಮಂಡಲದ ಮುಂದೆ ಬರುವುದಕ್ಕಿಂತ ಮುನ್ನ ವರದಿಯ ಪ್ರಕಟಣೆ ಸಾಧುವಲ್ಲ ಎಂಬ ನಿಲುವನ್ನು ಸರ್ಕಾರ ತಳೆದಿದೆ.

ರಾಜ್ಯಗಳು ರಾಜ್ಯಗಳಾಗಿ ಉಳಿಯಬೇಕಿದ್ದರೆ ಸಂಸತ್ತಿನಲ್ಲಿ ಪ್ರತಿ ರಾಜ್ಯಕ್ಕೂ ಬೇಕೊಂದು ವಿರೋಧ ಪಕ್ಷ

ಲೋಕಸಭೆ ಮತ್ತು ರಾಜ್ಯಪ್ರಜ್ಞೆ

ಅನುರಣನ

ನಾರಾಯಣ ಎ.

ಲೋಕಸಭಾ ಚುನಾವಣೆ ಏನಿದ್ದರೂ ದೇಶಕ್ಕೆ ಸಂಬಂಧಿಸಿದ್ದು, ರಾಜ್ಯಗಳಿಗಲ್ಲ ಎನ್ನುವ, ಲೋಕಸಭಾ ಚುನಾವಣೆಯಲ್ಲಿ ರಾಷ್ಟ್ರೀಯ ಹಿತಾಸಕ್ತಿಯನ್ನು ಪರಿಗಣಿಸಿ ಮತದಾನ ಮಾಡುವುದು ಎನ್ನುವ ಮತ್ತು ವಿಧಾನಸಭಾ ಚುನಾವಣೆಗಳಲ್ಲಿ ಮಾತ್ರ ಆಯಾ ರಾಜ್ಯದ ಹಿತಾಸಕ್ತಿಗೆ ಅನುಗುಣವಾಗಿ ಮತದಾನ ಮಾಡಿದರೆ ಸಾಕು ಎನ್ನುವ ರಾಜಕೀಯ ಜನಪದವೊಂದು ಅದ್ಯಾಕೋ ಭಾರತದ ಹಲವೆಡೆ ಚಾಲ್ತಿಯಲ್ಲಿದೆ. ಕರ್ನಾಟಕದ ಮತದಾರರಂತೂ ಈ ಮನಃಸ್ಥಿತಿಗೆ ಬಹುಕಾಲದಿಂದ ಜೋತು ಬಿದ್ದಿದ್ದಾರೆ.

ಈ ನಿಲುವಿನ ಹಿಂದೆ ಒಂದು ಊಹೆ ಇದೆ. ಇಡೀ ದೇಶಕ್ಕೊಂದು ಸರ್ಕಾರವನ್ನು ದೇಶದ ಹಿತವನ್ನು ಪರಿಗಣಿಸಿ ಆರಿಸಿದರೆ ಆ ಸರ್ಕಾರ ರಾಜ್ಯಗಳ ಹಿತವನ್ನೂ ಕಾಪಾಡುತ್ತದೆ ಎನ್ನುವ ಊಹೆ ಅದು. ಅದರಲ್ಲೇನೂ ತಪ್ಪಿರಲಿಲ್ಲ. ಸಾಂವಿಧಾನಿಕವಾಗಿ ವಸ್ತುಸ್ಥಿತಿ ಇರಬೇಕಿರುವುದು ಹಾಗೇನೇ. ಆದರೆ ಈಗ ಕಾಲ ಬದಲಾಗಿದೆ. ಇಡೀ ದೇಶಕ್ಕೆಂದು ಆರಿಸುವ ಕೇಂದ್ರ ಸರ್ಕಾರವು ರಾಜ್ಯಗಳನ್ನು ಕಾಣುವ, ನಡೆಸಿಕೊಳ್ಳುವ ರೀತಿ ಬದಲಾಗುತ್ತಿದೆ. ಹಾಗಾಗಿ, ಲೋಕಸಭಾ ಚುನಾವಣೆಯಲ್ಲಿ ರಾಜ್ಯಗಳ ಕುರಿತು ಯೋಚಿಸಬೇಕಿಲ್ಲ ಎನ್ನುವ ಮತದಾರರ ನಿಲುವಿನ ಸರಿತಪ್ಪುಗಳ ಬಗ್ಗೆ ಹೊಸತೊಂದು ಜಿಜ್ಞಾಸೆಯ ಅಗತ್ಯವಿದೆ.

ಹೌದು, ರಾಜ್ಯಗಳ ಮಟ್ಟಿಗೆ ಎಲ್ಲವೂ ಪಲ್ಲಟ ಆಗುತ್ತಿದೆ. ಈ ದೇಶದಲ್ಲಿ ರಾಜ್ಯಗಳು ಅಸ್ತಿತ್ವದಲ್ಲಿ ಇರುವುದೇ ಒಂದು ಅಪರಾಧ ಎನ್ನುವಂತಹ ಒಂದು ಧೋರಣೆ ಎಗ್ಗಿಲ್ಲದೆ ಪ್ರತಿಪಾದನೆ ಆಗುತ್ತಿರುವ ಕಾಲದಲ್ಲಿ 2024ರ ಲೋಕಸಭಾ ಚುನಾವಣೆಗೆ ರಂಗಸಜ್ಜಿಕೆ ನಡೆಯುತ್ತಿದೆ. ರಾಜ್ಯಗಳು ರಾಜ್ಯಗಳಾಗಿ ಉಳಿದರೆ, ರಾಜ್ಯಗಳು ಸಂವಿಧಾನ ತಮಗೆ ಒದಗಿಸಿದಷ್ಟು ಸಾರ್ವಭೌಮಾಧಿಕಾರವನ್ನು ಪ್ರತಿಪಾದಿಸಿದರೆ ಅದೇನೋ ದೇಶದ್ರೋಹ ಎನ್ನುವ ರೀತಿಯಲ್ಲಿ ಈಗ ದೇಶವನ್ನಾಳುವ ಪಕ್ಷದ ಕಡೆಯಿಂದ ಕಥನ ಕಟ್ಟಲಾಗುತ್ತಿದೆ.

ಕರ್ನಾಟಕದ ಓರ್ವ ಬಿಜೆಪಿ ನಾಯಕ ಇತ್ತೀಚೆಗೆ ‘ಈ ದೇಶವನ್ನು ರಾಷ್ಟ್ರ ಅಂತ ಕರೆಯದೆ ಒಕ್ಕೂಟ ಅಂತ ಕರೆಯುವವರು ದೇಶದ್ರೋಹಿಗಳು!’ ಅಂತ ಹೇಳಿದ್ದು ವರದಿಯಾಗಿದೆ. ಭಾರತ ದೇಶವು ರಾಜ್ಯಗಳನ್ನೆಲ್ಲಾ ಸೇರಿಸಿ ಮಾಡಿದ ದೇಶ. ಹಾಗಾಗಿ ಅದನ್ನು ಒಕ್ಕೂಟ ಅಂತಲೇ ಕರೆಯಬೇಕಿರುವುದು. ಭಾರತವು ಒಂದು ಒಕ್ಕೂಟ ಆಗಿ ಇರುವುದರಿಂದ ಅದೊಂದು ರಾಷ್ಟ್ರ ಆಗಿರುವುದೇ ವಿನಾ ರಾಷ್ಟ್ರವಾಗಿರುವ ಕಾರಣಕ್ಕೆ ಒಕ್ಕೂಟವಾಗಿರುವುದಲ್ಲ. ಆದರೂ ಸದರಿ ಬಿಜೆಪಿ ನಾಯಕರಿಗೆ ಒಕ್ಕೂಟ ಎನ್ನುವ ಪದದಲ್ಲಿ ದೇಶದ್ರೋಹ ಎದ್ದುಕಾಣುತ್ತದೆ. ಯಾಕೆಂದರೆ ಅವರ ಪಕ್ಷದ ಮೂಲ ಸಿದ್ಧಾಂತದ ಪ್ರಕಾರ, ದೇಶದಲ್ಲಿ ರಾಜ್ಯಗಳೇ ಇರಬಾರದು. ಇದ್ದರೂ ಇಲ್ಲದಂತಿರಬೇಕು.

ಇದು ರಾಜಕೀಯ ನಾಯಕರ ಹೇಳಿಕೆಗಳ ವಿಚಾರ ಮಾತ್ರವಲ್ಲ. ವಿವಿಧ ರಾಜ್ಯಗಳಲ್ಲಿ ಏನೇನಾಗುತ್ತಿದೆ ಅಂತ ಒಮ್ಮೆ ಗಮನಿಸಿ. ಚುನಾಯಿತ ರಾಜ್ಯ ಸರ್ಕಾರಗಳನ್ನು ಕೇಂದ್ರ ಸರ್ಕಾರವು ರಾಜ್ಯಪಾಲರ ಮೂಲಕ ಅಕ್ಷರಶಃ ಪೀಡಿಸುತ್ತಿದೆ. ಇದನ್ನು ನೋಡಿ ಸುಪ್ರೀಂ ಕೋರ್ಟ್, ರಾಜ್ಯಪಾಲರಿಗೆ ಛೀಮಾರಿಯ ಮೇಲೆ ಛೀಮಾರಿ ಹಾಕುತ್ತಿದೆ. ಸೈದ್ಧಾಂತಿಕ ಹಟಮಾರಿಗಳು ಕಾನೂನಿನ-ಸಾಂವಿಧಾನಿಕ ನೈತಿಕತೆಯ ಪಾಠಗಳಿಗೆಲ್ಲಾ ತಲೆಕೆಡಿಸಿಕೊಳ್ಳುವುದಿಲ್ಲ.

ಇನ್ನೊಂದು ರೀತಿಯ ಬೆಳವಣಿಗೆ ಗಮನಿಸಿ. ಇಷ್ಟುಕಾಲ ಸಹಜ ಸಾಂವಿಧಾನಿಕ ಮಾರ್ಗಗಳ ಮೂಲಕ ಪಡೆಯುತ್ತಿರುವುದನ್ನು ಪಡೆಯಲು ರಾಜ್ಯ ಸರ್ಕಾರಗಳು ನ್ಯಾಯಾಲಯದಲ್ಲಿ ಹೋರಾಡಬೇಕಾದ ಪರಿಸ್ಥಿತಿ. ಬರ ಪರಿಹಾರ ಪಡೆಯಲು ಕರ್ನಾಟಕವು ಕೇಂದ್ರದ ವಿರುದ್ಧ ಸುಪ್ರೀಂ ಕೋರ್ಟ್‌ನಲ್ಲಿ ದಾವೆ ಹೂಡಿದೆ. ತಮಿಳುನಾಡು ವಿವಿಧ ಅನ್ಯಾಯಗಳ ವಿರುದ್ಧ ಮತ್ತೆ ಮತ್ತೆ ಸುಪ್ರೀಂ ಕೋರ್ಟ್‌ನ ಮೊರೆ ಹೋಗುತ್ತಲೇ ಇದೆ. ತಾನು ಕಳುಹಿಸಿದ ಮಸೂದೆಗಳಿಗೆ ಅಂಕಿತ ಹಾಕದೆ ಸತಾಯಿಸುತ್ತಿದ್ದಾರೆಂದು ಕೇರಳ ರಾಜ್ಯವು ರಾಷ್ಟ್ರಪತಿ ವಿರುದ್ಧವೇ ಸುಪ್ರೀಂ ಕೋರ್ಟ್‌ನ ಮೆಟ್ಟಿಲೇರಿದೆ!

ಇಷ್ಟೇ ಅಲ್ಲ, ಜಾರ್ಖಂಡ್ ಮುಖ್ಯಮಂತ್ರಿಯಾಗಿದ್ದವರು ಮತ್ತು ದೆಹಲಿ ಮುಖ್ಯಮಂತ್ರಿ ಜೈಲು ಸೇರಿ ಆಗಿದೆ. ಭ್ರಷ್ಟಾಚಾರ ಮಾಡಿದ್ದಾರೆ ಅದಕ್ಕೆ ಜೈಲು ಅಂತ ವಾದಿಸಬಹುದು. ಇಲ್ಲ, ವಿಷಯ ಅಷ್ಟೊಂದು ಸರಳವಲ್ಲ. ಭ್ರಷ್ಟಾಚಾರದ ಆರೋಪ ಎದುರಿಸುತ್ತಿರುವ ರಾಜ್ಯ ಮಟ್ಟದ ನಾಯಕರು ಕೇಂದ್ರದಲ್ಲಿ ಆಳುವ ಪಕ್ಷಕ್ಕೆ ಸೇರಿದರೆ ಎಲ್ಲ ಆರೋಪಗಳಿಂದಲೂ ಮುಕ್ತಿ, ಅದಕ್ಕೆ ಒಪ್ಪದೇಹೋದರೆ ಮಾತ್ರ ಜೈಲು. ಹಾಗಾಗಿ, ಭ್ರಷ್ಟಾಚಾರ ತಡೆಯುವುದು ಇಲ್ಲಿನ ಉದ್ದೇಶವಲ್ಲ, ಬದಲಿಗೆ ರಾಜ್ಯ ಮಟ್ಟದ ನಾಯಕರನ್ನು ಮಟ್ಟ ಹಾಕುವುದು ನಿಜವಾದ ಉದ್ದೇಶ ಎನ್ನುವುದು ಪ್ರಾಥಮಿಕ ರಾಜಕೀಯ ಪ್ರಜ್ಞೆ ಇರುವ ಯಾರಾದರೂ ಗ್ರಹಿಸುವಂತಹದ್ದು.

ಬಿಜೆಪಿ ನೇತೃತ್ವದ ಸರ್ಕಾರವೇ ಇರುವ ರಾಜ್ಯಗಳಾದರೆ ಅವು ಕೇಂದ್ರ ಸರ್ಕಾರದ ವಿಸ್ತರಣಾ ಕೌಂಟರ್‌ಗಳು ಇದ್ದಂತೆ. ಅಲ್ಲಿ ರಾಜ್ಯ ಇರುವುದಿಲ್ಲ, ಎಲ್ಲವೂ ಕೇಂದ್ರೀಕೃತ. ವಿರೋಧ ಪಕ್ಷದ ಆಡಳಿತ ಇರುವ ಒಂದೇ ಒಂದು ರಾಜ್ಯದಲ್ಲೂ ಸರ್ಕಾರವು ನೆಮ್ಮದಿಯಿಂದ ಇರುವ ಹಾಗಿಲ್ಲ. ಹಿಮಾಚಲ ಪ್ರದೇಶದಲ್ಲಿ ಚುನಾಯಿತ ಸರ್ಕಾರದ ಸಗಟು ಖರೀದಿಗೆ ವೇದಿಕೆ ಸಿದ್ಧವಾಗಿದೆ. ಲೋಕಸಭಾ ಚುನಾವಣೆ ಒಮ್ಮೆ ಮುಗಿದುಬಿಡಲಿ, ಆನಂತರ ಕರ್ನಾಟಕ ಸರ್ಕಾರವನ್ನೂ ಹೇಗೆ ಬೀಳಿಸುತ್ತೇವೆ (ಅರ್ಥಾತ್ ಖರೀದಿಸುತ್ತೇವೆ) ನೋಡಿ ಅಂತ ಹಿಂಜರಿಕೆಯೇ ಇಲ್ಲದೆ ಕೇಸರಿ ಶಾಲು ಹೆಗಲಿಗೇರಿಸಿಕೊಂಡ ಮರಿನಾಯಕರೂ ಸವಾಲು ಹಾಕುತ್ತಿದ್ದಾರೆ.



ಇತ್ತೀಚಿನವರೆಗೆ ರಾಷ್ಟ್ರೀಯ ಪಕ್ಷಗಳ ವಿರುದ್ಧ ಗುಟುರು ಹಾಕುತ್ತಿದ್ದ ಏಕೈಕ ಕನ್ನಡಿಗ ಮಾಜಿ ಪ್ರಧಾನಿ ಕೂಡಾ ಈಗ ಕರ್ನಾಟಕದ ಸಾಂವಿಧಾನಿಕ ಚುನಾಯಿತ ಸರ್ಕಾರವನ್ನು ಕೆಡವಿ ರಾಜ್ಯವನ್ನು ಮತ್ತೆ ದೆಹಲಿ ದೊರೆಗಳಿಗೆ ಒಪ್ಪಿಸಿಬಿಡ ತಕ್ಕದ್ದು ಅಂತ ಶಾಲು ಕೊಡವಿಕೊಂಡು ಪ್ರತಿಪಾದಿಸುತ್ತಿದ್ದಾರೆ. ಇಡೀ ದೇಶಕ್ಕೆ ದೇಶವನ್ನೇ ದೆಹಲಿಯಿಂದ ಆಳುವ, ರಾಜ್ಯಗಳಲ್ಲಿ ಕೇಂದ್ರದ ಆಣತಿಯಂತೆ ಕಾರ್ಯವೆಸಗುವ ಸ್ಯಾಟಲೈಟ್ ಸರ್ಕಾರಗಳನ್ನು ನಿರ್ಮಿಸುವ ಅರ್ಥಾತ್ ರಾಜ್ಯಗಳನ್ನು ಇದ್ದೂ ಇಲ್ಲದಂತೆ ಮಾಡಿ ಮುಗಿಸುವ ಯೋಜನೆಯೊಂದು ಸದ್ದಿಲ್ಲದೇ ಜಾರಿಯಾಗುತ್ತಿದೆ. ವಿವಿಧ ರಾಜ್ಯಗಳಲ್ಲಿ ರಾಜ್ಯಪ್ರಜ್ಞೆಯನ್ನೇ ಮರೆತು ತುಣುಕು ಅಧಿಕಾರಕ್ಕಾಗಿ ಹವಣಿಸುವ ಕೆಲ ಪ್ರಾದೇಶಿಕ ಪಕ್ಷಗಳ ನಾಯಕರೆಲ್ಲಾ ಈ ಸಂವಿಧಾನಾಹುತಿ ಯಜ್ಞದಲ್ಲಿ ಋತ್ವಿಕರಾಗಲು ಕಚ್ಚೆ ಕಟ್ಟಿಕೊಳ್ಳುತ್ತಿದ್ದಾರೆ.

ಲೋಕಸಭಾ ಚುನಾವಣೆ ಏನಿದ್ದರೂ ಇಡೀ ದೇಶಕ್ಕೆ ಸಂಬಂಧಿಸಿದ್ದು, ರಾಜ್ಯಗಳಿಗೂ ಅದಕ್ಕೂ ಸಂಬಂಧವೇ ಇಲ್ಲ ಎಂಬ ಮತದಾರರ ಧೋರಣೆ ಅತಿರೇಕಕ್ಕೆ ಹೋಗಿ, ಒಂದು ರಾಜ್ಯದ ಅಷ್ಟೂ ಲೋಕಸಭಾ ಸ್ಥಾನಗಳನ್ನು ರಾಜ್ಯ ವಿರೋಧಿ ಧೋರಣೆ ಹೊಂದಿದ ಒಂದು ಪಕ್ಷದ ಕೈಗೆ ನೀಡಿದ್ದರ ದುಷ್ಪರಿಣಾಮ ಇದು. ಲೋಕಸಭೆಯಲ್ಲಿ ಒಂದು ಆಳುವ ಪಕ್ಷ ಇರಬೇಕು ಮತ್ತು ಒಂದು ವಿರೋಧ ಪಕ್ಷವೂ ಇರಬೇಕು ಎನ್ನುವುದು ದೇಶದ ಹಿತದೃಷ್ಟಿಯಿಂದ ಅಗತ್ಯವಾದರೆ, ಪ್ರತಿಯೊಂದು ರಾಜ್ಯದಲ್ಲೂ ಆಳುವ ಪಕ್ಷದ ಲೋಕಸಭಾ ಸದಸ್ಯರೂ ಇರಬೇಕು ಮತ್ತು ವಿರೋಧ ಪಕ್ಷಗಳ ಲೋಕಸಭಾ ಸದಸ್ಯರೂ ಇರಬೇಕು ಎನ್ನುವುದು ಆಯಾ ರಾಜ್ಯಗಳ ಹಿತದೃಷ್ಟಿಯಿಂದ ಅಷ್ಟೇ ಅಗತ್ಯವಾದ ವಿಚಾರ. ಆಳುವ ಪಕ್ಷದ ರಾಜ್ಯ ವಿರೋಧಿ ಧೋರಣೆಯನ್ನು ಪ್ರಶ್ನಿಸಲು ಲೋಕಸಭೆಯಲ್ಲಿ ಆಯಾ ರಾಜ್ಯಗಳ ಪರವಾಗಿ ನಿಲ್ಲುವವರು ಯಾರಾದರೂ ಬೇಕಲ್ಲ? ಬರೀ ಆಳುವ ಪಕ್ಷದ ಸಂಸದರಷ್ಟೇ ಇದ್ದರೆ ರಾಜ್ಯಗಳು ಹೇಗೆ ಅನಾಥವಾಗಿ ಹೋಗುತ್ತವೆ ಎನ್ನುವುದಕ್ಕೆ ಸಂದು ಹೋಗುತ್ತಿರುವ ಲೋಕಸಭೆಯಲ್ಲಿ ಕರ್ನಾಟಕ ಹೇಗೆ ಅನಾಥವಾಗಿ ಹೋಯಿತು ಎನ್ನುವುದೇ ಒಂದು ಚಾರಿತ್ರಿಕ ಉದಾಹರಣೆ.

ಚುನಾವಣೆಗಳು ಹಿಂದೆಯೂ ಆಗಿವೆ, ಹೋಗಿವೆ. ಪಕ್ಷಗಳು ಗೆದ್ದಿವೆ, ಸೋತಿವೆ. ಹಿಂದೆಯೂ ಕೇಂದ್ರವು ರಾಜ್ಯಗಳ ಮೇಲೆ ಸವಾರಿ ಮಾಡಿದ್ದಿದೆ. ಬೇಕಾದವರನ್ನು ಮುಖ್ಯಮಂತ್ರಿ ಮಾಡಿ, ಬೇಡದವರನ್ನು ಕಿತ್ತೊಗೆದದ್ದಿದೆ. ಆದರೆ, ರಾಜ್ಯಗಳ ಅಸ್ತಿತ್ವವನ್ನೇ ಅಣಕಿಸುವ, ವಿರೋಧ ಪಕ್ಷಗಳ ಆಡಳಿತ ಇರುವ ರಾಜ್ಯಗಳನ್ನು ಕಾಡಿಸಿ, ಪೀಡಿಸಿ, ಬರಗಾಲದಂತಹ ಮಾನವೀಯ ಬಿಕ್ಕಟ್ಟಿಗೆ ನೆರವಾಗುವಲ್ಲೂ ಸತಾಯಿಸುವ, ರಾಜ್ಯ ವಿರೋಧಿ ರಾಷ್ಟ್ರ ರಾಜಕೀಯವೊಂದನ್ನು ಈ ದೇಶ ಕಂಡಿರಲಿಲ್ಲ. ಈ ಬಾರಿ ಪ್ರತಿ ರಾಜ್ಯದ ಮತದಾರ ಮತಗಟ್ಟೆಗೆ ಹೋಗುವ ಮುನ್ನ ನೆನಪಿಸಿಕೊಳ್ಳಬೇಕಿರುವುದು ಈ ಸತ್ಯವನ್ನು.

ಚುರುಮುರಿ

ಕನ್ನಡವಷ್ಟೇ ಬರುತ್ತೆ!

● ಗುರು ಪಿ.ಎಸ್.

‘ಇದು ಆರ್‌ಸಿಬಿಯ ಹೊಸ ಅಧ್ಯಾಯ...’

‘ನೋಡು, ನೋಡು ನಮ್ ಕೊಹ್ಲಿ ಎಷ್ಟ್ ಚೆನ್ನಾಗಿ ಕನ್ನಡದಲ್ಲಿ ಮಾತಾಡ್ತಿದಾನೆ’ ಟಿ.ವಿ. ನೋಡುತ್ತಾ ಖುಷಿಯಿಂದ ಹೇಳ್ದೆ.

‘ಅದರಲ್ಲೇನ್ ವಿಶೇಷ?’ ಅಷ್ಟೇ ನಿರುತ್ಸಾಹದಲ್ಲಿ ಕೇಳಿದಳು ಹೆಂಡತಿ.

‘ಕೊಹ್ಲಿ ದೆಹಲಿಯವನು ಕಣಮ್ಮ... ಆದರೂ ಬೆಂಗಳೂರು ಮತ್ತು ಕನ್ನಡ ಅಂದ್ರೆ ಎಷ್ಟ್ ಪ್ರೀತಿ ನೋಡು ಅವನಿಗೆ. ನಮ್ ಆರ್‌ಸಿಬಿ ಮಹಿಳಾ ಟೀಂ ಕ್ಯಾಪ್ಟನ್ ಸ್ಮೃತಿ ಮಂದಾನ ಕೂಡ ‘ಈ ಸಲ ಕಪ್ ನಮ್ದು’ ಅಂತ ಹೇಳಲಿಲ್ವ. ಅವಳು ಮಹಾರಾಷ್ಟ್ರದವಳು. ನಮ್ ಕನ್ನಡ ಈಗ ಬೇರೆ ರಾಜ್ಯದವರ ಬಾಯಲ್ಲೂ ಹೇಗೆ ರಾರಾಜಿಸ್ತಿದೆ ನೋಡು’.

‘ಸಾಕ್ ಸುಮ್ನಿರಿ, ಎಲೆಕ್ಷನ್ ಬಂದಾಗಲೆಲ್ಲ ನಾನೂ ನೋಡಲ್ವ. ದೆಹಲಿ ರಾಜಕಾರಣಿಗಳು ಇಲ್ಲಿಗೆ ಬಂದು ‘ಕನ್ನಡ್ ಜನತೆಗೆ ನಮಷ್ಕಾರಘಳು’ ಅನ್ನೋದನ್ನ’ ಅಷ್ಟೇ ಬೇಸರದಲ್ಲಿ ಹೇಳಿದಳು ಹೆಂಡತಿ.

‘ನೀನು ಅತೃಪ್ತ ಆತ್ಮ ಇದ್ದಂಗೆ ನೋಡು. ಕನ್ನಡ ಬಾರದವರೂ ಒಂದೆರಡು ವಾಕ್ಯ ಕಲಿತು ಹೇಳಿದರೂ ಖುಷಿಯಿಲ್ಲ ನಿಂಗೆ’.

‘ಒಂದೆರಡು ವಾಕ್ಯ ಕನ್ನಡದಲ್ಲಿ ಮಾತನಾಡಿಸೋದಲ್ಲ ರೀ, ದೆಹಲಿಯಲ್ಲಿ ನಮ್ ಕನ್ನಡ ಮೊಳಗಬೇಕು, ಅದು ಕನ್ನಡ ಪ್ರೇಮ, ಧರ್ಮ’.

‘ಮೊಳಗಿಸೋಣ ಬಿಡು’.

‘ಏನ್ ಮೊಳಗಿಸ್ತೀರಾ, ಕನ್ನಡವನ್ನ ಮುಳುಗಿಸೋಕೆ ನಿಂತಿದಾರಲ್ಲ’.

‘ಯಾಕೆ, ಏನಾಯ್ತು?’ ಅಚ್ಚರಿಯಿಂದ ಕೇಳಿದೆ.

‘ಲೋಕಸಭಾ ಎಲೆಕ್ಷನ್‌ನಲ್ಲಿ ಸ್ಪರ್ಧಿಸಿರೋರಲ್ಲಿ ಯಾರಿಗೆ ಹಿಂದಿ, ಇಂಗ್ಲಿಷ್ ಬರಲ್ವೋ ಅವರನ್ನ ಸೋಲಿಸಿ ಅಂತ ರಾಜಕೀಯದವರೇ ಹೇಳ್ತಿದಾರೆ. ಇನ್ನೇನ್ ಇವರು ದೆಹಲಿಯಲ್ಲಿ ಕನ್ನಡ ಮೊಳಗಿಸ್ತಾರೆ’ ಹೆಂಡತಿ ಕೋಪ ಕಡಿಮೆಯಾಗಿರಲಿಲ್ಲ.

‘ಎಲೆಕ್ಷನ್‌ನಲ್ಲಿ ಗೆಲ್ಲೋದಕ್ಕೆ ಏನೋ ಹೇಳಿರ್ತಾರೆ ಬಿಡಮ್ಮ’.

‘ಕನ್ನಡ ಸೋತರೆ ಕರ್ನಾಟಕವೇ ಸೋತಂಗೆ ಅಲ್ವೇನ್ರೀ, ಕರ್ನಾಟಕ ಸೋತರೆ ನಾವೇ ಸೋತಂತೆ ಅಲ್ವಾ...’ ಹೆಂಡತಿಯ ಕನ್ನಡ ಭಾಷಣ ಮುಗಿಯಲೇ ಇಲ್ಲ.

‘ಇದು ನವೆಂಬರ್ ಅಲ್ವಲ್ಲ. ನನ್ನ ಹೆಂಡ್ತಿಗೆ ಯಾಕೀಗ ಕನ್ನಡ ಪ್ರೇಮ ಇಷ್ಟು ಹೆಚ್ಚಾಗಿಬಿಟ್ಟಿದೆ’ ಎಂದು ಮನದಲ್ಲೇ ಅಂದುಕೊಂಡು ಮನೆಯಿಂದ ಹೊರಗೆ ಕಾಲಿಟ್ಟೆ.

ಸಂಗತ

ಕಾರ್ಯಕ್ರಮವೆಂದರೆ ಏಕೆ ಹೇವರಿಕೆ?

ನಮ್ಮ ಯುವಜನಾಂಗಕ್ಕೆ ಸಭೆಗಳು ಅಪಥ್ಯವಾಗಿರುವುದಕ್ಕೆ ಹತ್ತಾರು ಕಾರಣಗಳಿವೆ

● ಡಾ. ಮುರಳೀಧರ ಕಿರಣಕೆರೆ

ಅದು, ವರ್ಚಸ್ವಿ ಸಮಾಜವಾದಿ ನೇತಾರ, ಶ್ರೇಷ್ಠ ಸಂಸದೀಯ ಪಟು, ಕನ್ನಡ ನಾಡು– ನುಡಿಯ ಬಗ್ಗೆ ಅಪ್ಪಟ ಅಕ್ಕರೆ ಹೊಂದಿದ್ದ ಶಾಂತವೇರಿ ಗೋಪಾಲಗೌಡರ ಜನ್ಮಶತಾಬ್ದಿ ಕಾರ್ಯಕ್ರಮ. ಸಭಿಕರಲ್ಲಿ ಹೆಚ್ಚಿನವರೆಲ್ಲಾ ಹಿರಿಯ ನಾಗರಿಕರು. ಯುವಜನರ ಸಂಖ್ಯೆ ಬೆರಳೆಣಿಕೆಯಷ್ಟೂ ಇರಲಿಲ್ಲ. ಹಾಗಾದರೆ ಇಂತಹ ಕಾರ್ಯಕ್ರಮ ಯಾರಿಗಾಗಿ ಎಂಬ ಪ್ರಶ್ನೆ ಅಲ್ಲಿ ಎದ್ದಿತ್ತು!

ಒಬ್ಬ ನಾಯಕನ ಆದರ್ಶ ಗುಣಗಳನ್ನು ಮೈಗೂಡಿಸಿಕೊಂಡು ಸಂಸ್ಕೃತಿ, ಸಂಸ್ಕಾರ, ಮಾನವೀಯ ಮೌಲ್ಯಗಳನ್ನು ಉಳಿಸಿ ಬೆಳೆಸುವಲ್ಲಿ ಯುವಜನಾಂಗದ ಪಾತ್ರವೇ ದೊಡ್ಡದು. ಉತ್ತಮ ನಡವಳಿಕೆ ಮೂಲಕ ಗಟ್ಟಿ ನಾಡು ಕಟ್ಟುವ ಕಾಯಕದಲ್ಲಿ ಮುಂಚೂಣಿಯಲ್ಲಿ ಇರಬೇಕಾದ ಇವರ ಬೌದ್ಧಿಕ ವಿಕಾಸ ಆಗುತ್ತಿದೆಯೇ? ಯಾವುದೇ ವೈಚಾರಿಕ, ಸಾಹಿತ್ಯಕ ಕಾರ್ಯಕ್ರಮಗಳಲ್ಲಿ ಭಾಗವಹಿಸುವವರ ವಯೋಮಾನ ನೋಡಿದರೆ ಹೀಗೊಂದು ಪ್ರಶ್ನೆ ಧುತ್ತೆಂದು ಎದುರಾಗುವುದು ಸತ್ಯ. ಇದು ನಿಜಕ್ಕೂ ಆತಂಕಕಾರಿ ವಿದ್ಯಮಾನ.

ಪಾಶ್ಚಿಮಾತ್ಯ ನೃತ್ಯ, ಅಬ್ಬರದ ಸಂಗೀತ, ನಟ-ನಟಿಯರ ಸಭೆ, ಐಪಿಎಲ್‌ನಂತಹ ಕೂಟಗಳಲ್ಲಿ ಕಿಕ್ಕಿರಿದು ಸೇರಿ ಸಂಭ್ರಮಿಸುವ ಯುವಕ, ಯುವತಿಯರು, ಜ್ಞಾನ ನೀಡುವ, ಬದುಕಲು ಕಲಿಸುವ, ವ್ಯಕ್ತಿತ್ವ ವಿಕಾಸದಂತಹ ಕಾರ್ಯಕ್ರಮಗಳಿಂದ ಯಾಕೆ ದೂರ ಉಳಿಯುತ್ತಿದ್ದಾರೆ? ಒತ್ತಾಯದಿಂದ ಆಹ್ವಾನಿಸಿದರೆ ‘ಅಲ್ಲೇನಿರುತ್ತೆ ಮಣ್ಣು? ಬರೀ ಕೊರೆತ, ಉಪದೇಶ’ ಎಂಬ ಉತ್ತರ ಅವರ ಬಾಯಿಯಿಂದ ಸಿಡಿದಾಗ ದಿಗಿಲಾಗುತ್ತದೆ. ಏನು ಬೇಕಾದರೂ ಸೋಷಿಯಲ್ ಮೀಡಿಯಾದಲ್ಲಿ ಸಿಗುತ್ತದೆ, ಬೆರಳ ತುದಿಯಲ್ಲೇ ಸಿಗುವುದಕ್ಕೆ ಎಲ್ಲೆಲ್ಲೋ ಏಕೆ ಹೋಗಬೇಕು ಎಂಬ ಧೋರಣೆ.

ಯುವಪೀಳಿಗೆಯ ಇಂತಹ ಅಭಿಪ್ರಾಯ, ಪ್ರತಿಕ್ರಿಯೆಯನ್ನು ಸಂಪೂರ್ಣವಾಗಿ ತಪ್ಪು ಎನ್ನಲಾಗದು. ಒಂದೆಡೆ ಅಭಿರುಚಿಯ ಕೊರತೆ, ಮತ್ತೊಂದೆಡೆ ಕಾರ್ಯಕ್ರಮ ಆಯೋಜನೆಯಲ್ಲಿನ ಲೋಪಗಳು ಅವರನ್ನು ದೂರವುಳಿಯುವಂತೆ ಮಾಡುತ್ತಿರುವುದೂ ಅಷ್ಟೇ ಸತ್ಯ. ಕಾಟಾಚಾರದ ಆಯೋಜನೆ, ವಿಷಯ, ಸಭೆಯನ್ನು ಗಂಭೀರವಾಗಿ ತೆಗೆದುಕೊಳ್ಳದ ಉಪನ್ಯಾಸಕರು, ಪಾಂಡಿತ್ಯವಿಲ್ಲದ, ವಿಷಯಜ್ಞಾನ ಚೆನ್ನಾಗಿದ್ದರೂ ಪ್ರಸ್ತುತಿಯಲ್ಲಿ ಸೋಲುವ, ಸಂವಹನ ಕೌಶಲಗಳಿಲ್ಲದ ಭಾಷಣಕಾರರು, ಸಭಾ ಪ್ರಜ್ಞೆ, ಸಮಯ ಪ್ರಜ್ಞೆ, ಸಂದರ್ಭ ಪ್ರಜ್ಞೆಯ ಅಭಾವ, ರಾಜಕೀಯ ನೇತಾರರಿಗೆ ಕೊಡುವ ಅಸಹ್ಯವೆನಿಸುವಷ್ಟು ಪ್ರಾಶಸ್ತ್ಯ, ಸಮಯ ಪಾಲನೆಯಿಲ್ಲದೆ ವಿಳಂಬವಾಗಿ ಆರಂಭ... ಹೀಗೆ ಸಭಿಕರು ಅದರಲ್ಲೂ ನಮ್ಮ ಯುವಜನಾಂಗ ಸಭೆಗಳೆಂದರೆ ಒಲ್ಲೆನೆನ್ನಲು ಕಾರಣಗಳು ಹತ್ತಾರು. ಹಾಗಾಗಿಯೇ ನಮ್ಮ ಬಹುತೇಕ ಕಾರ್ಯಕ್ರಮಗಳು, ಒಮ್ಮೊಮ್ಮೆ ಎಷ್ಟೇ ಗುಣಮಟ್ಟದವಾದರೂ ಸಭಿಕರ ಕೊರತೆಯಿಂದ ಸೊರಗುವುದು ಸಾಮಾನ್ಯವಾಗಿದೆ.

ಸಾಹಿತ್ಯಕ್ಕೆ ಸಂಬಂಧಿಸಿದ ಗೋಷ್ಠಿ, ಉಪನ್ಯಾಸ, ವಿಚಾರ ಸಂಕಿರಣ, ನಾಟಕದಂತಹ ಸಾಂಸ್ಕೃತಿಕ ಕಾರ್ಯಕ್ರಮಗಳೆಂದರೆ ದೂರ ಓಡುವ ಮನಃಸ್ಥಿತಿಗೆ ಪ್ರಮುಖ ಕಾರಣ ಮಕ್ಕಳಲ್ಲಿ ಅಭಿರುಚಿ ಬೆಳೆಸುವಲ್ಲಿ ನಾವು ಎಡವಿರುವುದು. ವಿದ್ಯಾಲಯಗಳಲ್ಲಿ ಉತ್ತಮ ಅಂಕ, ಗ್ರೇಡ್‌ಗಳನ್ನು ಪಡೆಯುವುದೇ ಮಕ್ಕಳ ಸರ್ವಾಂಗೀಣ ಪ್ರಗತಿ ಎಂಬಂತಾಗಿದೆ. ಇದಕ್ಕಾಗಿಯೇ ಎಲ್ಲೆಡೆ ತುರುಸಿನ ಪೈಪೋಟಿ. ಮಕ್ಕಳಲ್ಲಿ ವೈವಿಧ್ಯಮಯ ಅಭಿರುಚಿ ಬೆಳೆಸುತ್ತಾ ಅವರ ವ್ಯಕ್ತಿತ್ವ ವಿಕಸನಕ್ಕೆ ಕಾರಣವಾಗುವುದು ಶಾಲಾ, ಕಾಲೇಜುಗಳ ಪಠ್ಯೇತರ ಚಟುವಟಿಕೆಗಳು.

ಪಠ್ಯದ ಸಮಸಮಕ್ಕೆ ಇರಬೇಕಾದ ಈ ಪಠ್ಯೇತರ ಚಟುವಟಿಕೆಗಳು ಅಂಕ ಆಧಾರಿತ ಫಲಿತಾಂಶವನ್ನು ದಾಖಲಿಸುವ ಧಾವಂತದಲ್ಲಿ ಮೂಲೆಗುಂಪಾಗಿವೆ. ಹಿಂದೆಲ್ಲಾ ವಿದ್ಯಾಲಯಗಳಲ್ಲಿ ವೈಚಾರಿಕ, ವೈಜ್ಞಾನಿಕ ಮನೋಭಾವ ಬೆಳೆಸುವ, ಸಾಹಿತ್ಯದ ಮೂಲಕ ಬೌದ್ಧಿಕ ವಿಕಾಸಕ್ಕೆ ಪೂರಕವಾಗುವಂತಹ ಕಾರ್ಯಕ್ರಮಗಳಿಗೆ ಅಗ್ರ ಮಣೆಯಿತ್ತು. ಕಲಾ ಸಂಘ, ವಿಜ್ಞಾನ ಸಂಘ, ಇಕೋ ಕ್ಲಬ್, ಗ್ರಾಹಕ ಸಂಘ, ಸಾಹಿತ್ಯ ಸಂಘ, ಕ್ರೀಡಾ ಸಂಘಗಳು, ಮಂತ್ರಿಮಂಡಲ, ಅಣಕು ಸಂಸತ್ತು ಪ್ರತಿ ವಿದ್ಯಾಸಂಸ್ಥೆಯಲ್ಲಿ ಇರಬೇಕಿರುವುದು ಕಡ್ಡಾಯ. ಈ ವೇದಿಕೆಗಳ ಮೂಲಕ ವಿವಿಧ ಚಟುವಟಿಕೆಗಳು ನಡೆದು ಮಕ್ಕಳ ಬೌದ್ಧಿಕ ವಿಕಸನಕ್ಕೆ ಪೂರಕ ವಾತಾವರಣ ಸೃಷ್ಟಿಯಾಗುತ್ತಿತ್ತು. ಹಾಗಂತ ಈ ಸಂಘಗಳು ಈಗ ಇಲ್ಲವೆಂದಲ್ಲ. ಪ್ರತಿವರ್ಷ ನಿಯಮದಂತೆ ರಚನೆಯಾದರೂ ಬರೀ ಸಾಮೂಹಿಕ ಉದ್ಘಾಟನೆ, ಸಮಾರೋಪಕ್ಕಷ್ಟೇ ಸೀಮಿತವಾಗಿರುವುದು ದೊಡ್ಡ ದುರಂತ.

ಸ್ಮಾರ್ಟ್‌ಫೋನುಗಳಲ್ಲಿ ತಮ್ಮದೇ ಲೋಕ ಕಟ್ಟಿಕೊಂಡು ಅಲ್ಲಿಯೇ ವಿಹರಿಸುವ ಯುವಜನಾಂಗದ ಮೊಬೈಲ್ ವ್ಯಸನವೂ ಅವರನ್ನು ಸಾಮಾಜಿಕ ಕಾರ್ಯಕ್ರಮಗಳಿಂದ ವಿಮುಖಗೊಳಿಸುತ್ತಿರುವುದು ಸತ್ಯ.

ಬಾಲ್ಯದ ಹಂತದಲ್ಲೇ ಉತ್ತಮ ಅಭಿರುಚಿ, ಮೌಲ್ಯಗಳನ್ನು ಬಿತ್ತದೆ ಎಲ್ಲ ಕೆಡುಕುಗಳಿಗೂ ಯುವಪೀಳಿಗೆಯತ್ತ ಬೆರಳು ತೋರಿ ಹಳಿಯುವ ಚಾಳಿ ತಪ್ಪಬೇಕು. ಇಲ್ಲಿ ನಿಜಕ್ಕೂ ಅಪರಾಧಿಗಳು ಮನೆ, ಶಾಲೆ, ಸಮಾಜ ಎಲ್ಲವೂ. ಭಾವನೆಗಳು, ಸೂಕ್ಷ್ಮ ಸಂವೇದನೆಗಳು, ಸಾಮಾಜಿಕ ಸಂಪರ್ಕಗಳನ್ನು ಕಳೆದುಕೊಂಡು ಡಿಜಿಟಲ್ ವ್ಯಸನಿಗಳಾಗುತ್ತಿರುವ ನಮ್ಮ ಯುವಜನರನ್ನು ಮರಳಿ ಮಾನವೀಯತೆಯ ದಾರಿಗೆ ತರುವ ಅನಿವಾರ್ಯ ಇದೆ. ಶಾಲಾ, ಕಾಲೇಜುಗಳಲ್ಲಿ ಪಠ್ಯದ ಹೊರೆಯನ್ನು ಇಳಿಸಿ, ವಿವಿಧ ಸಂಘಗಳಿಗೆ ಜೀವ ತುಂಬಿ ವೈವಿಧ್ಯಮಯ ಚಟುವಟಿಕೆಗಳ ಮೂಲಕ ಮಕ್ಕಳಲ್ಲಿ ಮಾನವೀಯ ಮೌಲ್ಯಗಳು, ಜೀವನಪ್ರೀತಿಯ ಸೆಲೆ ಚಿಮ್ಮುವಂತೆ ಮಾಡುವುದು ಸದ್ಯದ ಜರೂರು. ಇದಕ್ಕೆ ಪೂರಕ ವಾತಾವರಣ ಸೃಷ್ಟಿಸುವಲ್ಲಿ ಸರ್ಕಾರದ ಹೊಣೆಗಾರಿಕೆ ದೊಡ್ಡದಿದೆ.

ವಾಚಕರ ವಾಣಿ

‘ಸ್ವಚ್ಛ’ ರಾಜಕೀಯ ಅಭಿಯಾನ!

2014ರಲ್ಲಿ ಅಧಿಕಾರಕ್ಕೆ ಬಂದ ಕೂಡಲೇ ಪ್ರಧಾನಿ ನರೇಂದ್ರ ಮೋದಿ ಅವರು ಕೈಗೆತ್ತಿಕೊಂಡ ಯೋಜನೆಯೆಂದರೆ ‘ಸ್ವಚ್ಛ ಭಾರತ ಅಭಿಯಾನ’. ಈ ಯೋಜನೆಯು ತುಂಬಾ ಹೊಸದಾಗಿತ್ತು ಮತ್ತು ಎಲ್ಲರ, ಮುಖ್ಯವಾಗಿ ಮಹಿಳೆಯರ ಮೆಚ್ಚುಗೆಗೆ ಪಾತ್ರವಾಗಿತ್ತು. ಆದರೆ ಆ ಅಭಿಯಾನಕ್ಕೆ ಒಂದು ರಾಜಕೀಯ ಆಯಾಮವೂ ಇರುವುದನ್ನು ಪತ್ರಿಕೆಯ ವಿಶೇಷ ವರದಿಗಳು (ಪ್ರ.ವಾ., ಮಾರ್ಚ್ 26, 27) ತೋರಿಸಿಕೊಟ್ಟಿವೆ.

ಹಿಂದೂಗಳ ಪರಂಪರಾಗತ ನಂಬಿಕೆಯೆಂದರೆ, ಗಂಗಾ ನದಿಯಲ್ಲಿ ಒಮ್ಮೆ ಸ್ನಾನ ಮಾಡಿದರೂ ಸಾಕು, ಗಂಗಾ ಮಾತೆ ಅವರ ಎಲ್ಲ ಪಾಪಗಳನ್ನೂ ತೊಳೆಯುತ್ತಾಳೆ. ಆದರೆ, ಗಂಗಾ ನದಿಯಂತಹ ಒಂದು ರಾಜಕೀಯ ಪಕ್ಷವೂ ಇದೆ ಎಂಬುದು ಬಹುಜನರಿಗೆ ಗೊತ್ತಿರಲಿಲ್ಲ. ಅದೆಷ್ಟು ಮಹಾನ್ ನಾಯಕರು ಒಂದು ಪಕ್ಷವನ್ನು ಸೇರಿದ ಕೂಡಲೇ ಶುಚಿರ್ಭೂತರಾಗಿ ಸ್ವಚ್ಛವಾಗಿದ್ದಾರೆ ಎಂಬುದನ್ನು ಓದಿ ನಂಬಲಾರದೆ ನಂಬಿದೆ. ಇನ್ನು ಮುಂದೆ ನ್ಯಾಯಾಲಯ, ಸೆರೆಮನೆಗಳಂತಹವು ಏನೂ ಬೇಕಿಲ್ಲ. ಪರಿಣಾಮತಃ, ನಮ್ಮ ರಾಷ್ಟ್ರದ ಅದೆಷ್ಟು ಹಣ ಉಳಿಯುತ್ತದೆ!

ಸಿ.ಎನ್.ರಾಮಚಂದ್ರನ್, ಬೆಂಗಳೂರು

ದಟ್ಟವಾಗಿ ಆವರಿಸುವ ಪ್ರೀತಿಯ ಛಾಯೆ

ನಾನು ಧಾರವಾಡದಲ್ಲಿ ವಿದ್ಯಾರ್ಥಿ ದಿನಗಳಲ್ಲಿದ್ದಾಗ ನಾಡಿನ ಹಿರಿಯ ಸಾಹಿತಿ ಗುರುಲಿಂಗ ಕಾಪಸೆ ಅವರ ಜೊತೆಗೆ ನಿಕಟ ಸಂಪರ್ಕ ಹೊಂದಿದ್ದೆ. ಪ್ರತಿ ಬಾರಿ ಅವರನ್ನು ಕಂಡಾಗಲೆಲ್ಲಾ ಜ್ಞಾನ ದೇಗುಲದ ದರ್ಶನ ಪಡೆದಂತಹ ಅನುಭವ ಆಗುತ್ತಿತ್ತು. ಅವರು ಆಡುತ್ತಿದ್ದ ಅಂತಃಕರಣಪೂರ್ವಕ ಮಾತುಗಳು ನನ್ನಂಥವನಿಗೆ ಚೇತೋಹಾರಿಯಾಗಿದ್ದವು. ಮನುಷ್ಯಪ್ರೀತಿಯನ್ನು ಅವರು ಜವಾಬ್ದಾರಿ, ಸೇವೆ, ಸಮರ್ಪಣೆ, ಕ್ಷಮೆ, ತ್ಯಾಗ ಎಂಬ ನುಡಿಗಳಿಗೆ ಅನ್ವಯಿಸಿ ಅರ್ಥೈಸುತ್ತಿದ್ದರು. ಪ್ರತಿಯೊಬ್ಬರೂ ಹೇಗೆ ತಮ್ಮ ನಿತ್ಯ ಜೀವನದಲ್ಲಿ ಪ್ರೀತಿಪೂರ್ವಕ ನಡವಳಿಕೆ ಅಳವಡಿಸಿಕೊಳ್ಳಬೇಕು ಎಂಬ ಬಗ್ಗೆ ಮನಮುಟ್ಟುವಂತೆ ಹೇಳುತ್ತಿದ್ದರು.

ಜರ್ಮನಿಯ ಚಿಂತಕ ಎರಿಕ್ ಫ್ರಾಮ್ ಬರೆದ ‘ಆರ್ಟ್ ಆಫ್ ಲವಿಂಗ್’ ಕೃತಿಯನ್ನು ಪ್ರೊ. ರಾಘವೇಂದ್ರ ರಾವ್ ಕನ್ನಡಕ್ಕೆ ತರ್ಜುಮೆ ಮಾಡಿದ್ದು, ಅದಕ್ಕೆ ಗುರುಲಿಂಗ ಕಾಪಸೆಯವರು ಮುನ್ನುಡಿ ಬರೆದಿದ್ದಾರೆ. ಅದು ವೈದ್ವಾಂಸಿಕತೆ, ವಸ್ತುನಿಷ್ಠತೆ ಹಾಗೂ ನೈತಿಕತೆಯ ತ್ರಿವೇಣಿ ಸಂಗಮದಂತಿದೆ. ಈ ಪುಸ್ತಕವನ್ನು ಮತ್ತೆ ಮತ್ತೆ ಓದುವಾಗ ಸದಾ ಭಿನ್ನ ಭಿನ್ನ ಅರ್ಥ ಹಾಗೂ ಭಾವಗಳನ್ನು ಸ್ಫುರಿಸುತ್ತದೆ. ಕಾಪಸೆಯವರು ನಮ್ಮಿಂದ ದೂರವಾಗಿರಬಹುದು. ಆದರೆ, ಅವರು ಚೆಲ್ಲಿರುವ ಪ್ರೀತಿಯ ಛಾಯೆ ಮಾತ್ರ ನಮ್ಮನ್ನು ಸದಾ ದಟ್ಟವಾಗಿ ಆವರಿಸುತ್ತಲೇ ಇರುತ್ತದೆ.

ನ್ಯಾಯಮೂರ್ತಿ ಕೃಷ್ಣ ಎಸ್.ದೀಕ್ಷಿತ್, ಬೆಂಗಳೂರು

ನಿರೀಕ್ಷೆಗೆ ನಿಲುಕದ ರಾಜಕೀಯ ಚಕ್ರವ್ಯೂಹ

ರಾಜ್ಯದ ಅತ್ಯಂತ ಪ್ರಭಾವಶಾಲಿ ರಾಜಕಾರಣಿಯಾಗಿ ಕೆಲವು ವರ್ಷಗಳ ಕಾಲ ಮೆರೆದು, ಅಕ್ರಮ ಗಣಿಗಾರಿಕೆ ಪ್ರಕರಣಗಳಲ್ಲಿ ಜೈಲುಪಾಲಾಗಿ ನಂತರ ಬಿಡುಗಡೆಯಾಗಿ, ತಮ್ಮದೇ ಆದ ಪ್ರಾದೇಶಿಕ ಪಕ್ಷವೊಂದನ್ನು ಸ್ಥಾಪಿಸಿ, ಶಾಸಕರಾಗಿ ಆಯ್ಕೆಯಾಗಿರುವ ಗಾಲಿ ಜನಾರ್ದನ ರೆಡ್ಡಿ ಹೊಸ ಖದರ್‌ನಿಂದ ಈಗ ಮತ್ತೆ ಬಿಜೆಪಿಗೆ ಸೇರ್ಪಡೆಗೊಂಡಿದ್ದಾರೆ. ಇತ್ತೀಚೆಗೆ ನಡೆದ ರಾಜ್ಯಸಭಾ ಚುನಾವಣೆಯಲ್ಲಿ ಅವರು ಕಾಂಗ್ರೆಸ್ ಅಭ್ಯರ್ಥಿ ಪರ ಮತ ಚಲಾಯಿಸಿದ್ದರು. ಜನಾರ್ದನ ರೆಡ್ಡಿ ಯಾರೆಂಬುದೇ ತಮಗೆ ಗೊತ್ತಿಲ್ಲ ಎಂದು ಹಿಂದೆ ಕೇಂದ್ರ ಗೃಹ ಸಚಿವ ಅಮಿತ್ ಶಾ ಹೇಳಿದ್ದರು ಎಂಬ ಮಾತು ಕೇಳಿಬಂದಿತ್ತು. ಅದೇ ಈಗ ತಮ್ಮನ್ನು ಅಮಿತ್ ಶಾ ಅವರೇ ಸ್ವತಃ ಪಕ್ಷಕ್ಕೆ ಆಹ್ವಾನಿಸಿದ್ದರು ಎಂದು ರೆಡ್ಡಿ ಹೇಳಿದ್ದಾರೆ.

ಅದೇನೇ ಇರಲಿ, ರಾಜಕೀಯವೆಂಬ ಚಕ್ರವ್ಯೂಹದಲ್ಲಿ ಯಾರು ಯಾವಾಗ ಯಾರ ಪಾಳಯ ಸೇರುತ್ತಾರೋ ಆ ದೇವರಿಗೆ ಮಾತ್ರ ಗೊತ್ತು ಎನ್ನುವುದಕ್ಕೆ ರೆಡ್ಡಿ ಅವರ ಪ್ರಕರಣವೇ ನಿದರ್ಶನ.

ಕೆ.ವಿ.ವಾಸು, ಮೈಸೂರು

ಸ್ಥಳೀಯ ಸಂಸ್ಥೆ: ಚುನಾವಣೆ ಯಾಕಿಲ್ಲ?

ರಾಜ್ಯದ ಸ್ಥಳೀಯ ಸಂಸ್ಥೆಗಳ ಅವಧಿ ಮುಗಿದು ಬಹಳಷ್ಟು ಸಮಯ ಕಳೆದಿದ್ದರೂ ಅವುಗಳಿಗೆ ಚುನಾವಣೆ ನಡೆಸಲು ಸರ್ಕಾರ ಹಿಂದೆಮುಂದೆ ನೋಡುತ್ತಿರುವುದು ಏಕೆ? ಸ್ಥಳೀಯ ಸರ್ಕಾರಗಳ ರಚನೆ ಮತ್ತು ಅದರ ಮಹತ್ವದ ಬಗ್ಗೆ ಸಂವಿಧಾನದಲ್ಲಿ ವಿವರವಾದ ಉಲ್ಲೇಖವಿದೆ. ಸ್ಥಳೀಯ ಸಂಸ್ಥೆಗಳಿಗೆ ಕಾಲಕಾಲಕ್ಕೆ ಚುನಾವಣೆ ನಡೆಸುವ ವಿಷಯದಲ್ಲಿ ವಿಳಂಬ ಧೋರಣೆ ಅನುಸರಿಸುತ್ತಿರುವುದು ಸರಿಯಾದ ನಡೆಯಲ್ಲ. ಅವಧಿ ಪೂರೈಸುವ ಲೋಕಸಭೆ, ವಿಧಾನಸಭೆಗಳಿಗೆ ಸಮಯಕ್ಕೆ ಸರಿಯಾಗಿ ಚುನಾವಣೆಗಳು ನಡೆಯುತ್ತವೆ. ಆದರೆ, ಸ್ಥಳೀಯ ಸಂಸ್ಥೆಗಳ ಕಥೆ ಬೇರೆಯೇ ಇದೆ. ರಾಜ್ಯದಲ್ಲಿರುವ ಮಹಾನಗರಪಾಲಿಕೆಗಳು, ಜಿಲ್ಲಾ ಪಂಚಾಯಿತಿ, ತಾಲ್ಲೂಕು ಪಂಚಾಯಿತಿಗಳ ಪೈಕಿ ಯಾವುದರಲ್ಲೂ ಚುನಾಯಿತ ವ್ಯವಸ್ಥೆ ಅಸ್ತಿತ್ವದಲ್ಲಿಲ್ಲ.

ಸಂವಿಧಾನದ ಉದ್ದೇಶಗಳನ್ನು ಮನಗಂಡು ರಾಜ್ಯ ಸರ್ಕಾರ ಹಾಗೂ ಚುನಾವಣಾ ಆಯೋಗವು ಆದಷ್ಟು ಬೇಗ ಸ್ಥಳೀಯ ಸಂಸ್ಥೆಗಳಿಗೆ ಚುನಾವಣೆ ನಡೆಸಿ, ಸ್ಥಳೀಯ ಸರ್ಕಾರಗಳು ಅಸ್ತಿತ್ವಕ್ಕೆ ಬರುವ ಹಾಗೆ ಮಾಡಬೇಕು. ಈ ಮೂಲಕ ಪ್ರಜಾಪ್ರಭುತ್ವದ ಬೇರನ್ನು ಇನ್ನಷ್ಟು ಗಟ್ಟಿಗೊಳಿಸಬೇಕು.

ಪ್ರಸಾದ್ ಜಿ.ಎಂ., ಮೈಸೂರು

ಪ್ರಜಾಪ್ರಭುತ್ವ ‘ಮಾಗುವುದು’ ಯಾವಾಗ?

ಲೋಕಸಭಾ ಚುನಾವಣೆಗೆ ವಿವಿಧ ಪಕ್ಷಗಳ ಅಭ್ಯರ್ಥಿಗಳು ಚುನಾವಣಾ ಅಧಿಕಾರಿಗೆ ಸಲ್ಲಿಸುತ್ತಿರುವ ಪ್ರಮಾಣಪತ್ರದಲ್ಲಿ ಘೋಷಿಸುತ್ತಿರುವ ಸ್ವತ್ತು, ಆದಾಯದ ವಿವರಗಳನ್ನು ಅವಲೋಕಿಸಿದಾಗ, ಅಪವಾದ ಪ್ರಕರಣಗಳನ್ನು ಹೊರತುಪಡಿಸಿ ಮಿಕ್ಕೆಲ್ಲರೂ ಕೋಟಿವೀರರೇ ಆಗಿರುವುದು ತಿಳಿಯುತ್ತದೆ.

‘ನಾನೇನು ಮಾಡಲಿ ಬಡವನಯ್ಯಾ’ ಎಂಬ ಮಾತಿಗೆ ಪೂರಕವಾಗುವಂತೆ ಅಭ್ಯರ್ಥಿಗಳು ಘೋಷಣಾ ಪತ್ರ ಸಲ್ಲಿಸಿ ಗೆದ್ದು ಬರುವ ಸಂದರ್ಭ ನಿರ್ಮಾಣವಾಗಬೇಕು, ಆಗ ನಮ್ಮ ಪ್ರಜಾಪ್ರಭುತ್ವ ‘ಮಾಗಿದೆ’ ಎನ್ನಬಹುದು ಎಂದು ಹಲವರು ಅಲವತ್ತುಕೊಳ್ಳುತ್ತಿದ್ದಾರೆ. ಅಲ್ಲಿಯವರೆಗೆ ರಾಜಕಾರಣ ಬರೀ ‘ಉಳ್ಳವರ’ ಸ್ವತ್ತು ಎನ್ನುವ ಹಿರಿತಲೆಗಳ ಗೊಣಗಾಟ ತಪ್ಪಿದ್ದಲ್ಲ.

ವೆಂಕಟೇಶ್ ಮುದಗಲ್, ಕಲಬುರಗಿ

Printed and published by B A Ravi on behalf of The Printers (Mysore) Private Ltd., at The Printers (Mysore) Private Ltd, Plot Nos. 7-12, Kumbalgodu Industrial Area, Bengaluru-560 074. News Editor (Responsible for selection of news under the PRB Act): Sudesha Doddapalya. Editorial Office: 75, Mahatma Gandhi Road, Bengaluru- 560 001. E-mail: editorpv@prajavani.co.in.
Phone: 080-45557333, Editorial: 080-45557251, Circ: 080-45557204, Advt: 080-45557163/080-45557164. Also printed at Hubballi-Dharwad, Mangaluru, Kalaburagi, Davanagere, Mysuru and Hosapete. © All rights reserved. Reproduction in whole or in part without permission is prohibited. To know more about The Printers (Mysore) Private Ltd, visit www.printersmysore.com.

‘ಉದ್ಯೋಗ ಸೃಷ್ಟಿಯಲ್ಲಿ ಭಾರತ ಕುಂಟುತ್ತಿದೆ...’

ಪ್ರಜಾವಾಣಿ ವಾರ್ತೆ

‘ಈಚೆಗೆ ಉತ್ತರ ಪ್ರದೇಶ ಪೊಲೀಸ್ ಇಲಾಖೆಯು ‘ಡಿ’ ದರ್ಜೆಯ 62 ಹುದ್ದೆಗಳಿಗೆ ಅರ್ಜಿಗಳನ್ನು ಆಹ್ವಾನಿಸಿತ್ತು. ಆ ಹುದ್ದೆಗೆ 5ನೇ ತರಗತಿಯನ್ನು ಕನಿಷ್ಠ ವಿದ್ಯಾರ್ಹತೆಯಾಗಿ ನಿಗದಿ ಮಾಡಲಾಗಿತ್ತು. ಇದ್ದ 62 ಹುದ್ದೆಗಳಿಗೆ ಸಲ್ಲಿಕೆಯಾದ ಅರ್ಜಿಗಳ ಸಂಖ್ಯೆ 93,000ಕ್ಕೂ ಹೆಚ್ಚು. ಅದರಲ್ಲಿ 28,000 ಮಂದಿ ಸ್ನಾತಕೋತ್ತರ ಪದವೀಧರರಿದ್ದರು, 5,000 ಮಂದಿ ಪದವೀಧರರಿದ್ದರು. 3,700 ಮಂದಿ ಸ್ನಾತಕೋತ್ತರ ಪದವಿ ಜತೆಗೆ ಪಿಎಚ್.ಡಿಯನ್ನೂ ಪಡೆದಿದ್ದರು. ಇದು ಭಾರತದಲ್ಲಿನ ಯುವಜನರಿಗೆ ಉದ್ಯೋಗಾವಕಾಶದ ಕೊರತೆ ಇರುವುದನ್ನು ಸೂಚಿಸುತ್ತದೆ. ಭಾರತದ ಪತ್ರಿಕೆಗಳಲ್ಲಿ ಇಂತಹ ಸುದ್ದಿಗಳು ಆಗಾಗ್ಗೆ ವರದಿಯಾಗುತ್ತಲೇ ಇರುತ್ತವೆ...’

ಅಂತರರಾಷ್ಟ್ರೀಯ ಕಾರ್ಮಿಕ ಸಂಘಟನೆಯು (ಐಎಲ್‌ಒ) ಈಚೆಗೆ ಬಿಡುಗಡೆ ಮಾಡಿದ, ‘ಇಂಡಿಯಾ ಎಂಪ್ಲಾಯ್‌ಮೆಂಟ್ ವರದಿ–2024’ರಲ್ಲಿ ಇರುವ ಉಲ್ಲೇಖವಿದು. ಭಾರತದಲ್ಲಿ ಉದ್ಯೋಗಾವಕಾಶ ಕ್ಷೀಣಿಸುತ್ತಿದೆ ಎಂಬುದರತ್ತ ಈ ವರದಿಯು ಬೊಟ್ಟುಮಾಡುತ್ತಾ ಹೋಗಿದೆ. ಭಾರತ ಸರ್ಕಾರವೇ ಬಿಡುಗಡೆ ಮಾಡುವ ವಾರ್ಷಿಕ ಸಾಂಖ್ಯಿಕ ವರದಿ, ಲೇಬರ್ ಫೋರ್ಸ್ ಪಾರ್ಟಿಸಿಪೇಷನ್ ವರದಿಗಳಲ್ಲಿನ ದತ್ತಾಂಶಗಳನ್ನು ಆಧರಿಸಿ ಐಎಲ್‌ಒ ಈ ವರದಿಯನ್ನು ಸಿದ್ಧಪಡಿಸಿದೆ. ಭಾರತದಲ್ಲಿ ಉದ್ಯೋಗಗಳ ಸಂಖ್ಯೆ ಏರಿಕೆಯಾಗುತ್ತಿರುದ್ದರೂ ಜನಸಂಖ್ಯೆ ಏರಿಕೆಗೆ ಅನುಗುಣವಾಗಿ ಉದ್ಯೋಗಗಳು ಸೃಷ್ಟಿಯಾಗುತ್ತಿಲ್ಲ. ಇದರಿಂದಲೇ ನಿರುದ್ಯೋಗದ ಸಮಸ್ಯೆ ತಲೆದೋರಿದೆ ಎನ್ನುತ್ತದೆ ಈ ವರದಿ.

2000ನೇ ಇಸವಿಯಲ್ಲಿ ದೇಶದಾದ್ಯಂತ ದುಡಿಯುವ ವಯಸ್ಸಿನವರ (15 ವರ್ಷದಿಂದ 59 ವರ್ಷ) ಸಂಖ್ಯೆ 39.63 ಕೋಟಿಯಷ್ಟಿತ್ತು. ಆಗ 38.71 ಕೋಟಿಯಷ್ಟು ಔಪಚಾರಿಕ ಮತ್ತು ಅನೌಪಚಾರಿಕ ಉದ್ಯೋಗಗಳು ಲಭ್ಯವಿದ್ದವು. ಆ ಲೆಕ್ಕಾಚಾರದಲ್ಲಿ ನಿರುದ್ಯೋಗಿಗಳ ಸಂಖ್ಯೆ 92 ಲಕ್ಷದಷ್ಟು ಮಾತ್ರ. 2022ರ ವೇಳೆಗೆ ದೇಶದಲ್ಲಿನ ದುಡಿಯುವ ವಯಸ್ಸಿನ ಜನರ ಸಂಖ್ಯೆ 56.74 ಕೋಟಿಯಷ್ಟಾಗಿದೆ ಎಂದು ಅಂದಾಜಿಸಲಾಗಿದೆ. ಆದರೆ ಲಭ್ಯವಿದ್ದ ಉದ್ಯೋಗಗಳ ಸಂಖ್ಯೆ 54.45 ಕೋಟಿಷ್ಟು ಮಾತ್ರ. ಈ 54.45 ಕೋಟಿ ಉದ್ಯೋಗಗಳಲ್ಲಿ ವೇತನವಿಲ್ಲದ ಮನೆಕೆಲಸ, ಕುಟುಂಬದ ಉದ್ಯೋಗಗಳು ಮತ್ತು ಕೃಷಿ ಚಟುವಟಿಕೆಗಳೂ ಸೇರಿವೆ. ಇವು ದೇಶದ ಆರ್ಥಿಕತೆಗೆ ಕೊಡುಗೆಯನ್ನು ನೀಡುತ್ತವೆಯಾದರೂ, ಅವನ್ನು ಪೂರ್ಣ ಪ್ರಮಾಣದ ಉದ್ಯೋಗಗಳೆಂದು ಪರಿಗಣಿಸಲು ಸಾಧ್ಯವಿಲ್ಲ. ಅವುಗಳನ್ನು ಗಣನೆಗೆ ತೆಗೆದುಕೊಂಡರೂ 2.29 ಕೋಟಿ ಜನರಿಗೆ ಅರೆಕಾಲಿಕ ಅಥವಾ ದಿನಗೂಲಿ ಕೆಲಸವೂ ಲಭ್ಯವಿಲ್ಲ. ಜನಸಂಖ್ಯೆ ಏರಿಕೆಯಾದ ಮಟ್ಟದಲ್ಲೇ ಉದ್ಯೋಗಗಳು ಸೃಷ್ಟಿಯಾಗದೇ ಇರುವುದೇ ನಿರುದ್ಯೋಗಿಗಳ ಸಂಖ್ಯೆ ಏರಿಕೆಯಾಗಲು ಕಾರಣ ಎಂದು ವರದಿಯಲ್ಲಿ ವಿಶ್ಲೇಷಿಸಲಾಗಿದೆ.

ಭಾರತದ ಆರ್ಥಿಕತೆ ಉತ್ತಮ ಬೆಳವಣಿಗೆಯ ಹಾದಿಯಲ್ಲಿದೆ. ಆದರೆ ಆ ಬೆಳವಣಿಗೆಗೆ ಹೆಚ್ಚಿನ ಕೊಡುಗೆ ಇರುವುದು ಸೇವಾ ವಲಯದ್ದು. ಭಾರತ ಸರ್ಕಾರದ ಆರ್ಥಿಕ ನೀತಿಗಳು ಸೇವಾ ವಲಯದ ಬೆಳವಣಿಗೆಗೆ ಉತ್ತೇಜನ ನೀಡುತ್ತವೆಯೇ ಹೊರತು, ತಯಾರಿಕಾ ವಲಯಕ್ಕೆ ಅಷ್ಟೇ ಮಟ್ಟದ ಉತ್ತೇಜನ ನೀಡುವುದಿಲ್ಲ. ಸೇವಾ ವಲಯವು ಸೃಷ್ಟಿಸುವ ಉದ್ಯೋಗಗಳ ಪ್ರಮಾಣ ಸೀಮಿತವಾದುದು. ಆದರೆ ತಯಾರಿಕಾ ವಲಯವು ಪೂರಕ ಮತ್ತು ಪರೋಕ್ಷ ಉದ್ಯೋಗಗಳನ್ನೂ ಅಪಾರ ಸಂಖ್ಯೆಯಲ್ಲಿ ಸೃಷ್ಟಿಸುತ್ತದೆ. ಈ ಮಹತ್ವದ ಕ್ಷೇತ್ರವನ್ನು ಭಾರತ ಸರ್ಕಾರವು ತುಸು ಕಡೆಗಣಿಸಿದ ಪರಿಣಾಮ ಅಗತ್ಯ ಮಟ್ಟದಲ್ಲಿ ಉದ್ಯೋಗ ಸೃಷ್ಟಿಯಾಗುತ್ತಿಲ್ಲ ಎಂದು ಸರ್ಕಾರದತ್ತ ಬೊಟ್ಟು ಮಾಡುತ್ತದೆ ಐಎಲ್‌ಒ ವರದಿ.

ನಿರುದ್ಯೋಗಿಗಳಲ್ಲಿ ಯುವಜನರದ್ದೇ ಸಿಂಹಪಾಲು



ಉದ್ಯೋಗಿ ಯುವಜನರ ಪ್ರಮಾಣದಲ್ಲಿ ಭಾರಿ ಕುಸಿತ

ವರ್ಷ	2000	2012	2019	2022
ಉದ್ಯೋಗಿಗಳು	52%	42%	31%	37%
ವೇತನವಿಲ್ಲದ ದುಡಿಮೆ ಮತ್ತು ಮನೆಕೆಲಸದಲ್ಲಿ ತೊಡಗಿರುವವರು	25%	24%	25%	22%
ವಿದ್ಯಾರ್ಥಿಗಳು	18%	30%	35%	35%
ನಿರುದ್ಯೋಗಿಗಳು	3%	3%	7%	5%
ಇತರೆ ಚಟುಚವಟಿಕೆಗಳಲ್ಲಿ ತೊಡಗಿರುವವರು	2%	1%	2%	1%

ದೇಶದಲ್ಲಿ ಪೂರ್ಣ ಪ್ರಮಾಣದ ಉದ್ಯೋಗದಲ್ಲಿ ತೊಡಗಿಸಿಕೊಂಡ ಯುವಜನರ (15 ವರ್ಷದಿಂದ 29 ವರ್ಷ) ಪ್ರಮಾಣ ಈ ಎರಡು ದಶಕಗಳಲ್ಲಿ ಭಾರಿ ಕುಸಿದಿದೆ. 2000ರಲ್ಲಿ ಪೂರ್ಣ ಮಟ್ಟದ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದ ಯುವಜನರ ಪ್ರಮಾಣ ಶೇ 52ರಷ್ಟು ಇತ್ತು. 2022ರ ವೇಳೆಗೆ ಇದು ಶೇ 37ಕ್ಕೆ ಇಳಿಕೆಯಾಗಿದೆ. ಈ 22 ವರ್ಷಗಳಲ್ಲಿ ಉದ್ಯೋಗಿ ಯುವಕರ ಪ್ರಮಾಣದಲ್ಲಿ 15 ಶೇಕಡಾವಾರು ಅಂಶಗಳಷ್ಟು ಇಳಿಕೆಯಾಗಿದೆ. ಉದ್ಯೋಗಾವಕಾಶವು ಕಡಿಮೆಯಾಗಿರುವುದನ್ನೇ ಇದು ಸೂಚಿಸುತ್ತದೆ.

ಇದೇ ಅವಧಿಯಲ್ಲಿ ವಿದ್ಯಾಭ್ಯಾಸದಲ್ಲಿ ತೊಡಗಿಕೊಂಡ ಯುವಜನರ ಪ್ರಮಾಣ ಗಣನೀಯ ಪ್ರಮಾಣದಲ್ಲಿ ಏರಿಕೆಯಾಗಿದೆ. 2000ರಲ್ಲಿ ಶೇ 18ರಷ್ಟಿದ್ದ ಈ ಪ್ರಮಾಣವು, 2022ರ ವೇಳೆಗೆ ಶೇ 35ಕ್ಕೆ ಏರಿಕೆಯಾಗಿದೆ. ಯುವಜನರು ಹೆಚ್ಚಿನ ಶಿಕ್ಷಣ ಪಡೆಯಲು ಮುಂದಾಗಿದ್ದಾರೆ ಮತ್ತು ಉದ್ಯೋಗ ದೊರೆಯದೇ ಇರುವ ಕಾರಣ ಶಿಕ್ಷಣ ಮುಂದುವರಿಸುತ್ತಿದ್ದಾರೆ ಎಂದು ಇದನ್ನು ವಿಶ್ಲೇಷಿಸಲಾಗಿದೆ.

ಎಲ್ಲಕ್ಕಿಂತ ಮುಖ್ಯವಾಗಿ ಗಮನಿಸಬೇಕಾದ ಮತ್ತೊಂದು ಸಂಗತಿ ಎಂದರೆ ಅನೌಪಚಾರಿಕ ಆರ್ಥಿಕ ಚಟುವಟಿಕೆಗಳಲ್ಲಿ ಭಾಗಿಯಾಗುವ ಯುವಜನರ ಪ್ರಮಾಣವೂ ಕುಸಿತವಾಗಿರುವುದು. ಮನೆಕೆಲಸ, ಕುಟುಂಬದ ಕಸುಬಿನಲ್ಲಿ ಭಾಗಿಯಾಗುವುದು, ಕೃಷಿ ಮತ್ತು ಕೃಷಿ ಸಂಬಂಧಿ ಚಟುವಟಿಕೆಗಳಲ್ಲಿ ಭಾಗಿಯಾಗುವುದು ಮತ್ತು ಈ ಎಲ್ಲಾ ಚಟುವಟಿಕೆಗಳಲ್ಲಿ ವೇತನ ಇಲ್ಲದೇ ದುಡಿಯುವುದನ್ನು ಅನೌಪಚಾರಿಕ ಆರ್ಥಿಕ ಚಟುವಟಿಕೆ ಎಂದು ಪರಿಗಣಿಸಲಾಗುತ್ತದೆ. ಅಂತಹ ಆರ್ಥಿಕ ಚಟುವಟಿಕೆಗಳಲ್ಲಿ ಭಾಗಿಯಾಗುವವರ ಪ್ರಮಾಣ 2000ನೇ ಇಸವಿಯ ವೇಳೆಗೆ ಶೇ 25ರಷ್ಟು ಇತ್ತು. ಆದರೆ ಅದು 2022ರ ವೇಳೆಗೆ ಶೇ 22ಕ್ಕೆ ಕುಸಿದಿದೆ.

ಈ ವಯಸ್ಸಿನ ಯುವಜನರು ವಿದ್ಯಾಭ್ಯಾಸಕ್ಕೆ ತೊಡಗಿಕೊಳ್ಳುತ್ತಿರುವ ಪ್ರಮಾಣ ಏರಿಕೆಯಾಗಿರುವುದರಿಂದ ಆರ್ಥಿಕ ಚಟುವಟಿಕೆಯಲ್ಲಿ ತೊಡಗಿಸಿಕೊಳ್ಳುವುದು ಕಡಿಮೆಯಾಗಿದೆ ಎಂದು ಭಾವಿಸಬಹುದಾದರೂ, ವಾಸ್ತವ ಅಷ್ಟು ಸರಳವಾಗಿಲ್ಲ. ಇದರಲ್ಲಿ ಅನೌಪಚಾರಿಕ ಶಿಕ್ಷಣದಲ್ಲಿ ತೊಡಗಿಕೊಂಡಿರುವವರ ಪ್ರಮಾಣವೂ ಸೇರಿದೆ. ಅನೌಪಚಾರಿಕ ಆರ್ಥಿಕ ಚಟುವಟಿಕೆಗಳಲ್ಲಿ ಭಾಗಿಯಾಗುವವರ ಪ್ರಮಾಣದಲ್ಲಿ ಆಗಿರುವ ಇಳಿಕೆಯು, ಅಂತಹ ಚಟುವಟಿಕೆಗಳಿಗೆ ಪೂರಕವಾದ ವಾತಾವರಣ ಇಲ್ಲ ಎಂಬುದನ್ನೇ ಸೂಚಿಸುತ್ತದೆ ಎಂದು ವರದಿಯಲ್ಲಿ ವಿಶ್ಲೇಷಿಸಲಾಗಿದೆ.

ಇದಲ್ಲದೇ ಈ ಅವಧಿಯಲ್ಲಿ ಯುವಜನರಲ್ಲಿ ನಿರುದ್ಯೋಗದ ಪ್ರಮಾಣವೂ ಭಾರಿ ಏರಿಕೆಯಾಗಿದೆ ಎಂಬುದನ್ನು ಗಮನಿಸಬೇಕು. 2000ರಲ್ಲಿ ಯುವಜನರಲ್ಲಿ ನಿರುದ್ಯೋಗಿಗಳ ಪ್ರಮಾಣ ಶೇ 3ರಷ್ಟು ಇತ್ತು. 2019ರ ವೇಳೆಗೆ ಇದು ಶೇ 7ಕ್ಕೆ ಏರಿಕೆಯಾಗಿತ್ತು. 2022ರಲ್ಲಿ ಶೇ 5ಕ್ಕೆ ಇಳಿಕೆಯಾದರೂ, 2000ರಲ್ಲಿ ಇದ್ದುದಕ್ಕಿಂತ ಹೆಚ್ಚೇ ಇದೆ. ನಿರುದ್ಯೋಗದ ಪ್ರಮಾಣ ಹೆಚ್ಚಾಗಿದೆ ಎಂಬುದನ್ನು ಇದು ಸೂಚಿಸುತ್ತದೆ.

ಆರ್ಥಿಕತೆಯಲ್ಲಿ ಯುವಜನರ ಭಾಗಿಯಾಗುವಿಕೆ ಇಳಿಕೆ

ದೇಶದಲ್ಲಿ ಆರ್ಥಿಕ ಚಟುವಟಿಕೆಗಳಲ್ಲಿ ಭಾಗಿಯಾಗುವ ಯುವಜನರ ಪ್ರಮಾಣ ಈ ಎರಡು ದಶಕಗಳ ಅವಧಿಯಲ್ಲಿ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಿದೆ.

2000ನೇ ಇಸವಿಯಲ್ಲಿ 15 ವರ್ಷದಿಂದ 29 ವರ್ಷ ವಯಸ್ಸಿನ ಯುವಜನರಲ್ಲಿ ಶೇ 54ರಷ್ಟು ಮಂದಿ ಆರ್ಥಿಕ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಿದ್ದರು. ಅಂದರೆ ದೇಶದಲ್ಲಿದ್ದ ಯುವಜನರಲ್ಲಿ ಅರ್ಧಕ್ಕಿಂತಲೂ ಹೆಚ್ಚು ಜನರು ಔಪಚಾರಿಕ ಮತ್ತು ಅನೌಪಚಾರಿಕ, ಸಂಘಟಿತ–ಅಸಂಘಟಿತ ವಲಯಗಳು ಸೇರಿ ಎಲ್ಲಾ ಸ್ವರೂಪದ ಆರ್ಥಿಕ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಿದ್ದರು. ಆದರೆ ನಂತರದ ವರ್ಷಗಳಲ್ಲಿ ಈ ಪ್ರಮಾಣ ಇಳಿಕೆಯಾಗುತ್ತಲೇ ಬಂದಿದೆ.

2012ರ ವೇಳೆಗೆ ಈ ಪ್ರಮಾಣ ಶೇ 44ಕ್ಕೆ ಇಳಿಕೆಯಾಗಿತ್ತಾದರೂ, 2019ರ ವೇಳೆಗೆ ಶೇ 38ರಷ್ಟಕ್ಕೆ ಇಳಿಕೆಯಾಗಿತ್ತು. ಇದು ಈ wಎರಡು ವರ್ಷಗಳಲ್ಲೇ ಕನಿಷ್ಠ. 2019ಕ್ಕೆ ಹೋಲಿಸಿದರೆ 2022ರ ವೇಳೆಗೆ ಆರ್ಥಿಕ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಿದ್ದ ಯುವಜನರ ಪ್ರಮಾಣ ಸ್ವಲ್ಪ ಏರಿಕೆಯಾಗಿದೆ. ಆದರೆ ಅದು 2000ರಲ್ಲಿ ಇದ್ದ ಮಟ್ಟವನ್ನು ತಲುಪಲು ಸಾಧ್ಯವಾಗಿಲ್ಲ.



- ಅತ್ಯಂತ ಗಣನೀಯ ಪ್ರಮಾಣದಲ್ಲಿ ಇಳಿಕೆಯಾಗಿರುವುದು ಯುವಕರ ಭಾಗವಹಿಸುವಿಕೆ. 2000ರಲ್ಲಿ ಶೇ 74ರಷ್ಟಿದ್ದ ಈ ಪ್ರಮಾಣವು 2022ರಲ್ಲಿ ಶೇ 61.2ಕ್ಕೆ ಇಳಿಕೆಯಾಗಿದೆ.
- ಯುವತಿಯರು ಆರ್ಥಿಕತೆಯಲ್ಲಿ ಭಾಗಿಯಾಗುವ ಪ್ರಮಾಣವೂ ಅಪಾಯಕಾರಿ ಮಟ್ಟದಲ್ಲೇ ಇಳಿಕೆಯಾಗಿದೆ. 2000ರಲ್ಲಿ ಶೇ 34ರಷ್ಟು ಯುವತಿಯರು ಆರ್ಥಿಕ ಚಟುವಟಿಕೆಗಳಲ್ಲಿ ಭಾಗಿಯಾಗಿದ್ದರೆ, 2022ರಲ್ಲಿ ಅದು ಶೇ 21.7ಕ್ಕೆ ಕುಸಿದಿದೆ. ಅಂದರೆ ದೇಶದಲ್ಲಿರುವ 15–29 ವರ್ಷ ವಯಸ್ಸಿನ ಯುವತಿಯರಲ್ಲಿ ಶೇ 78.3ರಷ್ಟು ಯುವತಿಯರು ಯಾವುದೇ ರೀತಿಯ ಆರ್ಥಿಕ ಚಟುವಟಿಕೆಗಳಲ್ಲಿ ಭಾಗಿಯಾಗುತ್ತಿಲ್ಲ ಎಂಬುದನ್ನು ಇದು ಸೂಚಿಸುತ್ತದೆ
- ಒಟ್ಟಾರೆಯಾಗಿ ‘ಯುವ ದೇಶ’ ಎನಿಸಿಕೊಂಡಿರುವ ಭಾರತದಲ್ಲಿ, ಯುವಜನರಿಗೆ ಉದ್ಯೋಗಾವಕಾಶಗಳು ಕ್ಷೀಣಿಸುತ್ತಿವೆ ಮತ್ತು ಅವರು ಆರ್ಥಿಕತೆಯಲ್ಲಿ ಸಕ್ರಿಯವಾಗಿ ಭಾಗಿಯಾಗುವ ಅವಕಾಶಗಳು ಕಡಿಮೆಯಾಗುತ್ತಿವೆ ಎಂಬುದನ್ನು ಈ ದತ್ತಾಂಶಗಳು ಸೂಚಿಸುತ್ತವೆ

ವಿದ್ಯಾವಂತ ನಿರುದ್ಯೋಗಿಗಳ ಪ್ರಮಾಣ ಏರಿಕೆ



ದೇಶದಲ್ಲಿರುವ ನಿರುದ್ಯೋಗಿಗಳಲ್ಲಿ ಯುವಜನರ ಪ್ರಮಾಣವೇ ಅತ್ಯಧಿಕ. ಆ ಯುವಜನರಲ್ಲಿ ಕಾಲೇಜು ಶಿಕ್ಷಣ ಮತ್ತು ಉನ್ನತ ಶಿಕ್ಷಣ ಪಡೆದಂತಹ ನಿರುದ್ಯೋಗಿಗಳದ್ದೇ ಸಿಂಹಪಾಲು ಎನ್ನುತ್ತದೆ ವರದಿಯ ದತ್ತಾಂಶಗಳು.

ದೇಶದ ಒಟ್ಟು ನಿರುದ್ಯೋಗಿಗಳಲ್ಲಿ ಯುವಜನರ ಪ್ರಮಾಣ ಶೇ 82.9ರಷ್ಟು ಇದ್ದರೆ, ಅದರಲ್ಲಿ ವಿದ್ಯಾವಂತ ನಿರುದ್ಯೋಗಿಗಳ ಪ್ರಮಾಣ ಶೇ 65.7ರಷ್ಟಿದೆ. ಈ ಹಿಂದಿನ ದಶಕಗಳಲ್ಲಿ ವಿದ್ಯಾವಂತ ನಿರುದ್ಯೋಗಿಗಳ ಪ್ರಮಾಣ ಇಷ್ಟು ಇರಲಿಲ್ಲ. 2000ರಲ್ಲಿ ಇಂತಹ ನಿರುದ್ಯೋಗಿಗಳ ಪ್ರಮಾಣ ಶೇ 54ರಷ್ಟು ಇದ್ದರೆ, ನಂತರದ ವರ್ಷಗಳಲ್ಲಿ ಏರಿಕೆಯಾಗುತ್ತಲೇ ಇದೆ. 2022ರಲ್ಲಿ ಇದು ಈ ಎರಡು ದಶಕಗಳಲ್ಲೇ ಗರಿಷ್ಠಮಟ್ಟಕ್ಕೆ ಏರಿದೆ.

ವಿದ್ಯಾರ್ಹತೆ ಇದ್ದರೂ ಉದ್ಯೋಗ ಬೇಡುವ ಕೌಶಲ ಇಲ್ಲದಿರುವುದೂ ವಿದ್ಯಾವಂತ ನಿರುದ್ಯೋಗಿಗಳ ಪ್ರಮಾಣ ಹೆಚ್ಚಾಗಲು ಪ್ರಮುಖ ಕಾರಣ. ಭಾರತ ಸರ್ಕಾರದ ಕೌಶಲ ಅಭಿವೃದ್ಧಿ ಯೋಜನೆಯೂ ವಿಫಲವಾಗಿದೆ ಅಥವಾ ನಿರೀಕ್ಷಿತ ಮಟ್ಟದಲ್ಲಿ ಫಲ ನೀಡಿಲ್ಲ ಎಂಬುದನ್ನು ಇದು ಸೂಚಿಸುತ್ತದೆ ಎಂದು ವರದಿಯಲ್ಲಿ ಅಭಿಪ್ರಾಯಪಡಲಾಗಿದೆ.

ಆಧಾರ: ‘ಇಂಡಿಯಾ ಎಂಪ್ಲಾಯ್‌ಮೆಂಟ್ ವರದಿ–2024’

‘ಉತ್ತರಕಾಂಡ’ದಿಂದ ಹೊರನಡೆದ ರಮ್ಯಾ

‘ಉತ್ತರಕಾಂಡ’ ಮುಹೂರ್ತ ಕಾರ್ಯಕ್ರಮದಲ್ಲಿ ರಮ್ಯಾ, ಧನಂಜಯ

ಅತ್ತ ನಿರ್ದೇಶಕ ರೋಹಿತ್ ಪದಕಿ ವಿಜಯಪುರ ಮತ್ತು ಹುಬ್ಬಳ್ಳಿಯಲ್ಲಿ ‘ಉತ್ತರಕಾಂಡ’ ಸಿನಿಮಾಕ್ಕಾಗಿ ಆಡಿಷನ್ ನಡೆಯುತ್ತಿದ್ದರೆ, ಇತ್ತ ಚಿತ್ರದ ನಾಯಕಿ, ಸ್ಯಾಂಡಲ್‌ವುಡ್ ಕ್ವೀನ್ ರಮ್ಯಾ ತಾವು ಸಿನಿಮಾದಿಂದ ಹೊರನಡೆದಿರುವುದಾಗಿ ತಿಳಿಸಿದ್ದಾರೆ.

ಈ ಕುರಿತು ಇನ್‌ಸ್ಟಾಗ್ರಾಂನಲ್ಲಿ ಪೋಸ್ಟ್ ಮಾಡಿರುವ ಅವರು, ‘ಡೇಟ್ಸ್ ಸಮಸ್ಯೆಯಿಂದಾಗಿ ನಾನು ‘ಉತ್ತರಕಾಂಡ’ ಸಿನಿಮಾದಲ್ಲಿ ನಟಿಸುತ್ತಿಲ್ಲ. ಸದ್ಯ ನಾನು ನನ್ನ ಸಿನಿಮಾ ಮತ್ತು ರಾಜಕೀಯ ಒಪ್ಪಂದಗಳನ್ನು ತಾತ್ಕಾಲಿಕವಾಗಿ ಸ್ಥಗಿತಗೊಳಿಸಿದ್ದೇನೆ. ಉತ್ತರಕಾಂಡ ಚಿತ್ರತಂಡಕ್ಕೆ ಶುಭವಾಗಲಿ’ ಎಂದಿದ್ದಾರೆ.

ರಾಜ್ ಬಿ.ಶೆಟ್ಟಿ ನಟನೆಯ ‘ಸ್ವಾತಿ ಮುತ್ತಿನ ಮಳೆ ಹನಿಯೇ’ ಚಿತ್ರ ಸೆಟ್ಟೇರಿದ್ದಾಗ ರಮ್ಯಾ ನಾಯಕಿಯಾಗಿದ್ದರು. ಇದು ಅವರ ಕಂಬ್ಯಾಕ್ ಸಿನಿಮಾ ಎನ್ನಲಾಗಿತ್ತು. ಕೆಲ ಸಮಯದ ಬಳಿಕ ಈ ಸಿನಿಮಾದಿಂದ ಅವರು ಹೊರನಡೆದಿದ್ದರು. ಬಳಿಕ ‘ಉತ್ತರಕಾಂಡ’ ಸಿನಿಮಾ ಒಪ್ಪಿಕೊಂಡಿದ್ದರು. ‘ರತ್ನನ್ ಪ್ರಪಂಚ’ ಸಿನಿಮಾ ಯಶಸ್ಸಿನ ಬಳಿಕ ಕೆ.ಆರ್.ಜಿ ಸ್ಟುಡಿಯೋಸ್, ನಟ ಡಾಲಿ ಧನಂಜಯ ಮತ್ತು ರೋಹಿತ್ ಪದಕಿ ಕಾಂಬಿನೇಷನ್‌ನಲ್ಲಿ ಈ ಸಿನಿಮಾ ಸೆಟ್ಟೇರಿದೆ. ಉತ್ತರ ಕರ್ನಾಟಕ ಭಾಷೆಯಲ್ಲೇ ಸಿನಿಮಾ ಇರುವ ಕಾರಣ, ಚಿತ್ರಕ್ಕಾಗಿ ಭಾಷೆ, ಉಡುಗೆ-ತೊಡುಗೆಯ ಮೇಲೆ ಗಂಭೀರವಾಗಿ ಕಸರತ್ತು ನಡೆಸಿದ್ದರು. ‘ಉತ್ತರಕಾಂಡ’ದಲ್ಲಿ ಧನಂಜಯ ಹಾಗೂ ಸೆಂಚುರಿ ಸ್ಟಾರ್ ಶಿವರಾಜ್‌ಕುಮಾರ್ ಮುಖ್ಯಭೂಮಿಕೆಯಲ್ಲಿದ್ದಾರೆ.

ಒಳ್ಳೆ ಸಿನಿಮಾ ಗೆಲ್ಲಿಸಿ ಎಂದ ಧ್ರುವ ಸರ್ಜಾ

ಧ್ರುವ ಸರ್ಜಾ, ಗೌರಿಶಂಕರ್

ಬೇರೆ ತಂಡಗಳ ಸಿನಿಮಾವನ್ನು ನೋಡಿ ಪ್ರೋತ್ಸಾಹಿಸುವ, ಹೊಸಬರ ಬೆನ್ನಿಗೆ ನಿಲ್ಲುವ ಸ್ಟಾರ್ ನಾಯಕರ ಸಾಲಿನಲ್ಲಿ ನಟ ಧ್ರುವ ಸರ್ಜಾ ಕೂಡ ಒಬ್ಬರು. ಹೊಸಬರ ಸಿನಿಮಾಗಳ ಹಾಡು, ಟ್ರೇಲರ್, ಟೀಸರ್ ಬಿಡುಗಡೆ ಸಮಾರಂಭಗಳಲ್ಲಿ ಇವರು ನೋಡಲು ಸಿಗುತ್ತಾರೆ. ಎರಡು ವಾರಗಳ ಹಿಂದೆ ಬಿಡುಗಡೆಯಾದ ‘ಕೆರೆಬೇಟೆ’ ಚಿತ್ರವನ್ನು ಇವರು ಇತ್ತೀಚೆಗಷ್ಟೇ ವೀಕ್ಷಿಸಿ, ಮೆಚ್ಚುಗೆ ಮಾತನಾಡಿದ್ದಾರೆ.

ಗೌರಿಶಂಕರ್, ಬಿಂದು ಶಿವರಾಂ ನಟನೆಯ ‘ಕೆರೆಬೇಟೆ’ ವಿಭಿನ್ನವಾದ ನಿರೂಪಣೆಯಿಂದ ಜನಮನ್ನಣೆ ಗಳಿಸುತ್ತಿದೆ. ‘ಚಿತ್ರ ತುಂಬಾ ಚೆನ್ನಾಗಿದೆ. ಇಂತಹ ಸಿನಿಮಾಗೂ ಪ್ರೇಕ್ಷಕರು ಯಾಕೆ ಬರುತ್ತಿಲ್ಲ ಎಂಬುದು ಅಚ್ಚರಿಯಾಗುತ್ತಿದೆ. ನಟನೆ, ನಿರ್ದೇಶನ ಎಲ್ಲವೂ ಚೆನ್ನಾಗಿದೆ. ಈ ಸಿನಿಮಾಕ್ಕೆ ಕನ್ನಡ ಕಲಾಭಿಮಾನಿಗಳು ಪ್ರತಿಫಲ ನೀಡಬೇಕು. ಚೆನ್ನಾಗಿರುವ ಸಿನಿಮಾವನ್ನು ಜನ ಗೆಲ್ಲಿಸುತ್ತಾರೆಂಬ ನಂಬಿಕೆ ಇದೆ. ಈ ಸಿನಿಮಾಗೂ ಅದು ಸತ್ಯವಾಗಬೇಕು’ ಎಂದು ಸಿನಿಮಾ ಕುರಿತು ಧ್ರುವ ಮೆಚ್ಚುಗೆ ಮಾತನಾಡಿದ್ದಾರೆ.

ಯೋಗರಾಜ್ ಭಟ್, ನಟರಾದ ಅಜಯ್ ರಾವ್, ವಸಿಷ್ಠ ಸಿಂಹ ಮೊದಲಾದವರು ಸಿನಿಮಾ ವೀಕ್ಷಿಸಿ ಮೆಚ್ಚುಗೆ ಮಾತನಾಡಿದ್ದಾರೆ. ಈ ಚಿತ್ರಕ್ಕೆ ರಾಜ್‌ಗುರು ಆ್ಯಕ್ಷನ್ ಕಟ್ ಹೇಳಿದ್ದಾರೆ. ಜನಮನ ಸಂಸ್ಥೆ ನಿರ್ಮಿಸಿದ್ದು, ಗಗನ್ ಬದೇರಿಯ ಸಂಗೀತವಿದ್ದು, ಕೀರ್ತನ್ ಪೂಜಾರಿ ಛಾಯಾಚಿತ್ರಗ್ರಹಣವಿದೆ. ಗೋಪಾಲ್ ದೇಶಪಾಂಡೆ, ಸಂಪತ್ ಕುಮಾರ್, ಹರಿಣಿ ಮೊದಲಾದವರು ತಾರಾಗಣದಲ್ಲಿದ್ದಾರೆ.

ಮತ್ತಷ್ಟು ಸಿನಿಮಾ ಸುದ್ದಿಗಳಿಗೆ ನೋಡಿ https://www.prajavani.net

ಗುಂಡಣ್ಣ



ಸಾಧನೆ ಸಾಧಕರ ಸೊತ್ತು

ನುಡಿ ಬೆಳಗು

ದೀಪಾ ಹಿರೇಗುತ್ತಿ, ಇಂಗ್ಲಿಷ್ ಉಪನ್ಯಾಸಕಿ

ಆ ಹುಡುಗ ಶಾಲೆಯಲ್ಲಿ ಒಬ್ಬ ಸಾಧಾರಣ ವಿದ್ಯಾರ್ಥಿ. ಹತ್ತನೇ ತರಗತಿಯಲ್ಲಿ ಆತ ಗಳಿಸಿದ್ದು ನಲವತ್ತೊಂದು ಶೇಕಡಾ ಅಂಕ ಮಾತ್ರ. ಹನ್ನೆರಡನೇ ತರಗತಿಯಲ್ಲಿ ಸರಿಯಾಗಿ ಅರವತ್ತು ಶೇಕಡಾ ಅಂಕ. ಎಲೆಕ್ಟ್ರಾನಿಕ್ಸ್‌ನಲ್ಲಿ ಎಂಜಿನಿಯರಿಂಗ್‌ಗೆ ಸೀಟು ಸಿಕ್ಕಿದ್ದೂ ಕಷ್ಟದಲ್ಲೇ. ಆದರೆ ಪದವಿ ಓದುತ್ತಿದ್ದಾಗ ಆತನಿಗೆ ತಾನೇಕೆ ಯುಪಿಎಸ್‌ಸಿ ಪರೀಕ್ಷೆ ತೆಗೆದುಕೊಳ್ಳಬಾರದೆಂಬ ಯೋಚನೆ ಬಂತು. ಇಷ್ಟು ಕಡಿಮೆ ಅಂಕ ಗಳಿಸಿದ ಹುಡುಗ ಯುಪಿಎಸ್‌ಸಿಗೆ ತಯಾರಿ ಮಾಡುತ್ತೇನೆಂದಾಗ ನಕ್ಕವರೂ ಇದ್ದರು.

2014ರಲ್ಲಿ ಪದವಿ ಮುಗಿದ ಕೂಡಲೇ ಮುಂಬೈಗೆ ಬಂದು ಗಂಭೀರವಾಗಿ ಅಧ್ಯಯನ ನಡೆಸಿ ಪರೀಕ್ಷೆ ಬರೆದ. ಆದರೆ ವಿಫಲನಾದ. ಮತ್ತೆ ದೆಹಲಿಗೆ ಮರಳಿ ಕೋಚಿಂಗ್ ಸೆಂಟರ್ ಸೇರಿಕೊಂಡು ಅಧ್ಯಯನ ಮುಂದುವರಿಸಿದ. ಎರಡನೇ ಪ್ರಯತ್ನದಲ್ಲೂ ಸೋಲು. ಮರು ವರ್ಷ ಮತ್ತೆ ಪರೀಕ್ಷೆ ಬರೆದ. ಉಹೂಂ, ಸೋಲು ಅವನ ಬೆನ್ನು ಬಿಡಲಿಲ್ಲ. ಆದರೆ ಅದರಿಂದ ಏನೂ ಆಗಲಿಲ್ಲ. ಕಾರಣ ಆ ಹುಡುಗನೂ ಸೋಲಿನ ಕೈ ಬಿಡಿಸಿಕೊಳ್ಳುವವರೆಗೆ ವಿರಮಿಸುವುದಿಲ್ಲ ಎಂದು ತೀರ್ಮಾನಿಸಿಬಿಟ್ಟಿದ್ದನಲ್ಲ. 2017ರಲ್ಲಿ ಇಡೀ ಭಾರತಕ್ಕೆ 352ನೇ ಸ್ಥಾನ ಪಡೆದ. ಐಆರ್‌ಎಸ್ ಅಧಿಕಾರಿಯಾದ. ಎಲ್ಲರಿಗೂ ಸಂಭ್ರಮ. ಎಸ್‌ಎಸ್‌ಎಲ್‌ಸಿ ಬರಿದೇ ಪಾಸಾಗುವಷ್ಟು ಅಂಕ ಗಳಿಸಿದ ಹುಡುಗ ಐಆರ್‌ಎಸ್ ಅಧಿಕಾರಿಯಾಗುತ್ತಾನೆಂದರೆ ಅದೆಷ್ಟು ಹೆಮ್ಮೆಯ ಸಂಗತಿ.

ಆದರೆ ಆತ ಮಾತ್ರ ಬೇಸರದಲ್ಲಿದ್ದ. ಆತನಿಗೋ ಐಎಎಸ್ ಅಧಿಕಾರಿಯಾಗುವ ಕನಸು. ನಾಲ್ಕು ವರ್ಷ ಕಷ್ಟಪಟ್ಟಾಗಿದೆ, ಒಳ್ಳೆ ಹುದ್ದೆಯೂ ಸಿಕ್ಕಿದೆ. ಆರಾಮಾಗಿ ಇರೋಣ ಎಂದು ಯೋಚಿಸುವ ಬದಲು ಮತ್ತೆ ಅಧ್ಯಯನದಲ್ಲಿ ತೊಡಗಿದ. ಎರಡು ವರ್ಷ ಎಡೆಬಿಡದೇ ಓದಿದ. 2019ರಲ್ಲಿ ಐದನೇ ಬಾರಿ ಪರೀಕ್ಷೆ ಬರೆದ. ಫಲಿತಾಂಶ ಬಂದಾಗ ಜನರು ಮೂಗಿನ ಮೇಲೆ ಬೆರಳಿಟ್ಟುಕೊಂಡರು. ಹತ್ತನೇ ತರಗತಿಯಲ್ಲಿ ನಲವತ್ತು ಶೇಕಡಾ ಅಂಕ ಪಡೆದ ಹುಡುಗ ಭಾರತದ ಅತ್ಯಂತ ಕಷ್ಟಕರ ಪರೀಕ್ಷೆಯಲ್ಲಿ ಇಡೀ ದೇಶಕ್ಕೇ ಮೂರನೇ ಸ್ಥಾನ ಪಡೆದಿದ್ದ.

ಈ ಜಗತ್ತಿನಲ್ಲಿ ಐನ್‌ಸ್ಟೀನ್‌ರಂತಹ ಹುಟ್ಟು ಬುದ್ಧಿವಂತರು ಬಹಳ ಕಡಿಮೆ. ಆದರೆ ಸಾಧನೆ ಜೀನಿಯಸ್‌ಗಳ ಸೊತ್ತು ಮಾತ್ರವಲ್ಲ. ಸಾಧಿಸುತ್ತೇನೆಂಬ ಛಲ, ಅದಕ್ಕಾಗಿ ಕಠಿಣ ಶ್ರಮ ಮತ್ತು ನಿರಂತರತೆ ಈ ಮೂರು ಅಂಶಗಳಿದ್ದರೆ ಯಾರು ಏನನ್ನು ಬೇಕಾದರೂ ಸಾಧಿಸಬಹುದು. ಅದಕ್ಕೆ ನಮ್ಮ ಈ ಕಥೆಯ ನಾಯಕ ಉತ್ತರ ಪ್ರದೇಶದ ಐಎಎಸ್ ಅಧಿಕಾರಿ ಜುನೈದ್ ಅಹ್ಮದ್ ಅತ್ಯುತ್ತಮ ಉದಾಹರಣೆ. ನೆನಪಿರಲಿ, ಜಗತ್ತು ನಮ್ಮ ಬಗ್ಗೆ ಹೇಳುವ ಮಾತುಗಳಿಗಿಂತ ಮುಖ್ಯವಾದವು ನಾವು ನಮ್ಮೊಂದಿಗೇ ಆಡಿಕೊಳ್ಳುವ ಮಾತುಗಳು. ಆ ಮಾತುಗಳು ಎಂದಿಗೂ ಧನಾತ್ಮಕವಾಗೇ ಇರಲಿ.

ದಿನ ಭವಿಷ್ಯ

ವಿದ್ಯಾಶಂಕರ ಸೋಮಯಾಜಿ. ಕಮ್ಮರಡಿ — ಗುರುವಾರ ಮಾರ್ಚ್ 28, 2024

ಶ್ರೀ ಶೋಭಕೃತ್ ನಾಮ ಸಂವತ್ಸರ ಉತ್ತರಾಯಣ ಶಿಶಿರ ಋತು ತಿಥಿ: ಫಾಲ್ಗುಣ ಕೃಷ್ಣತೃತೀಯ ಗಂ. 18-57 ನಕ್ಷತ್ರ: ಸ್ವಾತಿ ಗಂ. 18-38 ಯೋಗ: ಹರ್ಷಣ ಗಂ. 23-13 ಕರಣ: ವಣಿಜ ಗಂ. 06-05, ಮೀನ ಮಾಸದ 14 ನೇ ದಿನ, ಮಳೆನಕ್ಷತ್ರ: ಉತ್ತರಾಭಾದ್ರ 4.
ರಾಹುಕಾಲ : ಮಧ್ಯಾಹ್ನ 01-30 - 03-00, ಸೂರ್ಯೋದಯ : 06-32 ಸೂರ್ಯಾಸ್ತ : 06-39, ಮುಸ್ಲಿಂ ದಿನಾಂಕ : 17 ರಂಜಾನ್, ದಿನ ವಿಶೇಷ : ಸಂಕಷ್ಟಹರ ಚತುರ್ಥಿ (ಚಂದ್ರೋದಯ : ರಾತ್ರಿ 9 -00) , ಅದೃಷ್ಟ ಸಂಖ್ಯೆ : 8, 3

ಮೇಷ : ಯೋಜನಾ ಬದ್ಧವಾದ ಕೆಲಸವನ್ನು ರೂಪಿಸದಿದ್ದರೆ ಈ ದಿನದ ಶ್ರಮವು ವ್ಯರ್ಥವಾಗಲಿದೆ. ಪ್ರಾಮಾಣಿಕವಾಗಿ ದೇವರು ಮೆಚ್ಚುವ ರೀತಿಯಲ್ಲಿ ಕರ್ತವ್ಯ ನಿರ್ವಹಿಸುವುದು ಉತ್ತಮ. ನಿಮ್ಮ ಕಾರ್ಯವೈಖರಿಗೆ ಶ್ಲಾಘನೆ ಸಲ್ಲಲಿದೆ.

ವೃಷಭ : ಮನೆ ಬದಲಾವಣೆಯ ಬಗ್ಗೆ ಮನೆಯವರ ಅಭಿಪ್ರಾಯವನ್ನು ತಿಳಿದುಕೊಳ್ಳುವಿರಿ. ಸರಿಯಾದಂಥ ಪರಿಶೀಲನೆ ಇಲ್ಲದೆ ಯಾವ ಕೆಲಸಗಳಲ್ಲೂ ಹೂಡಿಕೆ ಸಲ್ಲದು. ಪೊಲೀಸ್ ವರಿಷ್ಠರಿಗೆ ವರ್ಗಾವಣೆಯ ಸಂಭವವಿದೆ.

ಮಿಥುನ : ಇತರರ ಭಾವನೆಗಳಿಗೆ ಹೆಚ್ಚಿನ ಆದ್ಯತೆ ಕೊಡಲು ಕಲಿಯಬೇಕಾಗುತ್ತದೆ. ಆಫೀಸಿನಲ್ಲಿ ಧನಾತ್ಮಕ ನಿರ್ಣಯಗಳನ್ನು ತೆಗೆದುಕೊಳ್ಳಲು ಉತ್ತಮ ಸಮಯ. ಒಂದು ರೀತಿಯ ಸ್ಪರ್ಧಾತ್ಮಕ ವಾತಾವರಣ ಎದುರಿಸಬೇಕಾಗುವುದು.

ಕರ್ಕಾಟಕ: ಆರ್ಥಿಕವಾಗಿ ಬಲಿಷ್ಠರಾಗುವಿರಿ. ಕೃಷಿಯ ಮೇಲೆ ಹೆಚ್ಚು ಬಂಡವಾಳ ಹೂಡುವಿಕೆ ಲಾಭದಾಯಕವಾದದ್ದು. ಕಷ್ಟಬಂದರೂ ನೀವು ನಿಮ್ಮ ಗುರಿಯನ್ನು ಇಂದು ಸಾಧಿಸಿಯೇ ತೀರುತ್ತೀರಿ.

ಸಿಂಹ : ದಾಂಪತ್ಯದ ವಿಚಾರದಲ್ಲಿ ಅಂತಿಮವಾಗಿ ತೀರ್ಮಾನಕ್ಕೆ ಬರುವುದು ಉತ್ತಮವೆಂದು ಕಾಣುತ್ತದೆ. ಮನೆಯಲ್ಲಿ ಸಣ್ಣ-ಪುಟ್ಟ ವಿಚಾರಕ್ಕೆ ಭಿನ್ನಾಭಿಪ್ರಾಯ ಮೂಡಿಬಂದು ಅಶಾಂತಿಯ ವಾತಾವರಣ ಕಂಡುಬರಲಿದೆ.

ಕನ್ಯಾ : ಹೂವು-ಹಣ್ಣು, ತರಕಾರಿಗಳ ಮಾರಾಟಗಾರರಿಗೆ ನಿರೀಕ್ಷಿಸಿದಕ್ಕಿಂತ ಹೆಚ್ಚಿನ ಲಾಭ ಆಗುವುದರಿಂದ ಸಂತೋಷ ಇರುವುದು. ನಿಮ್ಮ ಸಹವರ್ತಿಗಳಲ್ಲಿ ಸಲಹೆ ಸಹಕಾರಗಳನ್ನು ಕೋರುವಿರಿ.

ತುಲಾ : ಶಿಕ್ಷಕ ವೃತ್ತಿಯನ್ನು ನಡೆಸಿ ವಿದ್ಯಾದಾನ ಮಾಡುವವರಿಗೆ ಸೂಕ್ತ ಗೌರವಾದರಗಳು ದೊರೆಯಲಿದೆ. ರಾಜಕೀಯ ಚಟುವಟಿಕೆಗಳಲ್ಲಿ ಬಿರುಸಿನ ಓಡಾಟ ಇರಲಿದೆ. ವಿವಾಹದ ಪ್ರಯತ್ನಗಳು ಯಶಸ್ಸನ್ನು ಹೊಂದಲಿದೆ.

ವೃಶ್ಚಿಕ : ವೈಯಕ್ತಿಕ ಕಾರ್ಯದೊತ್ತಡದ ನಡುವೆಯೂ ಸಾಮಾಜಿಕ ಕೆಲಸ ಕಾರ್ಯಗಳನ್ನು ಮಾಡುವ ನಿಮಗೆ ರಾಜಕೀಯ ಸೇರಲು ಆಹ್ವಾನ ಬರಲಿದೆ. ಅದರ ಪರಿಣಾಮವಾಗಿ ಜೀವನದ ಮುಂದಿನ ಹಾದಿಯು ಸುಗಮವಾಗಲಿದೆ.

ಧನು : ಮಹಿಳೆಯರಿಗೆ ಮನ್ನಣೆ ಹೆಚ್ಚಲಿದ್ದು, ರಾಜಕೀಯವಾಗಿ ಹೆಚ್ಚಿನ ಲಾಭ ಪಡೆದುಕೊಳ್ಳುವಿರಿ. ಬಂಧುಗಳಲ್ಲಿ ವ್ಯವಹರಿಸಿದ ಸಾಲ ಮರು ಪಾವತಿ ಮಾಡುವ ಬಗ್ಗೆ ಗಮನಕೊಡಿ. ತೀರ್ಥಯಾತ್ರೆಗೆ ಹೋಗುವ ಮನಸ್ಸಾಗುವುದು.

ಮಕರ : ಹೊಸ ಜನರ ಭೇಟಿಯಾಗುವುದು ಹಾಗೂ ಹೊಸ ಅವಕಾಶಗಳನ್ನು ಸದುಪಯೋಗ ಪಡಿಸಿಕೊಳ್ಳುವಲ್ಲಿ ಬಹಳಷ್ಟು ಜಾಣತನ ತೋರಬೇಕಾಗುವುದು. ತಂದೆ ತಾಯಿಯ ಆರೋಗ್ಯದಲ್ಲಿ ಅಧಿಕ ಗಮನವಿರಲಿ

ಕುಂಭ : ಆಲೋಚನೆಯನ್ನು ಎಲ್ಲರೊಂದಿಗೆ ಹಂಚಿಕೊಳ್ಳುವ ಮನೋಭಾವ ಬೆಳೆಸಿಕೊಳ್ಳುವಿರಿ. ಛಾಯಾಗ್ರಾಹಕರಿಗೆ ಹೆಚ್ಚಿನ ಅವಕಾಶಗಳು ಸಿಗಲಿವೆ. ಮಾತಿನಲ್ಲಿ ಕಪಟತನ ಇಲ್ಲವಾದ್ದರಿಂದ ನಿಷ್ಠೂರವಾಗಬಹುದು.

ಮೀನ : ಕಟ್ಟಡ ನಿರ್ಮಾಣದ ಕೆಲಸಗಾರರಿಗೆ ವೃತ್ತಿಯಲ್ಲಿ ಬೇಸರ ಹುಟ್ಟಬಹುದು. ತಾಂತ್ರಿಕ ವಿದ್ಯಾರ್ಥಿಗಳಿಗೆ ಓದಿನಲ್ಲಿ ಪರಿಶ್ರಮದ ಅಗತ್ಯವಿದೆ. ದೂರ ಸಂಚಾರದಲ್ಲಿ ವೃಥಾ ಖರ್ಚುಗಳಿದ್ದರೂ ಸಂತೋಷ ಇರಲಿದೆ.

ಪದಬಂಧ 5634

– ವಿದ್ಯಾ ವಿನಯ್

ಎಡದಿಂದ ಬಲಕ್ಕೆ
1. ಇದು ಇಹಲೋಕಕ್ಕೆ ಸಂಬಂಧಿಸಿದ್ದು (3)
3. ಪುಸ್ತಕದ ಬಳಿಯಿರಿಸಿದ ತಲೆ! (3)
5. ಸೂರ್ಯನ ರಶ್ಮಿಯಿದು (5)
6. ತಡಸಲನ್ನು ಸೇರುವಾಗಲೇ ನಿಧಾನ! (2)
8. ಶಹನಾಯಿಯನ್ನು ಮೂಸುತ್ತಿರುವ ಶುನಕ (2)
9. ನಾಗರಿಕನ ಹತ್ತಿರವಿರುವ ಸ್ತ್ರೀ (2)
10. ಕಲಾವಿದನಿಗಾಗಿ ತೆರೆದ ಬಾಗಿಲು (2)
14. ಮನುಷ್ಯನನ್ನು ತಿನ್ನುವ ಪ್ರಾಣಿ (5)
15. ಕಮಂಡಲು ಹಿಡಿದು ನೋಡಿದ ಸಮುದ್ರ (3)
16. ಸಂಪೂರ್ಣ ನಾಶವಿದು (3)

ಮೇಲಿಂದ ಕೆಳಕ್ಕೆ
1. ಇಂದ್ರನ ಅನೆಯಿದು (4)
2. ಕಡಿಯಲು ಬಂದಿರುವ ಭಲ್ಲೂಕ (3)
3. ಪ್ರಾಯಕ್ಕೆ ಬರುತ್ತಿರುವ ಎಮ್ಮೆ (3)
4. ಇನ್ನೂ ಬಲಿಯದಿರುವ ಕಾಯಿ (4)
7. ಅಗಲ ಬಾಯುಳ್ಳ ಲೋಹದ ಪಾತ್ರೆ (3)
8. ದೇವರನ್ನು ನಂಬದವನು (3)
9. ನಡುವೆ ಗರಿ ಹಿಡಿದಿರುವ ಸುಸಂಸ್ಕೃತ (4)
11. ಹತ್ತನೆಯ ಒಂದು ಭಾಗ (4)
12. ಪ್ರವಾಹ ಅಥವಾ ನದಿ (3)
13. ಈತ ಕೆಟ್ಟ ಕವಿ !(3)



5633ನೇ ಪದಬಂಧದ ಉತ್ತರ

ಎಡದಿಂದ ಬಲಕ್ಕೆ:
3. ಅನುರಾಗ 5. ರಾವಣ
6. ವಾತಾಯನ 8. ತಡಸಲು
12. ಜನಹಿತ 14. ಪರಧನ
15. ನವುರು 16. ರಸಾಯನ

ಮೇಲಿಂದ ಕೆಳಕ್ಕೆ:
1. ಪರಾವಲಂಬಿ
2. ಗುಣವಂತ 3. ಅಹವಾಲು
4. ಗಹನ 7. ಯಮಿ
9. ಸಜ್ಜನ 10. ಮಂದಮಾರುತ
11. ಸ್ವರ 12. ಜನಮನ
13. ತಲ್ಲೀನತೆ 14. ಪಗಾರ

ಸುಡೊಕು 6019

						5		7
	2		6		7			
	6	5		4			9	1
	4				1		7	
8				2				4
	9		7			6		
9				3		4		
			4		8			9
2		4					5	3

ಆಡುವುದು ಹೇಗೆ?

ಮನೆಗಳನ್ನು 1ರಿಂದ 9ರವರೆಗಿನ ಅಂಕಿಗಳಿಂದ ತುಂಬಿ. ಮೇಲಿನಿಂದ ಕೆಳಕ್ಕೆ, ಎಡದಿಂದ ಬಲಕ್ಕೆ ಪ್ರತಿ ಸಾಲಿಗೂ ಇದೇ ನಿಯಮ. ದೊಡ್ಡ ಚೌಕದ ಒಳಗಿನ ಮಧ್ಯಮ ಚೌಕದ ಮನೆಗಳನ್ನೂ ತುಂಬಬೇಕು. ಯಾವ ಅಂಕಿಯೂ ಯಾವುದೇ ಸಾಲು, ಮಧ್ಯಮ ಚೌಕದಲ್ಲಿ ಪುನರಾವರ್ತನೆ ಆಗಬಾರದು.

6018 ಸುಡೊಕು

9	3	1	5	6	7	8	4	2
6	7	2	4	8	9	3	1	5
5	8	4	3	1	2	6	7	9
3	5	7	2	9	8	4	6	1
2	9	8	6	4	1	5	3	7
4	1	6	7	5	3	2	9	8
7	2	9	8	3	6	1	5	4
8	6	5	1	7	4	9	2	3
1	4	3	9	2	5	7	8	6

ಗುಸುಗುಸು

ರೆಡ್ಡಿ ಕಿಕ್‌ಗೆ ವ್ಯಾಪಾರಿಗಳು 'ಔಟ್'

ಚುನಾವಣೆ ಬಂತೆಂದರೆ ಸಾಕು ಕೊಪ್ಪಳ ಹಾಗೂ ಬಳ್ಳಾರಿ ಜಿಲ್ಲೆಗಳಲ್ಲಿ ಕಲ್ಯಾಣ ರಾಜ್ಯ ಪ್ರಗತಿ ಪಕ್ಷದ (ಕೆಆರ್‌ಪಿಪಿ) ಚಿಹ್ನೆ ಫುಟ್‌ಬಾಲ್‌ನದ್ದೇ ಸುದ್ದಿ. ಪಕ್ಷದ ಸಂಸ್ಥಾಪಕ ಜನಾರ್ದನ ರೆಡ್ಡಿ ಅವರನ್ನು ಮೆಚ್ಚಿಸಲು ಕಾರ್ಯಕರ್ತರು ಚೆಂಡುಗಳನ್ನು ಖರೀದಿಸುತ್ತಿದ್ದರು.

ರೆಡ್ಡಿ ಪಕ್ಷ ಸ್ಥಾಪನೆ ಮಾಡಿದಾಗಿನಿಂದಲೂ ಈ ಎರಡೂ ಜಿಲ್ಲೆಗಳ ಕ್ರೀಡಾ ಸಾಮಗ್ರಿಗಳ ವ್ಯಾಪಾರಿಗಳಿಗೆ ಭರ್ಜರಿ ಗಳಿಕೆ. ಫುಟ್‌ಬಾಲ್‌ಗಂತೂ ಹೆಚ್ಚಿನ ಬೇಡಿಕೆಯಂತೆ. ಹಿಂದಿನ ವಿಧಾನಸಭಾ ಚುನಾವಣೆ ವೇಳೆ ರೆಡ್ಡಿ ತಮ್ಮ ಪ್ರತಿ ಭಾಷಣದಲ್ಲಿಯೂ ಎದುರಾಳಿಗಳನ್ನು 'ಫುಟ್‌ಬಾಲ್ ಆಡುತ್ತೇನೆ' ಎಂದು ಅಬ್ಬರಿಸುತ್ತಿದ್ದರು.

ಈಗ ಲೋಕಸಭಾ ಚುನಾವಣೆಯೂ ಸಮೀಪ ಬಂದಿದೆ. ಪ್ರಚಾರದ ನೆಪದಲ್ಲಿ ಮತ್ತೆ ನಮ್ಮ ಗಳಿಕೆಯೂ ಹೆಚ್ಚಾಗುತ್ತದೆ ಎಂದು ವ್ಯಾಪಾರಿಗಳು ದೊಡ್ಡ ಸಂಖ್ಯೆಯಲ್ಲಿ ಚೆಂಡುಗಳನ್ನು ಖರೀದಿಸಿದ್ದಾರಂತೆ. ಹಿಂದಿನ ಚುನಾವಣೆಯಲ್ಲಿ ಕೆಆರ್‌ಪಿಪಿ ಮುಖಂಡರು ಮಕ್ಕಳಿಗೆ ಹಾಗೂ ಕ್ರೀಡಾಸಕ್ತರಿಗೆ ಫುಟ್‌ಬಾಲ್ ಉಡುಗೊರೆಯಾಗಿ ನೀಡಿ, 'ನಮ್ಮ ಪಕ್ಷಕ್ಕೆ ಮತಗೋಲು' ಹೊಡೆಯುವಂತೆ ಪ್ರಚಾರ ಮಾಡುತ್ತಿದ್ದರು. ಈ ಸಲವೂ ಹಾಗೆ ಆಗಬಹುದು ಅಂದುಕೊಂಡಿದ್ದರು.

ಆದರೆ, ಜನಾರ್ದನ ರೆಡ್ಡಿ 'ಫುಟ್‌ಬಾಲ್' ಒದ್ದು 'ಕಮಲ' ಹಿಡಿದ ಮೇಲೆ ವ್ಯಾಪಾರಿಗಳೇ ಕಕ್ಕಾಬಿಕ್ಕಿಯಾಗಿದ್ದಾರೆ ಎನ್ನುವ ಸುದ್ದಿ ಹರಿದಾಡುತ್ತಿದೆ. ಚೆಂಡು ಮಾರಾಟದಿಂದ ಭಾರಿ ಲಾಭದ ನಿರೀಕ್ಷೆಯಲ್ಲಿದ್ದವರಿಗೆ ರೆಡ್ಡಿಯೇ 'ವಾಕ್ ಓವರ್' ಕೊಟ್ಟು ಹೋಗಿದ್ದು ಅರಗಿಸಿಕೊಳ್ಳಲು ಸಾಧ್ಯವಾಗುತ್ತಿಲ್ಲ ಎನ್ನುವ ಅಳಲು ವ್ಯಾಪಾರಿಗಳಿಂದ ಕೇಳಿ ಬರುತ್ತಿದೆ.

ಮತ ಆಮಿಷ: ಆಯೋಗದ ವಶ

₹19.69 ಕೋಟಿ ನಗದು

ಉಚಿತ ಉಡುಗೊರೆ	₹ 3.17 ಲಕ್ಷ
ಮದ್ಯ	₹ 26.20 ಕೋಟಿ (8.40 ಲಕ್ಷ ಲೀ)
ಮಾದಕವಸ್ತು	₹88 ಲಕ್ಷ (135.68 ಕೆ.ಜಿ.)
ಚಿನ್ನ	₹ 5.47 ಕೋಟಿ (9.74 ಕೆ.ಜಿ.)
ಬೆಳ್ಳಿ	₹26 ಲಕ್ಷ (55.75 ಕೆ.ಜಿ.)

ಎಂಥಾ ಮಾತು!

ಕನ್ನಡ ಮತ್ತು ಸಂಸ್ಕೃತಿ ಸಚಿವ ಶಿವರಾಜ ತಂಗಡಗಿ ಬಿಜೆಪಿ ಸರ್ಕಾರದಲ್ಲಿ ಸಚಿವರಾಗಿದ್ದಾಗ ಸೋನಿಯಾ ಗಾಂಧಿಗೆ ಹೊಡೆಯಿರಿ ಎನ್ನುತ್ತಿದ್ದರು. ಕಾಂಗ್ರೆಸ್‌ಗೆ ಹೋದಮೇಲೆ ಮೋದಿಗೆ ಹೊಡೆಯಿರಿ ಎನ್ನುತ್ತಿದ್ದಾರೆ. ಈ ರೀತಿ ಮಾತನಾಡುವ ಅವರಿಗೆ ಒಂದು ದಿನ ಜನರೇ ಹೊಡೆಯುತ್ತಾರೆ. ಲೋಕಸಭೆ ಚುನಾವಣೆಯಲ್ಲಿ ಸೋಲುವ ಹತಾಶೆಯಿಂದ ಕಾಂಗ್ರೆಸ್ ನಾಯಕರು ಬುದ್ಧಿಭ್ರಮಣೆಯಿಂದ ಪ್ರಧಾನಿ ಮೋದಿಯವರ ಬಗ್ಗೆ ಇಲ್ಲಸಲ್ಲದ ಮಾತುಗಳನ್ನು ಆಡುತ್ತಿದ್ದಾರೆ

ಆರ್.ಅಶೋಕ, ವಿರೋಧ ಪಕ್ಷದ ನಾಯಕ

ರಾಜಕಾರಣದಲ್ಲಿ ಶತ್ರುತ್ವ ಶಾಶ್ವತವಲ್ಲ. ಸುಮಲತಾ ಅವರನ್ನು ಭೇಟಿಯಾಗಲು ಹಿಂಜರಿಕೆ ಇಲ್ಲ. ಅಂಬರೀಷ್ ಬದುಕಿದ್ದಾಗ ಅವರ ಮನೆಯಲ್ಲಿ ಊಟ ಮಾಡಿದ್ದೇವೆ. ಆಗ ಸುಮಲತಾ ಅವರೇ ನಮಗೆ ಊಟ ಬಡಿಸಿದ್ದಾರೆ. ರಾಜಕೀಯ ಸನ್ನಿವೇಶ, ಆಯಾ ಸಂದರ್ಭಗಳಲ್ಲಿ ಸಂಘರ್ಷವಾಗಿದೆ. ರಾಮಾಂಜನೇಯರ ನಡುವೆಯೇ ಯುದ್ಧ ನಡೆದಿತ್ತು. ಅವರ ಮುಂದೆ ನಾವೆಲ್ಲ ಹುಲು ಮಾನವರು

ಎಚ್.ಡಿ.ಕುಮಾರಸ್ವಾಮಿ, ಜೆಡಿಎಸ್ ಅಧ್ಯಕ್ಷ

ಕ್ಷೇತ್ರ ಮಹಾತ್ಮೆ

ಉಡುಪಿ

ಇಂದಿರಾಗಾಂಧಿ ಸ್ಪರ್ಧಿಸಿದ್ದ ಕಾರಣಕ್ಕೆ ದೇಶದುದ್ದಕ್ಕೂ ಗಮನ ಸೆಳೆದಿದ್ದ ಚಿಕ್ಕಮಗಳೂರು ಕ್ಷೇತ್ರ, 2008ರ ಕ್ಷೇತ್ರ ವಿಂಗಡಣೆ ಬಳಿಕ 'ಉಡುಪಿ'ಯನ್ನು ಒಡಲು ತುಂಬಿಸಿಕೊಂಡು ತನ್ನ ಚಹರೆಯನ್ನೇ ಬದಲಿಸಿಕೊಂಡಿದೆ. ಅಲ್ಲಿಯವರೆಗೂ ಮಲೆನಾಡು–ಬಯಲುಸೀಮೆಯವರ ಹಿಡಿತದಲ್ಲಿದ್ದ ಈ ಕ್ಷೇತ್ರಕ್ಕೆ ಉಡುಪಿ ಅಂಟಿಕೊಂಡಿದ್ದರಿಂದಾಗಿ ಘಟ್ಟದ ಕೆಳಗಿನವರೇ ಮೇಲುಗೈ ಸಾಧಿಸಿದರು. ಬಯಲುಸೀಮೆ, ಮಲೆನಾಡು, ಕರಾವಳಿ ಹೀಗೆ ಭೌಗೋಳಿಕ ವೈವಿಧ್ಯವುಳ್ಳ ಕ್ಷೇತ್ರದಲ್ಲಿ ಕೋಟ ಶ್ರೀನಿವಾಸ ಪೂಜಾರಿ, ಜಯಪ್ರಕಾಶ ಹೆಗ್ಡೆ ಪರಸ್ಪರ ಎದುರಾಳಿಗಳು. ಎಲ್ಲ ಜಾತಿ–ಧರ್ಮದವರೂ ಪ್ರಧಾನವಾಗಿಯೇ ಇದ್ದಾರೆ. ಕೇಂದ್ರ ಸಚಿವೆ ಶೋಭಾ ಕರಂದ್ಲಾಜೆ ಪ್ರತಿನಿಧಿಸುತ್ತಿರುವ ಈ ಕ್ಷೇತ್ರದಲ್ಲಿ, ಪೂಜಾರಿಯವರನ್ನು ಲೋಕಸಭೆಗೆ ಹುರಿಯಾಳಾಗಿಸಲಾಗಿದೆ. ಕ್ಷೇತ್ರ ರಚನೆಯಾದ ಬಳಿಕ ತಮ್ಮ ಅದೃಷ್ಟ ಪರೀಕ್ಷೆಗೆ ಒಡ್ಡುತ್ತಲೇ ಇರುವ ಹೆಗ್ಡೆಯವರು, ಉಪಚುನಾವಣೆಯಲ್ಲಿ ಬಿಜೆಪಿಯಿಂದ ಕ್ಷೇತ್ರ ಕಸಿದುಕೊಂಡು, ಹಸ್ತ ಅರಳಿಸಿದ್ದರು. ಸೋತ ಬಳಿಕ, ಕಮಲ ಮುಡಿದಿದ್ದ ಹೆಗ್ಡೆ, ಚುನಾವಣೆ ಹೊತ್ತಿಗೆ 'ಹಸ್ತ'ಲಾಘವ ಮಾಡಿದ್ದಾರೆ. ಘಟ್ಟದ ಮೇಲಿನ ಕ್ಷೇತ್ರಗಳಲ್ಲಿ ಒಕ್ಕಲಿಗರ ಮತವೂ ನಿರ್ಣಾಯಕವಾಗಿದ್ದು, ಸ್ಥಳೀಯ ಮತಗಳ ಮೇಲೆ ಪ್ರಭಾವವನ್ನೂ ಹೊಂದಿದ್ದಾರೆ. 'ವೈಟ್ ಕಾಲರ್' ರಾಜಕಾರಣಿಗಳಿಗೆ ಮಣೆ ಹಾಕುವ ಈ ಸಮುದಾಯ, ಹೆಗ್ಡೆಯವರನ್ನು ಕೈ ಹಿಡಿದು ದಡ ಹತ್ತಿಸುತ್ತಾರೋ, ಕಮಲದ ಭದ್ರಕೋಟೆಯಂತಿದ್ದ ಈ ಕ್ಷೇತ್ರ 'ಪೂಜಾರಿ'ಯವರಿಗೆ ಆರತಿ ಬೆಳಗಿ, ಕಮಲ ಅರಳಿಸುತ್ತದೋ ಎಂಬುದು ಲೆಕ್ಕಕ್ಕೆ ನಿಲುಕದ ಸಂಗತಿ.

'ಅನ್ನ' ಜಗಳ: ಯಾರಿಗೆ ಬಲ

ಉಚಿತ ಅಕ್ಕಿಯ ಲಾಭ ಪಡೆಯಲು ಕಾಂಗ್ರೆಸ್–ಬಿಜೆಪಿ ನಡುವೆ ಪೈಪೋಟಿ

ಅನ್ನ ಭಾಗ್ಯ ಯೋಜನೆ

10.90 ಲಕ್ಷ ಅಂತ್ಯೋದಯ ಅನ್ನ ಯೋಜನೆ ಪಡಿತರ ಚೀಟಿಗಳು

1.17 ಕೋಟಿ ಆದ್ಯತಾ (ಬಿಪಿಎಲ್) ಕುಟುಂಬ ಪಡಿತರ ಚೀಟಿಗಳು

1.28 ಕೋಟಿ ಅನ್ನ ಭಾಗ್ಯ ಯೋಜನೆಯಡಿ ಬರುವ ಒಟ್ಟು ಪಡಿತರ ಚೀಟಿಗಳು

4.42 ಕೋಟಿ ಒಟ್ಟು ಫಲಾನುಭವಿಗಳ ಸಂಖ್ಯೆ

2.17 ಲಕ್ಷ ಟನ್ ರಾಷ್ಟ್ರೀಯ ಆಹಾರ ಭದ್ರತಾ ಕಾಯ್ದೆಯಡಿ ಕೇಂದ್ರದಿಂದ ಪೂರೈಕೆಯಾಗುವ ಅಕ್ಕಿ

2.29 ಲಕ್ಷ ಟನ್ ಅನ್ನ ಭಾಗ್ಯ ಯೋಜನೆಗೆ ಹೆಚ್ಚುವರಿಯಾಗಿ ಅಗತ್ಯವಿರುವ ಅಕ್ಕಿ

• ವಿ.ಎಸ್. ಸುಬ್ರಹ್ಮಣ್ಯ

ಬೆಂಗಳೂರು: 'ಅನ್ನಭಾಗ್ಯ'ವೂ ಸೇರಿ ಐದು ಗ್ಯಾರಂಟಿ ಘೋಷಿಸಿ ವಿಧಾನಸಭಾ ಚುನಾವಣೆಯಲ್ಲಿ ಭರ್ಜರಿ ಗೆಲುವು ಸಾಧಿಸಿದ್ದ ಕಾಂಗ್ರೆಸ್ ಪಕ್ಷ, ಲೋಕಸಭಾ ಚುನಾವಣೆಯಲ್ಲೂ ಅದರ ಫಲದ ನಿರೀಕ್ಷೆಯಲ್ಲಿದೆ. ಕೇಂದ್ರ ಸರ್ಕಾರ ಉಚಿತವಾಗಿ ಪೂರೈಸುತ್ತಿರುವ ಅಕ್ಕಿಯ 'ಫಲ' ತನಗೇ ದೊರಕಬೇಕು ಎಂದು ಎನ್‌ಡಿಎ (ಬಿಜೆಪಿ–ಜೆಡಿಎಸ್) ಮೈತ್ರಿಕೂಟ ಹಟಕ್ಕೆ ಬಿದ್ದಿದೆ. ಭೀಕರ ಬರಗಾಲ, ಆಹಾರ ಧಾನ್ಯಗಳ ಬೆಲೆ ಏರಿಕೆಯಿಂದ ಸಂಕಷ್ಟಕ್ಕೆ ಸಿಲುಕಿರುವ ಜನರ ಮುಂದೆ 'ಅನ್ನ'ವೂ ಚುನಾವಣಾ ಅಸ್ತ್ರವಾದಂತಿದೆ.

ಅನ್ನಭಾಗ್ಯ ಯೋಜನೆಗೆ ತಿಂಗಳಿಗೆ ಹೆಚ್ಚುವರಿಯಾಗಿ 2.29 ಲಕ್ಷ ಟನ್ ಅಕ್ಕಿ ಹೊಂದಿಸಬೇಕಿದೆ. ಆರಂಭದಲ್ಲಿ ರಾಜ್ಯಕ್ಕೆ ಅಕ್ಕಿ ಪೂರೈಸಲು ಒಪ್ಪಿಕೊಂಡಿದ್ದ ಎಫ್‌ಸಿಐ, ದಿಢೀರ್ ನಿಲುವು ಬದಲಿಸಿತು. ನಂತರ ಛತ್ತೀಸಗಢ, ತೆಲಂಗಾಣ, ಆಂಧ್ರಪ್ರದೇಶ ರಾಜ್ಯ ಸರ್ಕಾರಗಳಿಂದ ಅಕ್ಕಿ ಖರೀದಿಗೆ ರಾಜ್ಯ ಸರ್ಕಾರ ನಡೆಸಿದ್ದ ಪ್ರಯತ್ನವೂ ಫಲ ಕೊಡಲಿಲ್ಲ.

ಎಫ್‌ಸಿಐನ ಮುಕ್ತ ಮಾರುಕಟ್ಟೆ ಮಾರಾಟ ಕಾರ್ಯಕ್ರಮದ ಅಡಿಯಲ್ಲಿನ ಅಕ್ಕಿ ದರಕ್ಕೆ ಸಮನಾಗಿ ಪ್ರತಿ ಕೆ.ಜಿ.ಗೆ ₹34ರಂತೆ ಫಲಾನುಭವಿಗಳ ಖಾತೆಗೆ ನಗದು ವರ್ಗಾವಣೆ ಮಾಡುವ ಮೂಲಕ ರಾಜ್ಯ ಸರ್ಕಾರ ಹೊಸ ದಾರಿ ಕಂಡುಕೊಂಡಿದೆ. ಅನ್ನಭಾಗ್ಯ ಯೋಜನೆಗೆ ಎಫ್‌ಸಿಐ ಅಕ್ಕಿ ಪೂರೈಸದಂತೆ ಕೇಂದ್ರ ಸರ್ಕಾರ ರಾಜಕೀಯ ದುರುದ್ದೇಶದಿಂದ ತಡೆದಿದೆ ಎಂಬ ಟೀಕೆಯನ್ನು ರಾಜ್ಯ ಸರ್ಕಾರ ಆಗಾಗ ಮಾಡುತ್ತಲೇ ಇದೆ.

ಅನ್ನಭಾಗ್ಯ ಯೋಜನೆಯಡಿ ವಿತರಿಸುತ್ತಿರುವ ಅಕ್ಕಿಯನ್ನು ಎನ್‌ಎಫ್‌ಎಸ್‌ಎ ಅಡಿಯಲ್ಲಿ ಉಚಿತವಾಗಿ ಪೂರೈಸುತ್ತಿರುವುದು ತಾನು ಎಂಬುದನ್ನು ಪ್ರತಿಪಾದಿಸುವ ಮೂಲಕ ಚುನಾವಣಾ ರಾಜಕಾರಣದಲ್ಲಿ 'ಅಕ್ಕಿ ಅಸ್ತ್ರ' ಬಳಸಲು ಕೇಂದ್ರ ಸರ್ಕಾರ ಕೂಡ ಹಲವು ತಿಂಗಳ ಹಿಂದಿಯೇ ಹೆಜ್ಜೆ ಇರಿಸಿತ್ತು. ಪಡಿತರ ಧಾನ್ಯಗಳ ವಿತರಣೆ ಸಂದರ್ಭದಲ್ಲಿ ಕೇಂದ್ರ ಸರ್ಕಾರ ಉಚಿತವಾಗಿ ಪೂರೈಸುತ್ತಿದೆ ಎಂಬುದನ್ನು ನಮೂದಿಸಿ ರಸೀದಿ ನೀಡಬೇಕೆಂಬ ಆದೇಶವನ್ನೂ ಹೊರಡಿಸಲಾಗಿತ್ತು. ಆದರೆ, ಅದು ಪೂರ್ಣ ಪ್ರಮಾಣದಲ್ಲಿ ಜಾರಿಯಾಗಿಲ್ಲ.

ರಾಜ್ಯದ 223 ತಾಲ್ಲೂಕುಗಳಲ್ಲಿ ಬರಗಾಲ ಇದೆ. ಆಹಾರ ಧಾನ್ಯಗಳ ಉತ್ಪಾದನೆ ಗಣನೀಯವಾಗಿ ಕುಸಿದಿದೆ. ಅಕ್ಕಿ ಸೇರಿದಂತೆ ಆಹಾರ ಧಾನ್ಯಗಳ ದರ ಏರುಗತಿಯಲ್ಲಿದೆ.

ಮತ ಮಂಥನ

ರಾಜ್ಯ ಸರ್ಕಾರ ಘೋಷಣೆಯಂತೆ ಹತ್ತು ಕೆ.ಜಿ. ಅಕ್ಕಿ ವಿತರಿಸಿದ್ದರೆ ಮಾರುಕಟ್ಟೆಯಲ್ಲಿ ಅಕ್ಕಿ ದರ ಏರುತ್ತಿರಲಿಲ್ಲ ಎಂಬ ಮಾತು ಬಡವರು ಮತ್ತು ಮಧ್ಯಮ ವರ್ಗದಲ್ಲಿ ಚರ್ಚೆಯಲ್ಲಿದೆ. ಅದನ್ನೇ ಮತವಾಗಿ ಪರಿವರ್ತಿಸುವ ಕಸರತ್ತಿನಲ್ಲಿ ಕಾಂಗ್ರೆಸ್– ಬಿಜೆಪಿ ತಂತ್ರ ಹೆಣೆಯುತ್ತಿವೆ.

'ರಾಜ್ಯದ ಬಹುಭಾಗ ಬರಪೀಡಿತವಾಗಿದೆ. ಆಹಾರ ಧಾನ್ಯ ಉಚಿತವಾಗಿ ದೊರಕಿದ್ದರೆ ಬಡವರು ಮತ್ತು ಮಧ್ಯಮ ವರ್ಗದವರಿಗೆ ಅನುಕೂಲವಾಗುತ್ತಿತ್ತು. ಈ ಚುನಾವಣೆಯಲ್ಲಿ ಅನ್ನ ಭಾಗ್ಯದ ಅಕ್ಕಿಯ ವಿಚಾರ ಒಂದಷ್ಟು ಪರಿಣಾಮ ಬೀರುವ ಸಾಧ್ಯತೆ ಇದೆ' ಎಂಬುದು ರಾಜ್ಯ ರೈತ ಸಂಘದ ಅಧ್ಯಕ್ಷ ಬಡಗಲಪುರ ನಾಗೇಂದ್ರ ಅವರ ಅಭಿಪ್ರಾಯ.

ಜನಪ್ರಿಯತೆಯ ನೆರಳಿನಲ್ಲಿ: ಕೇಂದ್ರ ಸರ್ಕಾರ ಉಚಿತವಾಗಿ ಪೂರೈಸುವ ಆಹಾರ ಧಾನ್ಯಗಳನ್ನು ಸಾರ್ವಜನಿಕ ವಿತರಣಾ ವ್ಯವಸ್ಥೆಯಡಿ ಫಲಾನುಭವಿಗಳಿಗೆ ಹಂಚಿಕೆ ಮಾಡುವ ಕಾರ್ಯಕ್ರಮಕ್ಕೆ ಸಿದ್ದರಾಮಯ್ಯ ನೇತೃತ್ವದ ಕಾಂಗ್ರೆಸ್ ಸರ್ಕಾರ 2013ರಲ್ಲೇ ಹೊಸ ಸ್ವರೂಪ ನೀಡಿತ್ತು. ಅಂತ್ಯೋದಯ ಮತ್ತು ಬಡತನ ರೇಖೆಗಿಂತ ಕೆಳಗಿರುವ (ಬಿಪಿಎಲ್) ಕುಟುಂಬಗಳಿಗೆ ಕೆ.ಜಿಗೆ ₹1ರಂತೆ ಅಕ್ಕಿ ವಿತರಿಸುವ 'ಅನ್ನಭಾಗ್ಯ' ಯೋಜನೆಯನ್ನು ಸಿದ್ದರಾಮಯ್ಯ ಅವರು ಮುಖ್ಯಮಂತ್ರಿಯಾಗಿ ಅಧಿಕಾರ ಸ್ವೀಕರಿಸಿದ ಮೊದಲ ದಿನವೇ ಜಾರಿಗೊಳಿಸಿದ್ದರು. ಬಳಿಕ ಅದನ್ನು ಸಂಪೂರ್ಣ ಉಚಿತವಾಗಿ ನೀಡುವ ಮೂಲಕ 'ಜನಪ್ರಿಯ' ಕಾರ್ಯಕ್ರಮದ ದಾಳವನ್ನೂ ಉರುಳಿಸಿದ್ದರು.

ಬಡವರು ಮತ್ತು ಮಧ್ಯಮ ವರ್ಗದವರು ಹೆಚ್ಚಿನ ಸಂಖ್ಯೆಯಲ್ಲಿರುವ ರಾಜ್ಯದಲ್ಲಿ ಅನ್ನಭಾಗ್ಯದ ವಿಸ್ತರಣೆ ಚುನಾವಣೆಯಲ್ಲಿ 'ಕೈ' ಹಿಡಿಯಬಹುದು ಎಂದು ಅಂದಾಜಿಸಿದ್ದ ಕಾಂಗ್ರೆಸ್, 2023ರ ವಿಧಾನಸಭೆ ಚುನಾವಣೆಗೆ ಮುನ್ನ ಅಂತ್ಯೋದಯ ಮತ್ತು ಬಿಪಿಎಲ್ ಕುಟುಂಬಗಳ ಪ್ರತಿ ಸದಸ್ಯರಿಗೂ ತಿಂಗಳಿಗೆ ತಲಾ 10 ಕೆ.ಜಿ. ಆಹಾರ ಧಾನ್ಯಗಳನ್ನು ಉಚಿತವಾಗಿ ವಿತರಿಸುವ 'ಅನ್ನ ಭಾಗ್ಯ ಗ್ಯಾರಂಟಿ' ಘೋಷಿಸಿತ್ತು. ಬಡವರು ಮತ್ತು ಮಧ್ಯಮ ವರ್ಗದ ಜನರು ಹೆಚ್ಚು ಸಂಖ್ಯೆಯಲ್ಲಿರುವ ರಾಜ್ಯದಲ್ಲಿ ಈ ಘೋಷಣೆ ವಿಧಾನಸಭಾ ಚುನಾವಣೆಯುದ್ದಕ್ಕೂ ಭಾರಿ ಸದ್ದು ಮಾಡಿತ್ತು.

'ಚರ್ಚೆಯಾದರೆ ಪರಿಣಾಮ ನಿಶ್ಚಿತ'

'ಅನ್ನ ಭಾಗ್ಯ ಯೋಜನೆಯೂ ಸೇರಿದಂತೆ ಆಹಾರ ಭದ್ರತೆಗೆ ಸಂಬಂಧಿಸಿದ ಯೋಜನೆಗಳಲ್ಲಿ ನಡೆಯುತ್ತಿರುವ ರಾಜಕೀಯದ ಕುರಿತು ಚುನಾವಣಾ ಸಮಯದಲ್ಲಿ ಚರ್ಚೆ ಆಗಲೇಬೇಕಿದೆ. ಈ ವಿಷಯ ಇನ್ನೂ ಸಾಮಾನ್ಯ ಜನರ ಹಂತದಲ್ಲಿ ಹೆಚ್ಚು ಚರ್ಚೆಗೆ ಬರುತ್ತಿಲ್ಲ. ಸರಿಯಾದ ರೀತಿಯಲ್ಲಿ ಚರ್ಚೆ ನಡೆದರೆ ಚುನಾವಣೆ ಮೇಲೆ ಅದು ಪರಿಣಾಮ ಬೀರುವುದು ನಿಶ್ಚಿತ' ಎನ್ನುತ್ತಾರೆ ಆಹಾರ ಹಕ್ಕಿಗಾಗಿ ಆಂದೋಲನದ ಶಾರದಾ ಗೋಪಾಲ.

ಮಿಂಚಿ ಮರೆಯಾದ ಭಾರತ್ ಅಕ್ಕಿ

ಚುನಾವಣೆ ಸಮೀಪಿಸುತ್ತಿರುವಾಗಲೇ ಕೇಂದ್ರ ಸರ್ಕಾರದ ನಿರ್ದೇಶನದ ಮೇರೆಗೆ ಎಫ್‌ಸಿಐ 'ಭಾರತ್ ಅಕ್ಕಿ' ಎಂಬ ಬ್ರ್ಯಾಂಡ್‌ನೊಂದಿಗೆ ಪ್ರತಿ ಕೆ.ಜಿ.ಗೆ ₹29ರ ದರದಲ್ಲಿ ಅಕ್ಕಿ ಮಾರಾಟ ಆರಂಭಿಸಿತ್ತು. ಬೆಂಗಳೂರು ಸೇರಿದಂತೆ ಪ್ರಮುಖ ನಗರಗಳಲ್ಲಿ 'ಭಾರತ್ ಅಕ್ಕಿ' ಮಾರಾಟ ವಾಹನಗಳು ಕೆಲವು ದಿನಗಳ ಕಾಲ ಅಲ್ಲಲ್ಲಿ ಕಂಡವು. ಈಗ ಬಹುತೇಕ ಕಡೆಗಳಲ್ಲಿ ಭಾರತ್ ಅಕ್ಕಿ ಮಾರಾಟ ಸ್ಥಗಿತವಾಗಿದೆ. ಕೇಂದ್ರ ಸರ್ಕಾರದ ಅಂಕಿಅಂಶಗಳ ಪ್ರಕಾರ, 5 ಲಕ್ಷ ಟನ್ ಅಕ್ಕಿಯನ್ನು ಭಾರತ್ ಬ್ರ್ಯಾಂಡ್ ಅಡಿಯಲ್ಲಿ ಮಾರಾಟ ಮಾಡಲಾಗುತ್ತಿದೆ. ಮಾರುಕಟ್ಟೆಗೆ ಬಿಡುಗಡೆಯಾದ ಅಕ್ಕಿ ಎಲ್ಲಿಗೆ ಹೋಯಿತು ಎಂಬ ಪ್ರಶ್ನೆ ಹಾಗೆಯೇ ಉಳಿದಿದೆ.

2019ರಲ್ಲಿ 478 ಅಭ್ಯರ್ಥಿಗಳಲ್ಲಿ 422 ಮಂದಿಯ ಠೇವಣಿ ನಷ್ಟ!

ಪ್ರಜಾವಾಣಿ ವಾರ್ತೆ

2019ರ ಲೋಕಸಭೆ ಚುನಾವಣೆ

78 ನಾಮಪತ್ರ ಸಲ್ಲಿಸಿದ್ದ ರಾಷ್ಟ್ರೀಯ ಪಕ್ಷಗಳ ಅಭ್ಯರ್ಥಿಗಳು

5 ನಾಮಪತ್ರ ಸಲ್ಲಿಸಿದ್ದ ರಾಜ್ಯ ಪಕ್ಷಗಳ ಅಭ್ಯರ್ಥಿಗಳು

30 ಠೇವಣಿ ಕಳೆದುಕೊಂಡ ರಾಷ್ಟ್ರೀಯ ಪಕ್ಷಗಳ ಅಭ್ಯರ್ಥಿಗಳು

128 ಠೇವಣಿ ಕಳೆದುಕೊಂಡ ಮಾನ್ಯತೆ ಪಡೆದ, ನೋಂದಾಯಿತವಲ್ಲದ ಪಕ್ಷಗಳ ಅಭ್ಯರ್ಥಿಗಳು

ಬೆಂಗಳೂರು: 2024ರ ಲೋಕಸಭೆ ಚುನಾವಣೆಗೆ ಅಖಾಡ ಸಿದ್ಧವಾಗುತ್ತಿದೆ. ಈ ಬಾರಿ ರಾಜ್ಯದಲ್ಲಿ ಕಾಂಗ್ರೆಸ್ ಮತ್ತು ಬಿಜೆಪಿ–ಜೆಡಿಎಸ್ ಮೈತ್ರಿಕೂಟದ ನಡುವೆ ಹಣಾಹಣಿ ನಡೆಯಲಿದೆ. 2019ರಲ್ಲಿ ನಡೆದ ಚುನಾವಣೆಯಲ್ಲಿ ಬಿಜೆಪಿ ವಿರುದ್ಧ ಕಾಂಗ್ರೆಸ್–ಜೆಡಿಎಸ್ ಮೈತ್ರಿಕೂಟದ ನಡುವೆ ಸಮರ ನಡೆದಿತ್ತು.

ವಿಶೇಷವೆಂದರೆ, 2019ರ ಲೋಕಸಭೆ ಚುನಾವಣೆಯಲ್ಲಿ ರಾಜ್ಯದಲ್ಲಿ 478 ಅಭ್ಯರ್ಥಿಗಳು ಕಣದಲ್ಲಿದ್ದರು. ಈ ಪೈಕಿ, 422 (ಶೇ 88) ಅಭ್ಯರ್ಥಿಗಳು ಭದ್ರತಾ ಠೇವಣಿ ಕಳೆದುಕೊಂಡಿದ್ದರು. ಇಡೀ ದೇಶದಲ್ಲಿ 8,054 ಅಭ್ಯರ್ಥಿಗಳು ಕಣದಲ್ಲಿದ್ದರು. ಈ ಪೈಕಿ, 6,923 ಮಂದಿ ಠೇವಣಿ ಕಳೆದುಕೊಂಡಿದ್ದಾರೆ.

2019ರಲ್ಲಿ ನಡೆದ ಲೋಕಸಭೆ ಚುನಾವಣೆಯಲ್ಲಿ ಬಿಜೆಪಿ 25, ಕಾಂಗ್ರೆಸ್, ಜೆಡಿಎಸ್ ತಲಾ ಒಂದು ಸ್ಥಾನ ಹಾಗೂ ಒಬ್ಬರು ಪಕ್ಷೇತರ (ಸುಮಲತಾ) ಅಭ್ಯರ್ಥಿ ಗೆಲುವು ಸಾಧಿಸಿದ್ದರು.

ಲೋಕಸಭೆ ಚುನಾವಣೆಗೆ ಸ್ಪರ್ಧಿಸುವ ಅಭ್ಯರ್ಥಿ ನಾಮಪತ್ರ ಸಲ್ಲಿಸುವ ಸಂದರ್ಭದಲ್ಲಿ ಕ್ಷೇತ್ರದ ಚುನಾವಣಾಧಿಕಾರಿ ಬಳಿ ₹ 25 ಸಾವಿರ ಭದ್ರತಾ ಠೇವಣಿ ಇಡಬೇಕು. ಪರಿಶಿಷ್ಟ ಸಮುದಾಯದ ಅಭ್ಯರ್ಥಿಗಳು ₹ 12,500 ಠೇವಣಿ ಪಾವತಿಸಬೇಕು. ಅಭ್ಯರ್ಥಿ ತಾನು ಸ್ಪರ್ಧಿಸಿರುವ ಕ್ಷೇತ್ರದಲ್ಲಿ ಚಲಾವಣೆಯಾದ ಒಟ್ಟು ಅರ್ಹ ಮತಗಳ 1/6ಕ್ಕಿಂತ ಹೆಚ್ಚು ಮತ ಗಳಿಸಿದರೆ ಚುನಾವಣಾಧಿಕಾರಿಗೆ ಪಾವತಿಸಿದ ಠೇವಣಿ ಮೊತ್ತವನ್ನು ಅಭ್ಯರ್ಥಿಗೆ ಹಿಂದಿರುಗಿಸಲಾಗುತ್ತದೆ. 1/6ಕ್ಕಿಂತ ಕಡಿಮೆ ಮತ ಗಳಿಸಿದರೆ ಅಂತಹ ಅಭ್ಯರ್ಥಿಯ ಠೇವಣಿಯನ್ನು ಚುನಾವಣಾ ಆಯೋಗ ಮುಟ್ಟುಗೋಲು ಹಾಕುತ್ತದೆ.

265 ಕಣದಲ್ಲಿದ್ದ ಪಕ್ಷೇತರರು

264 ಠೇವಣಿ ಕಳೆದುಕೊಂಡ ಪಕ್ಷೇತರರು

ಕ್ಷೇತ್ರವಾರು ಠೇವಣಿ ಕಳೆದುಕೊಂಡವರು

ಕ್ಷೇತ್ರ	ಕಣದಲ್ಲಿದ್ದವರು	ಠೇವಣಿ ಕಳೆದುಕೊಂಡವರು	ಕ್ಷೇತ್ರ	ಕಣದಲ್ಲಿದ್ದವರು	ಠೇವಣಿ ಕಳೆದುಕೊಂಡವರು
ಚಿಕ್ಕೋಡಿ	11	9	ಉಡುಪಿ-ಚಿಕ್ಕಮಗಳೂರು	12	10
ಬೆಳಗಾವಿ	57	55	ಹಾಸನ	6	4
ಬಾಗಲಕೋಟೆ	14	12	ದಕ್ಷಿಣ ಕನ್ನಡ	13	11
ವಿಜಯಪುರ (ಎಸ್‌ಸಿ)	12	10	ಚಿತ್ರದುರ್ಗ (ಎಸ್‌ಸಿ)	19	17
ಕಲಬುರಗಿ (ಎಸ್‌ಸಿ)	12	10	ತುಮಕೂರು	15	13
ರಾಯಚೂರು (ಎಸ್‌ಟಿ)	5	3	ಮಂಡ್ಯ	22	20
ಬೀದರ್	22	20	ಮೈಸೂರು	22	20
ಕೊಪ್ಪಳ	14	12	ಚಾಮರಾಜನಗರ (ಎಸ್‌ಸಿ)	10	8
ಬಳ್ಳಾರಿ (ಎಸ್‌ಟಿ)	11	9	ಬೆಂಗಳೂರು ಗ್ರಾಮಾಂತರ	15	13
ಹಾವೇರಿ	10	8	ಬೆಂಗಳೂರು ಉತ್ತರ	31	29
ಧಾರವಾಡ	19	17	ಬೆಂಗಳೂರು ಕೇಂದ್ರ	22	20
ಉತ್ತರ ಕನ್ನಡ	13	11	ಬೆಂಗಳೂರು ದಕ್ಷಿಣ	25	23
ದಾವಣಗೆರೆ	25	23	ಚಿಕ್ಕಬಳ್ಳಾಪುರ	15	13
ಶಿವಮೊಗ್ಗ	12	10	ಕೋಲಾರ (ಎಸ್‌ಸಿ)	14	12

ಸಮಾವೇಶದಲ್ಲಿ ಕಿಸೆಗಳವು

ಮಡಿಕೇರಿ: ಇಲ್ಲಿ ಬುಧವಾರ ನಡೆದ ಬಿಜೆಪಿ ಕಾರ್ಯಕರ್ತರ ಸಮಾವೇಶದಲ್ಲಿ ಹಾಗೂ ಕುಶಾಲನಗರದಲ್ಲಿ ಬಿಜೆಪಿ ನಾಯಕರಿಗೆ ಸ್ವಾಗತ ಕೋರುವ ವೇಳೆಯಲ್ಲಿ ಮುಖಂಡರು ಮತ್ತು ಕಾರ್ಯಕರ್ತರ ಕಿಸೆಯಿಂದ ಕಳ್ಳರು ಸಾವಿರಾರು ರೂಪಾಯಿ ಕದ್ದಿದ್ದಾರೆ.

ಬಿಜೆಪಿಯ ಹಿರಿಯ ಮುಖಂಡ ಎಂ.ಪಿ.ಅಪ್ಪಚ್ಚುರಂಜನ್, 'ನನ್ನ ಜೇಬಿನಲ್ಲಿದ್ದ ಪರ್ಸ್ ಕಳವಾಗಿದೆ. ಅದರಲ್ಲಿ ₹ 20 ಸಾವಿರ ನಗದು ಹಾಗೂ 4 ಗುರುತಿನ ಚೀಟಿಗಳಿದ್ದವು. ಇನ್ನೂ ಹಲವರ ಪರ್ಸ್‌ಗಳು ಕಳವಾಗಿವೆ' ಎಂದು 'ಪ್ರಜಾವಾಣಿ'ಗೆ ಹೇಳಿದರು.

ಮಡಿಕೇರಿಯಲ್ಲಿ ಯೋಗೇಶ್ ಎಂಬುವವರ ₹ 50 ಸಾವಿರ ಹಾಗೂ ನಿತಿನ್ ಎಂಬುವವರ ₹ 32 ಸಾವಿರ ನಗದು ಕಳವಾಗಿದ್ದು, ದೂರು ದಾಖಲಾಗಿದೆ. ಪೊಲೀಸರು ತನಿಖೆ ನಡೆಸಿದ್ದಾರೆ.

'ಬಳ್ಳಾರಿ ರೆಡ್ಡಿ ಗ್ಯಾಂಗ್‌ಗೆ ಮೋದಿ ರಕ್ಷಣೆ'

ನವದೆಹಲಿ: ಅಕ್ರಮ ಗಣಿಗಾರಿಕೆ ಪ್ರಕರಣದಲ್ಲಿ ಭಾಗಿಯಾಗಿರುವ ಶಾಸಕ ಜಿ.ಜನಾರ್ದನ ರೆಡ್ಡಿ ಅವರು ಬಿಜೆಪಿಗೆ ಸೇರ್ಪಡೆಯಾಗಿರುವುದನ್ನು ಮುಂದಿಟ್ಟುಕೊಂಡು ಪ್ರಧಾನಿ ನರೇಂದ್ರ ಮೋದಿ ವಿರುದ್ಧ ಕಾಂಗ್ರೆಸ್ ವಾಗ್ದಾಳಿ ನಡೆಸಿದೆ. 'ಭಾರತದ ಅತ್ಯಂತ ಭ್ರಷ್ಟ ರಾಜಕಾರಣಿಗಳನ್ನು ಬಿಜೆಪಿಯು ರತ್ನಗಂಬಳಿ ಹಾಸಿ ಸ್ವಾಗತಿಸುತ್ತಿದೆ' ಎಂದು ವ್ಯಂಗ್ಯವಾಡಿದೆ.

ಬುಧವಾರ ಇಲ್ಲಿ ಸುದ್ದಿಗೋಷ್ಠಿಯಲ್ಲಿ ಮಾತನಾಡಿದ ಕಾಂಗ್ರೆಸ್ ಮಾಧ್ಯಮ ಹಾಗೂ ಪ್ರಚಾರ ವಿಭಾಗದ ಮುಖ್ಯಸ್ಥ ಪವನ್ ಖೇರಾ, 'ಆಘಾತಕಾರಿ ಸಂಗತಿಯೆಂದರೆ, ಮೋದಿ ಸರ್ಕಾರವು ಈಗ ಬಳ್ಳಾರಿ ಗ್ಯಾಂಗ್‌ನ ಹಿತೈಷಿ ಹಾಗೂ ರಕ್ಷಕ ಆಗಿ ಮಾರ್ಪಟ್ಟಿದೆ' ಎಂದರು.

ಪ್ರಧಾನಿ ಮೋದಿ, ಅಮಿತ್ ಶಾ, ಯೋಗಿ ಆದಿತ್ಯನಾಥ ಪ್ರಚಾರಕ್ಕೆ ಬೇಡಿಕೆ ಹೆಚ್ಚು

ಚುನಾವಣಾ ಪ್ರಚಾರಕ್ಕೆ ನಾಲ್ಕು ತಂಡಗಳು

ಪ್ರಜಾವಾಣಿ ವಾರ್ತೆ

ಬೆಂಗಳೂರು: ರಾಜ್ಯದಲ್ಲಿ ಬಿಜೆಪಿ ನಾಲ್ಕು ತಂಡಗಳಲ್ಲಿ ಲೋಕಸಭಾ ಚುನಾವಣಾ ಪ್ರಚಾರವನ್ನು ನಡೆಸಲಿದ್ದು, ಬಿ.ವೈ.ವಿಜಯೇಂದ್ರ, ಬಿ.ಎಸ್.ಯಡಿಯೂರಪ್ಪ, ಆರ್.ಅಶೋಕ ನೇತೃತ್ವದಲ್ಲಿ ಮೂರು ತಂಡಗಳು ರಚಿತವಾಗಲಿವೆ. ನಾಲ್ಕನೇ ತಂಡ ಕೇಂದ್ರ ನಾಯಕರ ನೇತೃತ್ವದಲ್ಲಿ ಪ್ರಚಾರವನ್ನು ಮುನ್ನಡೆಸಲಿದೆ.

ಮತ್ತೊಂದು ವಿಶೇಷವೆಂದರೆ, ಪ್ರಧಾನಿ ನರೇಂದ್ರ ಮೋದಿ ಅವರು ರಾಜ್ಯದಲ್ಲಿ ಚುನಾವಣಾ ಪ್ರಚಾರಕ್ಕೆ ಬಂದಾಗ ಅವರ ವೇದಿಕೆಯಲ್ಲಿ ವಿಜಯೇಂದ್ರ ಮತ್ತು ಅಶೋಕ ಅವರು ಇರುವುದಿಲ್ಲ. ಯಡಿಯೂರಪ್ಪ ಅವರಿಗೆ ಮಾತ್ರ ಅವಕಾಶ ಇರುತ್ತದೆ. ಪ್ರತಿ ತಂಡದಲ್ಲೂ ಐವರು ಪ್ರಮುಖ ನಾಯಕರು ಇರುತ್ತಾರೆ ಎಂದು ಬಿಜೆಪಿ ಮೂಲಗಳು ತಿಳಿಸಿವೆ.

ಮೋದಿ ಅವರು ಪ್ರಚಾರಕ್ಕೆ ಬಂದಾಗ ಅದೇ ಸಮಯದಲ್ಲಿ ರಾಜ್ಯದ ಬೇರೆ ಬೇರೆ ಭಾಗಗಳಲ್ಲೂ ಉಳಿದ ನಾಯಕರೂ ಪ್ರಚಾರದಲ್ಲಿ ತೊಡಗಿಸಿಕೊಂಡಿರಬೇಕು. ಮೋದಿ ಕಾರ್ಯಕ್ರಮದಲ್ಲಿ ಭಾಗವಹಿಸುವ ನೆಪದಲ್ಲಿ ಉಳಿದ ಕಡೆಗಳಲ್ಲಿ ಪ್ರಚಾರ ಕಾರ್ಯಕ್ಕೆ ತಡೆ ಬೀಳಬಾರದು. ಏಕಕಾಲದಲ್ಲಿ ಹೆಚ್ಚಿನ ಸಂಖ್ಯೆಯಲ್ಲಿ ಪ್ರಚಾರಕ್ಕೆ ಇಳಿಯುವ ಮೂಲಕ ಹೆಚ್ಚು ಹೆಚ್ಚು ಜನರನ್ನು ತಲುಪುವ ಕೆಲಸ ಆಗಬೇಕು. ಇಲ್ಲವಾದರೆ ಒಂದರಿಂದ ಎರಡು ಇಡೀ ದಿನ ವ್ಯರ್ಥವಾಗುತ್ತದೆ ಎಂಬುದು ಮೋದಿ ಅವರ ಚಿಂತನೆ ಎಂದೂ ಮೂಲಗಳು ಹೇಳಿವೆ.

'ಮೋದಿಯವರಿಂದ ನಾಲ್ಕು, ಅಮಿತ್ ಶಾ ಅವರಿಂದ ಆರು, ಯೋಗಿ ಆದಿತ್ಯನಾಥ ಮತ್ತು ಜೆ.ಪಿ.ನಡ್ಡಾ ಅವರಿಂದ ತಲಾ ನಾಲ್ಕು ಸಮಾವೇಶಗಳಿಗೆ ಕೋರಿಕೆ ಸಲ್ಲಿಸಿದ್ದೇವೆ. ಮೋದಿಯವರು ಎಲ್ಲಿ, ಯಾವ ಕ್ಷೇತ್ರಕ್ಕೆ ಮತ್ತು ಯಾವಾಗ ಬರಬೇಕು ಎಂಬುದನ್ನು ಅವರ ಚುನಾವಣಾ ತಂಡವೇ ತೀರ್ಮಾನಿಸುತ್ತದೆ. ಮೋದಿ ಬರುವುದರಿಂದ ಕ್ಷೇತ್ರಕ್ಕೆ ಅನುಕೂಲ ಆಗುತ್ತದೆಯೇ ಎಂಬ ಮಾಹಿತಿಯನ್ನು ಆಧರಿಸಿ ತಂಡ ನಿರ್ಧಾರ ತೆಗೆದುಕೊಳ್ಳುತ್ತದೆ. ಅವರು ಬರುವ ಮುನ್ನ, ಬಂದ ನಂತರ ಮತದಾರರ ಮೇಲೆ ಯಾವ ರೀತಿ ಪರಿಣಾಮ ಆಗಿದೆ ಎಂಬುದರ ಸಮೀಕ್ಷೆಯನ್ನು ಆ ತಂಡವೇ ನಡೆಸುತ್ತದೆ' ಎಂದು ಬಿಜೆಪಿ ಮುಖಂಡರೊಬ್ಬರು ತಿಳಿಸಿದರು.

ರಾಜ್ಯದ ಒಟ್ಟು 28 ಕ್ಷೇತ್ರಗಳಲ್ಲಿ ಮೊದಲ ಹಂತದಲ್ಲಿ ಮತದಾನ ನಡೆಯುವ ಕ್ಷೇತ್ರಗಳಿಗೆ ಆರಂಭದ ಹಂತದಲ್ಲಿ ಶೇ 70ರಷ್ಟು ಮತ್ತು ಎರಡನೇ ಹಂತದಲ್ಲಿ ಮತದಾನ ನಡೆಯುವ ಕ್ಷೇತ್ರಗಳಲಿಗೆ ಶೇ 30 ಸಮಯವನ್ನು ನಿಗದಿ ಮಾಡಲಾಗುವುದು. ಮೊದಲ ಹಂತದ ಮತದಾನ ಮುಗಿದ ಬಳಿಕ ಎರಡನೇ ಹಂತದಲ್ಲಿ ಚುನಾವಣೆ ನಡೆಯುವ ಕ್ಷೇತ್ರಗಳಿಗೆ ಶೇ 100 ಸಮಯ ನಿಗದಿ ಮಾಡಲಾಗುವುದು. ಕ್ಷೇತ್ರಕ್ಕೆ ಯಾವ ನಾಯಕರನ್ನು ಪ್ರಚಾರಕ್ಕೆ ಕರೆಸಬೇಕು ಎಂಬ ಬಗ್ಗೆ ಅಭ್ಯರ್ಥಿಗಳಿಂದಲೇ ಮಾಹಿತಿ ಪಡೆದುಕೊಳ್ಳಲಾಗುತ್ತದೆ. ಅದರ ಆಧಾರದ ಮೇಲೆ ಕಾರ್ಯಕ್ರಮವನ್ನು ರೂಪಿಸಲಾಗುತ್ತದೆ ಎಂದು ವಿವರಿಸಿದರು.

'ನಮೋ' ಮತ್ತು 'ಸರಳ್' ಆ್ಯಪ್‌ನಲ್ಲಿ ಪಕ್ಷದ ಅಧ್ಯಕ್ಷರೂ ಸೇರಿ ಸಂಬಂಧಪಟ್ಟ ಎಲ್ಲರೂ ಪ್ರತಿಯೊಂದು ಕಾರ್ಯಕ್ರಮವನ್ನು ದಾಖಲಿಸಬೇಕು. ಗ್ರಾಮ ಚಲೋ, ಕೇಂದ್ರ ಯೋಜನೆಗಳ ಫಲಾನುಭವಿಗಳ ಸಂಪರ್ಕ, ರೈತರ ಪರಿಕ್ರಮ, ಗ್ರಾಮ ಪರಿಕ್ರಮ ಯಾತ್ರೆ ಇವುಗಳ ಪ್ರಗತಿ ಮತ್ತು ಭಾಗವಹಿಸುವಿಕೆ ಮಾಹಿತಿಯನ್ನು ವರಿಷ್ಠರು ಪಡೆಯುತ್ತಾರೆ. ಈ ಎಲ್ಲ ಚಟುವಟಿಕೆಗಳೂ ಚುನಾವಣೆ ಮುಗಿಯುವವರೆಗೆ ಮುಂದುವರಿಯುತ್ತವೆ ಎಂದು ಮೂಲಗಳು ಹೇಳಿವೆ.

ಪ್ರಧಾನಿಯವರ ಒಂದೆರಡು ಸಭೆಗಳಿಗೆ ಜೆಡಿಎಸ್ ನಾಯಕರಿಗೆ ಆಹ್ವಾನ ನೀಡಲಾಗುತ್ತದೆ. ಉಳಿದಂತೆ ಬಿಜೆಪಿ–ಜೆಡಿಎಸ್ ನಾಯಕರು ಜಂಟಿಯಾಗಿ ಪ್ರಚಾರ ನಡೆಸುವ ಉದ್ದೇಶವಿದೆ

ಪಿ.ರಾಜೀವ್, ರಾಜ್ಯಪ್ರಧಾನ ಕಾರ್ಯದರ್ಶಿ, ಬಿಜೆಪಿ

ಕಣದತ್ತ ಕಿರುನೋಟ

ಅನುಭವಿ ಎದುರು ಯುವ ರಾಜಕಾರಣಿ

ಅಭ್ಯರ್ಥಿಗಳು

ವಿನೋದ ಅಸೂಟಿ
ಕಾಂಗ್ರೆಸ್

ಪ್ರಲ್ಹಾದ ಜೋಶಿ
ಬಿಜೆಪಿ

ಅನುಭವಿ ಮತ್ತು ಯುವ ರಾಜಕಾರಣಿ ನಡುವಿನ ಸೆಣಸಾಟಕ್ಕೆ ಧಾರವಾಡ ಲೋಕಸಭಾ ಕ್ಷೇತ್ರದ ಅಖಾಡಾ ಸಿದ್ಧವಾಗಿದೆ. ಬಿಜೆಪಿಯ ಹಾಲಿ ಸಂಸದ, ಕೇಂದ್ರ ಸಚಿವ ಪ್ರಲ್ಹಾದ ಜೋಶಿ ವಿರುದ್ಧ ಕಾಂಗ್ರೆಸ್‌ನ ವಿನೋದ ಅಸೂಟಿ ಕಣಕ್ಕಿಳಿದಿದ್ದಾರೆ. ಕ್ಷೇತ್ರದಲ್ಲಿ ನೆಲೆ ಕಳೆದುಕೊಂಡ ಜೆಡಿಎಸ್ ಮೈತ್ರಿಯಿಂದ ಬಿಜೆಪಿಗೆ ಅಂತಹ ಲಾಭವೇನೂ ಆಗದು. ಬಿಜೆಪಿ– ಕಾಂಗ್ರೆಸ್ ನಡುವೆ ನೇರ ಹಣಾಹಣಿ ಇದೆ.

1990ರ ದಶಕದಲ್ಲಿ ನಡೆದ ಹುಬ್ಬಳ್ಳಿಯ ಈದ್ಗಾ ಮೈದಾನ ಹೋರಾಟವು ಧಾರವಾಡ ಜಿಲ್ಲೆಯ ರಾಜಕೀಯದಲ್ಲಿ ಮಹತ್ತರ ತಿರುವು ನೀಡಿತು. ಇದು ಬಿಜೆಪಿಗೆ ಬಲ ತಂದುಕೊಟಿತ್ತು. ಇದರ ಫಲವಾಗಿ 1996ರಿಂದ ಈವರೆಗೆ ನಡೆದ ಸತತ 7 ಲೋಕಸಭಾ ಚುನಾವಣೆಯಲ್ಲಿ ಕಮಲ ಅರಳಿದೆ. ಇದರಲ್ಲಿನ 4 ಗೆಲುವು ಬ್ರಾಹ್ಮಣ ಸಮುದಾಯದ ಜೋಶಿ ಅವರ ಖಾತೆಯದ್ದು. ಇಂತಹ ಅನುಭವಿ ನೇತಾರನ ಎದುರು ಕಾಂಗ್ರೆಸ್, ಕುರುಬ ಸಮುದಾಯದ ವಿನೋದ ಅಸೂಟಿ ಅವರನ್ನು ಇದೇ ಮೊದಲ ಬಾರಿಗೆ ಲೋಕಸಭೆ ಚುನಾವಣೆ ಸ್ಪರ್ಧೆಗೆ ಇಳಿಸಿದೆ. ಪ್ರಧಾನಿ ನರೇಂದ್ರ ಮೋದಿ ಅವರ ನಾಮಬಲ, ಪಕ್ಷದ ಬೇರುಮಟ್ಟದ ಸಂಘಟನೆ ಮತ್ತು ನಾಲ್ಕು ಅವಧಿಯಲ್ಲಿ ಕೈಗೊಂಡ ಅಭಿವೃದ್ಧಿ ಕಾರ್ಯಗಳನ್ನು ಜೋಶಿ ನೆಚ್ಚಿಕೊಂಡಿದ್ದಾರೆ. ಕಾಂಗ್ರೆಸ್ ರಾಜ್ಯ ಸರ್ಕಾರ ಜಾರಿಗೆ ತಂದ ಗ್ಯಾರಂಟಿ ಯೋಜನೆ ಮತ್ತು ಜಿಲ್ಲೆಯಲ್ಲಿರುವ ಅಹಿಂದ ಮತಗಳನ್ನು ಅಸೂಟಿ ಅವಲಂಬಿಸಿದ್ದಾರೆ.

ವಿಧಾನಸಭೆ ಕ್ಷೇತ್ರಗಳ ಪಕ್ಷವಾರು ಪ್ರಾತಿನಿಧ್ಯ

ಬಿಜೆಪಿ 4 | ಕಾಂಗ್ರೆಸ್ 4

ಮತದಾರರ ಸಂಖ್ಯೆ

7.80 ಲಕ್ಷ ಪುರುಷರು | 7.79 ಲಕ್ಷ ಮಹಿಳೆಯರು | 90 ಲಿಂಗತ್ವ ಅಲ್ಪಸಂಖ್ಯಾತರು

ಒಟ್ಟು 15.60 ಲಕ್ಷ

2019	ಹೆಸರು	ಪಕ್ಷ	ಪಡೆದ ಮತಗಳು
ಗೆದ್ದವರು	ಪ್ರಲ್ಹಾದ ಜೋಶಿ	ಬಿಜೆಪಿ	6,84,837
ಸಮೀಪದ ಪ್ರತಿಸ್ಪರ್ಧಿ	ವಿನಯ ಕುಲಕರ್ಣಿ	ಕಾಂಗ್ರೆಸ್	4,79,765

ಗಣ್ಯರ ಮೊಮ್ಮಕ್ಕಳ ನಡುವೆ ಸ್ಪರ್ಧೆ

ಅಭ್ಯರ್ಥಿಗಳು

ಶ್ರೇಯಸ್ ಪಟೇಲ್
ಕಾಂಗ್ರೆಸ್

ಪ್ರಜ್ವಲ್ ರೇವಣ್ಣ
ಜೆಡಿಎಸ್–ಬಿಜೆಪಿ ಮೈತ್ರಿಕೂಟ

ಹಾಸನ ಕ್ಷೇತ್ರದಲ್ಲಿ ಮಾಜಿ ಸಚಿವ ಪುಟ್ಟಸ್ವಾಮಿಗೌಡರ ಮೊಮ್ಮಗ ಶ್ರೇಯಸ್ ಪಟೇಲ್ ಹಾಗೂ ರಾಜ್ಯಸಭಾ ಸದಸ್ಯ ಎಚ್.ಡಿ. ದೇವೇಗೌಡರ ಮೊಮ್ಮಗ ಪ್ರಜ್ವಲ್ ರೇವಣ್ಣ ನಡುವೆ ಈ ಬಾರಿ ಸ್ಪರ್ಧೆ ಇರುವುದು ವಿಶೇಷ.

ಕಾಂಗ್ರೆಸ್ ಅಭ್ಯರ್ಥಿ ಶ್ರೇಯಸ್ ವಿರುದ್ಧ ಮಾಜಿ ಸಚಿವ ಎಚ್.ಸಿ. ಶ್ರೀಕಂಠಯ್ಯ ಅವರ ಸೊಸೆ, ಶ್ರೇಯಸ್ ಅವರ ಸೋದರತ್ತೆ ರಾಜೇಶ್ವರಿ ಅವರನ್ನು ಕಣಕ್ಕಿಳಿಸುವ ಚಿಂತನೆ ನಡೆದಿದೆ. ಮಾಜಿ ಸಚಿವ ಬಿ.ಶಿವರಾಂ, ಸ್ವಪಕ್ಷದವರ ವಿರುದ್ಧವೇ ನಿರಂತರ ವಾಗ್ದಾಳಿ ನಡೆಸುತ್ತಿರುವುದು ಕಾಂಗ್ರೆಸ್ಸಿಗರಿಗೆ ತಲೆನೋವಾಗಿದೆ. ಒಗ್ಗಟ್ಟಿನಿಂದ ಕೆಲಸ ಮಾಡುವಂತೆ ಹೈಕಮಾಂಡ್ ಸೂಚಿಸಿರುವುದು, ತಾತ ಪುಟ್ಟಸ್ವಾಮಿಗೌಡರ ಹೆಸರು ಶ್ರೇಯಸ್‌ಗೆ ಅನುಕೂಲಕರ ಅಂಶ.

ಮಿತ್ರ ಪಕ್ಷ ಬಿಜೆಪಿಯಲ್ಲಿ ಅಸಮಾಧಾನ ಇರುವುದು ಪ್ರಜ್ವಲ್ ಅವರಿಗೆ ತಲೆನೋವಾಗಿದೆ. ಸಂಸದ ಸ್ಥಾನದ ಅನರ್ಹತೆಗೆ ಸಂಬಂಧಿಸಿದ ಪ್ರಕರಣದ ವಿಚಾರಣೆ ಸುಪ್ರೀಂ ಕೋರ್ಟ್‌ನಲ್ಲಿ ತೀರ್ಪು ಹೇಗೆ ಬರಲಿದೆ ಎಂಬ ಆತಂಕವೂ ಕಾಡುತ್ತಿದೆ. ಜೆಡಿಎಸ್ ಪ್ರಾಬಲ್ಯ ಹೊಂದಿರುವುದು ಹಾಗೂ ಕಡೂರಿನಲ್ಲಿ ಮಾಜಿ ಶಾಸಕ ಬೆಳ್ಳಿಪ್ರಕಾಶ್ ಬೆಂಬಲ ದೊರೆತಿರುವುದು ಪ್ರಜ್ವಲ್‌ಗೆ ಅನುಕೂಲಕರವಾಗಿದೆ.

ವಿಧಾನಸಭೆ ಕ್ಷೇತ್ರಗಳ ಪಕ್ಷವಾರು ಪ್ರಾತಿನಿಧ್ಯ

ಜೆಡಿಎಸ್ 4 | ಬಿಜೆಪಿ 2 | ಕಾಂಗ್ರೆಸ್ 2

ಮತದಾರರ ಸಂಖ್ಯೆ

8,58,661 ಪುರುಷರು | 8,66,206 ಮಹಿಳೆಯರು | 41 ಲಿಂಗತ್ವ ಅಲ್ಪಸಂಖ್ಯಾತರು

ಒಟ್ಟು 17,24,908

2019	ಹೆಸರು	ಪಕ್ಷ	ಪಡೆದ ಮತಗಳು
ಗೆದ್ದವರು	ಪ್ರಜ್ವಲ್ ರೇವಣ್ಣ	ಜೆಡಿಎಸ್	6,76,606
ಸಮೀಪದ ಪ್ರತಿಸ್ಪರ್ಧಿ	ಎ.ಮಂಜು	ಬಿಜೆಪಿ	5,35,382

ಗೆಲುವಿಗಾಗಿ 'ಸೋತವರ' ಹೋರಾಟ

ಅಭ್ಯರ್ಥಿಗಳು

ವಿಶ್ವೇಶ್ವರ ಹೆಗಡೆ ಕಾಗೇರಿ
ಬಿಜೆಪಿ

ಡಾ.ಅಂಜಲಿ ನಿಂಬಾಳ್ಕರ್
ಕಾಂಗ್ರೆಸ್

ಉತ್ತರ ಕನ್ನಡ ಲೋಕಸಭಾ ಕ್ಷೇತ್ರಕ್ಕೆ ಬಿಜೆಪಿ ತನ್ನ ಸಾಂಪ್ರದಾಯಿಕ ಅಭ್ಯರ್ಥಿ ಅನಂತಕುಮಾರ ಹೆಗಡೆ ಅವರನ್ನು ಏಳು ಅವಧಿಯ ಬಳಿಕ ಬದಲಿಸಿ ವಿಧಾನಸಭೆ ಮಾಜಿ ಅಧ್ಯಕ್ಷ ವಿಶ್ವೇಶ್ವರ ಹೆಗಡೆ ಕಾಗೇರಿ ಅವರನ್ನು ಕಣಕ್ಕಿಳಿಸಿದೆ. ಕಾಂಗ್ರೆಸ್ ಪಾಳಯದಿಂದ ಖಾನಾಪುರದ ಮಾಜಿ ಶಾಸಕಿ ಡಾ.ಅಂಜಲಿ ನಿಂಬಾಳ್ಕರ ಸ್ಪರ್ಧೆಗಿಳಿದಿದ್ದಾರೆ. ಕ್ಷೇತ್ರದಲ್ಲಿ 2004ರಿಂದ ಬಿಜೆಪಿ ಪ್ರಾಬಲ್ಯ ಮೆರೆದಿದೆ. ಎರಡೂ ಪಕ್ಷದ ಅಭ್ಯರ್ಥಿಗಳು ಕಳೆದ ವಿಧಾನಸಭೆ ಚುನಾವಣೆಯಲ್ಲಿ ಸೋಲು ಅನುಭವಿಸಿದ್ದರೂ ಪಕ್ಷ ಮತ್ತೊಂದು ಅವಕಾಶ ಒದಗಿಸಿದೆ. ಶಿರಸಿ ಕ್ಷೇತ್ರದಲ್ಲಿ ಕಾಂಗ್ರೆಸ್ ಎದುರು ವಿಶ್ವೇಶ್ವರ ಹೆಗಡೆ ಕಾಗೇರಿ 8,712 ಮತಗಳಿಂದ ಪರಾಭವಗೊಂಡಿದ್ದರೆ, ಖಾನಾಪುರದಲ್ಲಿ ಡಾ.ಅಂಜಲಿ ನಿಂಬಾಳ್ಕರ ಅವರು ಬಿಜೆಪಿ ಎದುರು 54 ಸಾವಿರ ಮತಗಳ ಅಂತರದ ಸೋಲುಂಡಿದ್ದರು.

ನರೇಂದ್ರ ಮೋದಿ ಅಲೆಯನ್ನೇ ಬಿಜೆಪಿ ಗೆಲುವಿಗೆ ನೆಚ್ಚಿಕೊಂಡಿದೆ. ಅನುಭವಿ ರಾಜಕಾರಣಿಯನ್ನೇ ಕಣಕ್ಕಿಳಿಸಿದೆ. ಆದರೆ, ಸತತವಾಗಿ ಗೆದ್ದ ಅನಂತಕುಮಾರ ಅವರಿಗೆ ಟಿಕೆಟ್ ಕೈತಪ್ಪಿದ್ದು ಪಕ್ಷದ ವಲಯದಲ್ಲಿ ಅಸಮಾಧಾನಕ್ಕೆ ಕಾರಣವಾಗಿದೆ. ಡಾ. ಅಂಜಲಿ ಇದೇ ಕ್ಷೇತ್ರದವರಾದರೂ ಉತ್ತರ ಕನ್ನಡ ಜಿಲ್ಲೆಯವರಲ್ಲ ಎಂಬ ಕೂಗು ಕಾಂಗ್ರೆಸ್ ವಲಯದಲ್ಲೇ ಎದ್ದಿದೆ. ಎರಡನೇ ಸ್ತರದ ಹಲವು ಮುಖಂಡರು ಅಪಸ್ವರ ಎತ್ತಿದ್ದಾರೆ.

ವಿಧಾನಸಭೆ ಕ್ಷೇತ್ರಗಳ ಪಕ್ಷವಾರು ಪ್ರಾತಿನಿಧ್ಯ

ಕಾಂಗ್ರೆಸ್ 5 | ಬಿಜೆಪಿ 3

ಮತದಾರರ ಸಂಖ್ಯೆ

8,15,599 ಪುರುಷರು | 8,07,242 ಮಹಿಳೆಯರು | 16 ಲಿಂಗತ್ವ ಅಲ್ಪಸಂಖ್ಯಾತರು

ಒಟ್ಟು 16,22,857

2019	ಹೆಸರು	ಪಕ್ಷ	ಪಡೆದ ಮತಗಳು
ಗೆದ್ದವರು	ಅನಂತಕುಮಾರ ಹೆಗಡೆ	ಬಿಜೆಪಿ	7,86,042
ಸಮೀಪದ ಪ್ರತಿಸ್ಪರ್ಧಿ	ಆನಂದ್ ಅಸ್ನೋಟಿಕರ್	ಜೆಡಿಎಸ್	3,06,393

ಯುಸಿಸಿ: ಚುನಾವಣೆ ಹೊತ್ತಿನ ಗಿಮಿಕ್

‘ಏಕರೂಪ ನಾಗರಿಕ ಸಂಹಿತೆ’ಯನ್ನು ಜಾರಿ ಮಾಡುವ ಮೂಲಕ ದೇಶದಲ್ಲಿ ಧರ್ಮ ಆಧಾರಿತ ತಾರತಮ್ಯವನ್ನು ತೊಡೆದು ಹಾಕುತ್ತೇವೆ ಎನ್ನುವುದನ್ನು ಬಿಜೆಪಿ ಚುನಾವಣೆ ಹೊತ್ತಿನಲ್ಲಿ ಹೇಳುತ್ತಲೇ ಇರುತ್ತದೆ. ಹೀಗೆ ಹೇಳುವಾಗಲೆಲ್ಲಾ ಮುಸ್ಲಿಂ ಸಮುದಾಯದ ವೈಯಕ್ತಿಕ ಕಾನೂನುಗಳನ್ನು ತೊಡೆದು ಹಾಕಿ, ಅವರನ್ನು ‘ದಾರಿಗೆ ತರುವ’ ಕುರಿತ ಮಾತುಗಳನ್ನು ಆಡುತ್ತದೆ. ನಿಜದಲ್ಲಿ ಯುಸಿಸಿ ಜಾರಿಯಾದರೆ ಮುಸ್ಲಿಮರದ್ದು ಮಾತ್ರವಲ್ಲ ಹಿಂದೂ, ಜೈನ, ಪಾರ್ಸಿ, ಕ್ರೈಸ್ತ... ಹೀಗೆ ಎಲ್ಲ ಧರ್ಮದವರ ವೈಯಕ್ತಿಕ ಕಾನೂನುಗಳೂ ರದ್ದಾಗುತ್ತವೆ. ಈ ವಿಚಾರ ಮಾತ್ರ ಜನರಿಗೆ ಅರಿವಾಗದಂತೆ ನೋಡಿಕೊಳ್ಳಲಾಗಿದೆ. ಯುಸಿಸಿ ಬಿಜೆಪಿಯ ಮತ ಗಳಿಸುವ ತಂತ್ರವೂ ಹೌದು

• ಸುಕೃತ ಎಸ್.

ಮತ್ತೊಂದು ಲೋಕಸಭಾ ಚುನಾವಣೆ ಬಂದಿದೆ. ಇದರ ಬೆನ್ನಿಗೇ ‘ಏಕರೂಪ ನಾಗರಿಕ ಸಂಹಿತೆ’ಯ (ಯುಸಿಸಿ) ಮತ್ತೊಂದು ಸುತ್ತಿನ ಚರ್ಚೆಗಳು ಆರಂಭಗೊಂಡಿವೆ. ಆದರೆ, ಈ ವಿಷಯವು ಚರ್ಚೆಗಷ್ಟೇ ಈ ಬಾರಿ ಸೀಮಿತವಾಗಿಲ್ಲ. ಕೆಲವು ರಾಜ್ಯ ಸರ್ಕಾರಗಳು ಯುಸಿಸಿ ಜಾರಿಗೆ ಮುಂದಾಗಿವೆ. ಉತ್ತರಾಖಂಡದಲ್ಲಿ ಯುಸಿಸಿ ಜಾರಿಯಾಗಿದೆ. ಯುಸಿಸಿ ಜಾರಿಯಲ್ಲಿ ‘ಉತ್ತರಾಖಂಡ ಮಾದರಿ’ಯು ಕೆಲವು ಬಿಜೆಪಿ ನೇತೃತ್ವದ ಸರ್ಕಾರಗಳಿಗೆ ಉತ್ಸಾಹವನ್ನೂ ತುಂಬಿದೆ. ಇದೇ ಹೊತ್ತಿನಲ್ಲಿ ದೇಶದ ಕೆಲವು ಧಾರ್ಮಿಕ ಅಲ್ಪಸಂಖ್ಯಾತರಲ್ಲಿ ಆತಂಕವನ್ನೂ ಸೃಷ್ಟಿಸಿದೆ.

‘ಪ್ರಧಾನಿ ನರೇಂದ್ರ ಮೋದಿ ಅವರು ಮೂರನೇ ಬಾರಿಗೆ ಪ್ರಧಾನಿಯಾದರೆ ಯುಸಿಸಿ ಜಾರಿ ಖಚಿತ’ ಎನ್ನುವ ಮಾತುಗಳನ್ನು ಬಿಜೆಪಿಯ ಹಲವು ನಾಯಕರು ಈಗಾಗಲೇ ಹೇಳಿದ್ದಾರೆ. ಯುಸಿಸಿ ಜಾರಿ ಎನ್ನುವುದು ಬಿಜೆಪಿ ಪ್ರಣಾಳಿಕೆಯಲ್ಲಿ ಹಿಂದಿನಿಂದಲೂ ಸ್ಥಾನ ಪಡೆದಿರುವ ವಿಚಾರ. ಲೋಕಸಭೆ ಚುನಾವಣೆಯೇ ಇರಲಿ, ವಿಧಾನಸಭೆ ಚುನಾವಣೆಯೇ ಇರಲಿ ಬಿಜೆಪಿ ನಾಯಕರು ಯುಸಿಸಿ ಕುರಿತ ಚರ್ಚೆಗಳನ್ನು ಮುಂದಿಡುತ್ತಾರೆ. ಸರ್ಕಾರ ರಚಿಸಿದರೆ ಯುಸಿಸಿ ಜಾರಿ ಮಾಡುವುದಾಗಿಯೂ ಹೇಳುತ್ತಾರೆ. ಆದರೆ, ಯುಸಿಸಿಯ ನಿಯಮಗಳು ಯಾವ ರೀತಿ ಇರಲಿವೆ ಎನ್ನುವ ಸ್ಪಷ್ಟ ನೀಲನಕ್ಷೆಯನ್ನು ಮಾತ್ರ ಕೇಂದ್ರ ಸರ್ಕಾರವಾಗಲಿ, ಯುಸಿಸಿ ಜಾರಿಗೆ ಮುಂದಾಗಿರುವ ರಾಜ್ಯ ಸರ್ಕಾರಗಳಾಗಲಿ ಜನರ ಮುಂದಿಡುತ್ತಿಲ್ಲ. ಇದು ಚುನಾವಣೆಯ ಹೊತ್ತಿನ ಒಂದು ಗಿಮಿಕ್ ಎಂದಷ್ಟೇ ಕಾಣುತ್ತಿದೆ. ಯುಸಿಸಿ ಒಂದು ಮಟ್ಟಿಗೆ ಮತಧ್ರುವೀಕರಣಕ್ಕೆ ಕಾರಣವಾಗಬಹುದು.

ಯುಸಿಸಿ ಕುರಿತು ಇತ್ತೀಚೆಗೆ ಅಸ್ಸಾಂನಲ್ಲಿ ಹಲವು ಬೆಳವಣಿಗೆಗಳು ನಡೆದವು. ಬಹುಪತ್ನಿತ್ವ ತಡೆ ಮಸೂದೆಯನ್ನು ಅಧಿವೇಶನದಲ್ಲಿ ಮಂಡಿಸುವುದಾಗಿ ಮುಖ್ಯಮಂತ್ರಿ ಹಿಮಂತ್ ಬಿಸ್ವ ಶರ್ಮಾ ಹೇಳಿದ್ದರು. ಬಹುಪತ್ನಿತ್ವವು ಕ್ರಿಮಿನಲ್ ಅಪರಾಧ ಎಂದು ಈ ಮಸೂದೆಯಲ್ಲಿ ಹೇಳಲಾಗಿತ್ತು. ‘ಯುಸಿಸಿ ಜಾರಿಗೆ ಅಸ್ಸಾಂ ಸರ್ಕಾರವು ಮೊದಲ ಹೆಜ್ಜೆ ಇರಿಸಿದೆ’ ಎಂದೇ ಈ ಕ್ರಮವನ್ನು ವಿಶ್ಲೇಷಿಸಲಾಗಿತ್ತು. ನಂತರ, ಯುಸಿಸಿ ಮಸೂದೆಯನ್ನು ಅಧಿವೇಶನದಲ್ಲಿ ಮಂಡಿಸಲು ನಿರ್ಧರಿಸಲಾಯಿತು. ಆದರೆ, ಈ ಎರಡೂ ಮಸೂದೆಗಳನ್ನು ಸರ್ಕಾರವು ಅಧಿವೇಶನದಲ್ಲಿ ಮಂಡಿಸಲಿಲ್ಲ. ‘ಸರ್ಕಾರವು ಯುಸಿಸಿ ಕುರಿತು, ಬಹುಪತ್ನಿತ್ವವನ್ನು ತೆಗೆದು ಹಾಕುವ ಕುರಿತು ಮಾತನಾಡುತ್ತದೆ ಅಷ್ಟೆ. ಆದರೆ, ಈ ಬಗ್ಗೆ ಯಾವುದೇ ಮಸೂದೆಯನ್ನಾಗಲಿ, ಸುಗ್ರೀವಾಜ್ಞೆಯನ್ನಾಗಲಿ ಹೊರಡಿಸಿಲ್ಲ. ಇವು ಮುಸ್ಲಿಮರನ್ನು ತಾರತಮ್ಯದಿಂದ ನೋಡುವ, ಚುನಾವಣೆ ಹೊತ್ತಿನ ಘೋಷಣೆಗಳಷ್ಟೆ’ ಎಂದು ವಿರೋಧ ಪಕ್ಷಗಳು ದೂರಿದವು.

ಯುಸಿಸಿ ಜಾರಿಗೆ ಸಮಿತಿಯೊಂದನ್ನು ರಚಿಸುವ ಕುರಿತು ಗುಜರಾತ್‌ನ ಬಿಜೆಪಿ ನೇತೃತ್ವದ ಸರ್ಕಾರ ನಿರ್ಧಾರ ತೆಗೆದುಕೊಂಡಿದೆಯಷ್ಟೆ. ಉತ್ತರಾಖಂಡದಲ್ಲಿ ಮಾತ್ರವೇ ಯುಸಿಸಿ ಜಾರಿಯಾಗಿದೆ. ಕೆಲವು ನಿಯಮಗಳನ್ನೂ ಮಾಡಲಾಗಿದೆ. ಮದುವೆ, ವಿಚ್ಛೇದನ, ವಾರಸುದಾರಿಕೆ, ಆಸ್ತಿ ಕುರಿತ ವಿಚಾರಗಳಲ್ಲಿ ಯುಸಿಸಿ ಅನ್ವಯವಾಗುತ್ತದೆ ಎಂದೂ ಸರ್ಕಾರ ಹೇಳಿದೆ. ಆದರೆ, ಕಾನೂನುಗಳನ್ನು ಹೇಗೆ ರೂಪಿಸಲಾಗಿದೆ ಎಂಬುದನ್ನು ಮಾತ್ರ ವಿವರಿಸಲಾಗಿಲ್ಲ. ಯುಸಿಸಿಯು ಮಹಿಳೆಯರಿಗೆ ಸ್ವಾತಂತ್ರ್ಯವನ್ನು ತಂದುಕೊಡುತ್ತದೆ ಎಂದು ಸರ್ಕಾರ ಹೇಳಿದೆ. ಆದರೆ, ಸಹಜೀವನ ನಡೆಸುವ ಜೋಡಿಗಳು ನೋಂದಣಿ ಮಾಡಿಕೊಳ್ಳಬೇಕು ಎಂದು ಹೇಳುತ್ತದೆ. ಈ ನಿಯಮವು ಹೇಗೆ ಮಹಿಳಾ ಪರವಾಗುತ್ತದೆ ಎನ್ನುವುದು ಮಹಿಳಾಪರ ಹೋರಾಟಗಾರರ ಪ್ರಶ್ನೆ. ಕರ್ನಾಟಕ, ಹರಿಯಾಣ, ಮಹಾರಾಷ್ಟ್ರ, ಉತ್ತರ ಪ್ರದೇಶ ಇಲ್ಲೆಲ್ಲಾ ವಿಧಾನಸಭಾ ಚುನಾವಣೆಯ ವೇಳೆಯಲ್ಲಿ ಬಿಜೆಪಿಯು ಯುಸಿಸಿ ಕುರಿತು ಚರ್ಚೆ ಆರಂಭಿಸಿತ್ತು. ಆದರೆ, ಬಿಜೆಪಿ ಚುನಾವಣೆ ಗೆದ್ದು ಸರ್ಕಾರ ರಚಿಸಿದ ರಾಜ್ಯಗಳಲ್ಲಿ ಈ ದಿಕ್ಕಿನಲ್ಲಿ ಯಾವುದೇ ಕ್ರಮವನ್ನು ಕೈಗೊಂಡಿಲ್ಲ.

ಮತ ಧ್ರುವೀಕರಣ ಯತ್ನವಷ್ಟೆ: ಯುಸಿಸಿ ಕುರಿತು ಬಿಜೆಪಿಯು ಯಾವುದೇ ಸ್ಪಷ್ಟತೆಯನ್ನು ಜನರಿಗೆ ನೀಡಿಲ್ಲ. ಯುಸಿಸಿ ಕುರಿತು ಮಾತನಾಡುತ್ತಾ, ಮುಸ್ಲಿಂ ದ್ವೇಷವನ್ನು ಪೋಷಿಸುತ್ತಾ, ಜನರನ್ನು ಗೊಂದಲದಲ್ಲಿರಿಸುತ್ತಾ, ಹಿಂದೂಗಳ ಮತಗಳನ್ನು ಸೆಳೆಯುವುದು ಬಿಜೆಪಿಯ ತಂತ್ರಗಾರಿಕೆ. ಅತ್ತ ಹಿಂದೂಗಳು ಮುಸ್ಲಿಂ ದ್ವೇಷವನ್ನು ತಲೆಯಲ್ಲಿಟ್ಟುಕೊಳ್ಳಬೇಕು. ಇತ್ತ ಮುಸ್ಲಿಂ ಸಮುದಾಯವು ಭಯ, ಆತಂಕದಲ್ಲಿರಬೇಕು. ಹಲವು ವರ್ಷಗಳಿಂದ ಬಿಜೆಪಿಯು ಇದನ್ನೇ ಮಾಡುತ್ತಿದೆ ಎಂದು ವಿರೋಧ ಪಕ್ಷಗಳು ಹಲವು ಬಾರಿ ದೂರಿವೆ. ನಿರುದ್ಯೋಗ, ಬೆಲೆ ಏರಿಕೆಯಂಥ ಸಮಸ್ಯೆಗಳನ್ನು ಜನರು ದಿನನಿತ್ಯ ಎದುರಿಸುತ್ತಿದ್ದಾರೆ. ಇಂಥ ಸಂದರ್ಭದಲ್ಲಿ ಕೋಮು ಧ್ರುವೀಕರಣದ ವಾತಾವರಣ ಸೃಷ್ಟಿಸುವುದು ಬಿಜೆಪಿಗೆ ಅನುಕೂಲವಾಗುವ ಬದಲು ಮುಳುವಾಗುವುದೇ ಹೆಚ್ಚು ಎನ್ನುವುದು ರಾಜಕೀಯ ವಿಶ್ಲೇಷಕರ ಅಭಿಪ್ರಾಯ.

ಕರಡು ಸಂವಿಧಾನ ರಚನಾ ಸಭೆಯಲ್ಲಿ ಕೇಳಿಸಿದ್ದು...

ಭಾರತವು ಸಂಪೂರ್ಣವಾಗಿ ಸಾಕ್ಷರತೆ ಹೊಂದಬೇಕು, ಜನರು ಆಧುನಿಕಗೊಳ್ಳಬೇಕು, ಅವರ ಆರ್ಥಿಕ ಸ್ಥಿತಿಗಳು ಸುಧಾರಿಸಬೇಕು... ದೇಶವು ಇಂಥ ಸ್ಥಿತಿಗೆ ತಲುಪಿದಾಗ ಏಕರೂಪ ನಾಗರಿಕ ಸಂಹಿತೆಯನ್ನು ಜಾರಿಗೊಳಿಸಿ

ಹುಸೇನ್ ಇಮಾಮ್, ಸಂವಿಧಾನ ರಚನಾ ಸಭೆಯಲ್ಲಿ ಬಿಹಾರ ಪ್ರತಿನಿಧಿ

ಏಕರೂಪ ನಾಗರಿಕ ಸಂಹಿತೆಯನ್ನು ತರಲು ಸರ್ಕಾರ ಪ್ರಯತ್ನಿಸಬೇಕು ಎಂದಷ್ಟೇ ಹೇಳಲಾಗಿದೆ. ಇಂಥದೊಂದು ಕಾನೂನು ಇದೆ ಎಂದ ಮಾತ್ರಕ್ಕೆ ಸರ್ಕಾರವು ಅದನ್ನು ಜಾರಿಗೊಳಿಸಬೇಕು ಎಂದೇನಿಲ್ಲ. ತಾನು ಈ ಏಕರೂಪ ನಾಗರಿಕ ಸಂಹಿತೆಗೆ ಒಳಪಡುತ್ತೇನೆ ಎಂದು ವ್ಯಕ್ತಿಯು ಘೋಷಿಸಿಕೊಂಡರೆ ಅಂಥವರನ್ನು ಈ ಕಾನೂನಿಗೆ ಒಳಪಡಿಸುವ ಕಾರ್ಯವನ್ನು ಭವಿಷ್ಯದ ಸರ್ಕಾರಗಳು ನಡೆಸಬಹುದು. ಇದು ಏಕರೂಪ ನಾಗರಿಕ ಸಂಹಿತೆಯ ಜಾರಿಯ ಮೊದಲ ಹೆಜ್ಜೆಯಾಗಲಿದೆ. ಜೊತೆಗೆ ಅದು ಸಂಪೂರ್ಣ ಸ್ವಯಂಪ್ರೇರಿತ ಆಗಿರಬೇಕು. ಇದನ್ನು ಮಾದರಿ ನಡೆ ಎನ್ನಲಾಗದು, ಆದರೆ ಸಂಸತ್ತು ಈ ವ್ಯವಸ್ಥೆಯನ್ನು ಅನುಸರಿಸಬಹುದು

ಬಿ. ಆರ್. ಅಂಬೇಡ್ಕರ್, ಸಂವಿಧಾನ ಕರಡು ರಚನಾ ಸಮಿತಿಯ ಅಧ್ಯಕ್ಷ

ಒಂದೇ ಮತಕ್ಕಾಗಿ ಅಧಿಕಾರಿಗಳ 40 ಕಿ.ಮೀ. ಕಾಲ್ನಡಿಗೆ

ಇಟಾನಗರ (ಪಿಟಿಐ): ಅರುಣಾಚಲ ಪ್ರದೇಶದ ಚೀನಾ ಗಡಿ ಬಳಿಯ ಮಾಲೋಗಮ್ ಗ್ರಾಮದಲ್ಲಿರುವ ಮಹಿಳೆಯೊಬ್ಬರ ಮತದಾನಕ್ಕಾಗಿ ಚುನಾವಣಾ ಅಧಿಕಾರಿಗಳ ತಂಡವು ಏಪ್ರಿಲ್ 18ರಂದು ಕಾಲ್ನಡಿಗೆಯಲ್ಲೇ 40 ಕಿ.ಮೀ. ಬೆಟ್ಟಗುಡ್ಡಗಳ ದುರ್ಗಮ ಹಾದಿಯನ್ನು ಸವೆಸಲಿದೆ.

44 ವರ್ಷದ ಸೊಕೇಲಾ ತಯಾಂಗ್ ಅವರೇ ಈ ಗ್ರಾಮದ ಏಕೈಕ ಮತದಾರರು.

‘ಎಷ್ಟು ಮತದಾರರು ಇದ್ದಾರೆ ಎನ್ನುವುದು ಮುಖ್ಯವಲ್ಲ. ಪ್ರತಿಯೊಬ್ಬ ಪ್ರಜೆಯೂ ತಮ್ಮ ಹಕ್ಕು ಚಲಾಯಿಸುವುದು ಮುಖ್ಯ. ಸೊಕೇಲಾ ಅವರ ಮತವು ನಮ್ಮ ಬದ್ಧತೆಗೆ ಸಾಕ್ಷಿ’ ಎಂದು ಮುಖ್ಯ ಚುನಾವಣಾ ಅಧಿಕಾರಿ ಪವನ್ ಕುಮಾರ್ ಸೈನ್ ತಿಳಿಸಿದರು.

ಮಾಲೋಗಮ್ ಗ್ರಾಮದಲ್ಲಿ ಕೆಲವೇ ಕುಟುಂಬಗಳು ನೆಲೆಸಿವೆ. ಆದರೆ ಸೊಕೇಲಾ ಅವರೊಬ್ಬರೇ ಮತದಾರರ ಪಟ್ಟಿಯಲ್ಲಿ ಹೆಸರು ನೋಂದಾಯಿಸಿಕೊಂಡಿದ್ದಾರೆ ಎಂದೂ ತಿಳಿಸಿದರು.

ಸ್ಥಾನ ಹಂಚಿಕೆ ಅಂತಿಮವಾಗುವ ಮುನ್ನವೇ ಅಭ್ಯರ್ಥಿಗಳ ಘೋಷಿಸಿದ ಉದ್ಧವ್ ಬಣ

ಶಿವಸೇನಾ ಪಟ್ಟಿ: ಎಂವಿಎಯಲ್ಲಿ ಬಿಕ್ಕಟ್ಟು?

ಪ್ರಜಾವಾಣಿ ವಾರ್ತೆ

ಮುಂಬೈ: ಉದ್ಧವ್ ಠಾಕ್ರೆ ನೇತೃತ್ವದ ಶಿವಸೇನಾ (ಯುಬಿಟಿ) ಬುಧವಾರ ಮಹಾರಾಷ್ಟ್ರದ 17 ಲೋಕಸಭಾ ಕ್ಷೇತ್ರಗಳಿಗೆ ಅಭ್ಯರ್ಥಿಗಳನ್ನು ಘೋಷಿಸುವುದರೊಂದಿಗೆ ಮಹಾವಿಕಾಸ ಆಘಾಡಿ (ಎಂವಿಎ) ಕೂಟದಲ್ಲಿ ಬಿಕ್ಕಟ್ಟು ತಲೆದೋರಿದೆ. ವಿರೋಧ ಪಕ್ಷಗಳ ಎಂವಿಎ ಕೂಟದಲ್ಲಿರುವ ಎನ್‌ಸಿಪಿ (ಶರದ್ ಪವಾರ್ ಬಣ), ಕಾಂಗ್ರೆಸ್ ಜತೆಗೆ ಸ್ಥಾನ ಹಂಚಿಕೆ ಅಂತಿಮವಾಗುವ ಮುನ್ನವೇ ಶಿವಸೇನಾ (ಯುಬಿಟಿ) ಉಮೇದುವಾರರನ್ನು ಘೋಷಿಸಿದೆ.



ಸಂಜಯ್ ನಿರುಪಮ್

ಮುಂಬೈನ ನಾಲ್ಕು ಕ್ಷೇತ್ರಗಳಿಗೆ ಶಿವಸೇನಾ (ಯುಬಿಟಿ) ಉಮೇದುವಾರರನ್ನು ಘೋಷಿಸಿದೆ. ಅವುಗಳಲ್ಲಿ ಸಂಜಯ್ ನಿರುಪಮ್ ಕಣ್ಣು ನೆಟ್ಟಿದ್ದ ಮುಂಬೈ ವಾಯವ್ಯ ಕ್ಷೇತ್ರ ಹಾಗೂ ಮುಂಬೈ ಕಾಂಗ್ರೆಸ್ ಅಧ್ಯಕ್ಷೆ ಪ್ರೊ.ವರ್ಷಾ ಗಾಯಕವಾಡ್ ಅವರು ಸ್ಪರ್ಧಿಸಬೇಕು ಎಂದು ಬಯಸಿದ್ದ ಮುಂಬೈ ದಕ್ಷಿಣ ಮಧ್ಯ ಕ್ಷೇತ್ರಗಳೂ ಸೇರಿವೆ. ಸಾಂಗ್ಲಿ, ಠಾಣೆ, ರತ್ನಗಿರಿ ಸಿಂಧುದುರ್ಗ ಸೇರಿದಂತೆ ಹಲವು ಕ್ಷೇತ್ರಗಳಲ್ಲಿ ಇಂಥ ಬಿಕ್ಕಟ್ಟು ಉಂಟಾಗಿದೆ.

‘ಕೆಲವು ಕ್ಷೇತ್ರಗಳ ಕುರಿತು ಇನ್ನೂ ಮಾತುಕತೆ ಅಂತಿಮಗೊಂಡಿರಲಿಲ್ಲ. ಅಷ್ಟರಲ್ಲಿಯೇ ಶಿವಸೇನಾ (ಯುಬಿಟಿ) ಅಭ್ಯರ್ಥಿಗಳನ್ನು ಘೋಷಿಸಿದೆ. ಇದು ಸರಿಯಲ್ಲ’ ಎಂದು ಕಾಂಗ್ರೆಸ್ ಸಂಸದೀಯ ಪಕ್ಷದ ನಾಯಕ ಬಾಲಾಸಾಹೇಬ್ ಥೋರಟ್ ಆಕ್ಷೇಪಿಸಿದ್ದಾರೆ. ಶಿವಸೇನಾ (ಯುಬಿಟಿ) ಮೈತ್ರಿ ಧರ್ಮ ಪಾಲಿಸಿದ್ದರೆ ಸರಿಯಾಗಿರುತ್ತಿತ್ತು’ ಎಂದು ವಿಧಾನಸಭೆಯ ವಿರೋಧ ಪಕ್ಷದ ನಾಯಕ ವಿಜಯ್ ವಡೆಟ್ಟೀವಾರ್ ಹೇಳಿದ್ದಾರೆ.

ಈ ನಡುವೆ, ಕಾಂಗ್ರೆಸ್ ಮುಖಂಡ ಹಾಗೂ ಲೋಕಸಭಾ ಚುನಾವಣೆಯ ಟಿಕೆಟ್ ಆಕಾಂಕ್ಷಿ ಸಂಜಯ್ ನಿರುಪಮ್ ಅವರು ಶಿವಸೇನಾ (ಯುಬಿಟಿ) ಮತ್ತು ಸ್ಥಾನ ಹಂಚಿಕೆ ಮಾತುಕತೆಯಲ್ಲಿ ತೊಡಗಿದ್ದ ತಮ್ಮದೇ ಪಕ್ಷದ ಮುಖಂಡರ ವಿರುದ್ಧ ಬಹಿರಂಗವಾಗಿ ವಾಗ್ದಾಳಿ ನಡೆಸಿದ್ದು, ಪಕ್ಷಕ್ಕೆ ಎಚ್ಚರಿಕೆಯ ಸಂದೇಶ ರವಾನಿಸಿದ್ದಾರೆ.

‘ನಾನು ಹೆಚ್ಚೆಂದರೆ ಇನ್ನು ಒಂದು ವಾರ ಕಾದು ನೋಡುತ್ತೇನೆ. ನಂತರ ನನ್ನ ನಿರ್ಧಾರ ಪ್ರಕಟಿಸುತ್ತೇನೆ. ನಾನು ಆಯ್ಕೆಗಳೇ ಇಲ್ಲದ ಸ್ಥಿತಿಯಲ್ಲಿಲ್ಲ. ಎಲ್ಲ ಆಯ್ಕೆಗಳೂ ನನಗೆ ಮುಕ್ತವಾಗಿವೆ’ ಎಂದು ಸಂಜಯ್ ನಿರುಪಮ್ ತಮ್ಮ ಪಕ್ಷದ ವರಿಷ್ಠರಿಗೆ ಗಡುವು ನೀಡಿದ್ದಾರೆ.

ಮುಖ್ಯಮಂತ್ರಿ ಶಿಂದೆ ಬಣದಲ್ಲಿರುವ ಗಜಾನನ ಕೀರ್ತಿಕರ್ ಅವರ ಮಗ ಅಮೋಲ್ ಕೀರ್ತಿಕರ್ ಅವರಿಗೆ ಶಿವಸೇನಾ (ಯುಬಿಟಿ) ಉತ್ತರ ಮುಂಬೈನ ಟಿಕೆಟ್ ನೀಡಿರುವುದನ್ನೂ ಸಂಜಯ್ ನಿರುಪಮ್ ಟೀಕಿಸಿದ್ದಾರೆ. ಕೀರ್ತಿಕರ್ ಅವರನ್ನು ‘ಖಿಚಡಿ ಚೋರ್’ ಎಂದು ಕರೆದಿರುವ ಸಂಜಯ್, ‘ಶಿವಸೇನಾವು ಖಿಚಡಿ ಚೋರ್‌ಗೆ ಟಿಕೆಟ್ ನೀಡಿದೆ. ನಾವು ಖಿಚಡಿ ಚೋರ್ ಅಭ್ಯರ್ಥಿಗಳಿಗಾಗಿ ಕೆಲಸ ಮಾಡುವುದಿಲ್ಲ’ ಎಂದು ಅವರು ವಾಗ್ದಾಳಿ ನಡೆಸಿದ್ದಾರೆ. ‘ಮುಂಬೈನಲ್ಲಿ ಆರು ಲೋಕಸಭಾ ಸ್ಥಾನಗಳಿದ್ದು, ಐದರಲ್ಲಿ ಶಿವಸೇನಾದ ಅಭ್ಯರ್ಥಿಗಳೇ ಸ್ಪರ್ಧಿಸುತ್ತಿದ್ದಾರೆ. ದಾನ ಮಾಡಿದಂತೆ ಒಂದೇ ಒಂದು ಸ್ಥಾನವನ್ನು ಕಾಂಗ್ರೆಸ್‌ಗೆ ಬಿಟ್ಟುಕೊಟ್ಟಿದ್ದಾರೆ ಎಂದು ಅವರು ಆಕ್ರೋಶ ವ್ಯಕ್ತಪಡಿಸಿದ್ದಾರೆ.

ಇನ್ನೊಂದೆಡೆ, ವಿಧಾನ ಪರಿಷತ್‌ನ ವಿರೋಧ ಪಕ್ಷದ ನಾಯಕ ಅಂಬಾದಾಸ್ ದಾನ್ವೆ ತಮಗೆ ಔರಂಗಾಬಾದ್ ಕ್ಷೇತ್ರದ ಟಿಕೆಟ್ ನೀಡದಿರುವುದಕ್ಕೆ ಶಿವಸೇನಾ (ಯುಬಿಟಿ) ಕುರಿತು ಅಸಮಾಧಾನಗೊಂಡಿದ್ದಾರೆ ಎನ್ನಲಾಗಿದೆ. ಅವರ ಬದಲಿಗೆ ಪಕ್ಷವು ಐದು ಬಾರಿಯ ಸಂಸದ, ಕಳೆದ ಬಾರಿ ಪರಾಭವಗೊಂಡಿದ್ದ ಚಂದ್ರಕಾಂತ್ ಖೈರೆ ಅವರಿಗೆ ಟಿಕೆಟ್ ನೀಡಿದೆ. ಇದರಿಂದಾಗಿ ದಾನ್ವೆ ಅವರು ಬಿಜೆಪಿ ಅಥವಾ ಏಕನಾಥ್ ಶಿಂದೆ ನೇತೃತ್ವದ ಶಿವಸೇನಾ ಸೇರಲಿದ್ದಾರೆ ಎನ್ನುವ ಸುದ್ದಿ ಹಬ್ಬಿದೆ. ಆದರೆ, ದಾನ್ವೆ ಅದನ್ನು ನಿರಾಕರಿಸಿದ್ದಾರೆ.

ಎಂವಿಎ ಭಾಗವಲ್ಲ ಎಂದ ವಿಬಿಎ

ಅಕೋಲಾ (ಪಿಟಿಐ): ವಂಚಿತ್ ಬಹುಜನ್ ಆಘಾಡಿ (ವಿಬಿಎ) ಮುಖ್ಯಸ್ಥ ಪ್ರಕಾಶ್ ಅಂಬೇಡ್ಕರ್ ಬುಧವಾರ ಲೋಕಸಭಾ ಚುನಾವಣೆಗಾಗಿ ಅಭ್ಯರ್ಥಿಗಳ ಪಟ್ಟಿಯನ್ನು ಘೋಷಣೆ ಮಾಡುವ ಮೂಲಕ ತಮ್ಮ ಪಕ್ಷವು ಎಂವಿಎ ಕೂಟದ ಭಾಗವಲ್ಲ ಎನ್ನುವುದರ ಸೂಚನೆ ನೀಡಿದ್ದಾರೆ.

ಪಟ್ಟಿ ಬಿಡುಗಡೆಗೊಳಿಸಿ ಮಾತನಾಡಿದ ಪ್ರಕಾಶ್ ಅಂಬೇಡ್ಕರ್, ‘ಎಂವಿಎ ಕೂಟದಲ್ಲಿರುವ ಕಾಂಗ್ರೆಸ್, ಎನ್‌ಸಿಪಿ (ಶರದ್‌ಪವಾರ್ ಬಣ) ಮತ್ತು ಶಿವಸೇನಾ (ಯುಬಿಟಿ) ತಮ್ಮ ಪಕ್ಷವನ್ನು ವಂಶ ಪಾರಂಪರ್ಯ ರಾಜಕಾರಣವನ್ನು ಉತ್ತೇಜಿಸುವುದಕ್ಕೆ ಬಳಸಿಕೊಳ್ಳುತ್ತಿವೆ’ ಎಂದು ಆರೋಪಿಸಿದರು. ಚುನಾವಣೆಯಲ್ಲಿ ಮುಸ್ಲಿಮರು, ಜೈನರು ಸೇರಿದಂತೆ ಹಿಂದುಳಿದ ಸಮುದಾಯದವರು ಹಾಗೂ ಸಮಾಜದ ಬಡ ವರ್ಗಗಳಿಗೆ ಪ್ರಾಶಸ್ತ್ಯ ನೀಡಲು ತಮ್ಮ ಪಕ್ಷದ ರಾಜ್ಯ ಸಮಿತಿಯು ನಿರ್ಧರಿಸಿರುವುದಾಗಿ ಪ್ರಕಾಶ್ ಅಂಬೇಡ್ಕರ್ ತಿಳಿಸಿದರು.

ಬಿಜೆಡಿ: 15 ಅಭ್ಯರ್ಥಿಗಳ ಘೋಷಣೆ

ಭುವನೇಶ್ವರ (ಪಿಟಿಐ): ಬಿಜು ಜನತಾ ದಳ (ಬಿಜೆಡಿ) ಅಧ್ಯಕ್ಷ ನವೀನ್ ಪಟ್ನಾಯಕ್ ಅವರು ಬುಧವಾರ ಪಕ್ಷದ ಅಭ್ಯರ್ಥಿಗಳ ಎರಡು ಪಟ್ಟಿಗಳನ್ನು ಬಿಡುಗಡೆ ಮಾಡಿದ್ದು, ರಾಜ್ಯದ 21 ಲೋಕಸಭಾ ಕ್ಷೇತ್ರಗಳ ಪೈಕಿ 15 ಕ್ಷೇತ್ರಗಳಿಗೆ ಉಮೇದುವಾರರನ್ನು ಪ್ರಕಟಿಸಿದ್ದಾರೆ.

ಪಕ್ಷದ 9 ಅಭ್ಯರ್ಥಿಗಳ ಮೊದಲ ಪಟ್ಟಿಯನ್ನು ವಿಡಿಯೊ ಸಂದೇಶದ ಮೂಲಕ ಬಿಡುಗಡೆಗೊಳಿಸಿದ ಎರಡು ಗಂಟೆಗಳ ನಂತರ ಪಟ್ನಾಯಕ್ ಅವರು 6 ಅಭ್ಯರ್ಥಿಗಳ ಎರಡನೇ ಪಟ್ಟಿಯನ್ನು ಬಿಡುಗಡೆ ಮಾಡಿದರು.

ಬಿಜೆಡಿ ಪ್ರಧಾನ ಕಾರ್ಯದರ್ಶಿ ಪ್ರಣವ್ ಪ್ರಕಾಶ್ ದಾಸ್ ಅವರು ಸಂಬಲ್‌ಪುರ ಕ್ಷೇತ್ರದಲ್ಲಿ ಕೇಂದ್ರ ಸಚಿವ ಮತ್ತು ಬಿಜೆಪಿ ಅಭ್ಯರ್ಥಿ ಧರ್ಮೇಂದ್ರ ಪ್ರಧಾನ್ ವಿರುದ್ಧ ಕಣಕ್ಕಿಳಿಯಲಿದ್ದಾರೆ. ಭಾರತ ಹಾಕಿ ತಂಡದ ಮಾಜಿ ಆಟಗಾರ ದಿಲೀಪ್ ಟಿರ್ಕಿ ಸುಂದರ್‌ಗಢ ಲೋಕಸಭಾ ಕ್ಷೇತ್ರದ ಹಾಲಿ ಸಂಸದ, ಮಾಜಿ ಕೇಂದ್ರ ಸಚಿವ ಜುಯಲ್ ಓರಂ ಅವರನ್ನು ಎದುರಿಸಲಿದ್ದಾರೆ.

ಮುಂಬೈ ಮಾಜಿ ಪೊಲೀಸ್ ಕಮಿಷನರ್ ಅರೂಪ್ ಪಟ್ನಾಯಕ್ ಅವರು ಪುರಿ ಲೋಕಸಭಾ ಕ್ಷೇತ್ರದಲ್ಲಿ ಬಿಜೆಪಿಯ ಸಂಬಿತ್ ಪಾತ್ರಾ ವಿರುದ್ಧ ಸ್ಪರ್ಧಿಸುತ್ತಿದ್ದಾರೆ.

ಇದಲ್ಲದೇ ರಾಜ್ಯದ 147 ವಿಧಾನಸಭಾ ಕ್ಷೇತ್ರಗಳ ಪೈಕಿ ಬಿಜೆಡಿ 72 ಕ್ಷೇತ್ರಗಳಿಗೆ ಬಿಜೆಡಿಯು ಅಭ್ಯರ್ಥಿಗಳನ್ನು ಪ್ರಕಟಿಸಿದೆ.

ಮೆರವಣಿಗೆಯ ರಂಗು

ಪ್ರಚಾರ

ತೃಣಮೂಲ ಕಾಂಗ್ರೆಸ್ ಪಕ್ಷದ ದಕ್ಷಿಣ ದಿನಜ್‌ಪುರ ಲೋಕಸಭಾ ಕ್ಷೇತ್ರದ ಅಭ್ಯರ್ಥಿ ವಿಪ್ಲವ್ ಮಿತ್ರ ಮನೆ ಮನೆಯ ಪ್ರಚಾರದ ವೇಳೆ ಬಾಲೂರ್‌ಘಾಟ್ ಬಳಿ ಕಂಡಿದ್ದು ಹೀಗೆ.. -ಪಿಟಿಐ ಚಿತ್ರ

ಉಮಾಭಾರತಿಗೆ ಇಲ್ಲ ‘ತಾರಾ ಪ್ರಚಾರಕಿ’ ಪಟ್ಟ

ಭೋಪಾಲ್ (ಪಿಟಿಐ): ಮಧ್ಯಪ್ರದೇಶದ ಮಾಜಿ ಮುಖ್ಯಮಂತ್ರಿ ಉಮಾಭಾರತಿ ಅವರು ಲೋಕಸಭಾ ಚುನಾವಣೆಯ ರಾಜ್ಯದ ತಾರಾ ಪ್ರಚಾರಕರ ಪಟ್ಟಿಯಲ್ಲಿ ಸ್ಥಾನ ಪಡೆಯಲು ವಿಫಲರಾಗಿದ್ದಾರೆ. ಇತ್ತೀಚೆಗಷ್ಟೇ ಕಾಂಗ್ರೆಸ್ ತ್ಯಜಿಸಿ ಬಿಜೆಪಿ ಸೇರಿದ್ದ ಸುರೇಶ್ ಪಚೌರಿ ತಾರಾ ಪ್ರಚಾರಕರ ಪಟ್ಟಿಯಲ್ಲಿ ಸ್ಥಾನ ಪಡೆದಿದ್ದಾರೆ.

2023ರ ವಿಧಾನಸಭಾ ಚುನಾವಣೆಯಲ್ಲಿ ಪಕ್ಷದ ಗೆಲುವಿನಲ್ಲಿ ಮುಖ್ಯ ಪಾತ್ರ ವಹಿಸಿದ್ದ ಉಮಾಭಾರತಿ ಅವರು ಆ ಚುನಾವಣೆಯಲ್ಲಿಯೂ ತಾರಾ ಪ್ರಚಾರಕಿ ಪಟ್ಟಿಯಲ್ಲಿ ಸ್ಥಾನ ಪಡೆದಿರಲಿಲ್ಲ.

ಕೇಜ್ರಿವಾಲ್ ಪರ ರ್‍ಯಾಲಿ: ‘ಇಂಡಿಯಾ’ಗೆ ಸುವರ್ಣಾವಕಾಶ?

• ಶಮಿನ್ ಜಾಯ್

ನವದೆಹಲಿ: ಅಬಕಾರಿ ಹಗರಣದ ಸಂಬಂಧ ದೆಹಲಿ ಮುಖ್ಯಮಂತ್ರಿ ಅರವಿಂದ ಕೇಜ್ರಿವಾಲ್ ಅವರ ಬಂಧನ ವಿರೋಧಿಸಿ ಮಾರ್ಚ್ 31ರಂದು ಪ್ರತಿಷ್ಠಿತ ರಾಮಲೀಲಾ ಮೈದಾನದಲ್ಲಿ ನಡೆಯಲಿರುವ ರ್‍ಯಾಲಿಯು ಲೋಕಸಭಾ ಚುನಾವಣೆಯ ಹಿನ್ನೆಲೆಯಲ್ಲಿ ವಿರೋಧ ಪಕ್ಷಗಳ ‘ಇಂಡಿಯಾ’ ಕೂಟದ ಪಾಲಿಗೆ ‘ಮಾಡು ಇಲ್ಲವೇ ಮಡಿ’ ಎನ್ನುವಂಥ ಪರಿಸ್ಥಿತಿ ನಿರ್ಮಾಣ ಮಾಡಿದೆ.

ಕಳೆದ ಅಕ್ಟೋಬರ್‌ನಿಂದಲೂ ‘ಇಂಡಿಯಾ’ ಕೂಟದಲ್ಲಿರುವ ಪಕ್ಷಗಳು ಒಂದೆಡೆ ಸೇರಬೇಕೆಂದು ಚಿಂತನೆ ನಡೆಸಿದ್ದರೂ ಅದು ಸಾಧ್ಯವಾಗಿರಲಿಲ್ಲ. ಈ ಹಿಂದೆ ಪರಸ್ಪರ ಮನಸ್ತಾಪ ಹೊಂದಿದ್ದು, ಈಗ ಮೈತ್ರಿಯ ಭಾಗವಾಗಿರುವ ಪಕ್ಷಗಳು ಅಂದು ಒಂದೇ ವೇದಿಕೆಯಲ್ಲಿ ಸೇರಲಿವೆ. ಜತೆಗೆ ದೆಹಲಿಯಲ್ಲಿ ಎಎಪಿ–ಕಾಂಗ್ರೆಸ್ ಜಂಟಿ ಪ್ರಚಾರಕ್ಕೆ ಅದೇ ಕಾರ್ಯಕ್ರಮ ವೇದಿಕೆಯಾಗಲಿದೆ.

ತಮ್ಮ ಜಂಟಿ ಹೇಳಿಕೆಗಳಲ್ಲಿ ಹಲವು ಬಾರಿ ಪ್ರತಿಪಾದಿಸಿದರೂ ‘ಇಂಡಿಯಾ’ ಕೂಟಕ್ಕೆ ಇದುವರೆಗೆ ಒಂದೇ ಒಂದು ರ್‍ಯಾಲಿ ನಡೆಸಲು ಸಾಧ್ಯವಾಗಿರಲಿಲ್ಲ. ಹಿಂದೊಮ್ಮೆ ಭೋಪಾಲ್‌ನಲ್ಲಿ ರ್‍ಯಾಲಿ ನಡೆಸುವುದಾಗಿ ಪ್ರಕಟಿಸಲಾಗಿತ್ತು. ಆದರೆ, ಮಧ್ಯಪ್ರದೇಶದ ವಿಧಾನಸಭಾ ಚುನಾವಣೆಗಳ ಹಿನ್ನೆಲೆಯಲ್ಲಿ ಕಾಂಗ್ರೆಸ್ ಮುಖಂಡ ಕಮಲ್ ನಾಥ್ ಅದನ್ನು ಏಕಪಕ್ಷೀಯವಾಗಿ ರದ್ದುಪಡಿಸಿದ್ದರು.

ಕೆಲವು ರಾಜ್ಯಗಳಲ್ಲಿ ಸ್ಥಾನ ಹಂಚಿಕೆಗೆ ಸಂಬಂಧಿಸಿದ ಮನಸ್ತಾಪ (ನಿದರ್ಶನಕ್ಕೆ ಪಶ್ಚಿಮ ಬಂಗಾಳ) ಇದ್ದಿದ್ದರಿಂದ ಜಂಟಿ ಕಾರ್ಯಕ್ರಮಗಳನ್ನು ಆಯೋಜಿಸಲು ಅಡ್ಡಿ ಉಂಟಾಗಿತ್ತು. ಇದೇ ತಿಂಗಳಲ್ಲಿ ಕನಿಷ್ಠ ಅಂಥ ಎರಡು ರ್‍ಯಾಲಿಗಳನ್ನು ಕೆಲವು ಮಿತ್ರಪಕ್ಷಗಳು ತಪ್ಪಿಸಿಕೊಂಡಿವೆ. ಪಟ್ನಾದಲ್ಲಿ ಆರ್‌ಜೆಡಿ ಆಯೋಜಿಸಿದ್ದ ರ್‍ಯಾಲಿ ಮತ್ತು ರಾಹುಲ್ ಗಾಂಧಿಯವರ ‘ಭಾರತ್ ಜೋಡೊ ನ್ಯಾಯ ಯಾತ್ರೆ’ಯ ಕೊನೆಯಲ್ಲಿ ಮುಂಬೈನಲ್ಲಿ ಆಯೋಜಿಸಲಾಗಿದ್ದ ರ್‍ಯಾಲಿಗೆ ಅಂಥ ಸಾಧ್ಯತೆಗಳಿದ್ದವು. ಕೇಜ್ರಿವಾಲ್ ದೇಶದಾದ್ಯಂತ ಹೆಸರಾಗಿರುವುದರಿಂದ ನರೇಂದ್ರ ಮೋದಿ ಸರ್ಕಾರದ ವಿರುದ್ಧ ಹೋರಾಡಲು ಇಂಡಿಯಾ ಕೂಟದ ಮಿತ್ರಪಕ್ಷಗಳಿಗೆ ಇದು ಸೂಕ್ತ ಸಮಯದಂತೆ ಒದಗಿಬಂದಿದೆ.

ಜಾರ್ಖಂಡ್ ಮುಖ್ಯಮಂತ್ರಿ ಹೇಮಂತ್ ಬಂಧನ ಪ್ರಕರಣಕ್ಕಿಂತ ಭಿನ್ನವಾಗಿರುವ ಕೇಜ್ರಿವಾಲ್ ಬಂಧನ ಪ್ರಕರಣದ ಬಗ್ಗೆ ಸಾರ್ವಜನಿಕ ವಲಯದಲ್ಲಿ ಚರ್ಚೆಗಳು ನಡೆಯುತ್ತಿವೆ. ಲೋಕಸಭಾ ಚುನಾವಣೆ ಘೋಷಣೆಯಾದ ನಂತರದಲ್ಲಿ ಕೇಜ್ರಿವಾಲ್ ಅವರನ್ನು ಬಂಧಿಸಿರುವುದರ ವಿರುದ್ಧವಾಗಿ ಸಾರ್ವಜನಿಕ ಅಭಿಪ್ರಾಯ ವ್ಯಕ್ತವಾಗುತ್ತಿದೆ ಎನ್ನುವ ಭಾವನೆ ‘ಇಂಡಿಯಾ’ ಕೂಟದಲ್ಲಿದೆ.

ತಮ್ಮ ಕಾರ್ಯಕರ್ತರು ಮೈತ್ರಿಗೆ ಹೇಗೆ ಹೊಂದಿಕೊಳ್ಳುತ್ತಾರೆ ಎನ್ನುವುದನ್ನು ತಿಳಿಯಲು ಕಾಂಗ್ರೆಸ್ ಹಾಗೂ ಎಎಪಿಗೆ ರ್‍ಯಾಲಿ ಒಂದು ಉತ್ತಮ ಅವಕಾಶವಾಗಿದೆ. ಚುನಾವಣೆಯ ಹಿನ್ನೆಲೆಯಲ್ಲಿ ಮೈತ್ರಿಯ ತೊಡಕುಗಳನ್ನು ಗುರುತಿಸಿ, ಅವನ್ನು ಪರಿಹರಿಸಿಕೊಳ್ಳುವ ದಿಸೆಯಲ್ಲಿ ಕೂಡ ಮುಖಂಡರಿಗೆ ಇದೊಂದು ಅವಕಾಶವಾಗಿದೆ. ಕೇಜ್ರಿವಾಲ್ ಬಂಧನವು ‘ಇಂಡಿಯಾ’ ಮಿತ್ರ ಪಕ್ಷಗಳಿಗೆ ಒಗ್ಗಟ್ಟಿನ ಅಗತ್ಯವನ್ನು ಮನವರಿಕೆ ಮಾಡಿಕೊಟ್ಟಿದೆ. ಇದಕ್ಕೆ ನಿದರ್ಶನವೆಂದರೆ, ಎಎಪಿಯ ತೀವ್ರ ದಾಳಿಗಳನ್ನು ಎದುರಿಸಿದ ದೆಹಲಿಯ ಮಾಜಿ ಮುಖ್ಯಮಂತ್ರಿ ಶೀಲಾ ದೀಕ್ಷಿತ್ ಅವರ ಪುತ್ರ, ಮಾಜಿ ಸಂಸದ ಸಂದೀಪ್ ದೀಕ್ಷಿತ್ ಕೇಜ್ರಿವಾಲ್ ಬಂಧನದ ಸುದ್ದಿ ತಿಳಿದ ತಕ್ಷಣ ಅವರ ನಿವಾಸಕ್ಕೆ ಧಾವಿಸಿದವರಲ್ಲಿ ಮೊದಲಿಗರಾಗಿದ್ದರು.

ಸದ್ಯದ ಮಟ್ಟಿಗೆ, ಪ್ರತಿಭಟನಾ ಸ್ಥಳವನ್ನು ಎಲ್ಲರೂ ಬಂದು ಮುಟ್ಟುವರೇ ಎನ್ನುವುದು ಎಎಪಿ, ಕಾಂಗ್ರೆಸ್ ಸೇರಿದಂತೆ ಸಂಘಟಕರ ದೊಡ್ಡ ಆತಂಕವಾಗಿದೆ. ‘ಮಾರ್ಚ್ 31ರ ರ್‍ಯಾಲಿಯು ಅತ್ಯಂತ ಮಹತ್ವದ್ದಾಗಿದೆ. ಅದು ಹೇಗೆ ನಡೆಯುತ್ತದೆ ಎನ್ನುವುದರ ಮೇಲೆ ನಮ್ಮ ಮುಂದಿನ ಯಶಸ್ಸು ನಿಂತಿದೆ. ಆದರೆ, ನಮಗೆ ಖಚಿತವಾಗಿ ಅನ್ನಿಸುವುದೇನೆಂದರೆ, ಮೋದಿ ಸರ್ಕಾರವು ಜನ ಸುಲಭವಾಗಿ ಪ್ರತಿಭಟನಾ ಸ್ಥಳ ಸೇರಲಾಗದಂತೆ ಅಡ್ಡಿಪಡಿಸುತ್ತದೆ’ ಎಂದು ‘ಇಂಡಿಯಾ’ ಕೂಟದ ಮುಖಂಡರೊಬ್ಬರು ಹೇಳಿದರು. ಈ ಹಿನ್ನೆಲೆಯಲ್ಲಿ ಎಎಪಿ ಮತ್ತು ಕಾಂಗ್ರೆಸ್ ಪ್ರತ್ಯೇಕ ಸಿದ್ಧತೆಗಳನ್ನು ನಡೆಸುತ್ತಿವೆ.

ಚುಟುಕು

ನಿತಿನ್ ಗಡ್ಕರಿ ನಾಮಪತ್ರ ಸಲ್ಲಿಕೆ

ನಾಗ್ಪುರ/ಚೆನ್ನೈ (ಪಿಟಿಐ): ಮಹಾರಾಷ್ಟ್ರದ ನಾಗ್ಪುರ ಲೋಕಸಭಾ ಕ್ಷೇತ್ರದ ಅಭ್ಯರ್ಥಿಯಾಗಿ ಕೇಂದ್ರ ಸಚಿವ ನಿತಿನ್ ಗಡ್ಕರಿ ಅವರು ಬುಧವಾರ ನಾಮಪತ್ರ ಸಲ್ಲಿಸಿದರು.

ಬಳಿಕ ಮಾತನಾಡಿದ ಅವರು, ಎನ್‌ಡಿಎ ಸರ್ಕಾರವು ಕೇಂದ್ರದಲ್ಲಿ ಮತ್ತೊಮ್ಮೆ ಅಧಿಕಾರಕ್ಕೇರಲಿದೆ ಎಂದು ವಿಶ್ವಾಸ ವ್ಯಕ್ತಪಡಿಸಿದರು.

ನಾಮಪತ್ರ ಸಲ್ಲಿಸುವುದಕ್ಕೂ ಮುನ್ನ ಗಡ್ಕರಿ ಅವರು ನಾಗ್ಪುರದಲ್ಲಿ ರೋಡ್ ಶೋ ನಡೆಸಿದರು.

ಅಣ್ಣಾಮಲೈ, ದಯಾನಿಧಿ ನಾಮಪತ್ರ: ಬಿಜೆಪಿ ತಮಿಳುನಾಡು ಘಟಕದ ಅಧ್ಯಕ್ಷ ಹಾಗೂ ಕೊಯಮತ್ತೂರು ಲೋಕಸಭಾ ಕ್ಷೇತ್ರದ ಅಭ್ಯರ್ಥಿ ಕೆ.ಅಣ್ಣಾಮಲೈ, ಡಿಎಂಕೆ ಸಂಸದ ಹಾಗೂ ಚೆನ್ನೈ ಸೆಂಟ್ರಲ್ ಕ್ಷೇತ್ರದ ಅಭ್ಯರ್ಥಿ ದಯಾನಿಧಿ ಮಾರನ್ ಬುಧವಾರ ನಾಮಪತ್ರ ಸಲ್ಲಿಸಿದರು.

ಅಣ್ಣಾಮಲೈ ಅವರು ನಾಮಪತ್ರ ಸಲ್ಲಿಸುವ ವೇಳೆ ಬಿಜೆಪಿ ಮಹಿಳಾ ಮೋರ್ಚಾ ಮುಖ್ಯಸ್ಥೆ ವಾನತಿ ಶ್ರೀನಿವಾಸನ್ ಮತ್ತಿತರರು ಜೊತೆಗಿದ್ದರು.

ಜಿಗಿ–ನೆಗೆದಾಟ

ಪಂಜಾಬ್: ಎಎಪಿ ಏಕೈಕ ಸಂಸದ ಸುಶೀಲ್ ಕುಮಾರ್ ಬಿಜೆಪಿಗೆ



ಸುಶೀಲ್ ಕುಮಾರ್

ನವದೆಹಲಿ (ಪಿಟಿಐ): ಎಎಪಿಯ ಪಂಜಾಬ್‌ನ ಏಕೈಕ ಸಂಸದ ಸುಶೀಲ್ ಕುಮಾರ್ ರಿಂಕು ಅವರು ಪಕ್ಷದ ಶಾಸಕ ಶೀತಲ್ ಅಂಗುರಲ್ ಜತೆ ಬುಧವಾರ ಬಿಜೆಪಿಗೆ ಸೇರ್ಪಡೆಗೊಂಡರು.

ರಿಂಕು ಅವರು ಜಲಂಧರ್ ಕ್ಷೇತ್ರದ ಸಂಸದರಾಗಿದ್ದಾರೆ. ಶೀತಲ್ ಅವರು ಜಲಂಧರ್ ಪಶ್ಚಿಮ ಕ್ಷೇತ್ರದಿಂದ ವಿಧಾನಸಭೆಗೆ ಆಯ್ಕೆಯಾಗಿದ್ದರು. ಕೇಂದ್ರ ಸಚಿವ ಹರ್‌ದೀಪ್ ಸಿಂಗ್ ಪುರಿ ಮತ್ತು ಬಿಜೆಪಿ ರಾಷ್ಟ್ರೀಯ ಪ್ರಧಾನ ಕಾರ್ಯದರ್ಶಿ ವಿನೋದ್ ತಾವ್ಡೆ ಅವರ ಸಮ್ಮುಖದಲ್ಲಿ ಇವರು ಪಕ್ಷಕ್ಕೆ ಸೇರಿದರು.

ಎಂಥಾ ಮಾತು!

ನಾನು ಅನುಭವಿ ರಾಜಕಾರಣಿಯಲ್ಲ. ಆದರೆ ಈ ಸ್ಥಾನದಲ್ಲಿರುವುದರಿಂದ ನನಗೆ ಬೇಕಾದ ಕೆಲಸಗಳನ್ನು ಮಾಡಬಲ್ಲೆ. ನಾನು ಕೃಷ್ಣನ ಭಕ್ತೆ. ಮಥುರಾ ಕ್ಷೇತ್ರದಲ್ಲಿ ಸ್ಪರ್ಧಿಸಲು ಅವಕಾಶ ನೀಡದಿದ್ದರೆ ನಾನು ಚುನಾವಣೆಗೆ ಸ್ಪರ್ಧಿಸುತ್ತಿರಲಿಲ್ಲ. ಇಲ್ಲಿ ಸೇವೆ ಮಾಡುವಂತೆ ಕೃಷ್ಣದೇವರು ಬಯಸಿದ್ದಾರೆ. ಆ ಕಾರಣಕ್ಕಾಗಿ ಇಲ್ಲಿದ್ದೇನೆ. ರಾಜಕೀಯಕ್ಕೆ ಧುಮುಕಲು ನನಗೆ ಇಷ್ಟ ಇರಲಿಲ್ಲ. ಅದು ಕೂಡ ದೇವರ ಇಚ್ಛೆ ಎಂದು ನಂಬಿದ್ದೇನೆ. ಮೂರನೇ ಬಾರಿ ಟಿಕೆಟ್ ನೀಡಿರುವುದಕ್ಕೆ ಬಿಜೆಪಿಗೆ ಆಭಾರಿಯಾಗಿದ್ದೇನೆ

ಹೇಮಾಮಾಲಿನಿ, ಸಂಸದೆ, ಬಿಜೆಪಿ ಅಭ್ಯರ್ಥಿ

ಈ ಬಾರಿಯ ಲೋಕಸಭಾ ಚುನಾವಣೆಯು ದೇಶಕ್ಕೆ ದೊಡ್ಡ ಸವಾಲಾಗಿದೆ. ಇದು ದೇಶದ ಭವಿಷ್ಯವನ್ನು ನಿರ್ಧರಿಸಲಿದೆ. ಸಂವಿಧಾನ ಉಳಿಸಲು ಹಾಗೂ ಪ್ರಜಾಪ್ರಭುತ್ವದ ಭವಿಷ್ಯದ ದೃಷ್ಟಿಯಿಂದಲೂ ಈ ಚುನಾವಣೆಯು ಮಹತ್ವದ್ದಾಗಿದೆ. ಶಾಸಕರನ್ನು ಖರೀದಿಸುವ ದರೋಡೆಕೋರರು ದೇಶದೊಳಗೆ ಕುಳಿತಿದ್ದಾರೆ. ಅವರು ದೇಶವನ್ನು ದೋಚುತಿದ್ದಾರೆ ಮತ್ತು ಪ್ರಜಾಪ್ರಭುತ್ವದ ಕಗ್ಗೊಲೆ ಮಾಡುತ್ತಿದ್ದಾರೆ

ಅಶೋಕ್ ಗೆಹಲೋತ್, ಕಾಂಗ್ರೆಸ್ ಮುಖಂಡ

ಕ್ಷೇತ್ರ ಮಹಾತ್ಮೆ

ಆಡಳಿತಾರೂಢ ತೃಣಮೂಲ ಕಾಂಗ್ರೆಸ್‌ನ (ಟಿಎಂಸಿ) ಗೆಲುವಿನ ಕ್ಷೇತ್ರವೆಂದೇ ಬಿಂಬಿತವಾಗಿರುವ ಪಶ್ಚಿಮ ಬಂಗಾಳದ ಬಶೀರ್‌ಹಾಟ್ ಲೋಕಸಭಾ ಕ್ಷೇತ್ರವು, ಈ ಬಾರಿ ಬಿಜೆಪಿ ಅಭ್ಯರ್ಥಿಯು ಕಣಕ್ಕಿಳಿಯುವುದರೊಂದಿಗೆ ರೋಚಕ ಹಣಾಹಣಿಗೆ ಸಿದ್ಧವಾಗಿದೆ. ಉತ್ತರ 24 ಪರಗಣ ಜಿಲ್ಲೆಯ ಸಂದೇಶ್‌ಖಾಲಿಯಲ್ಲಿ ನಡೆದ ದೌರ್ಜನ್ಯ ಪ್ರಕರಣದ ಸಂತ್ರಸ್ತೆ ರೇಖಾ ಪಾತ್ರ ಅವರು ಬಿಜೆಪಿಯ ಅಭ್ಯರ್ಥಿಯಾಗಿದ್ದಾರೆ. ಸಂದೇಶ್‌ಖಾಲಿಯು ಇದೇ ಲೋಕಸಭಾ ಕ್ಷೇತ್ರದಲ್ಲಿದೆ. ಪಶ್ಚಿಮ ಬಂಗಾಳದಲ್ಲಿ ಟಿಎಂಸಿಯನ್ನು ಹಣಿಯಲು ಯತ್ನಿಸುತ್ತಿರುವ ಬಿಜೆಪಿಗೆ ಸಂದೇಶ್‌ಖಾಲಿ ಪ್ರಕರಣವು ಬ್ರಹ್ಮಾಸ್ತ್ರವಾಗಿದೆ. ರೇಖಾ ಅವರನ್ನು ಪ್ರಧಾನಿ ನರೇಂದ್ರ ಮೋದಿ ಅವರು ‘ಶಕ್ತಿ ಸ್ವರೂಪ’ ಎಂದು ಬಣ್ಣಿಸಿದ್ದರು. ಟಿಎಂಸಿಯು ಈ ಬಾರಿ ಪ್ರಮುಖ ಮುಸ್ಲಿಂ ಮುಖಂಡ ಹಾಜಿ ನೂರುಲ್ ಇಸ್ಲಾಂ ಅವರನ್ನು ಇಲ್ಲಿಂದ ಅಖಾಡಕ್ಕಿಳಿಸಿದೆ. ಕಳೆದ ಚುನಾವಣೆಯಲ್ಲಿ ಗೆದ್ದಿದ್ದ ನುಸ್ರತ್ ಜಹಾನ್ ಅವರ ಬದಲಿಗೆ ಹಾಜಿ ಅವರಿಗೆ ಟಿಕೆಟ್ ನೀಡಲಾಗಿದೆ. ರಾಜಕಾರಣದ ಜೊತೆಗೆ ಉದ್ಯಮಿಯೂ ಆಗಿರುವ ನೂರುಲ್ ಇಸ್ಲಾಂ ಅವರು ಸ್ಥಳೀಯವಾಗಿ ಸಾಕಷ್ಟು ಪ್ರಭಾವ ಹೊಂದಿರುವ ಮುಖಂಡರಾಗಿದ್ದಾರೆ. ಈ ಬಾರಿ ಸಿಪಿಎಂ ಕೂಡ ಮಾಜಿ ಶಾಸಕ ನಿರಪಾದ್ ಸರ್ದಾರ್ ಅವರನ್ನು ಅಭ್ಯರ್ಥಿಯನ್ನಾಗಿಸಿದೆ. ಟಿಎಂಸಿಯಿಂದ ಅಮಾನತುಗೊಂಡಿರುವ ಮುಖಂಡ ಶಾಜಹಾನ್ ಶೇಖ್ ಮತ್ತು ಬೆಂಬಲಿಗರು ದೌರ್ಜನ್ಯ ಎಸಗಿದ್ದಾರೆ ಎಂದು ಆರೋಪ ಮಾಡಿದವರಲ್ಲಿ ರೇಖಾ ಪಾತ್ರ ಮುಂಚೂಣಿಯಲ್ಲಿದ್ದರು.

ಮುಖಾಮುಖಿ

ಗಾಂಧಿನಗರ (ಗುಜರಾತ್)

ಅಮಿತ್ ಶಾ (ಬಿಜೆಪಿ)

ಗುಜರಾತ್‌ನ ಗಾಂಧಿನಗರ ಲೋಕಸಭಾ ಕ್ಷೇತ್ರದಿಂದ ಈ ಬಾರಿಯೂ ಕೇಂದ್ರ ಗೃಹ ಸಚಿವ ಅಮಿತ್ ಶಾ ಅವರು ಕಣಕ್ಕಿಳಿದಿದ್ದಾರೆ. 1989ರಿಂದಲೂ ಬಿಜೆಪಿಯ ಭದ್ರಕೋಟೆಯಾಗಿರುವ ಈ ಕ್ಷೇತ್ರವನ್ನು ಮಾಜಿ ಪ್ರಧಾನಿ ಅಟಲ್ ಬಿಹಾರಿ ವಾಜಪೇಯಿ ಮತ್ತು ಮಾಜಿ ಉಪಪ್ರಧಾನಿ ಎಲ್.ಕೆ. ಅಡ್ವಾಣಿ ಅವರು ಈ ಹಿಂದೆ ಪ್ರತಿನಿಧಿಸಿದ್ದರು. ಕಳೆದ ಚುನಾವಣೆಯಲ್ಲಿ ಅಮಿತ್ ಶಾ ಅವರು 5.57 ಲಕ್ಷ ಮತಗಳ ಅಂತರದಿಂದ ಕಾಂಗ್ರೆಸ್‌ನ ಸಿ.ಜೆ. ಚಾವ್ಡಾ ಅವರನ್ನು ಪರಾಭವಗೊಳಿಸಿದ್ದರು. ಶಾ ಅವರು 8,94,000 ಮತಗಳನ್ನು ಪಡೆದು ಗೆಲುವಿನ ನಗೆ ಬೀರಿದ್ದರು. ಪಕ್ಷದ ಮಾಜಿ ರಾಷ್ಟ್ರೀಯ ಅಧ್ಯಕ್ಷ ಶಾ ಅವರು ಗುಜರಾತ್ ಮತ್ತು ರಾಷ್ಟ್ರ ಮಟ್ಟದ ರಾಜಕಾರಣದಲ್ಲಿ ತಮ್ಮದೇ ಆದ ಪ್ರಭಾವವನ್ನು ಹೊಂದಿದ್ದಾರೆ. ಪಕ್ಷವು ಕೇಂದ್ರದಲ್ಲಿ ಮತ್ತು ಹಲವು ರಾಜ್ಯಗಳಲ್ಲಿ ಅಧಿಕಾರಕ್ಕೇರುವಲ್ಲಿ ಇವರು ಮಹತ್ವದ ಪಾತ್ರ ವಹಿಸಿದ್ದಾರೆ.

V/S

ಸೋನಲ್ ಪಟೇಲ್ (ಕಾಂಗ್ರೆಸ್)

2019ರ ಲೋಕಸಭಾ ಚುನಾವಣೆಯಲ್ಲಿ ಭಾರಿ ಬಹುಮತದಿಂದ ಗೆದ್ದಿದ್ದ ಅಮಿತ್ ಶಾ ಅವರ ವಿರುದ್ಧ ಸೋನಲ್ ಪಟೇಲ್ ಅವರನ್ನು ಕಾಂಗ್ರೆಸ್ ಅಖಾಡಕ್ಕಿಳಿಸಿದೆ. ಗುಜರಾತ್‌ನ ಕಾಂಗ್ರೆಸ್ ಮಹಿಳಾ ಘಟಕದ ಮಾಜಿ ಅಧ್ಯಕ್ಷೆ ಸೋನಲ್ ಅವರು ಸದ್ಯ ಮಹಾರಾಷ್ಟ್ರದಲ್ಲಿ ಪಕ್ಷದ ಸಹ ಉಸ್ತುವಾರಿಯಾಗಿದ್ದಾರೆ. ವಾಸ್ತುಶಿಲ್ಪಿಯಾಗಿರುವ ಇವರು ಈ ಹಿಂದೆ ಪಕ್ಷದ ವಿವಿಧ ಜವಾಬ್ದಾರಿಗಳನ್ನು ನಿರ್ವಹಿಸಿದವರು. ಗಾಂಧಿನಗರ ಕ್ಷೇತ್ರದಲ್ಲಿ ತಾನು ಹರಕೆಯ ಕುರಿಯಾಗಬಹುದು ಎಂಬ ಅರಿವಿದ್ದರೂ ಸೋನಲ್ ಅವರು ಹೈಕಮಾಂಡ್ ತೀರ್ಮಾನದಂತೆ ಸ್ಪರ್ಧಾ ಕಣಕ್ಕಿಳಿದಿದ್ದಾರೆ. ಸೋನಲ್ ಅವರ ತಂದೆ ರಮಣ್ ಭಾಯಿ ಅವರು ಕಾಂಗ್ರೆಸ್ ಮುಖಂಡರಾಗಿದ್ದರು. ಅಹಮದಾಬಾದ್ ಮಹಾನಗರ ಪಾಲಿಕೆಯ ಸ್ಥಾಯಿ ಸಮಿತಿ ಅಧ್ಯಕ್ಷರಾಗಿಯೂ ಕಾರ್ಯನಿರ್ವಹಿಸಿದ್ದರು. ಪಕ್ಷದ ಮಹಿಳಾ ಘಟಕದ ಅಧ್ಯಕ್ಷೆಯಾಗಿ ಕಾರ್ಯನಿರ್ವಹಿಸಿರುವ ಅನುಭವ ಇವರಿಗೆ ಶ್ರೀರಕ್ಷೆಯಾಗಲಿದೆಯೇ ಎಂಬುದನ್ನು ಕಾದು ನೋಡಬೇಕಾಗಿದೆ.

ಷೇರುಪೇಟೆ ವಹಿವಾಟು 526



ಎನ್‌ಎಸ್‌ಇ ನಿಫ್ಟಿ

ಹಿಂದಿನ ಅಂತ್ಯ	22,004
ಇಂದಿನ ಅಂತ್ಯ	22,123
▲	118
ದಿನದ ಕನಿಷ್ಠ	22,193

ವಿನಿಮಯ ದರ

$ ಡಾಲರ್	83.33
£ ಪೌಂಡ್	105.26
€ ಯುರೊ	90.27
¥ ಯೆನ್ (100ಕ್ಕೆ)	55

ಎನ್‌ಇಸಿಸಿ ಸೂಚಿಸಿರುವ ಮೊಟ್ಟೆ ಧಾರಣೆ

ಬೆಂಗಳೂರು	
100ಕ್ಕೆ	₹440
12 ಕ್ಕೆ	₹60
ಮೈಸೂರು	
100ಕ್ಕೆ	₹440

ಖಾದ್ಯ ತೈಲ ಮುಂಬೈ (10 ಕೆಜಿಗೆ) (ಆವರಣದಲ್ಲಿ ಹಿಂದಿನ ದಿನದ ದರ)

ಶೇಂಗಾ (ರಿಫೈನ್ಡ್)	₹1500 (1500)
ಸೋಯಾ (ರಿಫೈನ್ಡ್)	₹960 (985)
ಸೂರ್ಯಕಾಂತಿ (ರಿಫೈನ್ಡ್)	₹957 (970)
ಪಾಮೋಲಿನ್	₹934 (945)

ರಾಮನಗರ ರೇಷ್ಮೆಗೂಡು

ಮಿಶ್ರತಳಿ (ಸಿ.ಬಿ) ₹286-442
ದ್ವಿತಳಿ (ಬಿ.ವಿ) ₹335-571

ಕೊಬ್ಬರಿ ಧಾರಣೆ (ಕ್ವಿಂಟಲ್‌ಗೆ)

ಅರಸೀಕೆರೆ	₹7300-11000
ಕೆ. ಆರ್.ಪೇಟೆ	₹8700-8700
ಸುಳ್ಯ	₹7000-9100
ತಿಪಟೂರು	₹7800-8800

ಎನ್.ಆರ್.ಪುರ ರಬ್ಬರ್ (ಪ್ರತಿ ಕೆ.ಜಿಗೆ)

ಆರ್‌ಎಸ್‌ಎಸ್-4 ₹178.50
ಆರ್‌ಎಸ್‌ಎಸ್-5 ₹171.50
ಗುಡ್ ಲಾಟ್ ₹161.50

5 ಸಾವಿರ ಚಾರ್ಜಿಂಗ್ ಕೇಂದ್ರ ಸ್ಥಾಪನೆ: ಟಾಟಾ

ನವದೆಹಲಿ (ಪಿಟಿಐ): ಟಾಟಾ ಸಮೂಹದ ಟಾಟಾ ಪ್ಯಾಸೆಂಜರ್ ಎಲೆಕ್ಟ್ರಿಕ್ ಮೊಬಿಲಿಟಿ ಘಟಕವು, ಪ್ರಸಕ್ತ ವರ್ಷದ ಡಿಸೆಂಬರ್ ಅಂತ್ಯದೊಳಗೆ ದೇಶದಲ್ಲಿ ಐದು ಸಾವಿರ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲು ತೀರ್ಮಾನಿಸಿದೆ.

ಈ ಸಂಬಂಧ ಸರ್ಕಾರಿ ಸ್ವಾಮ್ಯದ ಹಿಂದೂಸ್ತಾನ್ ಪೆಟ್ರೋಲಿಯಂ ಕಾರ್ಪೊರೇಷನ್ ಲಿಮಿಟೆಡ್ (ಎಚ್‌ಪಿಸಿಎಲ್) ಜೊತೆಗೆ ಒಡಂಬಡಿಕೆ ಪತ್ರಕ್ಕೆ ಸಹಿ ಹಾಕಲಾಗಿದೆ ಎಂದು ಕಂಪನಿಯು ಬುಧವಾರ ತಿಳಿಸಿದೆ.

ಈ ವರ್ಷದ ಅಂತ್ಯದೊಳಗೆ ಕಂಪನಿಯಿಂದ 1.2 ಲಕ್ಷಕ್ಕೂ ಹೆಚ್ಚು ಎಲೆಕ್ಟ್ರಿಕ್ ವಾಹನಗಳ ಮಾರಾಟದ ಗುರಿ ಹೊಂದಲಾಗಿದೆ. ಈ ವಾಹನಗಳ ಮಾಲೀಕರಿಗೆ ಅನುಕೂಲ ಕಲ್ಪಿಸಲು ಹಾಗೂ ಎಚ್‌ಪಿಸಿಎಲ್‌ನ ನೆಟ್‌ವರ್ಕ್‌ನ ವಿಸ್ತರಣೆಗೆ ಪೂರಕವಾಗಿ ಚಾರ್ಜಿಂಗ್ ಕೇಂದ್ರಗಳನ್ನು ಸ್ಥಾಪಿಸಲಾಗುತ್ತದೆ ಎಂದು ತಿಳಿಸಿದೆ. ಸದ್ಯ ದೇಶದಾದ್ಯಂತ 21,500ಕ್ಕೂ ಹೆಚ್ಚು ಎಚ್‌ಪಿಸಿಎಲ್‌ನ ಪೆಟ್ರೋಲ್ ಬಂಕ್‌ಗಳಿವೆ.

ಮಾರುಕಟ್ಟೆಯಿಂದ ₹7.5 ಲಕ್ಷ ಕೋಟಿ ಸಂಗ್ರಹಕ್ಕೆ ನಿರ್ಧಾರ

ನವದೆಹಲಿ (ಪಿಟಿಐ): 2024–25ನೇ ಹಣಕಾಸು ವರ್ಷದ ಮೊದಲಾರ್ಧದಲ್ಲಿ (ಏಪ್ರಿಲ್‌ನಿಂದ ಸೆಪ್ಟೆಂಬರ್‌ವರೆಗಿನ ಅವಧಿ) ₹7.5 ಲಕ್ಷ ಕೋಟಿಯನ್ನು ಮಾರುಕಟ್ಟೆಯಿಂದ ಸಂಗ್ರಹಿಸಲು ಕೇಂದ್ರ ಸರ್ಕಾರವು ನಿರ್ಧರಿಸಿದೆ.

ಆದಾಯದ ಅಂತರವನ್ನು ಸರಿದೂಗಿಸಿ ಆರ್ಥಿಕತೆಯ ಬೆಳವಣಿಗೆಗೆ ಉತ್ತೇಜನ ನೀಡಲು ಈ ನಿರ್ಧಾರ ಕೈಗೊಳ್ಳಲಾಗಿದೆ ಎಂದು ಕೇಂದ್ರ ಹಣಕಾಸು ಸಚಿವಾಲಯವು ಬುಧವಾರ ತಿಳಿಸಿದೆ.

ಹಣಕಾಸು ವರ್ಷದಲ್ಲಿ ಒಟ್ಟು ₹14.13 ಲಕ್ಷ ಕೋಟಿ ಮೊತ್ತವನ್ನು ಬಾಂಡ್‌ಗಳ ಮೂಲಕ ಸಂಗ್ರಹಿಸಲಾಗುವುದು ಎಂದು ಕೇಂದ್ರದ ಮಧ್ಯಂತರ ಬಜೆಟ್‌ನಲ್ಲಿ ಹಣಕಾಸು ಸಚಿವೆ ನಿರ್ಮಲಾ ಸೀತಾರಾಮನ್ ಘೋಷಿಸಿದ್ದರು. ಈ ಪೈಕಿ ಮೊದಲಾರ್ಧದಲ್ಲಿ ಶೇ 53ರಷ್ಟು ಮೊತ್ತವನ್ನು ಸಂಗ್ರಹಿಸಲಿದೆ. 2022–23ನೇ ಹಣಕಾಸು ವರ್ಷದಲ್ಲಿ ಕೇಂದ್ರವು ಮಾರುಕಟ್ಟೆಯಿಂದ ಒಟ್ಟು ₹15.43 ಲಕ್ಷ ಕೋಟಿ ಸಂಗ್ರಹಿಸಿತ್ತು.

ಕೋರ್ಟ್ ಮೆಟ್ಟಿಲೇರಿದ ಕಲ್ಯಾಣಿ ಗ್ರೂಪ್ ಆಸ್ತಿ ಹಂಚಿಕೆ ವಿವಾದ

ಮುಂಬೈ (ಪಿಟಿಐ): ಭಾರತ್ ಫೋರ್ಜ್ ಕಂಪನಿ ಅಧ್ಯಕ್ಷ ಹಾಗೂ ವ್ಯವಸ್ಥಾಪಕ ನಿರ್ದೇಶಕ ಬಾಬಾ ಕಲ್ಯಾಣಿ ಮತ್ತು ಅವರ ತಂಗಿ ಸುಗಂಧಾ ಹಿರೇಮಠ್ ಅವರ ನಡುವಿನ ಕೌಟುಂಬಿಕ ಆಸ್ತಿ ಹಂಚಿಕೆ ವಿವಾದವು ನ್ಯಾಯಾಲಯದ ಮೆಟ್ಟಿಲೇರಿದೆ.

ಕಲ್ಯಾಣಿ ಗ್ರೂಪ್‌ನಲ್ಲಿ ತಮಗೂ ಪಾಲು ಕೊಡಬೇಕಿದೆ ಎಂದು ಸುಗಂಧಾ ಅವರ ಮಕ್ಕಳಾದ ಸಮೀರ್ ಹಾಗೂ ಪಲ್ಲವಿ ಅವರು, ಪುಣೆಯ ಜಿಲ್ಲಾ ಸೆಷನ್ಸ್ ನ್ಯಾಯಾಲಯದಲ್ಲಿ ಮಾರ್ಚ್ 20ರಂದು ದಾವೆ ಹೂಡಿದ್ದಾರೆ. ಹಿಂದೂ ಅವಿಭಜಿತ ಕುಟುಂಬದ ಆಸ್ತಿಯಲ್ಲಿ ತಮಗೂ ಹಕ್ಕಿದೆ ಎಂದು ಅರ್ಜಿಯಲ್ಲಿ ಹೇಳಿದ್ದಾರೆ.

‘ನಮ್ಮ ಮುತ್ತಜ್ಜ ಅಣ್ಣಪ್ಪ ಕಲ್ಯಾಣಿ ಅವರು ಅವಿಭಕ್ತ ಕುಟುಂಬದ ಆಸ್ತಿಯ ಮೂಲ ಒಡೆಯರಾಗಿದ್ದು, ವಿವಿಧ ಕ್ಷೇತ್ರಗಳಲ್ಲಿ ಹೂಡಿಕೆ ಮಾಡಿದ್ದಾರೆ. ಅವರು ನಿಧನರಾದ ಬಳಿಕ ಅವರ ಪುತ್ರ ನೀಲಕಂಠ ಕಲ್ಯಾಣಿ (ಸುಗಂಧಾ ಮತ್ತು ಬಾಬಾ ಕಲ್ಯಾಣಿ ಅವರ ತಂದೆ) ಈ ಆಸ್ತಿಯ ಕರ್ತರಾಗಿದ್ದಾರೆ. ತಾತಾ ನೀಲಕಂಠ ಅವರ ಆರೋಗ್ಯ ಹದಗೆಟ್ಟಿದ್ದರಿಂದ 2011ರಿಂದ ಬಾಬಾ ಕಲ್ಯಾಣಿ ಅವರು ಇಡೀ ಆಸ್ತಿಯ ಮೇಲೆ ಒಡೆತನ ಸಾಧಿಸಿ ಏಕಾಂಗಿಯಾಗಿ ಅನುಭವಿಸುತ್ತಿದ್ದಾರೆ’ ಎಂದು ಅರ್ಜಿಯಲ್ಲಿ ತಿಳಿಸಿದ್ದಾರೆ.

ಹಿಕಾಲ್ ಬಯೊಟೆಕ್ ಕಂಪನಿಯಲ್ಲಿ ಸಮನಾಗಿ ಷೇರುಗಳನ್ನು ಹಂಚಿಕೆ ಮಾಡಿಲ್ಲವೆಂದು ಆರೋಪಿ ಸುಗಂಧಾ ಅವರು, 2023ರ ಮಾರ್ಚ್‌ನಲ್ಲಿ ಬಾಂಬೆ ಹೈಕೋರ್ಟ್‌ನಲ್ಲಿ ಮೊಕದ್ದಮೆ ದಾಖಲಿಸಿದ್ದಾರೆ.

ಕಲ್ಯಾಣಿ ಕುಟುಂಬದ ಆಸ್ತಿಯ ಒಟ್ಟು ಮೌಲ್ಯ ಎಷ್ಟು ಎಂಬುದು ನಿಖರವಾಗಿಲ್ಲ ಗೊತ್ತಾಗಿಲ್ಲ. ಆದರೆ, ಭಾರತ್ ಫೋರ್ಜ್ ಸೇರಿ ಎಂಟು ಕಂಪನಿಗಳ ಒಟ್ಟು ಮಾರುಕಟ್ಟೆ ಬಂಡವಾಳವು ₹69 ಸಾವಿರ ಕೋಟಿ ಇದೆ ಎಂದು ಮೂಲಗಳು ತಿಳಿಸಿವೆ.

‘ಬಾಬಾ ಕಲ್ಯಾಣಿ ಅವರ ಹೆಸರಿಗೆ ಕಳಂಕ ತರುವುದೇ ಈ ದಾವೆಯ ಹಿಂದಿರುವ ಮೂಲ ಉದ್ದೇಶವಾಗಿದೆ’ ಎಂದು ಭಾರತ್ ಫೋರ್ಜ್ ಕಂಪನಿಯ ವಕ್ತಾರರು ಪ್ರತಿಕ್ರಿಯಿಸಿದ್ದಾರೆ.

ಕರ್ನಾಟಕದ ತಲಾ ಆದಾಯ ಹೆಚ್ಚಳ

ಪ್ರಜಾವಾಣಿ ವಾರ್ತೆ

ನವದೆಹಲಿ: ಕಳೆದ ಒಂದು ದಶಕದ ಅವಧಿಯಲ್ಲಿ ಗುಜರಾತ್, ಕರ್ನಾಟಕ, ತೆಲಂಗಾಣ ಹಾಗೂ ತಮಿಳುನಾಡು ರಾಜ್ಯದ ತಲಾ ಆದಾಯವು ಹೆಚ್ಚಳವಾಗಿದೆ ಎಂದು ಸ್ಟೇಟ್ ಬ್ಯಾಂಕ್ ಇಂಡಿಯಾದ ಸಂಶೋಧನಾ ವರದಿ ಹೇಳಿದೆ. ಈ ರಾಜ್ಯಗಳಿಗೆ ಹೋಲಿಸಿದರೆ ಪಶ್ಚಿಮ ಬಂಗಾಳ, ಬಿಹಾರ ಹಾಗೂ ಜಾರ್ಖಂಡ್ ರಾಜ್ಯದ ತಲಾ ಆದಾಯವು ನಿರೀಕ್ಷಿತ ಮಟ್ಟದಲ್ಲಿ ಏರಿಕೆಯಾಗಿಲ್ಲ ಎಂದು ತಿಳಿಸಿದೆ.

ದೇಶದ ಪಶ್ಚಿಮ ಹಾಗೂ ದಕ್ಷಿಣ ಭಾಗದಲ್ಲಿರುವ ರಾಜ್ಯಗಳಿಗೆ ಹೋಲಿಸಿದರೆ ಪೂರ್ವ ಹಾಗೂ ಉತ್ತರ ಭಾಗದಲ್ಲಿರುವ ರಾಜ್ಯಗಳ ತಲಾ ಆದಾಯದಲ್ಲಿ ಏರಿಕೆಯಾಗಿಲ್ಲ. ಇದರಿಂದ ರಾಜ್ಯಗಳ ನಡುವೆ ಅಸಮಾನತೆಯ ಬಿರುಕು ದೊಡ್ಡದಾಗುತ್ತಿದೆ ಎಂದು ಹೇಳಿದೆ.

2011–12ರಲ್ಲಿ ಗುಜರಾತ್‌ನ ತಲಾ ಆದಾಯವು ರಾಷ್ಟ್ರೀಯ ಸರಾಸರಿಗೆ ಹೋಲಿಸಿದರೆ 1.4 ಪಟ್ಟು ಹೆಚ್ಚು ಇತ್ತು. 2022–23ರಲ್ಲಿ 1.8 ಪಟ್ಟಿನಷ್ಟು ಇದೆ. ಕರ್ನಾಟಕದ ತಲಾ ಆದಾಯವು 1.7 ಪಟ್ಟು ಹಾಗೂ ತೆಲಂಗಾಣದ ತಲಾ ಆದಾಯವು 1.6 ಪಟ್ಟಿನಷ್ಟು ಇದೆ. ಆದರೆ ಪಶ್ಚಿಮ ಬಂಗಾಳ, ರಾಜಸ್ಥಾನ, ಬಿಹಾರದ ತಲಾ ಆದಾಯವು ಇಳಿಕೆಯಾಗಿದ್ದು, ರಾಷ್ಟ್ರೀಯ ಸರಾಸರಿಗಿಂತಲೂ ಕಡಿಮೆ ಇದೆ ಎಂದು ತಿಳಿಸಿದೆ.

ರಾಷ್ಟ್ರೀಯ ಸಾಂಖ್ಯಿಕ ಕಚೇರಿಯ (ಎನ್‌ಎಸ್‌ಒ) ವರದಿ ಅನ್ವಯ 2022–23ರಲ್ಲಿ ದೇಶದ ತಲಾ ಆದಾಯವು ₹1,16,226 ಇದೆ. ಗುಜರಾತ್‌ನ ತಲಾ ಆದಾಯವು ₹2,09,188 ಇದ್ದರೆ, ಬಿಹಾರದ ತಲಾ ಆದಾಯವು ₹34,864 ಇದೆ ಎಂದು ವಿವರಿಸಿದೆ.

ಭಾರತದಿಂದ ಭೂತಾನ್‌ಗೆ ₹500 ಕೋಟಿ ಬಿಡುಗಡೆ

ಥಿಂಪು (ಪಿಟಿಐ): ಗ್ಯಾಲ್‌ಸಂಗ್ ಯೋಜನೆಗೆ ಸಂಬಂಧಿಸಿದಂತೆ ಮೂಲಸೌಕರ್ಯ ವೃದ್ಧಿಗೆ ಭಾರತವು ಎರಡನೇ ಕಂತಾದ ₹500 ಕೋಟಿಯನ್ನು ಭೂತಾನ್‌ಗೆ ಬಿಡುಗಡೆ ಮಾಡಿದೆ.

ಪ್ರಧಾನಿ ನರೇಂದ್ರ ಮೋದಿ ಅವರು ಮಾರ್ಚ್ 23 ರಂದು ಭೂತಾನ್‌ಗೆ ಎರಡು ದಿನಗಳ ಭೇಟಿ ನೀಡಿದ್ದ ವೇಳೆ, ಹಿಮಾಲಯ ದೇಶದ ಅಭಿವೃದ್ಧಿಗಾಗಿ ಮುಂದಿನ ಐದು ವರ್ಷಗಳಲ್ಲಿ ₹10,000 ಕೋಟಿ ನೆರವು ನೀಡುವುದಾಗಿ ಘೋಷಣೆ ಮಾಡಿದ್ದರು. ಅದಾದ ವಾರದಲ್ಲಿಯೇ ದೆಹಲಿಯಿಂದ ಎರಡನೇ ಕಂತಿನ ಹಣ ಬಿಡುಗಡೆ ಆಗಿದೆ. ಈ ವರ್ಷದ ಜ. 28 ರಂದು ಮೊದಲ ಕಂತಾದ ₹500 ಕೋಟಿ ಬಿಡುಗಡೆ ಮಾಡಲಾಗಿತ್ತು.

ಮಾರುತಿ ಸುಜುಕಿ ಷೇರಿನ ಮೌಲ್ಯ ಹೆಚ್ಚಳ

ಸೆನ್ಸೆಕ್ಸ್ 526 ಅಂಶ ಏರಿಕೆ

ಮುಂಬೈ (ಪಿಟಿಐ): ಹೂಡಿಕೆದಾರರು ಬ್ಯಾಂಕ್, ತೈಲ ಮತ್ತು ಆಟೊ ಷೇರುಗಳನ್ನು ಹೆಚ್ಚಿನ ಪ್ರಮಾಣದಲ್ಲಿ ಖರೀದಿಸಿದ್ದರಿಂದ ದೇಶದ ಷೇರುಪೇಟೆಗಳಲ್ಲಿ ಬುಧವಾರ ಸಕಾರಾತ್ಮಕ ವಹಿವಾಟು ನಡೆಯಿತು.

ಭಾರತದ ಜಿಡಿಪಿ ಬೆಳವಣಿಗೆ ಬಗೆಗಿನ ಕ್ರೆಡಿಟ್ ರೇಟಿಂಗ್ ಸಂಸ್ಥೆಗಳ ಮುನ್ನೋಟ ಕೂಡ ಸೂಚ್ಯಂಕಗಳ ಏರಿಕೆಗೆ ಕಾರಣವಾಗಿದೆ. ಗುರುವಾರ ಅಮೆರಿಕದ ಜಿಡಿಪಿ ದತ್ತಾಂಶ ಬಿಡುಗಡೆಯಾಗಲಿದೆ. ಮುಂದಿನ ವಾರ ಆರ್‌ಬಿಐನ ಹಣಕಾಸು ನೀತಿ ಸಮಿತಿಯ ವರದಿ ಪ್ರಕಟವಾಗಲಿದೆ. ಇದರ ಮೇಲೆ ಹೂಡಿಕೆದಾರರು ದೃಷ್ಟಿ ನೆಟ್ಟಿರುವುದರಿಂದ ಸೂಚ್ಯಂಕಗಳು ಏರಿಕೆಯ ಹಾದಿ ಹಿಡಿದಿವೆ ಎಂದು ಮಾರುಕಟ್ಟೆ ವಿಶ್ಲೇಷಕರು ತಿಳಿಸಿದ್ದಾರೆ.

ಮುಂಬೈ ಷೇರುಪೇಟೆ ಸೂಚ್ಯಂಕ ಸೆನ್ಸೆಕ್ಸ್ 526 ಅಂಶ (ಶೇ 0.73) ಏರಿಕೆ ಕಂಡು 72,996 ಅಂಶಗಳಲ್ಲಿ ವಹಿವಾಟನ್ನು ಮುಕ್ತಾಯಗೊಳಿಸಿತು. ದಿನದ ವಹಿವಾಟಿನಲ್ಲಿ 668 ಅಂಶ ಏರಿಕೆಯಾಗಿ, 73,128 ಅಂಶಗಳಿಗೆ ತಲುಪಿತ್ತು.

ರಾಷ್ಟ್ರೀಯ ಷೇರುಪೇಟೆ ಸೂಚ್ಯಂಕ ನಿಫ್ಟಿ 118 ಅಂಶ (ಶೇ 0.54) ಏರಿಕೆ ಕಂಡು 22,123 ಅಂಶಗಳಲ್ಲಿ ವಹಿವಾಟು ಅಂತ್ಯವಾಯಿತು.

ಬಜಾಜ್ ಫೈನಾನ್ಸ್, ಟೈಟನ್, ಕೋಟಕ್ ಮಹೀಂದ್ರ ಬ್ಯಾಂಕ್, ಎಚ್‌ಡಿಎಫ್‌ಸಿ ಬ್ಯಾಂಕ್, ಇಂಡಸ್‌ಇಂಡ್ ಬ್ಯಾಂಕ್, ಮಹೀಂದ್ರ ಆ್ಯಂಡ್ ಮಹೀಂದ್ರ, ಲಾರ್ಸನ್ ಆ್ಯಂಡ್ ಟೂಬ್ರೊ ಷೇರುಗಳು ಏರಿಕೆ ಕಂಡಿವೆ. ವಿಪ್ರೊ, ಎಚ್‌ಸಿಎಲ್ ಟೆಕ್ನಾಲಜೀಸ್, ನೆಸ್ಲೆ, ಟಿಸಿಎಸ್ ಮತ್ತು ಟಾಟಾ ಮೋಟರ್ಸ್ ಷೇರಿನ ಮೌಲ್ಯ ಇಳಿಕೆಯಾಗಿದೆ.

ಮಾರುತಿ ಷೇರು ಏರಿಕೆ: ಬಿಎಸ್‌ಇಯಲ್ಲಿ ಮಾರುತಿ ಸುಜುಕಿ ಕಂಪನಿಯ ಷೇರಿನ ಮೌಲ್ಯ ಶೇ 2.40ರಷ್ಟು ಏರಿಕೆಯಾಗಿದ್ದು, ಪ್ರತಿ ಷೇರಿನ ಬೆಲೆ ₹12,550ಕ್ಕೆ ತಲುಪಿದೆ. ಎನ್‌ಎಸ್‌ಇಯಲ್ಲಿ ಷೇರಿನ ಮೌಲ್ಯವು ಶೇ 2.52ರಷ್ಟು ಏರಿಕೆಯಾಗಿದ್ದು, ಪ್ರತಿ ಷೇರಿನ ಬೆಲೆ ₹12,560 ಆಗಿದೆ.

ದಿನದ ವಹಿವಾಟಿನಲ್ಲಿ ಕಂಪನಿಯ ಒಟ್ಟು ಎಂ–ಕ್ಯಾಪ್ ₹4 ಲಕ್ಷ ಕೋಟಿಗೆ ಮುಟ್ಟಿತ್ತು. ವಹಿವಾಟಿನ ಅಂತ್ಯಕ್ಕೆ ₹3.94 ಲಕ್ಷ ಕೋಟಿ ಆಗಿದೆ.

₹20 ಲಕ್ಷ ಕೋಟಿ ದಾಟಿದ ರಿಲಯನ್ಸ್ ಇಂಡಸ್ಟ್ರೀಸ್ ಮಾರುಕಟ್ಟೆ ಮೌಲ್ಯ

Reliance Industries Limited

ರಿಲಯನ್ಸ್ ಇಂಡಸ್ಟ್ರೀಸ್ ಷೇರಿನ ಮೌಲ್ಯವು ಶೇ 4ರಷ್ಟು ಏರಿಕೆಯಾಗಿದ್ದು, ಒಂದೇ ದಿನ ಕಂಪನಿಯ ಮಾರುಕಟ್ಟೆ ಬಂಡವಾಳಕ್ಕೆ (ಎಂ–ಕ್ಯಾಪ್) ₹70,039 ಕೋಟಿ ಸೇರ್ಪಡೆಯಾಗಿದೆ. ಕಂಪನಿಯ ಒಟ್ಟು ಎಂ–ಕ್ಯಾಪ್ ₹20.21 ಲಕ್ಷ ಕೋಟಿ ದಾಟಿದೆ.

ಫೆಬ್ರುವರಿ 13ರಂದು ನಡೆದ ವಹಿವಾಟಿನಲ್ಲಿ ರಿಲಯನ್ಸ್ ಇಂಡಸ್ಟ್ರೀಸ್‌ನ ಮಾರುಕಟ್ಟೆ ಬಂಡವಾಳವು ಮೊದಲ ಬಾರಿಗೆ ₹20 ಲಕ್ಷ ಕೋಟಿ ದಾಟಿತ್ತು. ಈ ಸಾಧನೆಗೆ ಮಾಡಿದ ಭಾರತದ ಪ್ರಥಮ ಕಂಪನಿ ಎಂಬ ಹೆಗ್ಗಳಿಕೆಗೆ ಪಾತ್ರವಾಗಿತ್ತು.

ಬಿಎಸ್‌ಇಯಲ್ಲಿ ಷೇರಿನ ಮೌಲ್ಯ ಶೇ 3.60ರಷ್ಟು ಏರಿಕೆಯಾಗಿದ್ದು, ಪ್ರತಿ ಷೇರಿನ ಬೆಲೆ ₹2,987.85ಕ್ಕೆ ತಲುಪಿದೆ. ಎನ್‌ಎಸ್‌ಇಯಲ್ಲಿ ಷೇರಿನ ಮೌಲ್ಯ ಶೇ 3.48ರಷ್ಟು ಏರಿಕೆಯಾಗಿದ್ದು, ಪ್ರತಿ ಷೇರಿನ ಬೆಲೆ ₹2,983.75ಕ್ಕೆ ಮುಟ್ಟಿದೆ.

ವಹಿವಾಟಿನ ದಿನವೇ ಹಣ ಪಾವತಿ ಇಂದಿನಿಂದ ಹೊಸ ವ್ಯವಸ್ಥೆ ಜಾರಿ

ನವದೆಹಲಿ (ಪಿಟಿಐ): ಭಾರತೀಯ ಷೇರು ವಿನಿಮಯ ಕೇಂದ್ರಗಳಲ್ಲಿ ಗುರುವಾರದಿಂದ ‘ಟಿ + 0’ ಬೀಟಾ ಆವೃತ್ತಿ ಅನುಷ್ಠಾನಕ್ಕೆ ಭಾರತೀಯ ಷೇರುಪೇಟೆ ನಿಯಂತ್ರಣ ಮಂಡಳಿಯು (ಸೆಬಿ) ಸಜ್ಜಾಗಿದೆ.

ಈ ಹೊಸ ವ್ಯವಸ್ಥೆಯಿಂದ ಷೇರು ಖರೀದಿ ಮತ್ತು ಮಾರಾಟ ಮಾಡಿದ ವಹಿವಾಟಿನ ದಿನವೇ ಹೂಡಿಕೆದಾರರ ಡಿಮ್ಯಾಟ್ ಖಾತೆಗೆ ಹಣ ಪಾವತಿಯಾಗಲಿದೆ. ಆರಂಭಿಕ ಹಂತದಲ್ಲಿ ಇಚ್ಛಿಕ ಆಧಾರದ ಮೇಲೆ ಕೆಲವೇ ದಲ್ಲಾಳಿಗಳ ಮೂಲಕ ಆಯ್ದ ಷೇರುಗಳಲ್ಲಿ ಈ ವ್ಯವಸ್ಥೆಯನ್ನು ಅನುಷ್ಠಾನಗೊಳಿಸಲಾಗುತ್ತಿದೆ ಎಂದು ಸೆಬಿ ತಿಳಿಸಿದೆ.

ಬಜಾಜ್ ಆಟೊ, ವೇದಾಂತ, ಹಿಂಡಾಲ್ಕೊ, ಎಸ್‌ಬಿಐ, ಟ್ರೆಂಟ್, ಟಾಟಾ ಕಮ್ಯುನಿಕೇಷನ್, ನೆಸ್ಲೆ ಇಂಡಿಯಾ, ಸಿಪ್ಲಾ, ಎಂಆರ್‌ಎಫ್, ಜೆಎಸ್‌ಡಬ್ಲ್ಯು ಸ್ಟೀಲ್, ಬಿಪಿಸಿಎಲ್, ಒಎನ್‌ಜಿಸಿ, ಎನ್‌ಎಂಡಿಸಿ ಹಾಗೂ ಅಂಬುಜಾ ಸಿಮೆಂಟ್ಸ್ ಷೇರುಗಳಲ್ಲಿ ಈ ವ್ಯವಸ್ಥೆ ಜಾರಿಗೆ ಬರಲಿದೆ ಎಂದು ವಿವರಿಸಿದೆ.

ಪ್ರಸ್ತುತ ಷೇರು ವಿನಿಮಯ ಕೇಂದ್ರಗಳು ‘ಟಿ + 1’ ವ್ಯವಸ್ಥೆಯನ್ನು ಅನುಸರಿಸುತ್ತಿವೆ. ಇದರಡಿ ಆದೇಶ ಜಾರಿಯಾದ 24 ಗಂಟೆಯೊಳಗೆ ಹೂಡಿಕೆದಾರರ ಖಾತೆಗೆ ಹಣ ಜಮೆಯಾಗುತ್ತದೆ.

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
Log on to : https://homages.deccanherald.com
or
Scan QR code to access booking form

ಮುಂಬೈ ಧಾರಣೆ

ಶೇಂಗಾ 27-3-2024

ಜಾವಾ 70/80(ಹೊಸ)	11200-11300
ಜಾವಾ 80/90(ಹೊಸ)	10800-10900
ದಪ್ಪ ಮಧ್ಯಪ್ರದೇಶ(ಹೊಸ)	9800-9900
ದಪ್ಪ ಗುಜರಾತ್(ಹೊಸ)	10600-10700

ಶೇಂಗಾ ಎಣ್ಣೆ (10 ಕೆಜಿಗೆ)

ಕಚ್ಚಾ (ತೆರಿಗೆ ಬಿಟ್ಟು)	1510 (1510)
ಒಂದು ವಾರದ ಡೆಲಿವರಿ	1505 (1505)
ಸೋಯಾ ಕಚ್ಚಾ	915 (935)
ಪಾಮ್ ವಾರದ ಡೆಲಿವರಿ	932 (943)
ಸೂರ್ಯಕಾಂತಿ ಎಣ್ಣೆ ಕಚ್ಚಾ	895 (895)

ಚಿನ್ನ- ಬೆಳ್ಳಿ (ಜಿಎಸ್‌ಟಿ ಸೇರಿಲ್ಲ)

ಅಪರಂಜಿ ಚಿನ್ನ 10ಗ್ರಾಂ ₹66,500 (66,350)
ಬೆಳ್ಳಿ ಕೆ.ಜಿ ₹73,900 (74,200)

ಆವರಣದಲ್ಲಿ ಹಿಂದಿನ ದಿನದ ಧಾರಣೆ

ಮಾರುಕಟ್ಟೆ ಧಾರಣೆ

ಏಲಕ್ಕಿ ಧಾರಣೆ ಸಕಲೇಶಪುರ		ಅಡಿಕೆ (ಬಂಟ್ವಾಳ)			
ಕೂಳೆ	950-1000	ಕೋಕ	18000-28500	ಹಳೆಚಾಲಿ	35099-36509
ನಡುಗೋಲು	1050-1100	ಹೊಸತು	28500-36500	ಹೊಸಚಾಲಿ	30009-32509
ರಾಶಿ	1150-1200	ಹಳತು	36500-44000	ಸಿದ್ದಾಪುರ	
ರಾಶಿ ಉತ್ತಮ	1300-1350	ಶಿವಮೊಗ್ಗ		ಬಿಳಿಗೋಟು	24299-29099
ಹೆರಕಿದ್ದು	1900-2000	ಗೊರಬಲು	15009-31000	ಚಾಲಿ	34099-35899
ಹಸಿರು ಸಾಧಾರಣ	1200-1300	ಕುಮಟ		ಕೋಕ	24600-28249
ಹಸಿರು ಉತ್ತಮ	1600-1700	ಬೆಟ್ಟೆ	30299-40009	ಹೊಸಚಾಲಿ	31509-35699
ಹಸಿರು ಅತಿ ಉತ್ತಮ	1900-2000	ಚಿಪ್ಪು	23399-26609	ಕೆಂಪುಗೋಟು	30269-31699
ಕಾಳು ಮೆಣಸು	515	ಕೋಕ	8899-22009	ರಾಶಿ	44549-46599
				ತಟ್ಟಿಬೆಟ್ಟೆ	34399-38599

ಪತ್ತೆಯಾಗದ ಕಾರ್ಮಿಕರ ದೇಹಗಳು

ಬಾಲ್ಟಿಮೋರ್ ದುರಂತ • ಅವಘಡ ತಪ್ಪಿಸಲು ಕೈಮೀರಿ ಯತ್ನಿಸಿದ್ದ ಪೈಲಟ್

ವಾಷಿಂಗ್ಟನ್ (ಪಿಟಿಐ): ಹಡಗು ಡಿಕ್ಕಿ ಹೊಡೆದು ಬಾಲ್ಟಿಮೋರ್‌ನ ಸೇತುವೆ ಕುಸಿದ ಅವಘಡದಲ್ಲಿ ಆರು ಮಂದಿ ಕಾರ್ಮಿಕರು ಮೃತಪಟ್ಟಿದ್ದಾರೆ ಎಂದು ಭಾವಿಸಿರುವುದಾಗಿ ಮೇರಿಲ್ಯಾಂಡ್ ರಾಜ್ಯದ ಪೊಲೀಸ್ ಸೂಪರಿಂಟೆಂಡೆಂಟ್ ಕರ್ನಲ್ ರೋಲ್ಯಾಂಡ್ ಆರ್. ಬಟ್ಲರ್ ಜೂನಿಯರ್ ಬುಧವಾರ ತಿಳಿಸಿದರು.

ಶ್ರೀಲಂಕಾಕ್ಕೆ ಹೊರಟಿದ್ದ, ಸಿಂಗಪುರ ಧ್ವಜ ಹೊತ್ತಿದ್ದ ‘ಡಾಲಿ’ ಎಂಬ ಹೆಸರಿನ ಸರಕು ಸಾಗಣೆ ಹಡಗು ‘ಫ್ರಾನ್ಸಿಸ್ ಸ್ಕಾಟ್ ಕೀ’ ಸೇತುವೆಯ ಒಂದು ಆಧಾರ ಸ್ತಂಭಕ್ಕೆ ಮಂಗಳವಾರ ಡಿಕ್ಕಿ ಹೊಡೆದಿತ್ತು. ಸೇತುವೆ ಮೇಲಿನ ರಸ್ತೆಗುಂಡಿಗಳನ್ನು ಮುಚ್ಚುವ ಕೆಲಸದಲ್ಲಿ ಆಗ ಆರು ಕಾರ್ಮಿಕರು ನಿರತರಾಗಿದ್ದರು. ಸೇತುವೆ ಕುಸಿದದ್ದೇ ಅವರೆಲ್ಲ ನೀರುಪಾಲಾದರು. ಈ ಪೈಕಿ ಯಾರ ದೇಹಗಳನ್ನೂ ಪತ್ತೆಹಚ್ಚಲು ಅಗ್ನಿಶಾಮಕ ದಳದವರೂ ಸೇರಿದಂತೆ ರಕ್ಷಣಾ ಕಾರ್ಯದಲ್ಲಿ ನಿರತರಾದವರಿಗೆ ಸಾಧ್ಯವಾಗಿಲ್ಲ.

‘ದೀರ್ಘಕಾಲ ಈಜುಗಾರರು ಸತತವಾಗಿ ಪ್ರಯತ್ನಿಸಿದರೂ ಯಾರ ದೇಹಗಳೂ ಪತ್ತೆಯಾಗಿಲ್ಲ. ಹೀಗಾಗಿ ಆರೂ ಕಾರ್ಮಿಕರು ಮೃತಪಟ್ಟಿದ್ದಾರೆ ಎಂದು ಭಾವಿಸಿದ್ದೇವೆ’ ಎಂದು ಕರ್ನಲ್ ರೋಲ್ಯಾಂಡ್ ಹೇಳಿದರು.

ಕಾರ್ಮಿಕರ ಹೊರತಾಗಿ ಬೇರೆಯವರು ನೀರಿನಲ್ಲಿ ಮುಳುಗಿರುವುದರ ಕುರಿತು ಯಾವುದೇ ಸಾಕ್ಷ್ಯ ದೊರೆತಿಲ್ಲ ಎಂದೂ ಅವರು ತಿಳಿಸಿದರು.

ಅಮೆರಿಕನ್ ಪೈಲಟ್ಸ್ ಅಸೋಸಿಯೇಷನ್‌ನ ಕಾರ್ಯನಿರ್ವಾಹಕ ನಿರ್ದೇಶಕ ಕ್ಲೇ ಡೈಮಂಡ್ ಪ್ರಕಾರ, ವಿದ್ಯುತ್ ಸಮಸ್ಯೆ ಉಂಟಾಗಿದ್ದರಿಂದ ಎಂಜಿನ್ ತಟಸ್ಥವಾಯಿತು. ಆಗ ಪ್ರತಿ ಗಂಟೆಗೆ 15 ಕಿ.ಮೀ. ವೇಗದಲ್ಲಿ ಹಡಗು ಚಲಿಸುತ್ತಿತ್ತು. ಅವಘಡ ತಪ್ಪಿಸಲು ಏನೆಲ್ಲ ಸಾಧ್ಯವೋ ಎಲ್ಲವನ್ನೂ ಪೈಲಟ್ ಮಾಡಿದರು. ಆದರೂ ಪರಿಸ್ಥಿತಿ ಅವರ ಕೈಮೀರಿತ್ತು.

‘ಅಮೆರಿಕದ ಮೂಲಸೌಕರ್ಯ ಪರಂಪರೆಯ ಮುಖ್ಯ ರಚನೆಯಾಗಿದ್ದ ಬಾಲ್ಟಿಮೋರ್‌ನ ಸೇತುವೆಯನ್ನು ಮರುನಿರ್ಮಾಣ ಮಾಡುವ ಹಾದಿ ಸುಲಭವಿಲ್ಲ’ ಎಂದು ಅಮೆರಿಕ ಸಾರಿಗೆ ಇಲಾಖೆಯ ಕಾರ್ಯದರ್ಶಿ ಪೀಟ್ ಬಟಿಜೀಗ್ ಸುದ್ದಿಗೋಷ್ಠಿಯಲ್ಲಿ ತಿಳಿಸಿದರು.

ಅವಘಡ ಸಂಭವಿಸಿದ ಸ್ಥಳಕ್ಕೆ ಹೊಂದಿಕೊಂಡ ಬಂದರಿಗೆ ಹಡಗುಗಳು ಬರುವುದು ಮತ್ತು ಅಲ್ಲಿಂದ ಹೋಗುವುದನ್ನು ತಾತ್ಕಾಲಿಕವಾಗಿ ನಿಷೇಧಿಸಲಾಗಿದೆ ಎಂದು ಸ್ಥಳೀಯ ಆಡಳಿತ ತಿಳಿಸಿದೆ.

ಚಿಕಿತ್ಸೆ ನಂತರ ಒಬ್ಬರು ಮನೆಗೆ: ಅವಘಡದಲ್ಲಿ ಗಾಯಗೊಂಡಿದ್ದ ಒಬ್ಬ ವ್ಯಕ್ತಿಗೆ ಚಿಕಿತ್ಸೆ ನೀಡಿ, ಆಸ್ಪತ್ರೆಯಿಂದ ಮನೆಗೆ ಕಳುಹಿಸಲಾಗಿದೆ ಎಂದು ಮೇರಿಲ್ಯಾಂಡ್ ಮೆಡಿಕಲ್ ಸೆಂಟರ್ ವಿಶ್ವವಿದ್ಯಾಲಯದ ಆಘಾತ ಚಿಕಿತ್ಸಾ ಕೇಂದ್ರದ ಮುಖ್ಯಸ್ಥ ಡಾ. ಡೇವಿಡ್ ಎಫ್ರಾನ್ ಹೇಳಿದರು. ಗಾಯಗೊಂಡ ವ್ಯಕ್ತಿಯ ಹೆಸರು ಹಾಗೂ ಗಾಯದ ಸ್ವರೂಪವನ್ನು ಗುಟ್ಟಾಗಿ ಇಡಲಾಗಿದೆ ಎಂದರು.

ಹಡಗು ಡಿಕ್ಕಿ ಹೊಡೆದು ಕುಸಿದಿರುವ ಸೇತುವೆಯನ್ನು ಬಾಲ್ಟಿಮೋರ್‌ನ ಸ್ಥಳೀಯರು ದೂರದಿಂದಲೇ ವೀಕ್ಷಿಸಿದರು –ಎಎಫ್‌ಪಿ ಚಿತ್ರ

ಭಾರತೀಯ ಸಿಬ್ಬಂದಿಗೆ ಬೈಡನ್ ಶ್ಲಾಘನೆ

ಅವಘಡ ಸಂಭವಿಸುವ ಕೆಲವೇ ಕ್ಷಣಗಳ ಮೊದಲು ಹಡಗಿನಲ್ಲಿದ್ದ ಸಿಬ್ಬಂದಿ ನೀಡಿದ ಸಂದೇಶದಿಂದ ಸೇತುವೆ ಮೇಲೆ ವಾಹನಗಳು ಸಂಚರಿಸದಂತೆ ಕ್ಷಿಪ್ರವಾಗಿ ತಡೆಯಲು ಸಾಧ್ಯವಾಯಿತು. ಇದರಿಂದ ಅಸಂಖ್ಯಾತ ಜೀವಗಳನ್ನು ಉಳಿಸಿದಂತಾಯಿತು. ಹಡಗಿನಲ್ಲಿ ಇದ್ದ ಸಿಬ್ಬಂದಿಯ ಕೆಲಸ ಶ್ಲಾಘನೀಯ ಎಂದು ಶ್ವೇತಭವನದಲ್ಲಿ ಅಮೆರಿಕ ಅಧ್ಯಕ್ಷ ಜೋ ಬೈಡನ್ ಪ್ರತಿಕ್ರಿಯಿಸಿದರು. ಪೈಲಟ್‌ಗಳೂ ಸೇರಿ ಹಡಗಿನಲ್ಲಿ ಇದ್ದ 22 ಸಿಬ್ಬಂದಿ ಭಾರತೀಯರು.

ಹಡಗಿನಲ್ಲಿದ್ದ ಸಿಬ್ಬಂದಿಯಲ್ಲಿ ಒಬ್ಬರಿಗೆ ಅವಘಡದಿಂದಾಗಿ ಸಣ್ಣ ಪ್ರಮಾಣದ ಗಾಯಗಳಾಗಿವೆ ಎಂದು ಹಡಗು ನಿರ್ವಹಣಾ ಕಂಪನಿ ಸಿನರ್ಜಿ ಮರೀನ್ ಗ್ರೂಪ್ ತನ್ನ ವೆಬ್‌ಸೈಟ್‌ನಲ್ಲಿ ಪ್ರಕಟಿಸಿದೆ.

ಮಲೇಷ್ಯಾ ಪ್ರಧಾನಿ ಭೇಟಿ ಮಾಡಿದ ಜೈಶಂಕರ್: ದ್ವಿಪಕ್ಷೀಯ ಸಂಬಂಧ ಚರ್ಚೆ

ಕ್ವಾಲಾಲಂಪುರ (ಪಿಟಿಐ): ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಮಲೇಷ್ಯಾ ಪ್ರಧಾನಿ ಅನ್ವರ್ ಇಬ್ರಾಹಿಂ ಅವರನ್ನು ಬುಧವಾರ ಭೇಟಿ ಮಾಡಿ, ದ್ವಿಪಕ್ಷೀಯ ಸಂಬಂಧದ ಕುರಿತು ಮಾತುಕತೆ ನಡೆಸಿದರು.

ದ್ವಿಪಕ್ಷೀಯ ಬಾಂಧವ್ಯ ವೃದ್ಧಿಗೆ ಸಂಬಂಧಿಸಿದಂತೆ ಪ್ರಧಾನಿ ಅನ್ವರ್ ಅವರು ಉತ್ತಮ ದೃಷ್ಟಿಕೋನ ಹೊಂದಿದ್ದಾರೆ ಎಂದು ಶ್ಲಾಘಿಸಿದ ಜೈಶಂಕರ್, ಸಾಂಪ್ರದಾಯಿಕ ಮತ್ತು ಹೊಸ ಕ್ಷೇತ್ರಗಳಲ್ಲಿ ಉಭಯ ದೇಶಗಳ ನಡುವಿನ ಬಾಂಧವ್ಯ ವೃದ್ಧಿಗೆ ಮಹತ್ವಾಕಾಂಕ್ಷೆಯ ಕಾರ್ಯಸೂಚಿ ರೂಪಿಸಲು ಇದು ನೆರವಾಗುತ್ತದೆ ಎಂದು ತಿಳಿಸಿದ್ದಾರೆ.

ಇದಕ್ಕೂ ಮುನ್ನ ಜೈಶಂಕರ್ ಅವರು ಮಲೇಷ್ಯಾದ ವಿದೇಶಾಂಗ ಸಚಿವ ಮೊಹಮದ್ ಬಿನ್ ಹಾಜಿ ಹಸನ್ ಅವರನ್ನು ಭೇಟಿ ಮಾಡಿ, ಚರ್ಚಿಸಿದರು.

ಉಭಯ ದೇಶಗಳ ರಾಜಕೀಯ, ಆರ್ಥಿಕ, ರಕ್ಷಣೆ, ಡಿಜಿಟಲ್, ಸ್ಟಾರ್ಟ್‌ಅಪ್ ಕ್ಷೇತ್ರಗಳಲ್ಲಿ ಸಹಯೋಗ ವೃದ್ಧಿ ಸೇರಿದಂತೆ ಪ್ರಾದೇಶಿಕ ಮತ್ತು ಅಂತರರಾಷ್ಟ್ರೀಯ ವಿಷಯಗಳ ಕುರಿತು ಅಭಿಪ್ರಾಯಗಳನ್ನು ವಿನಿಮಯ ಮಾಡಿಕೊಳ್ಳಲಾಯಿತು. ಅಲ್ಲದೆ ಇಂಡೊ–ಪೆಸಿಫಿಕ್, ಪಶ್ಚಿಮ ಏಷ್ಯಾ ಮತ್ತು ಉಕ್ರೇನ್ ಕುರಿತ ದೃಷ್ಟಿಕೋನಗಳನ್ನು ಹಂಚಿಕೊಳ್ಳಲಾಯಿತು ಎಂದು ಮಲೇಷ್ಯಾ ವಿದೇಶಾಂಗ ಸಚಿವಾಲಯದ ಪ್ರಕಟಣೆ ತಿಳಿಸಿದೆ.

ಸಿಂಗಪುರ, ಫಿಲಿಪ್ಪೀನ್ಸ್, ಮಲೇಷ್ಯಾ ಪ್ರವಾಸದ ಮೂರನೇ ಹಾಗೂ ಕೊನೆಯ ದಿನದ ಪ್ರವಾಸದಲ್ಲಿ ಜೈಶಂಕರ್ ಅವರು ಕ್ವಾಲಾಲಂಪುರದಲ್ಲಿ ಇದ್ದಾರೆ.

ವಿದೇಶಾಂಗ ವ್ಯವಹಾರಗಳ ಸಚಿವ ಎಸ್. ಜೈಶಂಕರ್ ಅವರು ಮಲೇಷ್ಯಾ ಪ್ರಧಾನಿ ಅನ್ವರ್ ಇಬ್ರಾಹಿಂ ಅವರನ್ನು ಬುಧವಾರ ಭೇಟಿ ಮಾಡಿದರು –ಪಿಟಿಐ ಚಿತ್ರ

ಜರ್ಮನಿ: ಬಸ್ ಅಪಘಾತ– ಹಲವು ಪ್ರಯಾಣಿಕರ ಸಾವು

ಬರ್ಲಿನ್ (ಜರ್ಮನಿ) (ರಾಯಿಟರ್ಸ್): ‘ಪೂರ್ವ ಜರ್ಮನಿಯ ಲೀಪ್‌ಜಿಂಗ್‌ನಲ್ಲಿ ಬುಧವಾರ ಬಸ್ ಅಪಘಾತ ಸಂಭವಿಸಿದ್ದು, ಅನೇಕ ಪ್ರಯಾಣಿಕರು ಮೃತಪಟ್ಟಿದ್ದಾರೆ. ಹಲವರು ಗಂಭೀರವಾಗಿ ಗಾಯಗೊಂಡಿದ್ದಾರೆ’ ಎಂದು ಪೊಲೀಸರು ತಿಳಿಸಿದ್ದಾರೆ.

‘ಬರ್ಲಿನ್‌ನಿಂದ ಮ್ಯೂನಿಕ್‌ಗೆ ಸಂಪರ್ಕ ಕಲ್ಪಿಸುವ ಫ್ಲಿಕ್ಸ್‌ಬಸ್, ಎ9 ಮೋಟರ್‌ವೇನಲ್ಲಿ ಸಾಗುತ್ತಿದ್ದ ವೇಳೆ ಇದ್ದಕ್ಕಿದ್ದಂತೆ ಬಲಕ್ಕೆ ತಿರುಗಿದೆ. ಇದರಿಂದಾಗಿ ಐದು ಮಂದಿ ಮೃತಪಟ್ಟಿದ್ದಾರೆ’ ಎಂದು ಸ್ಥಳೀಯ ಮಾಧ್ಯಮ ವರದಿ ಮಾಡಿದೆ.

ಬರ್ಲಿನ್‌ನಿಂದ ಜ್ಯೂರಿಕ್‌ಗೆ ಬಸ್ ಸಾಗುತ್ತಿತ್ತು’ ಎಂದು ಪೊಲೀಸರು ತಿಳಿಸಿದ್ದಾರೆ.

ಥಾಯ್ಲೆಂಡ್: ‘ಸಲಿಂಗ ವಿವಾಹ ಕಾನೂನುಬದ್ಧ’ ಮಸೂದೆ ಅಂಗೀಕಾರ

ಬ್ಯಾಂಕಾಕ್ (ಎಪಿ): ಸಲಿಂಗ ವಿವಾಹವನ್ನು ಕಾನೂನುಬದ್ಧಗೊಳಿಸುವ ಮಸೂದೆಯನ್ನು ಬುಧವಾರ ಥಾಯ್ಲೆಂಡ್ ಸಂಸತ್ತು ಅನುಮೋದಿಸಿದೆ. ಈ ಮಸೂದೆಗೆ ರಾಜನಿಂದ ಅಂಗೀಕಾರ ದೊರೆಯಬೇಕಿದೆ. ಇದು ಕಾನೂನಾಗಿ ಜಾರಿಗೆ ಬಂದೊಡನೆ, ಯಾವುದೇ ಲಿಂಗದವರು ವಿವಾಹವಾದಲ್ಲಿ ಸಿಗಬೇಕಾದ ಸಮಾನ ಹಕ್ಕುಗಳನ್ನು ಕಾನೂನುಬದ್ಧಗೊಳಿಸಿದ ಮತ್ತು ಸಲಿಂಗ ವಿವಾಹಕ್ಕೆ ಅಧಿಕೃತ ಒಪ್ಪಿಗೆ ನೀಡಿದ ಆಗ್ನೇಯ ಏಷ್ಯಾದ ಮೊದಲ ರಾಷ್ಟ್ರವಾಗಿ ಥಾಯ್ಲೆಂಡ್ ಹೊರಹೊಮ್ಮಲಿದೆ.

ಈಗಾಗಲೇ ಏಷ್ಯಾದ ತೈವಾನ್ ಮತ್ತು ನೇಪಾಳ ಈ ಕಾನೂನನ್ನು ಜಾರಿಗೆ ತಂದಿವೆ. ರಾಜನಿಂದ ಮಸೂದೆಗಳು ತಿರಸ್ಕಾರಗೊಳ್ಳುವುದು ಅಪರೂಪ. ಹೀಗಾಗಿ ಈ ಮಸೂದೆಯು ಅಂಗೀಕೃತವಾಗಲಿರುವ ಸಾಧ್ಯತೆಯೇ ಹೆಚ್ಚು.

ಥಾಯ್ಲೆಂಡ್ ಸಂಸತ್ತಿನ ಕೆಳಮನೆಯ 415 ಸದಸ್ಯರಲ್ಲಿ 400 ಸದಸ್ಯರು ಮಸೂದೆಗೆ ಒಪ್ಪಿಗೆ ಸೂಚಿಸಿದ್ದಾರೆ. 10 ಜನರು ಮಾತ್ರ ಮಸೂದೆಯ ವಿರುದ್ಧ ಮತ ಚಲಾಯಿಸಿದ್ದರೆ, ಮೂವರು ಮತ ಚಲಾಯಿಸಿಲ್ಲ ಹಾಗೂ ಇಬ್ಬರು ಗೈರುಹಾಜರಾಗಿದ್ದರು.

ಈ ಮಸೂದೆಯು ಕಾನೂನಾಗಿ ಜಾರಿಗೆ ಬಂದಮೇಲೆ ಪುರುಷ ಮತ್ತು ಮಹಿಳೆ, ಗಂಡ ಮತ್ತು ಹೆಂಡತಿ ಎಂಬ ಲಿಂಗವನ್ನು ಸೂಚಿಸುವ ಪದಗಳನ್ನು ವಿವಾಹ ಪಾಲುದಾರ (ಮ್ಯಾರೇಜ್ ಪಾರ್ಟನರ್) ಹಾಗೂ ‘ವ್ಯಕ್ತಿ’ ಎಂಬ ವೈಯಕ್ತಿಕ ಪದಗಳಿಗೆ ಬದಲಾಯಿಸಲು ನಾಗರಿಕ ಮತ್ತು ವಾಣಿಜ್ಯ ಸಂಹಿತೆಗೆ ತಿದ್ದುಪಡಿ ತರುವ ಅವಕಾಶ ಕಲ್ಪಿಸಲಿದೆ. ಅಲ್ಲದೇ ದಂಪತಿಗೆ ಸಂಪೂರ್ಣ ಕಾನೂನು, ವೈದ್ಯಕೀಯ ಮತ್ತು ಆರ್ಥಿಕ ಹಕ್ಕುಗಳನ್ನು ನೀಡುತ್ತದೆ.

SAD DEMISE

Mr. Sunil Kumar Kaimal
With Profound grief we announce the Sad Demise of Our Managing Director Mr. Sunil Kumar Kaimal on 25.03.2024.
Deeply Mourned by
KAPL Management & Staff

ಪ್ರಥಮ ವರ್ಷದ ಪುಣ್ಯಸ್ಮರಣೆ

ಶ್ರೀಮತಿ ಸೀತಮ್ಮ
ಮರಣ: 28-03-2023
ನಿಮ್ಮ ನೆನಪು ನಮ್ಮ ಮನದಲ್ಲಿರಲಿ
ನಿಮ್ಮ ಆಶೀರ್ವಾದ ಸದಾ ನಮ್ಮೊಂದಿಗೆ ಇರಲಿ
ನಿಮ್ಮ ಆತ್ಮಕ್ಕೆ ಭಗವಂತನು ಚಿರಶಾಂತಿ ನೀಡಲಿ ಎಂದು ಪ್ರಾರ್ಥಿಸುತ್ತೇವೆ.
ಇಂತಿ ದುಃಖತಪ್ತರು
ಪತಿ, ಮಕ್ಕಳು, ಮೊಮ್ಮಕ್ಕಳು ಹಾಗೂ ಸೊಸೆಯಂದಿರು

ಪ್ರಜಾವಾಣಿ
ಶ್ರದ್ಧಾಂಜಲಿ & ಸವಿನೆನಪು ಜಾಹೀರಾತುಗಳು
ಸ್ವರ್ಗಸ್ಥರಾದ ನಿಮ್ಮ ಪ್ರೀತಿಪಾತ್ರರ ಸವಿನೆನಪು
ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ
ನಿಧನ/ಶ್ರದ್ಧಾಂಜಲಿ ಅಥವಾ ಸವಿನೆನಪು ಜಾಹೀರಾತು ಪ್ರಕಟಿಸಿರಿ
ನಿಮ್ಮ ಪ್ರೀತಿಪಾತ್ರರ ಅಗಲಿಕೆಯನ್ನು ಶ್ರದ್ಧಾಂಜಲಿ ಜಾಹೀರಾತು ಮೂಲಕ ಪ್ರಕಟಿಸಲು ಅಥವಾ ನಿಮ್ಮ ಪ್ರೀತಿಪಾತ್ರರ ಸವಿನೆನಪಿಗೆ ಸಂತಾಪ ಸೂಚನೆ ಪ್ರಕಟಿಸಲು ಬಯಸುವಿರಾದರೆ, ನಮ್ಮ ಡೆಕ್ಕನ್ ಹೆರಾಲ್ಡ್ ಮತ್ತು ಪ್ರಜಾವಾಣಿ ಪತ್ರಿಕೆಗಳಲ್ಲಿ ನಿಮ್ಮ ಜಾಹೀರಾತುಗಳನ್ನು ಪ್ರಕಟಿಸಲು ಅಗತ್ಯವಿರುವ ಎಲ್ಲ ಮಾರ್ಗದರ್ಶನ ನೀಡುತ್ತೇವೆ.
ನಿಮ್ಮ ಅನುಕೂಲಕ್ಕಾಗಿ ಸುಲಭವಾದ ನಮೂನೆಗಳು ಮತ್ತು ಪಠ್ಯ ಆಯ್ಕೆಗಳನ್ನು ಹೊಂದಿರುವ ಒಂದು ವೆಬ್‌ಸೈಟ್ ಕೂಟ ಆರಂಭಿಸಿದ್ದೇವೆ. ಆನ್‌ಲೈನ್ ಬುಕ್ಕಿಂಗ್ ಫಾರಂಗಾಗಿ ದಯವಿಟ್ಟು ನಮ್ಮ www.homepages.deccanherald.com ವೆಬ್‌ಸೈಟ್‌ಗೆ ಲಾಗಿನ್ ಮಾಡಿರಿ ಅಥವಾ QR ಕೋಡ್ ಸ್ಕ್ಯಾನ್ ಮಾಡಿರಿ.
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ
Vishal: +91 9845114560 | Jerry: +91 9731810277 |
Tanveer: +91 9886213331 | Ravichandra: +91 9901641752 |
Anitha: +91 9900428036

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
email: dhclassifieds@deccanherald.co.in
ಜಾಹೀರಾತುಗಳಿಗಾಗಿ ಸಂಪರ್ಕಿಸಿ:
080 - 45557160 /161/ 162/ 163/ 164
9845114560 / 9731810277/ 9886213331

ಭವಿಷ್ಯ
Astrology
★ಓಂದುರ್ಗ ಆಂಜನಂ★ ನಿಮ್ಮ ಯಾವುದೇ ಧೀರ್ಘಕಾಲದ ಎಲ್ಲೂ ಪರಿಹಾರವಾಗದ ಸ್ತ್ರೀಪುರುಷ ಸಂಬಂಧಿತ ಸರ್ವಸಮಸ್ಯೆಗಳಿಗೆ 3 ದಿನಗಳಲ್ಲಿ ಪರಿಹಾರ. ಶ್ರೀ.ದೇವಾನಂದನ್. 9845005009

ಉದ್ಯೋಗಾವಕಾಶ
General
ಕಂಪನಿಗಳಿಗೆ ಬೇಕಾಗಿದ್ದಾರೆ ಟಯೋಟಾ, ಟಾಟಾಮೋಟಾರ್ಸ್, ಬ್ರಿಟಾನಿಯಾ,TVS, ಕಂಪನಿಗಳಿಗೆ ಎಸ್.ಎಸ್.ಎಲ್.ಸಿ, ಪಿಯುಸಿ,ಡಿಗ್ರಿ, ITIನವರುಗಳು 18,000- 76,000/- (ವಿದ್ಯಾರ್ಹತೆಯಿಲ್ಲದವರಿಗೂ) ವಸತಿಯೂಟವಿದೆ. 7259552930

Part-Time Jobs
ಮನೆಯಲ್ಲೇ ಕುಳಿತು ನಾವು ಕೊಡುವ ಪುಸ್ತಕ ಬರೆಯುವ ಹಾಗೂ ಫಾರಂತುಂಬುವ ಮೂಲಕ, ತಿಂಗಳಿಗೆ, 15,000-20,000/- ಸಂಪಾದಿಸಿ.'ಕೊರಿಯರ್ ಸೌಲಭ್ಯವಿದೆ. 8884777502, 8884777503.

WORK FROM Home: ಮನೆಯಲ್ಲಿ ಕುಳಿತು 10,000–20,000 ದುಡಿಯಬಹುದು. ವಯೋಮಿತಿ ಇರುವುದಿಲ್ಲ. ಮೊದಲು ಬಂದವರಿಗೆ ಆದ್ಯತೆ. 8861041526, 9945791526

ಮನೆಯಿಂದಲೇ ಕುಳಿತು ಪುಸ್ತಕ ಬರೆಯುವ, ಫಾರಂ ತುಂಬುವ ಮೂಲಕ, ತಿಂಗಳಿಗೆ, 18,000-20,000.ವರೆಗೆ ಸಂಪಾದಿಸಿ. ಕೊರಿಯರ್ ಸೌಲಭ್ಯವಿದೆ. 8050064327, 8050064328.

ಪ್ರವಾಸ
Travel
★ಶ್ರೀಶ್ರೇಯಸ್ ಟೂರ್ಸ್★ 12.04.2024 6ದಿನಗಳು ಊಟಿ ವಾಲ್‌ಪರೈ,ಇಷಾಫೌಂಡೇಷನ್, 12.04.2024 5ದಿನಗಳು ಕಾಶಿ, ಅಯೋಧ್ಯಾ,ಗಯಾ, ಅಲಹಾಬಾದ್.27.04.2024, 18.05.2024 12/15/21ದಿನಗಳು ಈಶಾನ್ಯರಾಜ್ಯಗಳ (ಸೆವೆನ್ ಸಿಸ್ಟರ್ಸ್)ನ 6ರಾಜ್ಯಗಳು ಅಸ್ಸಾಂ, ಅರುಣಾಚಲ,ಮೇಘಾಲಯ, ನಾಗಲ್ಯಾಂಡ್,ತ್ರಿಪುರ, ಮಿಝೋರಾಂ.28.04.2024 ನರ್ಮದಾಪುಷ್ಕರಾಲು, ಪ್ರತಿ 5ದಿನಕ್ಕೊಮ್ಮೆ ವೋಲ್ವೋ ಬಸ್ಸಿನಲ್ಲಿ ಉಜ್ಜಯಿನಿ,ಓಂಕಾರೇಶ್ವರ, ಮಹೇಶ್ವರ.12.05.2024 10ದಿನಗಳು ಅಖಂಡ ಕೇರಳರಾಜ್ಯ ಪ್ರವಾಸ.18.05.2024 10ದಿನಗಳು ಅಯೋಧ್ಯೆ,ಅಖಂಡ ನೇಪಾಳ ರಾಷ್ಟ್ರ (ಮುಕ್ತಿನಾಥ ಸಹಿತ)ಪ್ರವಾಸ. 8073824856/ 9206979202

14 ದಿನಗಳ ಚಾರ್ಧಾಮ್ ಪ್ರವಾಸ 11.05.24. 14ದಿನಗಳ ಅಯೋಧ್ಯೆ,ಕಾಶಿ ನೇಪಾಳ ಪ್ರವಾಸ 21.05.24. 14ದಿನಗಳ ಅಮರನಾಥ ಪ್ರವಾಸ 23.06.24. Twite Holidays. ಸಂಪರ್ಕಿಸಿ: 9611801143, 8088559962.

ಸೌತ್ ಆಫ್ರಿಕಾ 8 ದಿನಗಳು, 8 ದಿನಗಳ ನೇಪಾಳ ಮುಕ್ತಿನಾಥ ಭೂತಾನ್ 8 ದಿನಗಳು, 6 ದಿನಗಳ ಬಾಲಿ, 7/11 ದಿನಗಳ ಸಿಂಗಾಪುರ್ ಮಲೇಶಿಯಾ ಥೈಲ್ಯಾಂಡ್, 4 ದಿನಗಳ ಲಕ್ಷದೀಪ(ಕ್ರೂಸ), ಆಸ್ಟ್ರೇಲಿಯಾ ನ್ಯೂಜಿಲ್ಯಾಂಡ್ 18 ದಿನಗಳು ಭಟ್ ಟ್ರಾವೆಲ್ಸ್ 9844166555 7975132507

6 ದಿನಗಳ ಬಾಲಿ. 8 ದಿನಗಳ ಮುಕ್ತಿನಾಥ ನೇಪಾಳ ವಿಶೇ ಷ. 6 ದಿನಗಳ ಶ್ರೀಲಂಕಾ. 11 ದಿನಗಳ ವಿಯೆಟ್ನಾಂ ಮತ್ತು ಕಾಂಬೋಡಿಯ. 10 ದಿನಗಳ ಸೌತ್‌ಆಫ್ರಿಕಾ. ಆರ್ಕಿಡ್ ಟ್ರಾವೆಲ್ ಅಂಡ್ ಟೂರ್ಸ್. ಬಸವನಗುಡಿ ಬೆಂಗಳೂರು.04. 9880079588 9900080793

9 ದಿನಗಳ ಅಯೋಧ್ಯ ಕಾಶಿ, ಚಿತ್ರಕೂಟ ಮತ್ತು 7 ದಿನಗಳ ಅಮರನಾಥಯಾತ್ರೆ 13 ದಿನಗಳ ಚಾರ್‌ಧಾಮ್‌ಯಾತ್ರೆ . ಸಂಪರ್ಕಿಸಿ: ಶ್ರೀನಂದಿ ಹಾಲಿಡೇಸ್. 9980270467 9740228186

19.4.2024, 1.5.2024 ಅಯೋಧ್ಯಾ,ಕಾಶಿ,ಗಯಾ, ಪ್ರಯಾಗ್‌ರಾಜ್, 9.5.2024ದೆಹಲಿ,ಹರಿದ್ವಾರ, ಆಗ್ರಾ,ಪ್ರಯಾಗ್‌ರಾಜ್, ಅಯೋಧ್ಯಾ,ಕಾಶಿ, ಗಯಾ9.6.2024 ಯಮುನೋತ್ರಿ,ಗಂಗೋತ್ರಿ,ಕೇದಾರನಾಥ್,ಬದ್ರಿನಾಥ್27.6.2024 ಅಮರನಾಥ್,ಅಮೃತಸರ್, ವೈಷ್ಣೋದೇವಿ,ಕರ್ನಾಟಕ ಹೆರಿಟೇಜ್ ಟೂರ್ಸ್ (ಹನುಮಂತನಗರ) 9845035349, 9482435755

ಪ್ರಜಾವಾಣಿ ಕ್ಲಾಸಿಫೈಡ್ಸ್ ಪ್ರತಿಯೊಬ್ಬರಿಗೂ ಉಪಯುಕ್ತ
ಹೆಸರು ಬದಲಾವಣೆ
ಕರ್ನಾಟಕದ ಎಲ್ಲಾ ಆವೃತ್ತಿಯಲ್ಲಿ ನಿಮ್ಮ ಜಾಹೀರಾತು ಬುಕ್ ಮಾಡಿ
@50/-* PER WORDS
www.dhclassifieds.com
ಬುಕ್ ಮಾಡಿ
ಹೆಚ್ಚಿನ ವಿವರಗಳಿಗಾಗಿ ಸಂಪರ್ಕಿಸಿ:
+91 7795158424 | +91 9901641752
+91 9731810277 | +91 9900428036
*Conditions apply

ಓದುಗರ ಗಮನಕ್ಕೆ
ಪತ್ರಿಕೆಯಲ್ಲಿ ಪ್ರಕಟವಾಗುವ ಜಾಹೀರಾತುಗಳು ವಿಶ್ವಾಸಾರ್ಹವಾದವು. ಆದರೆ, ಅದರಲ್ಲಿ ಪ್ರತಿಪಾದಿತವಾದ ವಸ್ತು, ವಿಷಯ, ವಿಚಾರಗಳು ಜಾಹೀರಾತುದಾರರ ಅಭಿಪ್ರಾಯ ಆಗಿರುತ್ತವೆಯೇ ಹೊರತು ಪತ್ರಿಕೆಯ ಅಭಿಪ್ರಾಯವಾಗಿರುವುದಿಲ್ಲ. ಈ ಅಭಿಪ್ರಾಯಗಳಿಗೆ ಪತ್ರಿಕೆ ಯಾವುದೇ ರೀತಿಯಿಂದ ಹೊಣೆಯಲ್ಲ.
ಜಾಹೀರಾತು ವ್ಯವಸ್ಥಾಪಕರು, ದಿ ಪ್ರಿಂಟರ್ಸ್ (ಮೈಸೂರು) ಪ್ರೈವೇಟ್ ಲಿ. ಬೆಂಗಳೂರು

ಐಪಿಎಲ್‌ನಲ್ಲಿ ಗರಿಷ್ಠ ಸ್ಕೋರ್ ದಾಖಲಿಸಿದ ಹೈದರಾಬಾದ್ • ಮುಂಬೈ ಇಂಡಿಯನ್ಸ್ ದಿಟ್ಟ ಆಟ

ರನ್ ಪ್ರವಾಹದಲ್ಲಿ ಗೆದ್ದ ಸನ್‌ರೈಸರ್ಸ್

ಹೆನ್ರಿಚ್ ಕ್ಲಾಸನ್ –ಎಎಫ್‌ಪಿ ಚಿತ್ರ

ಟ್ರಾವಿಸ್ ಹೆಡ್ –ಪಿಟಿಐ ಚಿತ್ರ

ಅಭಿಷೇಕ್ ಶರ್ಮಾ

ಹೈದರಾಬಾದ್ (ಪಿಟಿಐ): ಇಂಡಿಯನ್ ಪ್ರೀಮಿಯರ್ ಲೀಗ್ ಕ್ರಿಕೆಟ್ ಟೂರ್ನಿಯ ಇತಿಹಾಸದಲ್ಲಿ ಇದೇ ಮೊದಲ ಬಾರಿಗೆ ಒಟ್ಟು ಐದನೂರಕ್ಕೂ ಹೆಚ್ಚು ರನ್‌ಗಳು ಹರಿದ ಪಂದ್ಯದಲ್ಲಿ ಸನ್‌ರೈಸರ್ಸ್ ಹೈದರಾಬಾದ್ ತಂಡವು ಜಯಭೇರಿ ಬಾರಿಸಿತು.

ಉಪ್ಪಳದ ರಾಜೀವಗಾಂಧಿ ಕ್ರಿಕೆಟ್ ಕ್ರೀಡಾಂಗಣದಲ್ಲಿ ಬುಧವಾರ ಮೊದಲಿಗೆ ಬ್ಯಾಟಿಂಗ್ ಮಾಡಿದ ಸನ್‌ರೈಸರ್ಸ್ ತಂಡವು ಮುಂಬೈ ಇಂಡಿಯನ್ಸ್ ಎದುರು ನಡೆದ ಪಂದ್ಯದಲ್ಲಿ 20 ಓವರ್‌ಗಳಲ್ಲಿ 3 ವಿಕೆಟ್‌ಗಳಿಗೆ 277 ರನ್‌ಗಳನ್ನು ಗಳಿಸಿತು. ಅದಕ್ಕುತ್ತರವಾಗಿ ಮುಂಬೈ ತಂಡದ ಬ್ಯಾಟರ್‌ಗಳೂ ವಿಜೃಂಭಿಸಿದರು. ಮುಂಬೈ ನಿಗದಿಯ ಓವರ್‌ಗಳಲ್ಲಿ 5 ವಿಕೆಟ್‌ಗಳಿಗೆ 246 ರನ್ ಗಳಿಸಿತು. ಪ್ಯಾಟ್ ಕಮಿನ್ಸ್ ನಾಯಕತ್ವದ ಸನ್‌ರೈಸರ್ಸ್ ತಂಡವು 31 ರನ್‌ಗಳಿಂದ ಜಯಿಸಿತು.

ಹೈದರಾಬಾದ್ ತಂಡವು ಐಪಿಎಲ್ ಟೂರ್ನಿಯಲ್ಲಿಯೇ ಅತ್ಯಂತ ದೊಡ್ಡ ಮೊತ್ತವನ್ನು ಗಳಿಸಿ ಇತಿಹಾಸ ಬರೆಯಿತು. 11 ವರ್ಷಗಳ ಹಿಂದೆ ರಾಯಲ್ ಚಾಲೆಂಜರ್ಸ್ ಬೆಂಗಳೂರು ತಂಡವು 263 ರನ್ ಗಳಿಸಿದ್ದು ಇದುವರೆಗಿನ ದಾಖಲೆಯಾಗಿತ್ತು.

ಟಾಸ್ ಗೆದ್ದ ಮುಂಬೈ ತಂಡವು ಫೀಲ್ಡಿಂಗ್ ಆಯ್ಕೆ ಮಾಡಿಕೊಂಡಿತು. 11 ರನ್ ಗಳಿಸಿದ ಮಯಂಕ್ ಅಗರವಾಲ್ ಐದನೇ ಓವರ್‌ನಲ್ಲಿ ಔಟಾದರು. ವಿಕೆಟ್ ಪಡೆದ ಮುಂಬೈ ನಾಯಕ ಹಾರ್ದಿಕ್ ಪಾಂಡ್ಯ ಸಂಭ್ರಮಿಸಿದರು. ಆದರೆ ನಂತರದ ಅವಧಿಯಲ್ಲಿ ಟ್ರಾವಿಸ್ ಹೆಡ್ (62; 24ಎ) ಹಾಗೂ ಅಭಿಷೇಕ್ ಶರ್ಮಾ (63; 23ಎ) ಅವರು ಸ್ಫೋಟಕ ಬ್ಯಾಟಿಂಗ್‌ಗೆ ಬೌಲರ್‌ಗಳು ದಿಕ್ಕು ತಪ್ಪಿದರು. ಶರ್ಮಾ ಏಳು ಸಿಕ್ಸರ್ ಮತ್ತು ಮೂರು ಬೌಂಡರಿ ಬಾರಿಸಿದರು. ಹೆಡ್ ಒಂಬತ್ತು ಬೌಂಡರಿ ಮತ್ತು ಮೂರು ಸಿಕ್ಸರ್ ಗಳಿಸಿದರು. ಇದರಿಂದಾಗಿ 7.5 ಓವರ್‌ಗಳಲ್ಲಿ ತಂಡದ ಮೊತ್ತವು 113 ರನ್‌ಗಳಾದವು.

18 ಎಸೆತಗಳಲ್ಲಿ ಅರ್ಧಶತಕ ಪೂರೈಸಿದ ಹೆಡ್ ಅವರು ಈ ಹಿಂದೆ ಡೇವಿಡ್ ವಾರ್ನರ್ ಮಾಡಿದ್ದ ದಾಖಲೆ ಮುರಿದರು. ಆದರೆ ಇನ್ನೊಂದು ಬದಿಯಲ್ಲಿದ್ದ ಶರ್ಮಾ, 16 ಎಸೆತಗಳಲ್ಲಿ ಅರ್ಧಶತಕ ಗಳಿಸಿ, ಹೆಡ್ ದಾಖಲೆಯನ್ನು ಮೀರಿದರು. ಕ್ರೀಸ್‌ಗೆ ಬಂದ ಏಡನ್ ಮರ್ಕರಂ (ಔಟಾಗದೆ 42; 28ಎ) ಕೂಡ ಬೀಸಾಟವಾಡಿದರು. ಶರ್ಮಾ 11ನೇ ಓವರ್‌ನಲ್ಲಿ ಔಟಾದರು. ಆಗ ಕ್ರೀಸ್‌ಗೆ ಬಂದ ಹೆನ್ರಿಚ್ ಕ್ಲಾಸೆನ್ (ಔಟಾಗದೆ 80; 34ಎ) ಎಲ್ಲರಿಗಿಂತ ಹೆಚ್ಚು ಬೀಸಾಟವಾಡಿದರು.

ಗುರಿ ಬೆನ್ನಟ್ಟಿದ ಮುಂಬೈ ತಂಡವೂ ಬಿರುಸಿನ ಆರಂಭ ಮಾಡಿತು. ರೋಹಿತ್ ಶರ್ಮಾ (26; 12ಎ) ಹಾಗೂ ಇಶಾನ್ ಕಿಶನ್ (34;13ಎ) ಮೊದಲ ವಿಕೆಟ್‌ಗೆ 3.1 ಓವರ್‌ಗಳಲ್ಲಿ 56 ರನ್ ಸೇರಿಸಿದರು. ಇಶಾನ್ ಔಟಾದ ಮರು ಓವರ್‌ನಲ್ಲಿಯೇ ರೋಹಿತ್ ಕೂಡ ನಿರ್ಗಮಿಸಿದರು. ಈ ಸಂದರ್ಭದಲ್ಲಿ ಮುಂಬೈ ಸುಲಭವಾಗಿ ಸೋಲುವಂತೆ ಕಂಡಿತು.

ಆದರೆ, ತಿಲಕ್ ವರ್ಮಾ (64; 34ಎ) ಹಾಗೂ ಟಿಮ್ ಡೇವಿಡ್ (ಔಟಾಗದೆ 42) ಅವರು ಬಿರುಸಿನ ಆಟವಾಡಿದರು. ಹಾರ್ದಿಕ್ 20 ಎಸೆತಗಳಲ್ಲಿ 24 ರನ್ ಗಳಿಸಿದರು. ಇಂಪ್ಯಾಕ್ಟ್ ಪ್ಲೇಯರ್ ರೊಮಾರಿಯೊ ಶೆಫರ್ಡ್ 6 ಎಸೆತಗಳಲ್ಲಿ 15 ರನ್ ಹೊಡೆದರು. ಆದರೂ ಗೆಲುವಿನ ಗುರಿ ಮುಟ್ಟಲು ಸಾಧ್ಯವಾಗಲಿಲ್ಲ. ಉಭಯ ತಂಡಗಳ ಎಲ್ಲ ಬೌಲರ್‌ಗಳೂ ಬಸವಳಿದರು.

523 ಪಂದ್ಯದಲ್ಲಿ ದಾಖಲಾದ ಒಟ್ಟು ರನ್‌ಗಳು	**38** ಪಂದ್ಯದಲ್ಲಿ ಬ್ಯಾಟರ್‌ಗಳು ಗಳಿಸಿದ ಒಟ್ಟು ಸಿಕ್ಸರ್‌ಗಳು	**31** ಉಭಯ ತಂಡಗಳು ಸೇರಿ ದಾಖಲಿಸಿದ ಒಟ್ಟು ಬೌಂಡರಿಗಳು

ಐಪಿಎಲ್‌ನಲ್ಲಿ ತಂಡವೊಂದರ ಗರಿಷ್ಠ ರನ್

ತಂಡ	ರನ್	ಎದುರಾಳಿ	ವರ್ಷ
ಸನ್‌ರೈಸರ್ಸ್ ಹೈದರಾಬಾದ್	3ಕ್ಕೆ 277	ಮುಂಬೈ ಇಂಡಿಯನ್ಸ್	2024
ರಾಯಲ್ ಚಾಲೆಂಜರ್ಸ್ ಬೆಂಗಳೂರು	5ಕ್ಕೆ 263	ಪುಣೆ ವಾರಿಯರ್ಸ್ ಇಂಡಿಯಾ	2013
ಲಖನೌ ಸೂಪರ್ ಜೈಂಟ್ಸ್	5ಕ್ಕೆ 256	ಪಂಜಾಬ್ ಕಿಂಗ್ಸ್	2023
ರಾಯಲ್ ಚಾಲೆಂಜರ್ಸ್ ಬೆಂಗಳೂರು	3ಕ್ಕೆ 248	ಗುಜರಾತ್ ಲಯನ್ಸ್	2016
ಚೆನ್ನೈ ಸೂಪರ್ ಕಿಂಗ್ಸ್	5ಕ್ಕೆ 246	ರಾಜಸ್ಥಾನ ರಾಯಲ್ಸ್	2010

ಸ್ಕೋರ್ ಕಾರ್ಡ್

ಸನ್‌ರೈಸರ್ಸ್ ಹೈದರಾಬಾದ್ 20 ಓವರ್‌ಗಳಲ್ಲಿ 3ಕ್ಕೆ 277

ಮಯಂಕ್ ಸಿ ಡೇವಿಡ್ ಬಿ ಪಾಂಡ್ಯ 11 (13ಎ, 4x1)
ಟ್ರಾವಿಸ್ ಸಿ ನಮನ್ ಬಿ ಕೋಟ್ಜಿ 62 (24ಎ, 4x9, 6x3)
ಅಭಿಷೇಕ್ ಸಿ ನಮನ್ ಬಿ ಪಿಯೂಷ್ 63 (23ಎ, 4x3, 6x7)
ಏಡನ್ ಮರ್ಕರಂ ಔಟಾಗದೆ 42 (28ಎ, 4x2, 6x1)
ಹೆನ್ರಿಚ್ ಕ್ಲಾಸೆನ್ ಔಟಾಗದೆ 80 (34ಎ, 4x4, 6x7)
ಇತರೆ: 19 (ಬೈ 4, ಲೆಗ್‌ಬೈ 1, ನೋಬಾಲ್ 2, ವೈಡ್ 12)
ವಿಕೆಟ್ ಪತನ: 1-45 (ಮಯಂಕ್ ಅಗರವಾಲ್; 4.1), 2-113 (ಟ್ರಾವಿಸ್ ಹೆಡ್;7.5), 3-161 (ಅಭಿಷೇಕ್ ಶರ್ಮಾ; 10.6)
ಬೌಲಿಂಗ್: ಕ್ವೆನಾ ಮಫಕಾ 4-0-66-0, ಹಾರ್ದಿಕ್ ಪಾಂಡ್ಯ 4-0-46-1, ಜಸ್‌ಪ್ರೀತ್ ಬೂಮ್ರಾ 4-0-36-0, ಜೆರಾಲ್ಡ್ ಕೋಟ್ಜಿ 4-0-57-1, ಪಿಯೂಷ್ ಚಾವ್ಲಾ 2-0-34-1, ಶಮ್ಸ್ ಮುಲಾನಿ 2-0-33-0

ಮುಂಬೈ ಇಂಡಿಯನ್ಸ್ 20 ಓವರ್‌ಗಳಲ್ಲಿ 5ಕ್ಕೆ 246

ರೋಹಿತ್ ಸಿ ಅಭಿಷೇಕ್ ಬಿ ಕಮಿನ್ಸ್ 26 (12ಎ, 4x1, 6x3)
ಇಶಾನ್ ಸಿ ಮರ್ಕರಂ 34 (13ಎ, 4x2, 6x4)
ನಮನ್ ಸಿ ಕಮಿನ್ಸ್ ಬಿ ಉನದ್ಕತ್ 30 (14ಎ, 4x2, 6x2)
ತಿಲಕ್ ಸಿ ಅಗರವಲ್ ಸಿ ಕಮಿನ್ಸ್ 64 (34ಎ, 4x2, 6x6)
ಹಾರ್ದಿಕ್ ಸಿ ಕ್ಲಾಸೆನ್ ಬಿ ಉನದ್ಕತ್ 24 (20ಎ, 4x1, 6x1)
ಟಿಮ್ ಡೇವಿಸ್ ಔಟಾಗದೆ 42 (22ಎ, 4x2, 6x3)
ರೊಮಾರಿಯೋ ಶೆಫರ್ಡ್ ಔಟಾಗದೆ 15 (6ಎ, 4x2, 6x1)
ಇತರೆ: 11 (ಬೈ 1, ಲೆಗ್‌ಬೈ 4, ನೋಬಾಲ್ 1, ವೈಡ್ 5)
ವಿಕೆಟ್ ಪತನ: 1-56 (ಇಶಾನ್ ಕಿಶನ್; 3.2), 2-66 (ರೋಹಿತ್ ಶರ್ಮಾ; 4.3), 3-150 (ನಮನ್ ಧೀರ್; 10.4), 4-182 (ತಿಲಕ್ ವರ್ಮಾ; 14.1), 5-224 (ಹಾರ್ದಿಕ್ ಪಾಂಡ್ಯ;17.6)
ಬೌಲಿಂಗ್: ಭುವನೇಶ್ವರ ಕುಮಾರ್ 4-0-53-0, ಜಯದೇವ್ ಉನದ್ಕತ್ 4-0-47-2, ಶಹಬಾಜ್ ಅಹಮದ್ 3-0-39-1, ಪ್ಯಾಟ್ ಕಮಿನ್ಸ್ 4-0-35-2, ಉಮ್ರಾನ್ ಮಲಿಕ್ 1-0-15-0, ಮಯಂಕ್ ಮಾರ್ಕಂಡೆ 4-0-52-0
ಪಂದ್ಯದ ಆಟಗಾರ: ಅಭಿಷೇಕ್ ಶರ್ಮಾ

ಫಲಿತಾಂಶ: ಸನ್‌ರೈಸರ್ಸ್ ಹೈದರಾಬಾದ್‌ಗೆ 31 ರನ್ ಜಯ

ಇಂಡಿಯನ್ ಪ್ರೀಮಿಯರ್ ಲೀಗ್ ಅಂಕಪಟ್ಟಿ

ತಂಡ	ಪಂದ್ಯ	ಗೆಲುವು	ಸೋಲು	ಅಂಕ	ಎನ್‌ಆರ್‌ಆರ್
ಚೆನ್ನೈ ಸೂಪರ್ ಕಿಂಗ್ಸ್	2	2	0	4	1.979
ರಾಜಸ್ಥಾನ ರಾಯಲ್ಸ್	1	1	0	2	1.000
ಸನ್‌ರೈಸರ್ಸ್ ಹೈದರಾಬಾದ್	2	1	1	2	0.675
ಕೋಲ್ಕತ್ತ ನೈಟ್ ರೈಡರ್ಸ್	1	1	0	2	0.200
ಪಂಜಾಬ್ ಕಿಂಗ್ಸ್	2	1	1	2	0.025
ರಾಯಲ್ ಚಾಲೆಂಜರ್ಸ್ ಬೆಂಗಳೂರು	2	1	1	2	-0.180
ಗುಜರಾತ್ ಟೈಟನ್ಸ್	2	1	1	2	-1.425
ಡೆಲ್ಲಿ ಕ್ಯಾಪಿಟಲ್ಸ್	1	0	1	0	-0.455
ಮುಂಬೈ ಇಂಡಿಯನ್ಸ್	2	0	2	0	-0.925
ಲಖನೌ ಸೂಪರ್ ಜೈಂಟ್ಸ್	1	0	1	0	-1.000

ಆರೆಂಜ್ ಕ್ಯಾಪ್: ಹೆನ್ರಿಕ್ ಕ್ಲಾಸೆನ್, ಎಸ್‌ಆರ್‌ಎಚ್ (143 ರನ್)

ಪರ್ಪಲ್ ಕ್ಯಾಪ್: ಮುಸ್ತಫಿಜುರ್ ರೆಹಮಾನ್, ಸಿಎಸ್‌ಕೆ (6 ವಿಕೆಟ್)

ರಾಜಸ್ಥಾನ ರಾಯಲ್ಸ್– ಡೆಲ್ಲಿ ಕ್ಯಾಪಿಟಲ್ಸ್ ಹಣಾಹಣಿ ಇಂದು: ರಿಷಭ್ ಪಂತ್ ಮೇಲೆ ಎಲ್ಲರ ಚಿತ್ತ

ವಿಕೆಟ್‌ಕೀಪರ್ ನಾಯಕರ ಮುಖಾಮುಖಿ

ಜೈಪುರ (ಪಿಟಿಐ): ಭಾರತ ಕ್ರಿಕೆಟ್ ತಂಡದ ಇಬ್ಬರು ವಿಕೆಟ್‌ಕೀಪರ್‌ಗಳ ನಾಯಕತ್ವದ ತಂಡಗಳ ಮುಖಾಮುಖಿಗೆ ಸವಾಯಿ ಮಾನಸಿಂಗ್ ಕ್ರಿಕೆಟ್ ಕ್ರೀಡಾಂಗಣ ಸಜ್ಜಾಗಿದೆ.

ಗುರುವಾರ ಇಲ್ಲಿ ನಡೆಯಲಿರುವ ಐಪಿಎಲ್ ಪಂದ್ಯದಲ್ಲಿ ಸಂಜು ಸ್ಯಾಮ್ಸನ್ ನಾಯಕತ್ವದ ರಾಜಸ್ಥಾನ ರಾಯಲ್ಸ್ ತಂಡವು ರಿಷಭ್ ಪಂತ್ ಮುನ್ನಡೆಸುತ್ತಿರುವ ಡೆಲ್ಲಿ ಕ್ಯಾಪಿಟಲ್ಸ್ ವಿರುದ್ಧ ಕಣಕ್ಕಿಳಿಯಲಿದೆ.

ರಾಜಸ್ಥಾನ ರಾಯಲ್ಸ್ ತಂಡದ ನಾಯಕ ಸಂಜು ಸ್ಯಾಮ್ಸನ್ –ಎಎಫ್‌ಪಿ ಚಿತ್ರ

ಉಭಯ ತಂಡಗಳು ತಲಾ ಒಂದು ಪಂದ್ಯ ಆಡಿವೆ. ರಾಯಲ್ಸ್ ತಂಡವು ಲಖನೌ ಸೂಪರ್ ಜೈಂಟ್ಸ್ ವಿರುದ್ಧ ಗೆದ್ದಿತ್ತು. ಅದರಲ್ಲಿ ನಾಯಕ ಸಂಜು (82 ರನ್) ಹಾಗೂ ರಿಯಾನ್ ಪರಾಗ್ (43 ರನ್) ಭರ್ಜರಿ ಬ್ಯಾಟಿಂಗ್ ಮಾಡಿದ್ದರು. ವೇಗಿ ಟ್ರೆಂಟ್ ಬೌಲ್ಡ್ ಎರಡು ವಿಕೆಟ್ ಗಳಿಸಿ ಮಿಂಚಿದ್ದರು. ಕುಲದೀಪ್ ಯಾದವ್, ಯಜುವೇಂದ್ರ ಚಾಹಲ್ ಹಾಗೂ ಆರ್. ಅಶ್ವಿನ್ ಅವರು ಎದುರಾಳಿಗಳ ರನ್ ಗಳಿಕೆಗೆ ತಡೆಯೊಡ್ಡಿದ್ದರು.

ಪಂದ್ಯ ಆರಂಭ: ರಾತ್ರಿ 7.30
ನೇರಪ್ರಸಾರ: ಸ್ಟಾರ್ ಸ್ಪೋರ್ಟ್ಸ್, ಜಿಯೊ ಸಿನಿಮಾ ಆ್ಯಪ್

ಆದರೆ, ಡೆಲ್ಲಿ ತಂಡವು ಇನ್ನೂ ಗೆಲುವಿನ ಖಾತೆ ತೆರೆಯಬೇಕಿದೆ. ತನ್ನ ಮೊದಲ ಪಂದ್ಯದಲ್ಲಿ ಪಂಜಾಬ್ ಕಿಂಗ್ಸ್ ಎದುರು ಮಣಿದಿತ್ತು. ಭೀಕರ ರಸ್ತೆ ಅಪಘಾತದಲ್ಲಿ ತೀವ್ರವಾಗಿ ಗಾಯಗೊಂಡಿದ್ದ ರಿಷಭ್ ಸುಮಾರು 15 ತಿಂಗಳು ಕ್ರಿಕೆಟ್‌ನಿಂದ ದೂರವಿದ್ದರು. ಪಂಜಾಬ್ ಎದುರಿನ ಪಂದ್ಯದ ಮೂಲಕ ಕಣಕ್ಕೆ ಮರಳಿದ್ದ ಅವರು ಬ್ಯಾಟಿಂಗ್ ಮತ್ತು ವಿಕೆಟ್‌ಕೀಪಿಂಗ್ ನಿಭಾಯಿಸಿದ್ದರು.

ನಾಲ್ಕನೇ ಕ್ರಮಾಂಕದಲ್ಲಿ ಬ್ಯಾಟಿಂಗ್ ಮಾಡಿದ್ದ ಅವರು 13 ಎಸೆತಗಳಲ್ಲಿ 18 ರನ್ ಗಳಿಸಿದ್ದರು. ತಮ್ಮ ಹಿಂದಿನ ನೈಜ ಆಟಕ್ಕೆ ಮರಳುವ ಪ್ರಯತ್ನ ಮಾಡಿದ್ದರು. ಅವರ ಫಿಟ್‌ನೆಸ್‌ನಲ್ಲಿ ಇನ್ನೂ ಕೊಂಚ ಜಡತ್ವ ಇರುವುದು ಹಾವಭಾವಗಳಿಂದ ಕಂಡುಬಂದಿತ್ತು. ಅವರು ಪಂದ್ಯದಿಂದ ಪಂದ್ಯಕ್ಕೆ ತಮ್ಮ ಆಟವನ್ನು ಉತ್ಕೃಷ್ಟಗೊಳಿಸುವ ವಿಶ್ವಾಸ ತಂಡದ ಕೋಚ್ ರಿಕಿ ಪಾಂಟಿಂಗ್ ಅವರಿಗೆ ಇದೆ.

‘ತಂಡಕ್ಕೆ ನಾಯಕ ಮರಳಿರುವುದು ಖುಷಿಯಾಗಿದೆ. ರಿಷಭ್ ನಮ್ಮ ಫ್ರ್ಯಾಂಚೈಸಿಯ ಜೀವನಾಡಿಯಿದ್ದಂತೆ. ಅವರು ಮರಳಿರುವುದರಿಂದ ಬಳಗ ಬಲಾಢ್ಯವಾಗಿದೆ’ ಎಂದು ಮೊದಲ ಪಂದ್ಯಕ್ಕೂ ಮುನ್ನ ಪಾಂಟಿಂಗ್ ಹೇಳಿದ್ದರು.

ಬ್ಯಾಟಿಂಗ್‌ನಲ್ಲಿ ಡೇವಿಡ್ ವಾರ್ನರ್, ಮಿಚೆಲ್ ಮಾರ್ಷ್, ಅಭಿಷೇಕ್ ಪೊರೆಲ್ ಹಾಗೂ ಶಾಯ್ ಹೋಪ್ ಉತ್ತಮ ಲಯದಲ್ಲಿದ್ದಾರೆ. ಸ್ಪಿನ್ನರ್ ಕುಲದೀಪ್, ಅಕ್ಷರ್ ಪಟೇಲ್, ವೇಗಿ ಖಲೀಲ್ ಅಹಮದ್ ಹಾಗೂ ಅನುಭವಿ ಇಶಾಂತ್ ಶರ್ಮಾ ತಂಡದ ಬೌಲಿಂಗ್ ವಿಭಾಗವನ್ನು ಗಟ್ಟಿಗೊಳಿಸಿದ್ದಾರೆ. ಆತಿಥೇಯ ತಂಡದ ಆರಂಭಿಕ ಯಶಸ್ವಿ ಜೈಸ್ವಾಲ್, ಸಂಜು, ಧ್ರುವ ಜುರೇಲ್, ಜೋಸ್ ಬಟ್ಲರ್ ಅವರನ್ನು ಕಟ್ಟಿಹಾಕುವುದು ಈ ಬೌಲಿಂಗ್ ಪಡೆಯ ಮುಂದಿರುವ ದೊಡ್ಡ ಸವಾಲು. ಇಲ್ಲಿಯ ಪಿಚ್‌ನಲ್ಲಿ ಯಥಾಪ್ರಕಾರ ಬೌಂಡರಿ, ಸಿಕ್ಸರ್‌ಗಳು ಸಿಡಿಯುವ ಎಲ್ಲ ಸಾಧ್ಯತೆಗಳು ಈ ಪಂದ್ಯದಲ್ಲಿಯೂ ಇವೆ.

ರಿಷಭ್ ಪಂತ್ –ಪಿಟಿಐ ಚಿತ್ರ

ಶುಭಮನ್ ಗಿಲ್‌ಗೆ ₹ 12 ಲಕ್ಷ ದಂಡ

ಚೆನ್ನೈ (ಪಿಟಿಐ): ಗುಜರಾತ್ ಟೈಟನ್ಸ್ ತಂಡದ ನಾಯಕ ಶುಭಮನ್ ಗಿಲ್ ಅವರಿಗೆ ₹ 12 ಲಕ್ಷ ದಂಡ ವಿಧಿಸಲಾಗಿದೆ.

ಮಂಗಳವಾರ ಚೆನ್ನೈ ಸೂಪರ್ ಕಿಂಗ್ಸ್ ಎದುರು ನಡೆದ ಪಂದ್ಯದಲ್ಲಿ ನಿಗದಿಯ ಅವಧಿಯೊಳಗೆ ಓವರ್‌ಗಳನ್ನು ಟೈಟನ್ಸ್ ತಂಡವು ಮುಗಿಸಲಿಲ್ಲ. ಆದ್ದರಿಂದ ಗಿಲ್ ಅವರಿಗೆ ದಂಡ ಹಾಕಲಾಗಿದೆ.

ಉರುಗ್ವೆ ಕ್ಲಬ್‌ಗೆ ಬಿಜಯ್ ಚೆಟ್ರಿ

ಚೆನ್ನೈ (ಪಿಟಿಐ): ಭಾರತದ ಉದಯೋನ್ಮುಖ ಫುಟ್‌ಬಾಲ್ ಆಟಗಾರ ಬಿಜಯ್ ಚೆಟ್ರಿ ಅವರು ಉರುಗ್ವೆಯ ಫುಟ್‌ಬಾಲ್ ಕ್ಲಬ್ ಕೊಲೊನ್ ಎಫ್‌ಸಿಗೆ ವರ್ಷಾಂತ್ಯದವರೆಗೆ ಸೇರಿಕೊಂಡಿದ್ದಾರೆ ಎಂದು ಇಂಡಿಯನ್ ಸೂಪರ್ ಲೀಗ್‌ನ ಕ್ಲಬ್ ಚೆನ್ನೈಯಿನ್ ಎಫ್‌ಸಿ ಬುಧವಾರ ತಿಳಿಸಿದೆ.

ಈ ಮೂಲಕ ಲ್ಯಾಟಿನ್ ಅಮೆರಿಕನ್ ಕ್ಲಬ್‌ಗೆ ಸಹಿ ಹಾಕಿದ ಭಾರತದ ಮೊದಲ ಫುಟ್‌ಬಾಲ್ ಆಟಗಾರ ಎಂಬ ಹಿರಿಮೆಗೆ ಬಿಜಯ್ ಪಾತ್ರವಾದರು.

ಬ್ಯಾಡ್ಮಿಂಟನ್: ಸಿಂಧುಗೆ ಗೆಲುವು

ಮ್ಯಾಡ್ರಿಡ್ (ಪಿಟಿಐ): ಎರಡು ಬಾರಿಯ ಒಲಿಂಪಿಕ್ ಪದಕ ವಿಜೇತೆ ಪಿ.ವಿ. ಸಿಂಧು ಅವರು ಇಲ್ಲಿ ನಡೆಯುತ್ತಿರುವ ಮ್ಯಾಡ್ರಿಡ್ ಸ್ಪೇನ್ ಮಾಸ್ಟರ್ಸ್ ಸೂಪರ್ 300 ಬ್ಯಾಡ್ಮಿಂಟನ್ ಟೂರ್ನಿಯ ಮಹಿಳೆಯರ ಸಿಂಗಲ್ಸ್‌ನಲ್ಲಿ ಎರಡನೇ ಸುತ್ತು ಪ್ರವೇಶಿಸಿದರು.

ಕಳೆದ ಆವೃತ್ತಿಯಲ್ಲಿ ರನ್ನರ್ ಅಪ್ ಸ್ಥಾನ ಪಡೆದಿದ್ದ ಸಿಂಧು ಬುಧವಾರ ನಡೆದ ಮೊದಲ ಸುತ್ತಿನ ಪಂದ್ಯದಲ್ಲಿ 21-16, 21-12 ರಿಂದ ಕೆನಡಾದ ವೆನ್ ಯು ಜಾಂಗ್ ಅವರನ್ನು ನೇರ್ ಗೇಮ್‌ಗಳಲ್ಲಿ ಮಣಿಸಿದರು. ಮುಂದಿನ ಸುತ್ತಿನಲ್ಲಿ ಭಾರತದ ಆಟಗಾರ್ತಿಯು ಚೀನಾ ತೈಪೆಯ ಹುವಾಂಗ್ ಯು-ಹ್ಸುನ್ ಅವರನ್ನು ಎದುರಿಸುವರು.

ಭಾರತದ ಪಿ.ವಿ. ಸಿಂಧು

ಪುರುಷರ ಸಿಂಗಲ್ಸ್‌ನಲ್ಲಿ ಕ್ವಾಲಿಫೈಯರ್ ಮೂಲಕ ಮುಖ್ಯ ಸುತ್ತು ಪ್ರವೇಶಿಸಿದ್ದ ಕನ್ನಡಿಗ ಮಿಥುನ್ ಮಂಜುನಾಥ್ ನಿರಾಸೆ ಅನುಭವಿಸಿದರು. ಆರಂಭಿಕ ಸುತ್ತಿನಲ್ಲಿ ಅವರು 11-21, 12-21 ಚೀನಾ ತೈಪೆಯ ವಾಂಗ್ ತ್ಸು ವೀ ಅವರಿಗೆ ಮಣಿದರು.

ಪುರುಷರ ಡಬಲ್ಸ್‌ನಲ್ಲಿ ಭಾರತದ ಕೃಷ್ಣ ಪ್ರಸಾದ್ ಗಾರಗ ಮತ್ತು ಸಾಯಿ ಪ್ರತೀಕ್ ಜೋಡಿಯು ಪ್ರಿ ಕ್ವಾರ್ಟರ್ ಫೈನಲ್ ಪ್ರವೇಶಿಸಿತು.

‘ವೈಮಾನಿಕ ಶಕ್ತಿಯ ಪರಿಣಾಮಕಾರಿ ಬಳಕೆಗೆ ಬೇಕು ರಾಜಕೀಯ ಇಚ್ಛಾಶಕ್ತಿ’

ನವದೆಹಲಿ (ಪಿಟಿಐ): ರಾಜಕೀಯ ಇಚ್ಛಾಶಕ್ತಿ ಇದ್ದಲ್ಲಿ ವೈಮಾನಿಕ ಶಕ್ತಿಯನ್ನು ಶತ್ರುವಿನ ಗಡಿಯೊಳಗೆ ಪರಿಣಾಮಕಾರಿಯಾಗಿ ಬಳಕೆ ಮಾಡಿಕೊಳ್ಳಬಹುದು ಎಂಬುದು ಬಾಲಾಕೋಟ್ ಮಾದರಿಯ ಕಾರ್ಯಾಚರಣೆಗಳು ತೋರಿಸಿಕೊಟ್ಟಿವೆ ಎಂದು ಭಾರತೀಯ ವಾಯುಪಡೆಯ ಮುಖ್ಯಸ್ಥ ಏರ್ ಚೀಫ್ ಮಾರ್ಷಲ್ ವಿ.ಆರ್. ಚೌಧರಿ ಹೇಳಿದ್ದಾರೆ.



ವಿ.ಆರ್. ಚೌಧರಿ

‘ಭವಿಷ್ಯದ ಸಂಘರ್ಷಗಳಲ್ಲಿ ವೈಮಾನಿಕ ಶಕ್ತಿ’ ವಿಷಯ ಕುರಿತ ವಿಚಾರ ಸಂಕಿರಣದಲ್ಲಿ ಮಾತನಾಡಿದ ಅವರು ಮಿಲಿಟರಿ ಕಾರ್ಯತಂತ್ರಗಳಲ್ಲಿ ಹೆಚ್ಚಿನ ಪ್ರಯೋಜನ ಹೊಂದಲು ಬೇರೆ ಬೇರೆ ದೇಶಗಳು ಬಾಹ್ಯಾಕಾಶ ನೆಲೆಗಳನ್ನು ನೆಚ್ಚಿಕೊಳ್ಳುತ್ತಿವೆ, ‘ಬಾಹ್ಯಾಕಾಶದ ಮಿಲಿಟರೀಕರಣ ಮತ್ತು ಸಶಸ್ತ್ರೀಕರಣವು ಅನಿವಾರ್ಯ ವಾಸ್ತವವಾಗಿದೆ’ ಎಂದು ಹೇಳಿದ್ದಾರೆ.

‘ವೈಮಾನಿಕ ಶಕ್ತಿಯು ರಾಷ್ಟ್ರದ ಶಕ್ತಿಯ ಪ್ರಮುಖ ಭಾಗ, ಇದು ಅತ್ಯಂತ ಮಹತ್ವದ ಪಾತ್ರವನ್ನು ನಿರ್ವಹಿಸುವುದರಲ್ಲಿ ಅನುಮಾನ ಇಲ್ಲ. ಅಲ್ಲದೆ, ಇದು ರಾಷ್ಟ್ರದ ಶಕ್ತಿಯ ದ್ಯೋತಕವಾಗಿ, ಶಾಂತಿ ಮತ್ತು ಸಹಕಾರದ ಸಾಧನವಾಗಿ ನೆರವಿಗೆ ಬರುತ್ತದೆ’ ಎಂದು ಅವರು ವಿವರಿಸಿದ್ದಾರೆ.

‘ರಾಜಕೀಯ ಇಚ್ಛಾಶಕ್ತಿ ಇದ್ದಲ್ಲಿ ವೈಮಾನಿಕ ಶಕ್ತಿಯನ್ನು ಶತ್ರುವಿನ ಗಡಿಯೊಳಕ್ಕೂ ಪರಿಣಾಮಕಾರಿಯಾಗಿ ಬಳಸಬಹುದು. ಯುದ್ಧವೂ ಅಲ್ಲದ, ಶಾಂತಿಕಾಲವೂ ಅಲ್ಲದ ಪರಿಸ್ಥಿತಿಯಲ್ಲಿ, ಅಣ್ವಸ್ತ್ರ ಬಳಕೆಯಾಗುವ ಅಪಾಯದ ಅಡಿಯಲ್ಲಿ, ಸಂಘರ್ಷದ ತೀವ್ರತೆಯನ್ನು ಹೆಚ್ಚುಮಾಡದೆಯೇ ಈ ಶಕ್ತಿಯನ್ನು ಪರಿಣಾಮಕಾರಿಯಾಗಿ ಬಳಸಿಕೊಳ್ಳಬಹುದು ಎಂಬುದನ್ನು ಬಾಲಾಕೋಟ್ ಮಾದರಿಯ ಕಾರ್ಯಾಚರಣೆಗಳು ತೋರಿಸಿವೆ’ ಎಂದು ಹೇಳಿದ್ದಾರೆ.

ಪುಲ್ವಾಮಾ ದಾಳಿಗೆ ಪ್ರತಿಯಾಗಿ ಭಾರತೀಯ ವಾಯುಪಡೆಯು ಪಾಕಿಸ್ತಾನದ ಬಾಲಾಕೋಟ್‌ನಲ್ಲಿ ಇರುವ ಜೈಷ್–ಎ–ಮೊಹಮ್ಮದ್ ಭಯೋತ್ಪಾದಕ ಸಂಘಟನೆಯ ತರಬೇತಿ ಶಿಬಿರದ ಮೇಲೆ 2019ರ ಫೆಬ್ರುವರಿಯಲ್ಲಿ ದಾಳಿ ನಡೆಸಿತ್ತು.

ಸಂಜೀವ್ ಭಟ್ ದೋಷಿ

ಪ್ರಜಾವಾಣಿ ವಾರ್ತೆ

ಅಹಮದಾಬಾದ್: ಮಾಜಿ ಐಪಿಎಸ್ ಅಧಿಕಾರಿ ಸಂಜೀವ್ ಭಟ್ ಅವರು 1996ರಲ್ಲಿ ಬನಾಸಕಾಂತಾ ಜಿಲ್ಲೆಯ ಎಸ್‌ಪಿ ಆಗಿದ್ದಾಗ ಮಾದಕವಸ್ತುಗಳ ಪ್ರಕರಣವೊಂದರಲ್ಲಿ ವಕೀಲರೊಬ್ಬರನ್ನು ಸಿಲುಕಿಸುವ ಕೃತ್ಯ ಎಸಗಿರುವುದು ಸಾಬೀತಾಗಿದೆ ಎಂದು ಪಾಲನಪುರದ ವಿಶೇಷ ನ್ಯಾಯಾಲಯ ಬುಧವಾರ ಹೇಳಿದೆ.



ಸಂಜೀವ್ ಭಟ್

ಡ್ರಗ್ಸ್ ಪ್ರಕರಣ

ಭಟ್ ಅವರು ಅಪರಾಧಿ ಎಂದು ಘೋಷಿಸಿರುವ ನ್ಯಾಯಾಲಯವು, ಅವರ ಶಿಕ್ಷೆಯ ಪ್ರಮಾಣವನ್ನು ಘೋಷಿಸಿಲ್ಲ. ಶಿಕ್ಷೆ ಏನು ಎಂಬುದನ್ನು ನ್ಯಾಯಾಲಯವು ಶುಕ್ರವಾರ ಪ್ರಕಟಿಸುವ ನಿರೀಕ್ಷೆ ಇದೆ. ಭಟ್ ಅವರಿಗೆ 20 ವರ್ಷಗಳ ಶಿಕ್ಷೆ ವಿಧಿಸಬೇಕು ಎಂದು ಪ್ರಾಸಿಕ್ಯೂಷನ್ ಕೋರಿದೆ.

ಮಾದಕ ವಸ್ತುಗಳು ಹಾಗೂ ಅಮಲು ಪದಾರ್ಥಗಳ ಕಾಯ್ದೆಯ (ಎನ್‌ಡಿಪಿಎಸ್ ಕಾಯ್ದೆ) ವಿವಿಧ ಸೆಕ್ಷನ್‌ಗಳ ಅಡಿಯಲ್ಲಿ ಭಟ್ ಅವರನ್ನು ಅಪರಾಧಿ ಎಂದು ಘೋಷಿಸಲಾಗಿದೆ ಎಂದು ಪ್ರಾಸಿಕ್ಯೂಷನ್ ಪರ ವಕೀಲರು ತಿಳಿಸಿದ್ದಾರೆ.

ಭಾರತೀಯ ದಂಡ ಸಂಹಿತೆಯ ಕೆಲವು ಸೆಕ್ಷನ್‌ಗಳ ಅಡಿಯಲ್ಲಿಯೂ ಭಟ್ ಅವರು ಅಪರಾಧಿ ಎಂದು ಕೋರ್ಟ್ ಹೇಳಿದೆ. ರಾಜಸ್ಥಾನದ ಪಾಲಿ ಜಿಲ್ಲೆಯಲ್ಲಿ ಒಂದು ಆಸ್ತಿಯನ್ನು ತೆರವು ಮಾಡಿಸುವ ಉದ್ದೇಶದಿಂದ ವಕೀಲ ಎಸ್.ಎಸ್. ರಾಜಪುರೋಹಿತ್ ಎಂಬುವವರನ್ನು ಮಾದಕ ವಸ್ತುಗಳಿಗೆ ಸಂಬಂಧಿಸಿದ ಪ್ರಕರಣದಲ್ಲಿ ಸಿಲುಕಿಸಲು ಭಟ್ ಅವರು ಯತ್ನಿಸಿದ್ದರು ಎಂದು ಆರೋಪ ಹೊರಿಸಲಾಗಿತ್ತು.

ಆಗ ಭಟ್ ಅವರನ್ನು ಬನಾಸಕಾಂತಾ ಜಿಲ್ಲೆಯ ಎಸ್‌ಪಿ ಆಗಿ ನಿಯೋಜಿಸಲಾಗಿತ್ತು. ಈ ಜಿಲ್ಲೆಯು ಪಾಲೀ ಜಿಲ್ಲೆಯ ಜೊತೆ ಗಡಿ ಹಂಚಿಕೊಂಡಿದೆ. ಆಗ ಗುಜರಾತ್ ಹೈಕೋರ್ಟ್‌ನ ನ್ಯಾಯಮೂರ್ತಿ ಆಗಿದ್ದ ಆರ್.ಆರ್. ಜೈನ್ ಅವರ ಸಂಬಂಧಿ ಒಬ್ಬರಿಗೆ ಸೇರಿದ ಆಸ್ತಿ ಅದು.

ಪ್ರಕರಣದ ಪ್ರಮುಖ ಸೂತ್ರಧಾರರಲ್ಲಿ ಒಬ್ಬರಾದ ಭಟ್ ಅವರು ಅಫೀಮು ಖರೀದಿಸಲು ₹20 ಸಾವಿರ ವ್ಯಯಿಸಿದ್ದರು, ಪಾಲನಪುರದ ಹೋಟೆಲ್ ಒಂದರ ಕೊಠಡಿಯಲ್ಲಿ ಅದನ್ನು ಇರಿಸಿದ್ದರು ಎಂದು ಗುಜರಾತ್ ಸಿಐಡಿ ಅಧಿಕಾರಿಗಳು ಹೇಳಿದ್ದರು.

ಭಟ್ ಅವರನ್ನು 2018ರ ಸೆಪ್ಟೆಂಬರ್‌ನಲ್ಲಿ ಬಂಧಿಸಲಾಯಿತು. ಅಂದಿನಿಂದ ಅವರು ಜೈಲಿನಲ್ಲಿ ಇದ್ದಾರೆ. ಪೊಲೀಸ್ ವಶದಲ್ಲಿ ಇದ್ದಾಗಲೇ ವ್ಯಕ್ತಿಯೊಬ್ಬ ಮೃತಪಟ್ಟ ಪ್ರಕರಣಕ್ಕೆ ಸಂಬಂಧಿಸಿದಂತೆ ಭಟ್ ಅವರಿಗೆ ಜೀವಾವಧಿ ಶಿಕ್ಷೆಯನ್ನು ಈಗಾಗಲೇ ವಿಧಿಸಲಾಗಿದೆ.

ಎಐಸಿಸಿ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ ವಾಗ್ದಾಳಿ

‘ನಿರುದ್ಯೋಗ: ದಿಕ್ಕುತಪ್ಪಿಸಲು ಪ್ರಧಾನಿ ಯತ್ನ’

ನವದೆಹಲಿ (ಪಿಟಿಐ): ಪ್ರಧಾನಿ ನರೇಂದ್ರ ಮೋದಿ ಅವರು ದೇಶದ ಜನರ ಗಮನ ಬೇರೆಡೆ ಸೆಳೆಯಲು ಪ್ರಯತ್ನಿಸುತ್ತಲೇ ಇರುತ್ತಾರೆ. ಆದರೆ, ಈ ಬಾರಿಯ ಲೋಕಸಭಾ ಚುನಾವಣೆಯಲ್ಲಿ ಯುವ ಜನರ ನಿರುದ್ಯೋಗ ಸಮಸ್ಯೆಯೇ ನಿರ್ಣಾಯಕ ವಿಷಯ. ಇದನ್ನು ನಿಭಾಯಿಸಲು ತನ್ನಲ್ಲಿ ಸೂಕ್ತ ಯೋಜನೆ ಇದೆ ಎಂದು ಕಾಂಗ್ರೆಸ್ ಬುಧವಾರ ಹೇಳಿದೆ.

ಮಲ್ಲಿಕಾರ್ಜುನ ಖರ್ಗೆ

ಮೋದಿ ಸರ್ಕಾರದ ಉದಾಸೀನತೆಯ ಭಾರವನ್ನು ಯುವಜನರು ಹೊತ್ತುಕೊಂಡಿದ್ದು, ದೇಶವು ನಿರುದ್ಯೋಗದ ‘ಟೈಮ್ ಬಾಂಬ್’ ಮೇಲೆ ಕುಳಿತಿದೆ ಎಂದು ವಿಪಕ್ಷವು ಪ್ರತಿಪಾದಿಸಿದೆ.

ಅಂತರರಾಷ್ಟ್ರೀಯ ಕಾರ್ಮಿಕ ಸಂಸ್ಥೆ (ಐಎಲ್‌ಒ) ಮತ್ತು ಮಾನವ ಅಭಿವೃದ್ಧಿ ಸಂಸ್ಥೆ (ಐಎಚ್‌ಡಿ) ಬಿಡುಗಡೆ ಮಾಡಿರುವ ‘ಭಾರತದ ಉದ್ಯೋಗ ವರದಿ 2024’ ಅನ್ನು ಉಲ್ಲೇಖಿಸಿದ ಕಾಂಗ್ರೆಸ್ ಅಧ್ಯಕ್ಷ ಮಲ್ಲಿಕಾರ್ಜುನ ಖರ್ಗೆ, ಪ್ರಧಾನಿ ನರೇಂದ್ರ ಮೋದಿ ಅವರು 10 ವರ್ಷಗಳಲ್ಲಿ 20 ಕೋಟಿ ಉದ್ಯೋಗಗಳನ್ನು ನೀಡುವುದಾಗಿ ಭರವಸೆ ನೀಡಿದ್ದರು. ಆದರೆ, ಯುವಜನರಿಂದ 12 ಕೋಟಿಗೂ ಹೆಚ್ಚು ಉದ್ಯೋಗಗಳನ್ನು ಕಸಿದುಕೊಂಡಿದ್ದಾರೆ. ಇದನ್ನು ಮತಚಲಾಯಿಸುವ ಮೊದಲು ಜನರು ನೆನಪಿಸಿಕೊಳ್ಳಬೇಕು ಎಂದು ಒತ್ತಾಯಿಸಿದ್ದಾರೆ.

‘ನಮ್ಮ ಯುವಕರು ಮೋದಿ ಸರ್ಕಾರದ ದಯನೀಯ ಉದಾಸೀನತೆಯ ಭಾರವನ್ನು ಹೊತ್ತಿದ್ದಾರೆ. ನಿರಂತರವಾಗಿ ಹೆಚ್ಚುತ್ತಿರುವ ನಿರುದ್ಯೋಗವು ಅವರ ಭವಿಷ್ಯವನ್ನು ನಾಶಪಡಿಸಿದೆ. ಭಾರತದಲ್ಲಿ ನಿರುದ್ಯೋಗ ಸಮಸ್ಯೆ ಭೀಕರವಾಗಿದೆ ಎಂಬುದನ್ನು ಐಎಲ್‌ಒ ಮತ್ತು ಐಎಚ್‌ಡಿ ನಿರ್ಣಾಯಕ ವರದಿಯೂ ಹೇಳಿದೆ’ ಎಂದು ಖರ್ಗೆ ಹೇಳಿದ್ದಾರೆ.

‘ನಾವು ನಿರುದ್ಯೋಗದ ‘ಟೈಮ್ ಬಾಂಬ್’ ಮೇಲೆ ಕುಳಿತಿದ್ದೇವೆ’ ಎಂದು ಖರ್ಗೆ ಅವರು ‘ಎಕ್ಸ್’ನಲ್ಲಿ ಪೋಸ್ಟ್ ಮಾಡಿದ್ದಾರೆ.

‘ಆದರೆ, ಮೋದಿ ಸರ್ಕಾರದ ಮುಖ್ಯ ಆರ್ಥಿಕ ಸಲಹೆಗಾರರು ನಿರುದ್ಯೋಗದಂತಹ ಎಲ್ಲಾ ಸಾಮಾಜಿಕ, ಆರ್ಥಿಕ ಸಮಸ್ಯೆಗಳನ್ನು ಸರ್ಕಾರವು ಪರಿಹರಿಸಲು ಸಾಧ್ಯವಿಲ್ಲವೆಂದು ಹೇಳುವ ಮೂಲಕ ನೆಚ್ಚಿನ ನಾಯಕನನ್ನು ಸಮರ್ಥನೆ ಮಾಡಿಕೊಳ್ಳುತ್ತಾರೆ’ ಎಂದು ಟೀಕಿಸಿದ್ದಾರೆ.

ನಿರುದ್ಯೋಗಿ ಭಾರತೀಯರಲ್ಲಿ ಶೇ.83ರಷ್ಟು ಯುವಕರು. ಗ್ರಾಮೀಣ ಪ್ರದೇಶದಲ್ಲಿ ಶೇ.17.5ರಷ್ಟು ಯುವಕರು ಮಾತ್ರ ನಿತ್ಯದ ಕೆಲಸದಲ್ಲಿ ತೊಡಗಿಸಿಕೊಂಡಿದ್ದಾರೆಂದು ಐಎಲ್‌ಒ ವರದಿ ಹೇಳಿದೆ. ಕಾಂಗ್ರೆಸ್ ನೇತೃತ್ವದ ಯುಪಿಎ ಸರ್ಕಾರಕ್ಕೆ ಹೋಲಿಸಿದರೆ, ಉದ್ಯೋಗಗಳ ತೀವ್ರ ಕೊರತೆಯಿಂದಾಗಿ ಕಡಿಮೆ ಯುವಜನರು ಮೋದಿ ಆಡಳಿತದಲ್ಲಿ ಆರ್ಥಿಕ ಚಟುವಟಿಕೆಗಳಲ್ಲಿ ತೊಡಗಿಸಿಕೊಂಡಿದ್ದಾರೆ. 2012ಕ್ಕೆ ಹೋಲಿಸಿದರೆ, ಮೋದಿ ಸರ್ಕಾರದಲ್ಲಿ ಯುವಕರ ನಿರುದ್ಯೋಗವು ಮೂರು ಪಟ್ಟು ಹೆಚ್ಚಾಗಿದೆ. ಅದಕ್ಕಾಗಿಯೇ ಕಾಂಗ್ರೆಸ್ ‘ಯುವ ನ್ಯಾಯ’ ಘೋಷಿಸಿದೆ ಎಂದು ಖರ್ಗೆ ಹೇಳಿದ್ದಾರೆ.

ಕೆಎಸ್‌ಸಿಎಯಲ್ಲಿ 1974ರ ರಣಜಿ ಟ್ರೋಫಿ ವಿಜೇತ ಕರ್ನಾಟಕ ತಂಡಕ್ಕೆ ಸನ್ಮಾನ

‘ಸುವರ್ಣ ನೆನಪುಗಳ’ ಮಾತು ಮಧುರ

ಪ್ರಜಾವಾಣಿ ವಾರ್ತೆ

ಚಿನ್ನಸ್ವಾಮಿ ಕ್ರೀಡಾಂಗಣದಲ್ಲಿ ಬುಧವಾರ ನಡೆದ ಕಾರ್ಯಕ್ರಮದಲ್ಲಿ ಟ್ರೋಫಿಯೊಂದಿಗೆ ಪೋಸ್ ನೀಡಿದ 1974ರ ರಣಜಿ ಟ್ರೋಫಿ ಗೆದ್ದ ಕರ್ನಾಟಕ ತಂಡದ ಸದಸ್ಯರು. ಎಡದಿಂದ ಬಲಕ್ಕೆ; ಎಸ್. ವಿಜಯಪ್ರಕಾಶ, ಸಿದ್ದರಾಮ, ಅರುಣಕುಮಾರ್, ಬ್ರಿಜೇಷ್ ಪಟೇಲ್, ಬಿ.ಎಸ್. ಚಂದ್ರಶೇಖರ್, ಎರ್ರ ಪಳ್ಳಿ ಪ್ರಸನ್ನ, ಜಿ.ಆರ್. ವಿಶ್ವನಾಥ್, ಸೈಯದ್ ಕಿರ್ಮಾನಿ, ಸುಧಾಕರ್ ರಾವ್, ಬಿ. ರಘುನಾಥ, ಎ.ವಿ. ಜಯಪ್ರಕಾಶ್, ಸಂಜಯ್ ದೇಸಾಯಿ –ಪ್ರಜಾವಾಣಿ ಚಿತ್ರ

ಬೆಂಗಳೂರು: ಚಿನ್ನಸ್ವಾಮಿ ಕ್ರೀಡಾಂಗಣದ ಮಾಧ್ಯಮ ಲಾಂಜ್‌ನಲ್ಲಿ ಬುಧವಾರ ಸಂಜೆ ಚಿನ್ನದ ನೆನಪುಗಳ ಹೊಳೆ ಹರಿಯಿತು.

1974ರಲ್ಲಿ ಇದೇ ದಿನ (ಮಾರ್ಚ್ 27) ಜೈಪುರದ ಸವಾಯಿ ಮಾನಸಿಂಗ್ ಕ್ರೀಡಾಂಗಣದಲ್ಲಿ ರಾಜಸ್ಥಾನ ತಂಡವನ್ನು ಮಣಿಸಿ ಕರ್ನಾಟಕಕ್ಕೆ ಮೊಟ್ಟಮೊದಲ ರಣಜಿ ಟ್ರೋಫಿ ಜಯಿಸಿದ ತಂಡದ ಆಟಗಾರರು ಇಲ್ಲಿ ಸೇರಿದ್ದರು. ಸುವರ್ಣ ಸಂಭ್ರಮದ ಕಾರ್ಯಕ್ರಮವನ್ನು ನಗೆಹಬ್ಬವನ್ನಾಗಿ ಪರಿವರ್ತಿಸಿದರು.

ಭಾಳ ಮುಸ್ಸಂಜೆಯಲ್ಲಿರುವ ‘ಚಾಂಪಿಯನ್’ ಆಟಗಾರರು ನವತರುಣರನ್ನೂ ನಾಚಿಸುವಂತಹ ಹುಮ್ಮಸ್ಸು ತೋರಿದರು. ಕಪ್ಪು–ಬಿಳುಪಿನ ಚಿತ್ರಗಳ ಕಾಲಘಟ್ಟದ ನೆನಪುಗಳಿಂದ ‘ಸುವರ್ಣ ಸಂಭ್ರಮ’ದ ಸಂಜೆಯನ್ನು ಬಹುವರ್ಣವಾಗಿಸಿದರು.

ಚಾಂಪಿಯನ್ ತಂಡದ ನಾಯಕ ಹಾಗೂ ದಿಗ್ಗಜ ಸ್ಪಿನ್ನರ್ ಎರ್ರಪಳ್ಳಿ ಪ್ರಸನ್ನ, ಲೆಗ್‌ಸ್ಪಿನ್ ದಂತಕಥೆ ಬಿ.ಎಸ್. ಚಂದ್ರಶೇಖರ್, ಬ್ಯಾಟಿಂಗ್ ಮಾಸ್ಟರ್ ಜಿ.ಆರ್. ವಿಶ್ವನಾಥ್, ಆಲ್‌ರೌಂಡರ್ ಬ್ರಿಜೇಶ್ ಪಟೇಲ್, ವಿಶ್ವಕಪ್ ವಿಜೇತ ಭಾರತ ತಂಡದ ವಿಕೆಟ್‌ಕೀಪರ್ ಸೈಯದ್ ಕಿರ್ಮಾನಿ, ಎ.ವಿ. ಜಯಪ್ರಕಾಶ್, ಸಂಜಯ್ ದೇಸಾಯಿ, ಸುಧಾಕರ್ ರಾವ್, ಬಿ. ರಘುನಾಥ್, ಸಿದ್ದರಾಮ, ಅರುಣಕುಮಾರ್ ಹಾಗೂ ಎಸ್. ವಿಜಯಪ್ರಕಾಶ್ ಅಲ್ಲಿದ್ದರು.

ಜೈಪುರದಲ್ಲಿ ಹಾಲು ಎಂದುಕೊಂಡು ಕುಡಿದ ‘ಭಾಂಗ್’ ನಶೆಯ ನಗೆಯ ಹೊನಲು, ಬಿ.ಎಸ್. ಚಂದ್ರಶೇಖರ್ ಅವರ ಇಡ್ಲಿ ಪ್ರೀತಿ, ರೈಲು ಪ್ರಯಾಣದ ಗಮ್ಮತ್ತು ಮತ್ತು ಅತ್ಯಂತ ಕಡಿಮೆ ಸಂಭಾವನೆ ಪಡೆದ ನೆನಪುಗಳು ಅಲೆಅಲೆಯಾಗಿ ಪ್ರೇಕ್ಷಕರ ಮನದಂಗಳಕ್ಕೆ ತಾಕಿದವು.

‘ರಣಜಿ ಟ್ರೋಫಿ ಜಯದ ನಂತರ ಬೆಂಗಳೂರು ಪ್ರಯಾಣದ ವ್ಯವಸ್ಥೆಯಾಗಿತ್ತು ಎಂದುಕೊಂಡಿದ್ದೆವು. ಆದರೆ ಜೈಪುರದಿಂದ ದೆಹಲಿಗೆ ಬಂದಿಳಿದಾಗಲೇ ಗೊತ್ತಾಗಿದ್ದು ಅಲ್ಲಿಂದ ಬೆಂಗಳೂರಿಗೆ ಟಿಕೆಟ್ ರಿಸರ್ವ್ ಮಾಡಿಸಲಿಲ್ಲ. ಪರಿಚಯದ ರೈಲ್ವೆ ಅಧಿಕಾರಿಯೊಬ್ಬರ ಸಹಾಯದಿಂದ ಚೆನ್ನೈ ಮೂಲಕ ಬೆಂಗಳೂರಿಗೆ ಟಿಕೆಟ್ ಪಡೆಯುವಲ್ಲಿ ಯಶಸ್ವಿಯಾದೆವು’ ಎಂದು ಪ್ರಸನ್ನ ನೆನಪಿಸಿಕೊಂಡರು.

ಕಾರ್ಯಕ್ರಮದಲ್ಲಿ ವಿವಾಹ ವಾರ್ಷಿಕೋತ್ಸವದ ಪ್ರಯುಕ್ತ ಕ್ರಿಕೆಟಿಗ ಜಿ.ಆರ್. ವಿಶ್ವನಾಥ್ ಅವರು ಪತ್ನಿ ಕವಿತಾ ಅವರಿಗೆ ಕೇಕ್ ತಿನ್ನಿಸಿದರು

ಭಾಂಗ್ ಪೇಯದ ನಗೆಗಡಲು: ಜೈಪುರದಲ್ಲಿ ಭಾಂಗ್ ಪೇಯ ಕುಡಿದ ಕತೆಯನ್ನು ಜಿ.ಆರ್. ವಿಶ್ವನಾಥ್ ವಿವರಿಸಿದರು.

ಆಗ ರಣಜಿ ಟ್ರೋಫಿ ಫೈನಲ್ ಪಂದ್ಯವು ಐದು ದಿನಗಳದ್ದಾಗಿರುತ್ತಿತ್ತು. ನಾಲ್ಕನೇ ದಿನವು ವಿಶ್ರಾಂತಿಯದ್ದಾಗಿರುತ್ತಿತ್ತು. ಔತಣಕೂಟವೊಂದಕ್ಕೆ ಆಹ್ವಾನಿತ ರಾಗಿದ್ದ ಕರ್ನಾಟಕದ ಆಟಗಾರರಿಗೆ ಹಾಲು, ಡ್ರೈಫ್ರೂಟ್ಸ್‌ಗಳಿದ್ದ ಪೇಯವನ್ನು ನೀಡಲಾಗಿತ್ತು. ರುಚಿಯಾಗಿದ್ದ ಪೇಯವನ್ನು ಎಲ್ಲರೂ ಹಾಲು ಎಂದುಕೊಂಡೇ ಕುಡಿದಿದ್ದರು. ಆದರೆ ಅದರಲ್ಲಿ ಸಾಂಪ್ರದಾಯಿಕ ನಶೆಯ ಪದಾರ್ಥ ಭಾಂಗ್ ಮಿಶ್ರಣವಾಗಿದ್ದು ಕೆಲವು ಗಂಟೆಗಳ ನಂತರವೇ ಅವರಿಗೆಲ್ಲ ಗೊತ್ತಾಗಿತ್ತು.

‘ಆ ಪೇಯ ಕುಡಿಯುವಾಗ ಏನೂ ಅನಿಸಿರಲಿಲ್ಲ. ಆದರೆ ನಂತರ ಅದರ ಗುಂಗಿನಿಂದ ಹೊರಬರಲು ಎರಡು ದಿನಗಳೇ ಬೇಕಾದವು. ನಮ್ಮ ತಂಡದಲ್ಲಿ ಎಲ್ಲರೂ ನಿರಂತರವಾಗಿ ನಗುತ್ತಲೇ ಇದ್ದರು. ಹೋಟೆಲ್ ರೂಮಿನಲ್ಲಿ, ಮರುದಿನ ಆಡುವಾಗ ಮೈದಾನದಲ್ಲಿ ನಗುತ್ತಲೇ ಇದ್ದರು. ಆದರೆ ನಾನೊಬ್ಬನೇ ಗಂಭೀರವಾಗಿದ್ದೆ. ಏಕೆಂದರೆ ಫೈನಲ್ ಪಂದ್ಯದ ಎರಡೂ ಇನಿಂಗ್ಸ್‌ಗಳಲ್ಲಿ ನನಗೆ ಹೆಚ್ಚು ರನ್ ಗಳಿಸಲು ಆಗಿರಲಿಲ್ಲ. ಆದರೆ ನಾವು ಪ್ರಶಸ್ತಿ ಗೆದ್ದಿದ್ದು ಮಹತ್ವದ್ದು’ ಎಂದು ವಿಶ್ವನಾಥ್ ನೆನಪಿಸಿಕೊಂಡರು.

ಈ ಸಂದರ್ಭದಲ್ಲಿ ದನಿಗೂಡಿಸಿದ ಕಿರ್ಮಾನಿ, ‘ಚಂದ್ರಾ (ಬಿ.ಎಸ್. ಚಂದ್ರಶೇಖರ್) ತಮ್ಮ ಒಂದು ಕಾಲು ಗಾಳಿಯಲ್ಲಿ ತೇಲಾಡಿದ ಹಾಗೆ ಆಗುತ್ತಿದೆ ಎಂದಾಗ, ನಾನು ಮತ್ತು ಬ್ರಿಜೇಶ್ ಪರಸ್ಪರ ನೋಡಿಕೊಂಡು ನಗಲು ಆರಂಭಿಸಿದೆವು. ಅಲ್ಲಿಂದ ಆರಂಭವಾದ ನಗೆ ನಿಲ್ಲಲೇ ಇಲ್ಲ’ ಎಂದರು.

ಆಗ ತಂಡದಲ್ಲಿದ್ದ ಬಿ. ವಿಜಯಕೃಷ್ಣ, ವಿ.ಎಸ್. ವಿಜಯಕುಮಾರ್, ಕೆ. ಲಕ್ಷ್ಮಣ್ ಹಾಗೂ ಮ್ಯಾನೇಜರ್ ಸಿ. ನಾಗರಾಜ್ ಕೆಲವು ವರ್ಷಗಳ ಹಿಂದೆ ನಿಧನರಾಗಿದ್ದಾರೆ. ಅವರೆಲ್ಲರನ್ನೂ ನೆನಪಿಸಿಕೊಂಡ ಕಿರ್ಮಾನಿ ಅವರು ಶ್ರದ್ಧಾಂಜಲಿ ಸಲ್ಲಿಸುವಂತೆ ಮಾಡಿದ ಮನವಿಗೆ ಸಭೆಯಲ್ಲಿದ್ದವರೆಲ್ಲರೂ ಸ್ಪಂದಿಸಿದರು. ಒಂದು ನಿಮಿಷದ ಮೌನಾಚರಣೆ ನಡೆಸಿ ಗೌರವ ಸಲ್ಲಿಸಲಾಯಿತು.

ದಿನಕ್ಕೆ ₹ 5 ಸಂಭಾವನೆ

ರಣಜಿ ಟ್ರೋಫಿ ಪಂದ್ಯಗಳಲ್ಲಿ ಆಡುವ ಅಟಗಾರರಿಗೆ ₹5 ದಿನಭತ್ಯೆ ನೀಡಲಾಗುತ್ತಿತ್ತು.

‘ನಾನು ಆಗ ಕೆಎಸ್‌ಸಿಎ ಅಧ್ಯಕ್ಷರಾದ ಎಂ. ಚಿನ್ನಸ್ವಾಮಿ ಅವರನ್ನು ಭೇಟಿಯಾಗಿ ಈ ಭತ್ಯೆಯನ್ನು ಹೆಚ್ಚಿಸುವಂತೆ ಕೇಳಿಕೊಂಡಿದ್ದೆ. ಅದಕ್ಕೆ ಪ್ರತಿಕ್ರಿಯೆಯಾಗಿ ಅವರು ಸಹಮತಿಸಿರಲಿಲ್ಲ’ ಎಂದು ಪ್ರಸನ್ನ ಹೇಳಿದರು.

ಟ್ರೋಫಿ ಜಯಿಸಿ ಬಂದಾಗ ಕೆಎಸ್‌ಸಿಎ ₹ 500 ಮತ್ತು ರಾಜ್ಯ ಸರ್ಕಾರದಿಂದ ₹ 1000 ಪ್ರಶಸ್ತಿ ನೀಡಲಾಗಿತ್ತು.

ಡಾ.ಸಂತೋಷ್‌ಗೆ ಡಬಲ್ ಪದಕ

ಬೆಂಗಳೂರು: ಇಲ್ಲಿನ ವಿಕ್ಟೋರಿಯಾ ಆಸ್ಪತ್ರೆಯ ಮೂಳೆ ಶಸ್ತ್ರಚಿಕಿತ್ಸಕ ಡಾ.ಸಂತೋಷ್ ಎಚ್.ಆರ್. ಅವರು ಚಂಡೀಗಢದಲ್ಲಿ ಈಚೆಗೆ ನಡೆದ ಅಖಿಲ ಭಾರತ ನಾಗರಿಕ ಸೇವೆಗಳ ಬ್ಯಾಡ್ಮಿಂಟನ್ ಟೂರ್ನಿಯಲ್ಲಿ ಕರ್ನಾಟಕ ರಾಜ್ಯವನ್ನು ಪ್ರತಿನಿಧಿಸಿ ಚಿನ್ನ ಮತ್ತು ಬೆಳ್ಳಿ ಪದಕಗಳನ್ನು ಗೆದ್ದಿದ್ದಾರೆ.

45 ವರ್ಷದ ಪುರುಷರ ಡಬಲ್ಸ್‌ನಲ್ಲಿ ಅವರು ಆಲ್ಫ್ರೆಡ್ ಪಿ.ಎ. ಜೊತೆಗೂಡಿ ಪ್ರಶಸ್ತಿಯನ್ನು ಮುಡಿಗೇರಿಸಿಕೊಂಡಿದ್ದಾರೆ. 45–50 ವರ್ಷದ ಮಿಶ್ರ ಡಬಲ್ಸ್‌ನಲ್ಲಿ ವಿಜಯರಾಣಿ ಅವರೊಂದಿಗೆ ರನ್ನರ್ಸ್ ಅಪ್ ಸ್ಥಾನ ಪಡೆದುಕೊಂಡಿದ್ದಾರೆ. ಜತೆಗೆ 45 ವರ್ಷಕ್ಕಿಂತ ಮೇಲಿನ ವಿಭಾಗದಲ್ಲಿ ಟೂರ್ನಿಯ ಉತ್ತಮ ಆಟಗಾರ ಪ್ರಶಸ್ತಿಯನ್ನು ಪಡೆದಿದ್ದಾರೆ.

ಸಹ ಅಧ್ಯಕ್ಷರಾಗಿ ಪಿ.ಆರ್. ಶ್ರೀಜೇಶ್

ಲೂಸನ್ (ಪಿಟಿಐ): ಭಾರತ ಹಾಕಿ ತಂಡದ ಗೋಲ್‌ಕೀಪರ್ ಪಿ.ಆರ್. ಶ್ರೀಜೇಶ್ ಮತ್ತು ಚಿಲಿ ಮಹಿಳಾ ತಂಡದ ಡಿಫೆಂಡರ್ ಕ್ಯಾಮಿಲಾ ಕ್ಯಾರಮ್ ಅವರು ಅಂತರರಾಷ್ಟ್ರೀಯ ಹಾಕಿ ಫೆಡರೇಷನ್‌ನ ಹೊಸ ಎಫ್‌ಐಎಚ್ ಅಥ್ಲೀಟ್‌ಗಳ ಸಮಿತಿಯ ಸಹ ಅಧ್ಯಕ್ಷರಾಗಿ ನೇಮಕಗೊಂಡಿದ್ದಾರೆ.

ಮಯಾಮಿ ಓಪನ್: ಸೆಮಿಗೆ ರೋಹನ್– ಎಬ್ಡೆನ್

ಮಯಾಮಿ ಗಾರ್ಡನ್ಸ್, ಅಮೆರಿಕ (ಪಿಟಿಐ): ಭಾರತದ ರೋಹನ್ ಬೋಪಣ್ಣ ಮತ್ತು ಅವರ ಆಸ್ಟ್ರೇಲಿಯನ್ ಜೊತೆಗಾರ ಮ್ಯಾಥ್ಯೂ ಎಬ್ಡೆನ್ ಅವರು ಮಯಾಮಿ ಓಪನ್ ಟೆನಿಸ್ ಟೂರ್ನಿಯ ಪುರುಷರ ಡಬಲ್ಸ್‌ನಲ್ಲಿ ಸೆಮಿಫೈನಲ್‌ಗೆ ಮುನ್ನಡೆದರು.

ಅಗ್ರ ಶ್ರೇಯಾಂಕದ ರೋಹನ್– ಎಬ್ಡೆನ್ ಜೋಡಿ ಮಂಗಳವಾರ ರಾತ್ರಿ ನಡೆದ ಎಂಟರ ಘಟ್ಟದ ಹಣಾಹಣಿಯಲ್ಲಿ 3-6, 7-6(4), 10-7ರಿಂದ ಡಚ್‌ನ ಸೆಮ್ ವರ್ಬೀಕ್ ಮತ್ತು ಆಸ್ಟ್ರೇಲಿಯಾದ ಜಾನ್-ಪ್ಯಾಟ್ರಿಕ್ ಸ್ಮಿತ್ ಅವರನ್ನು ಮೂರು ಸೆಟ್ ಹೋರಾಟದಲ್ಲಿ ಹಿಮ್ಮೆಟ್ಟಿಸಿತು.

ಆಸ್ಟ್ರೇಲಿಯನ್ ಓಪನ್ ಗೆದ್ದಿದ್ದ 44 ವರ್ಷದ ರೋಹನ್– ಎಬ್ಡೆನ್ ಅವರು ಮೊದಲ ಸೆಟ್‌ನಲ್ಲಿ ಅನಗತ್ಯ ತಪ್ಪುಗಳನ್ನು ಎಸಗಿದ್ದರಿಂದ ಹಿನ್ನಡೆ ಅನುಭವಿಸಿದರು. ಆದರೆ ಎರಡನೇ ಸೆಟ್‌ನಲ್ಲಿ ಪುಟಿದೆದ್ದು ವೇಗದ ಸರ್ವ್, ನಿಖರ ರಿಟರ್ನ್‌ಗಳ ಮೂಲಕ ತಿರುಗೇಟು ನೀಡಿದರು. ಟೈ ಬ್ರೇಕರ್‌ನಲ್ಲಿ ಮೇಲುಗೈ ಸಾಧಿಸಿದ ಅವರು, ನಿರ್ಣಾಯಕ ಸೆಟ್‌ನಲ್ಲೂ ಪಾರಮ್ಯ ಮೆರೆದರು.

ವಿಶ್ವ ಕ್ರಮಾಂಕದಲ್ಲಿ ಎರಡನೇ ಸ್ಥಾನದಲ್ಲಿರುವ ಕನ್ನಡಿಗ ರೋಹನ್, ಈ ಗೆಲುವಿನ ಮೂಲಕ ಅಗ್ರ 10ರೊಳಗೆ ಸ್ಥಾನವನ್ನು ಬಲಪಡಿಸಿದ್ದಾರೆ. ಇದು ಅವರಿಗೆ ಪ್ಯಾರಿಸ್ ಒಲಿಂಪಿಕ್ಸ್‌ಗೆ ನೇರ ಅರ್ಹತೆ ಪಡೆಯಲು ನೆರವಾಗಲಿದೆ. ರೋಹನ್– ಎಬ್ಡೆನ್ ಅವರು ಮುಂದಿನ ಸುತ್ತಿನಲ್ಲಿ ಮಾರ್ಸೆಲ್ ಗ್ರಾನೊಲ್ಲರ್ಸ್ (ಸ್ಪೇನ್)– ಹೊರಾಸಿಯೊ ಜೆಬಾಲ್ಲೋಸ್ (ಅರ್ಜೆಂಟಿನಾ) ಮತ್ತು ಲಾಯ್ಡ್ ಗ್ಲಾಸ್ಪೂಲ್ (ಅಮೆರಿಕ)– ಜೀನ್ ಜೂಲಿಯನ್ ರೋಜರ್ (ನೆದರ್ಲೆಂಡ್ಸ್) ನಡುವಿನ ಪಂದ್ಯದ ವಿಜೇತರನ್ನು ಎದುರಿಸಲಿದ್ದಾರೆ.